ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆಸ್ಟ್ರೇಲಿಯಾ ನೆಲದಲ್ಲಿ ಪಂತ್ ಅಪರೂಪದ ದಾಖಲೆ

ಟೀಂ ಇಂಡಿಯಾ ಬ್ಯಾಟರ್ ರಿಷಭ್ ಪಂತ್ ಅವರು ಸಿಡ್ನಿ ಟೆಸ್ಟ್‌ನ ಎರಡನೇ ಇನಿಂಗ್ಸ್‌ನಲ್ಲಿ ಕೇವಲ 29 ಎಸೆತಗಳಲ್ಲಿ ಸ್ಫೋಟಕ ಅರ್ಧ ಶತಕ ಬಾರಿಸಿದ್ದಾರೆ. ಅವರ ಈ ಅರ್ಧ ಶತಕ ಆಸ್ಟ್ರೇಲಿಯಾ ನೆಲದಲ್ಲಿ ವಿದೇಶಿ ಬ್ಯಾಟರ್ ಬಾರಿಸಿದ ವೇಗದ ಅರ್ಧಶತಕ. 2022ರಲ್ಲಿ ಶ್ರೀಲಂಕಾ ವಿರುದ್ಧ 28 ಎಸೆತಗಳಲ್ಲಿ ಅರ್ಧ ಶತಕ ಬಾರಿಸಿದ್ದು ಪಂತ್ ಅವರ ಈ ಹಿಂದಿನ ದಾಖಲೆಯಾಗಿತ್ತು.

ಪುಟ ತೆರೆದಂತೆ...

ಜಪಾನಿನಲ್ಲಿ ಎಲ್ಲರೂ ಜಾಡಮಾಲಿಗಳಾಗಲೂ ಸಿದ್ಧರಿರಬೇಕು!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

'ಮನಮೋಹನ-ಮೌನ'ದ ಕುರಿತು ನಾಲ್ಕು ಮಾತುಗಳು
ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು



ಪ್ರಯಾಣ ದರ ಹೆಚ್ಚಳದ ಹೊರೆ ಏನಿದ್ದರೂ ಜನಕ್ಕೆ ತಾನೇ? ಮಂತ್ರಿಗಳಿಗಲ್ಲವಲ್ಲ. ಅವರಿಗೇನಾಗಬೇಕು? ಜನರ ಜೇಬಿಗೆ ಕೈ ಹಾಕಿ ಲೂಟಿ ಮಾಡುತ್ತಿದ್ದಾರೆ. ವೋಟು ಹಾಕಿ ಅಧಿಕಾರ ಕೊಟ್ಟ ಜನರಿಗೆ ಕಷ್ಟ ಕೊಟ್ಟು ಖುಷಿಪಡುತ್ತಿದ್ದಾರೆ.

ಎಚ್.ಡಿ.ಕುಮಾರಸ್ವಾಮಿ
ಕೇಂದ್ರ ಸಚಿವ

ದಾರಿದೀಪೋಕ್ತಿ

ಜೀವನದಲ್ಲಿ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುವಾಗ ಒಮ್ಮತಕ್ಕೆ ಬರಲು ಸಾಧ್ಯವಾಗದಿದ್ದರೆ ನಾಣ್ಯವನ್ನು ಚಿಮ್ಮಬಹುದು. ನಾಣ್ಯ ಗಾಳಿಯಲ್ಲಿದ್ದಾಗ, ನಿಮ್ಮ ಮನಸ್ಸು ನಾಣ್ಯ ಹೇಗೆ ಬೀಳಲಿ ಎಂದು ಬಯಸುವುದೋ, ಅದೇ ನಿಮ್ಮ ನಿರ್ಧಾರವಾಗಿರುತ್ತದೆ.

ವಕ್ರತುಂಡೋಕ್ತಿ

ಗಂಡನ ಮುಂದೆ ಹೆಂಡತಿಯಾದವಳು ಸಮಸ್ಯೆಗಳನ್ನು ಹೇಳಿಕೊಳ್ಳಬೇಕು. ಗಂಡನೇ ಒಂದು ಸಮಸ್ಯೆ ಎಂದು ಭಾವಿಸಬಾರದು.

ಕಮರಿಗೆ ಬಿದ್ದ ಸೇನಾ ವಾಹನ; ನಾಲ್ವರು ಯೋಧರು ಸಾವು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಬಂಡಿಪೋರಾ ಜಿಲ್ಲೆಯಲ್ಲಿ ಸೇನಾ ವಾಹನ ಕಮರಿಗೆ ಬಿದ್ದಿದ್ದು, ನಾಲ್ವರು ಸೇನಾ ಸಿಬ್ಬಂದಿ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ. ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ರಾಜ್ಯದ ಮೂವರು ಯೋಧರು ಹುತಾತ್ಮರಾಗಿದ್ದರು.

ಡಿವೈಎಸ್‌ಪಿ ರಾಮಚಂದ್ರಪ್ಪಗೆ 14 ದಿನ ನ್ಯಾಯಾಂಗ ಬಂಧನ

ಮಧುಗಿರಿ: ತಮ್ಮ ಕಚೇರಿಯಲ್ಲಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪ ದಡಿ ಬಂಧಿತರಾಗಿದ್ದ ಡಿವೈಎಸ್‌ಪಿ ಎ.ರಾಮಚಂದ್ರಪ್ಪಗೆ ಜೆಎಂಎಫ್‌ಸಿ ನ್ಯಾಯಾಲಯ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಉಪಕಾರಾಗೃಹಕ್ಕೆ ಕಳುಹಿಸಲಾಗಿದೆ. ಲೈಂಗಿಕ ದೌರ್ಜನ್ಯದ ವಿಡಿಯೊ ಸಾಮಾ ಜಿಕ ಜಾಲತಾಣದಲ್ಲಿ ಹರಿದಾಡಿದ ನಂತರ ಸೇವೆಯಿಂದ ಅಮಾನತು ಮಾಡಲಾಗಿತ್ತು.

ಫನ್‌ತರಂಗ
- ರಘುಪತಿ ಶೃಂಗೇರಿ -
ಹರಡುವ ಭೀತಿ
ಸುದ್ದಿ



ಖರ್ಗೆ ತವರಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ, ಪೊಲೀಸರೊಂದಿಗೆ ತಳ್ಳಾಟ, ನೂಕಾಟ

ಸಚಿವ ಪ್ರಿಯಾಂಕ್ ಖರ್ಗೆ ನಿವಾಸಕ್ಕೆ ಮುತ್ತಿಗೆ ಯತ್ನ

ಕಲಬುರಗಿ: ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸ ಬೇಕು, ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡಬೇಕು, ಸಚಿನ್ ಕುಟುಂಬಕ್ಕೆ 1 ಕೋಟಿ ರು. ಪರಿಹಾರ ಘೋಷಣೆ ಮಾಡಬೇಕು ಎಂದು ಆಗ್ರ ಹಿಸಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿ, ಸಚಿವ ಪ್ರಿಯಾಂಕ್ ಖರ್ಗೆ ಅವರ ಮನೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು.

ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ತಡೆದಿದ್ದರಿಂದ ಕೆಲ ಕಾಲ ತಳ್ಳಾಟ, ನೂಕಾಟ ನಡೆಯಿತು. ವಿಧಾನಸಭೆ ಪ್ರತಿಪಕ್ಷ ನಾಯಕರಾದ ಆರ್. ಅಶೋಕ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಂಸದ ಉಮೇಶ್ ಜಾಧವ್, ಮಾಜಿ ಸಚಿವ ಮಹೇಶ್ ಸೇರಿ ಮತ್ತಿತರರನ್ನು ಪೊಲೀಸರು ವಶಕ್ಕೆ ಪಡೆದರು.

ಇದಕ್ಕೂ ಮೊದಲು ನಡೆದ ಪ್ರತಿಭಟನಾ ವೇದಿಕೆಯಲ್ಲಿ ಮಾಜಿ ಸಚಿವ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಅವರು ಡೆತ್‌ನೋಟ್ ಓದಿದರು. ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೆಸರು ಬಂದಿದೆ, ನೈತಿಕತೆ ಇದ್ದರೆ ರಾಜೀನಾಮೆ ಕೊಡಲಿ. ಸಚಿನ್ ಕುಟುಂಬಸ್ಥರನ್ನು ನಿಮ್ಮ ಮನೆ ಮುಂದೆ ನಿಲ್ಲಿಸುತ್ತೇವೆ, ಅವರಿಗೆ ಎಳನೀರು, ಚಹಾ ಕೊಡ್ತೀರಾ? ಎಂದು ಕಿಡಿಕಾರಿದರು. ಬಿಜೆಪಿಗೆ ಸಂಸ್ಕಾರವಿದೆ, ನೈತಿಕವಾಗಿ ಜನ ಕೇಳುತ್ತಿದ್ದಾರೆ ಎಂದು ಈಶ್ವರಪ್ಪ ರಾಜೀನಾಮೆ ಕೊಟ್ಟಿದ್ದರು. ನಿಮ್ಮದೇ ಪಕ್ಷದ ನಾಗೇಂದ್ರ ಅವರು ರಾಜೀನಾಮೆ ಕೊಟ್ಟು ಜೈಲಿಗೆ ಹೋಗಲಿಲ್ಲವಾ? ಅವರ ಹಿಂದೆ ರಾಜಕೀಯ ಒತ್ತಡ ಇಲ್ಲ ಎಂದು ರಾಜೀನಾಮೆ ಕೊಡಿಸಿದ್ದೀರಾ? ಖರ್ಗೆ ಮತ್ತು ಕುಟುಂಬಸ್ಥರ ನಿಜಾಮರಾಗಿ, ಇಲ್ಲಿನ ಪೊಲೀಸರು ರಜಾಕಾರರಾ? ಅಂಬೇಡ್ಕರ್ ಅವರು ಕೊಟ್ಟಿರುವಂಥಹ ಸಂವಿಧಾನದಿಂದ ಬಿಜೆಪಿ ನಡೆಯುತ್ತಿದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ಶಾಶ್ವತವಲ್ಲ. ರಾಜೀನಾಮೆ ಕೊಟ್ಟು ತನಿಖೆ ಎದುರಿಸಿ ಎಂದರು.

ಕಾಂಗ್ರೆಸ್‌ನಿಂದ ಮಜ್ಜಿಗೆ, ಎಳನೀರು

ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ವಹಿಸಿ, ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ನೀಡುವಂತೆ ಆಗ್ರಹಿಸಿ ಶನಿವಾರ ಪ್ರಿಯಾಂಕ್ ಖರ್ಗೆ ಅವರ ಮನಗೆ ಮುತ್ತಿಗೆ ಹಾಕಲು ಬರುವ ಬಿಜೆಪಿಯ ಮುಖಂಡರಿಗೆ ಎಳನೀರು, ಮಜ್ಜಿಗೆ, ನೀರು ವಿತರಣೆ ವ್ಯವಸ್ಥೆಯನ್ನು ಕಾಂಗ್ರೆಸ್ ಕಾರ್ಯಕರ್ತರು ಮಾಡಿದ್ದಾರೆ. ಪ್ರಿಯಾಂಕ್ ಅವರಿಗೆ ಸಂಬಂಧವೇ ಇಲ್ಲದ ಪ್ರಕರಣವನ್ನು ಮುಂದಿಟ್ಟು ಪ್ರತಿಭಟನೆಯ ನಾಟಕ ಮಾಡುತ್ತಿದ್ದಾರೆ. ಬಿಸಿಲಲ್ಲಿ ದಣಿದು ಬರುತ್ತಾರೆ. ಹೀಗಾಗಿ, ಅವರಿಗೆ ನೀರು, ಮಜ್ಜಿಗೆ, ಎಳನೀರಿನ ವ್ಯವಸ್ಥೆ ಮಾಡಿದ್ದೇವೆ ಎಂದು ಕಾಂಗ್ರೆಸ್ ಕಾರ್ಯಕರ್ತರು ವ್ಯಂಗ್ಯವಾಡಿದರು.

ಪ್ರಿಯಾಂಕ್ ಖರ್ಗೆ ಅವರ ಮನೆಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು.

ಸಚಿನ್ ಪಾಂಚಾಳ್ ಕುಟುಂಬದವರ ಜತೆ ನಾನು ಮಾತನಾಡಿದ್ದೇನೆ. ಬಿಜೆಪಿಯವರು ಹೇಳಿದಂತೆಲ್ಲ ನಾವು ಕುಣಿಯಲು ಆಗುವುದಿಲ್ಲ. ಸಚಿನ್ ಕುಟುಂಬದವರಿಗೆ ನಾನೂ ಭರವಸೆ ನೀಡಿದ್ದೇನೆ. ಪಾರದರ್ಶಕವಾಗಿ ತನಿಖೆ ಮಾಡಿಸುವುದು ಸರಕಾರದ ಜವಾಬ್ದಾರಿ. ಸರಕಾರದ ವಿರುದ್ಧ ಹೇಳಿಕೆ ನೀಡುವಂತೆ ಸಚಿನ್ ಕುಟುಂಬದವರಿಗೆ ಬಿಜೆಪಿಯವರು ಒತ್ತಡ ಹಾಕುತ್ತಿದ್ದಾರೆ. ಈ ಪ್ರಕರಣದಲ್ಲಿ ರಾಜಕೀಯ ಬೆರೆಸುತ್ತಿರುವುದು ತಪ್ಪಲ್ಲವೇ? ಹೆಣ ಬಿದ್ದರೆ ಸಾಕು, ಬಿಜೆಪಿಯವರಿಗೆ ಸಂಭ್ರಮ. **- ಪ್ರಿಯಾಂಕ್ ಖರ್ಗೆ** ಸಚಿವ

ನ್ಯಾಯ ಕೊಡಿಸುವುದಕ್ಕಾಗಿ ನಾವು ಕಲಬುರಗಿಗೆ ಬಂದಿದ್ದೇವೆ. ಆದರೆ ನ್ಯಾಯ ಕೊಡುವುದನ್ನು ಬಿಟ್ಟು ಎಳನೀರು, ಕಾಫಿ, ಮಜ್ಜಿಗೆ ಕೊಡುತ್ತಿದ್ದಾರೆ. ನಾವು ನಿಮ್ಮ ಮನೆಗೆ ಸಂಬಂಧ ಕೇಳೋಕೆ ಬಂದಿಲ್ಲ.
- ಛಲವಾದಿ ನಾರಾಯಣಸ್ವಾಮಿ
ವಿ.ಪರಿಷತ್ ಪ್ರತಿಪಕ್ಷ ನಾಯಕ

ಹಿಂದೆ ಈಶ್ವರಪ್ಪನವರ ಮೇಲೆ ಆರೋಪ ಬಂದಾಗ ಪ್ರಿಯಾಂಕ್ ಖರ್ಗೆ ಏನು ಆರೋಪ ಮಾಡಿದ್ದರೋ, ಆಗ ಏನು ನಿಲುವಿತ್ತೋ ಅದನ್ನೇ ಅವರು ಈಗ ಪಾಲಿಸಲಿ. ನ್ಯಾಯ ಸಮ್ಮತ ತನಿಖೆಗಾಗಿ ಸಚಿವ ಸ್ಥಾನಕ್ಕೆ ರಾಜೀ ನಾಮೆ ಕೊಟ್ಟು ತನಿಖೆ ಎದುರಿಸಲಿ. ಅವರೊಬ್ಬರಿಗೇ ವಿಶೇಷ ಕಾನೂನು ಇಲ್ಲ. **- ಸಿ.ಟಿ.ರವಿ** ವಿಧಾನ ಪರಿಷತ್ ಸದಸ್ಯ

15% ದರ ಏರಿಕೆಯಿಂದಾಗಿ ₹ 7.84 ಕೋಟಿ ರು. ಆದಾಯ ಹೆಚ್ಚಳ ನಿರೀಕ್ಷೆ

ಇಂದಿನಿಂದಲೇ ಹೊಸ ಪ್ರಯಾಣ ದರ ಜಾರಿ

ಬೆಂಗಳೂರು: ಶನಿವಾರ ಮಧ್ಯರಾತ್ರಿ 11 ಗಂಟೆಯಿಂದ ಕೆಎಸ್‌ಆರ್‌ಟಿಸಿ, ಕೆಕೆಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಶೇ.15ರಷ್ಟು ಹೆಚ್ಚಾಗಿದ್ದು, ಭಾನುವಾರದಿಂದ ಹೊಸ ದರ ಜಾರಿಗೆ ಬಂದಿದೆ.

ರಾಜ್ಯದ ನಾಲ್ಕೂ ನಿಗಮಗಳು ಈ ಹಿಂದೆ ಶೇ.40ರಷ್ಟು ಪ್ರಯಾಣ ದರ ಏರಿಕೆಯ ಕುರಿತಂತೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದವು. ಎರಡು ದಿನಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ನಷ್ಟದಲ್ಲಿರುವ ಸಾರಿಗೆ ನಿಗಮಗಳನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಬಸ್ ಟಿಕೆಟ್ ದರ ಶೇ.15ರಷ್ಟು ಹೆಚ್ಚಳ ಮಾಡಲು ತೀರ್ಮಾನಿಸಲಾಗಿತ್ತು. ದರ ಹೆಚ್ಚಳದಿಂದಾಗಿ 7.84 ಕೋಟಿ ರು. ಆದಾಯ ಹೆಚ್ಚಳವಾಗುವ ನಿರೀಕ್ಷೆ ಇದೆ.

ಬಿಎಂಟಿಸಿ ಬಸ್ ದರ ಕೊನೆಯದಾಗಿ 2014ರ ಏಪ್ರಿಲ್ 25 ರಂದು ಶೇ.17 ಏರಿಕೆಯಾಗಿ ಪರಿಷ್ಕರಣೆಯಾಗಿದ್ದರೆ, ಮರುವರ್ಷವೇ 2015ರ ಜನವರಿ 10 ರಂದು ಶೇ.2 ಇಳಿಕೆ ಮಾಡಿ ದರ ಪರಿಷ್ಕರಿಸಲಾಗಿತ್ತು. ಇದಾದ ಬಳಿಕ ಈಗ ಶೇ.15 ದರ ಏರಿಕೆಗೆ ಸರಕಾರ ಅನುಮತಿ ನೀಡಿದೆ. ಬಿಎಂಟಿಸಿ ಬಸ್‌ಗಳಲ್ಲಿ ಸದ್ಯ ಒಂದು ಸ್ಟೇಜ್‌ಗೆ 5 ರು. ದರ ವಿಧಿಸಲಾಗುತ್ತಿದೆ. ಶೇ.15 ಏರಿಕೆ ಬಳಿಕ ಪರಿಷ್ಕೃತ ಪ್ರಯಾಣದ ದರ 75 ಪೈಸೆ ಹೆಚ್ಚಾಗಲಿದೆ. 25 ಪೈಸೆ ಚಲಾವಣೆ ಇಲ್ಲದ ಕಾರಣ, 1 ರು. ದರ ಏರಿಸುವ ಸಾಧ್ಯತೆ ಇದೆ. ಹೀಗಾಗಿ ಬಿಎಂಟಿಸಿ ಬಸ್ ಪ್ರಯಾಣ ದರ ಕನಿಷ್ಠ 6 ರು. ಆಗಬಹುದು.

→ 4

ಶೇ.20ರಷ್ಟು ಮೆಟ್ರೋ ಪ್ರಯಾಣ ದರ ಹೆಚ್ಚಳ?

ಬಸ್ ಪ್ರಯಾಣ ದರ ಏರಿಕೆ ಮಾಡಿದ ಬೆನ್ನಲ್ಲೇ ಮೆಟ್ರೋ ಪ್ರಯಾಣ ದರ ಹೆಚ್ಚಿಸಲು ನಮ್ಮ ಮೆಟ್ರೋ ಮುಂದಾಗಿದ್ದು, ಜ.18ರಿಂದ ಹೊಸ ದರ ಜಾರಿಯಾಗುವ ಸಾಧ್ಯತೆ ಇದೆ. ಮೆಟ್ರೋ ಕಾಯಿದೆ-2002ರಡಿಯಲ್ಲಿ ಪ್ರಯಾಣ ದರ ಪರಿಷ್ಕರಣೆಗೆ ಸಮಿತಿ ರಚಿಸಲಾಗಿದ್ದು, ಸಮಿತಿಯು ನಮ್ಮ ಮೆಟ್ರೋಗೆ ಸಲ್ಲಿಸಿದ ಅಂತಿಮ ವರದಿಯಲ್ಲಿ ದರ ರಚನೆಯು ಶೇ.20ರಷ್ಟು ಹೆಚ್ಚಿಸುವಂತೆ ಶಿಫಾರಸು ಮಾಡಿದೆ. ಜ.17ರಂದು ಸಭೆ ಸೇರಲಿರುವ ಬಿಎಂಆರ್‌ಸಿಎಲ್ ಮಂಡಳಿಯು ಇದಕ್ಕೆ ಅನುಮೋದನೆ ನೀಡುವುದು ಬಾಕಿಯಿದೆ. ಏಳೂವರೆ ವರ್ಷಗಳ ನಂತರ ಪ್ರಯಾಣ ದರ ಏರಿಕೆಯಾಗುತ್ತಿರುವುದರಿಂದ ಮಂಡಳಿ ಇದಕ್ಕೆ ಒಪ್ಪಿಗೆ ನೀಡುವ ಸಾಧ್ಯತೆ ಇದೆ.

ಎಲ್ಲ ಬಸ್‌ಗಳಿಗೂ ಅನ್ವಯ

ಸಾಮಾನ್ಯ ವೇಗದೂತ ಬಸ್‌ಗಳ ಟಿಕೆಟ್ ದರ ಏರಿಕೆಯನ್ನು ಸರಕಾರ ನಿರ್ಧರಿಸುತ್ತದೆ. ಪ್ರತಿಷ್ಠಿತ ಬಸ್‌ಗಳ ದರ ಏರಿಕೆಯನ್ನು ನಿಗಮಗಳ ಮಟ್ಟದಲ್ಲಿಯೇ ನಿರ್ಧಾರವಾಗುತ್ತದೆ. ಆದರೂ ಶೇ.15 ಬೆಲೆ ಏರಿಕೆ ಎಲ್ಲ ಬಸ್‌ಗಳಿಗೂ ಅನ್ವಯವಾಗಲಿದೆ. ಐಷಾರಾಮಿ ಬಸ್‌ಗಳ ಟಿಕೆಟ್ ದರ ಹೆಚ್ಚಿಸದೇ 5 ವರ್ಷಗಳಾಗಿವೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ತಿಳಿಸಿದ್ದಾರೆ.

ಪಾದಯಾತ್ರೆಯಲ್ಲಿ ಭಾಗವಹಸಿದ್ದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಸಚಿವ ರಮೇಶ್ ಜಾರಕಿಹೊಳಿ, ಮಾಜಿ ಶಾಸಕ ಕುಮಾರ ಬಂಗಾರಪ್ಪ ಮತ್ತಿತರರು.

ಬಳ್ಳಾರಿ ಜಿಲ್ಲೆಯ ಸ್ಥಳೀಯ ಬಿಜೆಪಿ ನಾಯಕರೇ ಗೈರು

ವಕ್ಫ್ ವಿರುದ್ಧ ಎರಡನೇ ಹಂತದ ಹೋರಾಟ ಶುರು

ಬಳ್ಳಾರಿ: ಜಿಲ್ಲೆಯ ಕಂಪ್ಲಿಯಲ್ಲಿ ವಕ್ಫ್ ವಿರುದ್ಧದ 2ನೇ ಹಂತದ ಹೋರಾಟಕ್ಕೆ ಶಾಸಕ ಯತ್ನಾಳ್ ಬಣ ಶನಿವಾರ ಚಾಲನೆ ನೀಡಿದೆ.

ಪಟ್ಟಣದ ಉದ್ಭವ ಗಣಪತಿ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆ ಸಣಾಪುರ ರಸ್ತೆಯ ಶಾರದಾ ಹಿರಿಯ ಪ್ರಾಥಮಿಕ ಶಾಲೆವರೆಗೆ ತಲುಪಿತು. ಪಾದಯಾತ್ರೆಯಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವರಾದ ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಯತ್ನಾಳ್ ನೇತೃತ್ವದಲ್ಲಿ ಹಮ್ಮಿಕೊಂಡಿರುವ ವಕ್ಫ್ ವಿರುದ್ಧದ 2ನೇ ಹಂತದ ಹೋರಾಟಕ್ಕೆ ಜಿಲ್ಲೆ ಸೇರಿದಂತೆ ಕಂಪ್ಲಿಯ ಬಿಜೆಪಿ ಜನಪ್ರತಿನಿಧಿಗಳು, ನಾಯಕರು, ಸ್ಥಳೀಯ ಮುಖಂಡರು ಗೈರಾಗಿದ್ದರು.

ಹೋರಾಟ ನಿಲ್ಲಿಸುವಂತೆ ವರಿಷ್ಠರು ಯಾವುದೇ ಸೂಚನೆ ನೀಡಿಲ್ಲ. ವರಿಷ್ಠರು ಕರೆದರಷ್ಟೆ ದಿಲ್ಲಿಗೆ ಹೋಗಿ ಮಾತನಾಡುತ್ತೇವೆ. ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸ್ವತಃ ಕರೆದರೂ ಮಾತುಕತೆ ಸಾಧ್ಯವಿಲ್ಲ. ನಮ್ಮದು ನಿಷ್ಠರ ಬಣ. ವಿಜಯೇಂದ್ರ ಅವರೊಂದಿಗೆ ಗುರುತಿಸಿಕೊಂಡವರೂ ಹೋರಾಟಕ್ಕೆ ಬಂದರೆ ಸ್ವಾಗತ.
ಬಸನಗೌಡ ಯತ್ನಾಳ್

ಪ್ರಜ್ವಲ್ ವಿರುದ್ಧ ಎಸ್‌ಐಟಿ ಟ್ರಯಲ್

ಬೆಂಗಳೂರು: ಲೈಂಗಿಕ ದೌರ್ಜನ್ಯ ಆರೋಪದ ಮೇಲೆ ಜೈಲು ಸೇರಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಟ್ರಯಲ್ ಪ್ರಾರಂಭಿಸಲು ಎಸ್‌ಐಟಿ ಮುಂದಾಗಿದ್ದು, ಜಾಮೀನು ಸಿಗದೇ ಜೈಲಿನಲ್ಲಿರುವ ಪ್ರಜ್ವಲ್‌ಗೆ ಮತ್ತೊಂದು ಸಂಕಷ್ಟ ಶುರುವಾಗಿದೆ. ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಪ್ರಜ್ವಲ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿತ್ತು. ಪ್ರಜ್ವಲ್ ಪರ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿ, ಆರೋಪಿಯು ಚುನಾವಣೆಗೆ ಸ್ಪರ್ಧೆ ಮಾಡಿದ್ದ ವೇಳೆ ಆರೋಪ ಮಾಡಲಾಗಿದೆ.

ಪರಮಾಣು ವಿಜ್ಞಾನಿ ಚಿದಂಬರಂ ನಿಧನ

ದೆಹಲಿ: ಹೆಸರಾಂತ ಭೌತ ವಿಜ್ಞಾನಿ, ಭಾರತದ ಪರ ಮಾಣು ಶಕ್ತಿ ಸಜ್ಜಿತ ಶಸ್ತ್ರಾಸ್ತ್ರ ಕಾರ್ಯಕ್ರಮಗಳ ರೂವಾರಿ ಡಾ.ರಾಜಗೋಪಾಲ ಚಿದಂಬರಂ (88) ಶನಿವಾರ ಬೆಳಗ್ಗೆ ಮುಂಬೈನಲ್ಲಿ ನಿಧನರಾದರು. ಅವರಿಗೆ ಪತ್ನಿ ಚೆಲ್ಲಾ, ಪುತ್ರಿಯರಾದ ನಿರ್ಮಲಾ, ನಿತ್ಯಾ ಇದ್ದಾರೆ. ಕೆಲವು ದಿನಗಳಿಂದ ಅವರು ಅಸ್ವಸ್ಥರಾಗಿದ್ದರು. ಮುಂಬೈನ ಜಸ್ಲೋಕ್ ಆಸ್ಪತ್ರೆಗೆ ಸೇರಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಚಿದಂಬರಂ ಅವರು ಭಾರತವು ಪರ ಮಾಣು ಶಕ್ತಿ ಪರೀಕ್ಷೆ ನಡೆಸಿದ್ದ ಪೋಖ್ರಾನ್-1 ಮತ್ತು ಪೋಖ್ರಾನ್-2 ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿದ್ದರು.

ಸಿಬಿಐಗೆ ರಾಜ್ಯಗಳ ಅನುಮತಿ ಬೇಕಿಲ್ಲ: ಸುಪ್ರೀಂ

ದೆಹಲಿ: ವಿವಿಧ ರಾಜ್ಯಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸರಕಾರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಸಿಬಿಐಗೆ ರಾಜ್ಯ ಸರಕಾರಗಳ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಶನಿವಾರ ಮಹತ್ವದ ತೀರ್ಪು ನೀಡಿದೆ.

ಭ್ರಷ್ಟಾಚಾರದ ಆರೋಪ ಸಂಬಂಧ ಆಂಧ್ರಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಕೇಂದ್ರ ಸರಕಾರದ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆಯನ್ನು ಆಂಧ್ರಪ್ರದೇಶ ಹೈಕೋರ್ಟ್ ರದ್ದುಗೊಳಿಸಿತ್ತು. ಆದರೆ ಹೈಕೋರ್ಟ್ ಆದೇಶವನ್ನು ಈಗ ಸುಪ್ರೀಂಕೋರ್ಟ್ ರದ್ದುಪಡಿಸಿದೆ.

ಕೇಂದ್ರ ಸರಕಾರಿ ನೌಕರರು ಮತ್ತು ಅಧಿಕಾರಿಗಳು ಗಂಭೀರ ಆರೋಪವನ್ನು ಎದುರಿಸುತ್ತಿರುವಾಗ ಅವರು ಯಾವ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಮುಖ್ಯವಾ ಗುವುದಿಲ್ಲ ಎಂದು ನ್ಯಾಯಮೂರ್ತಿ ಸಿ.ಟಿ. ರವಿಕುಮಾರ್ ಮತ್ತು ರಾಜೇಶ್ ಬಿಂದಲ್ ಅವರಿದ್ದ ನ್ಯಾಯಪೀಠ ಹೇಳಿದೆ.

ಸರಕು ಸಾಗಣೆ ಸಾಧನೆ ಸೂಚ್ಯಂಕ-2024 ಬಿಡುಗಡೆ

ಕರ್ನಾಟಕಕ್ಕೆ ಸಾಧಕ ಸ್ಥಾನ

ದೆಹಲಿ: ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಸರಕು ಸಾಗಣೆ ಸಾಧನೆ ಸೂಚ್ಯಂಕ-2024 ಅನ್ನು ಬಿಡುಗಡೆ ಮಾಡಿದ್ದು, 13 ಸಾಧಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ಕರ್ನಾಟಕ ಕೂಡ ಸ್ಥಾನ ಪಡೆದಿದೆ.

ಸಾಧಕ ಪಟ್ಟಿಯಲ್ಲಿ ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಒಡಿಶಾ, ತಮಿಳುನಾಡು, ದೆಹಲಿ, ಚಂಡೀಗಢ, ಹರಿಯಾಣ, ತೆಲಂಗಾಣ, ಉತ್ತರ ಪ್ರದೇಶ, ಉತ್ತರಾಖಂಡ, ಅಸ್ಸಾಂ ಮತ್ತು ಅರುಣಾಚಲ ಪ್ರದೇಶ ಇವೆ. ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಪಟ್ಟಿಯಲ್ಲಿ ಆಂಧ್ರ ಪ್ರದೇಶ, ಗೋವಾ, ಬಿಹಾರ, ಹಿಮಾಚಲ ಪ್ರದೇಶ, ಪಂಜಾಬ್, ರಾಜಸ್ಥಾನ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ದಾದ್ರಾ ಮತ್ತು ನಗರ್ ಹವೇಲಿ, ದಮನ್ ಮತ್ತು ಡಿಯು, ಜಮ್ಮು ಮತ್ತು ಕಾಶ್ಮೀರ, ಲಕ್ಷದ್ವೀಪ, ಪುದುಚೇರಿ ಇವೆ.ಆಕಾಂಕ್ಷಿ ಪಟ್ಟಿಯಲ್ಲಿ ಕೇರಳ, ಪಶ್ಚಿಮ ಬಂಗಾಳ, ಛತ್ತೀಸಗಢ, ಜಾರ್ಖಂಡ್, ಅಂಡಮಾನ್ ಮತ್ತು ನಿಕೋಬಾರ್, ಲಡಾಖ್ ಇವೆ.

2023ರಲ್ಲಿ ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಮತ್ತು ಆಕಾಂಕ್ಷಿ ಪಟ್ಟಿಯಲ್ಲಿದ್ದ ಮಹಾರಾಷ್ಟ್ರ, ಒಡಿಶಾ, ಉತ್ತರಾಖಂಡ, ಅರುಣಾಚಲ ಪ್ರದೇಶದಲ್ಲಿ ಸರಕು ಸಾಗಣೆ ವ್ಯವಸ್ಥೆ ಸುಧಾರಣೆ ಕಂಡಿದ್ದು ಸಾಧಕ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಪಂಜಾಬ್ ಒಂದು ಸ್ಥಾನ ಕಳೆಗಿಳಿದಿದ್ದು, ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಪಟ್ಟಿಗೆ ಸೇರ್ಪಡೆಗೊಂಡಿದೆ.

ಮಾನದಂಡವೇನು?

ಸರಕು ಸಾಗಣೆಗೆ ಸಂಬಂಧಿಸಿದ ಮೂಲಸೌಕರ್ಯ, ಸೇವೆ, ಕಾರ್ಯಾಚರಣೆ, ನಿಯಂತ್ರಣ ವ್ಯವಸ್ಥೆ ಹಾಗೂ ಸುಸ್ಥಿರ ಸಾಗಣೆ ಮತ್ತು ಸರಕು ಸಾಗಣೆ ಸೇವಾ ಜಾಲದಲ್ಲಿ ಎದುರಾದ ಸಮಸ್ಯೆಗಳು ಹಾಗೂ ಆಯಾ ರಾಜ್ಯಗಳಲ್ಲಿನ ಸರಕು ಸಾಗಣೆ ವ್ಯವಸ್ಥೆಯನ್ನು ಮಾನದಂಡವಾಗಿಟ್ಟುಕೊಂಡು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು ಈ ವರದಿಯನ್ನು ಸಿದ್ಧಪಡಿಸಿದೆ. 2023ರಲ್ಲಿಯೂ ಈ ಪಟ್ಟಿ ಬಿಡುಗಡೆ ಮಾಡಲಾಗಿತ್ತು.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಈ ಸೂಚ್ಯಂಕದ ಅಡಿ ಸೇರ್ಪಡೆಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಮತ್ತಷ್ಟು ಬಿಗಿಗೊಳಿಸಲು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು ಮುಂದಾಗಬೇಕು. ಸರಕು ಸಾಗಣೆ ವಲಯದಲ್ಲಿ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಗೆ ಕ್ರಮವಹಿಸಲು ಸಚಿವಾಲಯ ನಿರ್ಧರಿಸಿದೆ.
- ಪಿಯೂಷ್ ಗೋಯಲ್
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಸಮಾಚಾರ ಸಣ್ಣದಲ್ಲ

ವೀರಭದ್ರೇಶ್ವರ ಜಾತ್ರಾ ಮಹೋತ್ಸವ

ಬೀದರ: ಜಿಲ್ಲೆಯ ಹುಮನಾಬಾದ ನಗರದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವವು ಜ.14 ರಿಂದ ಜ.27 ರವರೆಗೆ ಬಹು ವಿಜೃಂಭಣೆಯಿಂದ ನಡೆಯಲಿದ್ದು, ಈ ಜಾತ್ರಾ ಮಹೋತ್ಸವಕ್ಕೆ ರಾಜ್ಯ ಹಾಗೂ ನೆರೆ ರಾಜ್ಯಗಳಿಂದ ಭಕ್ತಾದಿಗಳು ಆಗಮಿಸಲಿದ್ದಾರೆ. ಕಾರಣ ಜಾತ್ರೆಗೆ ಬರುವ ಭಕ್ತಾದಿಗಳ ಮನೋರಂಜನೆಗಾಗಿ ಜ.24 ರಿಂದ 27 ರವರೆಗೆ ಜಾತ್ರೆಯಲ್ಲಿ ಚಲನಚಿತ್ರ ಪ್ರದರ್ಶನ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಸಹಾಯಕ ಆಯುಕ್ತರು ಬಸವಕಲ್ಯಾಣ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು ಶ್ರೀ ವೀರಭದ್ರೇಶ್ವರ ದೇವಸ್ಥಾನ ಹುಮನಾದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಚಿವರ ಜಿಲ್ಲಾ ಪ್ರವಾಸ ಜ.7 ರಂದು

ಬೀದರ: ಲೋಕೋಪಯೋಗಿ ಸಚಿವ ಸತೀಶ ಜಾರಕಿಹೋಳಿ ಅವರು ಜ.7 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ. ಅವರು ಬೆಳಿಗ್ಗೆ 11 ಗಂಟೆಗೆ ಹುಮನಾಬಾದ ತಾಲೂಕಿನ ಜಿಲ್ಲಾ ಮುಖ್ಯ ರಸ್ತೆ ಎನ್‌ಎಚ್.9 ರಲ್ಲಿ ಕಿ.ಮೀ.6.40 ರಿಂದ 9.20 ವರೆಗಿನ ಚಿಟಗುಪ್ಪಾ ಶಮತಬಾದ್ ರಸ್ತೆಯಲ್ಲಿ ಕೈಗೊಂಡಿರುವ ಕಾಮಗಾರಿಯ ಪರಿವೀಕ್ಷಣೆ ಮಾಡಲಿದ್ದಾರೆ. ನಂತರ ಮಧ್ಯಾಹ್ನ 2 ಗಂಟೆಗೆ ನೌಬಾದ್-ಕಮಲನಗರ-ನಾಬಾದ್ (ಬೀದರ) ಮಹಾರಾಷ್ಟ್ರಗಡಿ ಭಾಗದ ರಾಷ್ಟ್ರೀಯ ಹೆದ್ದಾರಿ-50ರ ಕಿ.ಮೀ ದಿಂದ ಕಿ.ಮೀ. 54.370 ನೌಬಾದ್‌ವರೆಗಿನ ಕೈಗೊಳ್ಳಲಾಗಿರುವ ರಸ್ತೆ ಕಾಮಗಾರಿಗಳ ಪರಿವೀಕ್ಷಣೆ ನಡೆಸುವರು. ನಂತರ ಮಧ್ಯಾಹ್ನ 3 ಗಂಟೆಗೆ ಬೀದರ್ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ನೀಡುವರು. ಸಂಜೆ 4 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೀದರ ಜಿಲ್ಲೆಯ ಲೋಕೋಪಯೋಗಿ ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಹಿಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೋನ್-ಇನ್ ಕಾರ್ಯಕ್ರಮ ನಾಳೆ

ಬೀದರ: ಸಾರ್ವಜನಿಕ ಪ್ರಯಾಣಿಕರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯ ದಲ್ಲಾಗುತ್ತಿರುವ ಸಮಸ್ಯೆಗಳನ್ನು ಆಲಿಸುವ ಹಾಗೂ ಪ್ರಯಾಣಿಕರಿಗೆ ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಜ. 6 ಮಧ್ಯಾಹ್ನ 3.30 ರಿಂದ 5.30 ರವರೆಗೆ ಫೋನ್-ಇನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬೀದರ ವಿಭಾಗದ ಕಕರಸಾ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪ್ರಯಾಣಿಕರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಾರಿಗೆ ಸೌಲಭ್ಯದ ಕೊರತೆ ಕಂಡುಬಂದಲ್ಲಿ ದೂರವಾಣಿ ಸಂಖ್ಯೆ (7760992200), (7760992202) ಗೆ ಕರೆ ಮಾಡಿ ಮನವಿ, ಸಮಸ್ಯೆ ಹಾಗೂ ಸಲಹೆಗಳನ್ನು ನೀಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ನೇರ ಫೋನ್ ಇನ್ ಕಾರ್ಯಕ್ರಮ ಜ.6ಕ್ಕೆ

ಯಾದಗಿರಿ: ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಯಾದಗಿರಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಅವರು ತಿಳಿಸಿದ್ದಾರೆ. ಜಿಲ್ಲೆಯ ಸಾರ್ವಜನಿಕರಿಗೆ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಉಂಟಾಗುವ ಸಾರಿಗೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರತಿ ತಿಂಗಳು ಮೊದಲನೇ ಸೋಮವಾರ ನೇರ ಫೋನ್ ಇನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ವ್ಯವಸ್ಥಾಪಕ ನಿರ್ದೇಶಕರು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೇಂದ್ರ ಕಚೇರಿ ಕಲಬುರಗಿ ಅವರು ಸೂಚನೆಯ ಅನ್ವಯ ಯಾದಗಿರಿ ಜಿಲ್ಲೆಯ ಸಾರ್ವಜನಿಕರಿಗೆ ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಇರುವ ಸಾರಿಗೆ ಸಮಸ್ಯೆಗಳ ಕುರಿತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಯಾದಗಿರಿ ವಿಭಾಗದಿಂದ ಜ.6 ರಂದು ಮಧ್ಯಾಹ್ನ ಸಮಯ 3.30 ಗಂಟೆಯ ನೇರ ಫೋನ್ ಇನ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಯಾದಗಿರಿ ಜಿಲ್ಲೆಯ ಸಾರ್ವಜನಿಕರು ಮತ್ತು ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ತಮ್ಮ ಸಾರಿಗೆ ವ್ಯವಸ್ಥೆ ಕುರಿತು ಇರುವ ಸಮಸ್ಯೆಗಳನ್ನು ತಿಳಿಸಿ ಪರಿಹಾರ ಕಂಡುಕೊಳ್ಳಬೇಕು, ದೂ.ಸಂ.6366423882ಗೆ ಸಂಪರ್ಕಿಸಬಹುದು.

ವಿ+
ಸೋಮವಾರ

{ಎಚ್.ಡಿ. ಕುಮಾರಸ್ವಾಮಿ} ಸಚಿವ

ಮನೆ ಎಂದ ಮೇಲೆ ಮುನಿಸು ಇರುತ್ತದೆ, ಜೆಡಿಎಸ್ ಮತ್ತು ಜೆಟಿಡಿದು ಗಂಡ- ಹೆಂಡತಿ ಜಗಳದ ರೀತಿ. ನಮ್ಮಲ್ಲಿ ಇರುವ ಭಿನ್ನಾಭಿಪ್ರಾಯ ದೂರ ಆಗುತ್ತವೆ. ಎಲ್ಲವೂ ಸರಿಹೋಗುತ್ತದೆ. ಮಂತ್ರಿಗಳ ಅಭಿವೃದ್ಧಿ ಆಗುತ್ತಿದೆ. ಜನಗಳ ಅಭಿವೃದ್ಧಿ ಯಾರಿಗೆ ಬೇಕು. ಎಲ್ಲದಕ್ಕೂ ಕೂಡ ಪರ್ಸಂಟೇಜ್ ಕೇಳುತ್ತಾರೆ.



ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನಾ ಸಭೆ | ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ

ಕಾಲಮಿತಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ

ಬೀದರ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಬೀದರ ಜಿಲ್ಲೆಯಲ್ಲಿ ಕೈಗೊಂಡ ಎಲ್ಲ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ಪೂರ್ಣಗೊಳಿಸುವಂತೆ ಸಚಿವ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹಮ್ಮಿಕೊಂಡ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಳೆದ 2018-19 ರಿಂದ 2023 ರವರೆಗೆ ವಿವಿಧ ಇಲಾಖೆಗಳಲ್ಲಿ ಕೆಕೆಆರ್‌ಡಿಬಿ ಕಾಮಗಾರಿಗಳು ಅಪೂರ್ಣ ಹಂತದಲ್ಲಿವೆ. ಮೆಕ್ರೋ ಹಾಗೂ ಮೈಕ್ರೋ ಯೋಜನೆಯ ಎಲ್ಲ ಕಾಮಗಾರಿಗಳನ್ನು ಸಂಬಂಧಿಸಿದ ಅಧಿಕಾರಿಗಳು ಈ ಮಾರ್ಚ ಒಳಗಾಗಿ ಪೂರ್ಣಗೊಳಿಸುವಂತೆ ಸಚಿವರು ಖಡಕ್ ಸೂಚನೆ ನೀಡಿದರು.

ಈವರೆಗೆ ಒಟ್ಟು 3564 ಕಾಮಗಾರಿಗಳು ಪೂರ್ಣಗೊಂಡಿದ್ದು, 708 ಕಾಮಗಾರಿಗಳು ಪ್ರಗತಿಯಲ್ಲಿವೆ. 436 ಇನ್ನು ಆರಂಭಿಸಬೇಕಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಎಲ್ಲಾ ಕಾಮಗಾರಿಗಳ ಗುಣಮಟ್ಟ ಥರ್ಡ ಪಾರ್ಟಿ ಮೂಲಕ ಪರೀಕ್ಷೆ ಮಾಡುವಂತೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಈಶ್ವರ ಬಿ.ಖಂಡ್ರೆ ಮಾತನಾಡಿದರು.

ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ ಅವರಿಗೆ ಸಚಿವರು ಸೂಚಿಸಿದರು.

ವೈದ್ಯಕೀಯ ನಿರ್ದೇಶನಾಲಯಕ್ಕೆ 2020 ರಲ್ಲಿಯೇ 11 ಕೋಟಿ ನೀಡಿದ್ದು, ಈವರೆಗೆ ಖರ್ಚು ಮಾಡದೇ ಇದ್ದು ಹಣ ಮರಳಿಸಲು ಪತ್ರ ಬರೆಯುವಂತೆ ಸಚಿವರು ಸೂಚಿಸಿದರು.

ನಿರ್ಮಿತ ಕೇಂದ್ರದಿಂದ 118 ಅಂಗನವಾಡಿ ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿದವುಗಳು ಪ್ರಗತಿಯಲ್ಲಿವೆ. ಶಿಕ್ಷಣ ಇಲಾಖೆಗೆ ಮೈಕ್ರೋ ಯೋಜನೆಯಡಿ 2023 ರಲ್ಲಿ 37 ಕಾಮಗಾರಿಗಳಿಗೆ 4.65 ಕೋಟಿ ರು. ನೀಡಲಾಗಿದ್ದು ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು.

ಆರೋಗ್ಯ ಇಲಾಖೆಗೆ ಒಟ್ಟು 11ಆ್ಯಂಬುಲೆನ್ಸ್ ಒದಗಿಸಲಾಗಿದ್ದು. ಚಾಲಕರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಚಿವರು ತಿಳಿಸಿದರು. ಎಲ್ಲ ಕೆಕೆಆರ್‌ಡಿಬಿ ಕಾಮಗಾರಿಗಳನ್ನು ಅಧಿಕಾರಿಗಳು ಯುದ್ಧೋಪಾದಿಯಲ್ಲಿ ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರಲ್ಲದೇ ಜಿಲ್ಲಾಧಿಕಾರಿಗಳು ಹಾಗೂ ಸಿಇಓ ಈ ಕಾಮಗಾರಿಳ ಗುಣಮಟ್ಟ ಪರೀಕ್ಷಿಸುವಂತೆ ತಿಳಿಸಿದರು.

ಎಸ್.ಎಸ್.ಎಲ್.ಸಿ. ಫಲಿತಾಂಶ ಹೆಚ್ಚಿಸುವ ಕ್ರಮ: ಇದೇ ಮಾರ್ಚ.21 ರಂದು ರಾಜ್ಯಾದ್ಯಂತ ಎಸ್‌ಎಸ್ ಎಲ್‌ಸಿ ಪರೀಕ್ಷೆಗಳು ಜರುಗಲಿದ್ದು, ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಿಸಲು ಶಿಕ್ಷಣ ಇಲಾಖೆ ಕೈಗೊಂಡಿರುವ ವಿಶೇಷ ಕಾರ್ಯಾಗಾರ ಹಾಗೂ ತರಬೇತಿ ಬಗ್ಗೆ ಸಚಿವರು ಮಾಹಿತಿ ಪಡೆದರು.

> ಜಿಲ್ಲೆಯಲ್ಲಿ ಪ್ಲೋರೈಡ್ ಹಾಗೂ ನೈಟ್ರೇಟ್ ರಸಾಯನ ಅಂಶಗಳು ಹೆಚ್ಚಿರುವ ಗ್ರಾಮಗಳ ಪಟ್ಟಿ ಮಾಡಿ ವರದಿ ಪಡೆಯುವಂತೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸೂಚಿಸಲಾಯಿತು. ಅಗತ್ಯವಿದ್ದಲ್ಲಿ ಆರ್.ಓ.ಪ್ಲಾಂಟ್ ಅಳವಡಿಸಿ ಈ ರಸಾಯನಿಕ ಅಂಶಗಳು ಹೆಚ್ಚಿನ ಪ್ರಮಾಣದಲ್ಲಿದ್ದರೆ ಮಾತ್ರ ಆರ್.ಓ.ಪ್ಲಾಂಟ್‌ಗಳನ್ನು ಹಾಕಬಹುದು.
> -ಈಶ್ವರ ಬಿ.ಖಂಡ್ರೆ, ಸಚಿವ

ಡಿಡಿಪಿಐ ಮಾತನಾಡಿ, ಈಗಾಗಲೇ ಎಲ್ಲ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ದಿನಕ್ಕೆರಡು ವಿಶೇಷ ತರಗತಿ, ಕಾರ್ಯಾಗಾರ ಹಮ್ಮಿಕೊಂಡು ಅಗತ್ಯವಿರುವ ಎಲ್ಲ ಪರೀಕ್ಷೆಗಳನ್ನು ಸಹ ಹಮ್ಮಿಕೊಳ್ಳಲಾಗಿದೆ ಎಂದರು. ಎಲ್ಲ ಉಪವಿಭಾಗಾಧಿಕಾರಿಳು ಹಾಗೂ ತಹಸೀಲ್ದಾರರು ತಮ್ಮ ವ್ಯಾಪ್ತಿಯ ಪ್ರೌಢ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುವಂತೆ ಸಚಿವರು ಸೂಚಿಸಿದರು.

ಗೋಶಾಲೆ ನಿರ್ಮಾಣಕ್ಕೆ 50 ಲಕ್ಷ ಅನುದಾನ

ಬಸವಕಲ್ಯಾಣದಲ್ಲಿ ಗೋಶಾಲೆ ನಿರ್ಮಾಣಕ್ಕೆ ಸರಕಾರವು 50 ಲಕ್ಷ ಅನುದಾನ ನೀಡಿದ್ದು ಆರಂಭಿಸುವಂತೆ ಪಶು ಸಂಗೋಪನಾ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಲಾಯಿತು. ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಲ್ಲಿ 2023-24ನೇ ಸಾಲಿನ ಎಲ್ಲಾ ಯೋಜನಾ ಕಾರ್ಯಕ್ರಮಗಳನ್ನು ತಪ್ಪದೇ ಮಾರ್ಚ ಒಳಗಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ. ಜಿಪಂ ಸಿಇಓ ಗಿರೀಶ ಬದೋಲೆ. ಪೋಲಿಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ವಾನತಿ. ಎಂ.ಎಂ. ಅಪರ ಜಿಲ್ಲಾಧಿಕಾರಿ ಶಿವಕುಮಾರ ಶೀಲವಂತ. ಸಹಾಯಕ ಆಯುಕ್ತ ಮುಕುಲ್ ಜೈನ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಕ್ಕಳ ಪ್ರತಿಭೆ ಪ್ರತಿಭಾ ಕಾರಂಜಿ ಪೂರಕ

ಭಾಲ್ಕಿ: ಮಕ್ಕಳಲ್ಲಿ ಹುದುಗಿರುವ ಪ್ರತಿಭೆ ಅರಳಿಸಲು ಪ್ರತಿಭಾ ಕಾರಂಜಿ ಸೂಕ್ತ ವೇದಿಕೆಯಾಗಿದ್ದು, ಮಕ್ಕಳು ಕೂಡ ಉತ್ಸಾಹದಿಂದ ಪಾಲ್ಗೊಳ್ಳಬೇಕು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ಪಟ್ಟಣದ ಸರಕಾರಿ ಪ್ರೌಢಶಾಲೆಯಲ್ಲಿ, ಜಿಲ್ಲಾ ಪಂಚಾಯಿತಿ ಬೀದರ, ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಭಾಲ್ಕಿಯ ವತಿಯಿಂದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿದರು. ಬಡ ವಿದ್ಯಾರ್ಥಿಗಳಲ್ಲಿಯ ಸೂಕ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಪ್ರತಿಭಾ ಕಾರಂಜಿ, ಕಲೋತ್ಸವದ ಉದ್ದೇಶವಾಗಿದ್ದು, ಸರಕಾರ ಎಲ್ಲಾ ಶಾಲೆಗಳಲ್ಲಿ ಇದನ್ನು ನಡೆಸುತ್ತಿರುವುದು ಮೆಚ್ಚುವಂತಹ ಕಾರ್ಯವಾಗಿದೆ ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಅವರು ಮಾತನಾಡಿ, ಪ್ರತಿಭಾಕಾರಂಜಿಯಲ್ಲಿ ಸೋಲು, ಗೆಲುವು ಮುಖ್ಯವಲ್ಲ, ಭಾಗವಹಿಸುವಿಕೆ ಬಹುಮುಖ್ಯವಾಗಿದೆ. ಸರಕಾರಿ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸರಕಾರ ಪ್ರತಿಭಾಕಾರಂಜಿ, ಕಲೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ ಎಂದು ಸಲಹೆ ನೀಡಿದರು.

ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ ಸಿಂಧನಕೆರೆ ಅಧ್ಯಕ್ಷತೆ ವಹಿಸಿದ್ದರು. ಇದೇ ವೇಳೆ ವಿವಿಧ ಪ್ರಾಥಮಿಕ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಂದ ವಿವಿಧ ಸ್ಪರ್ಧೆಗಳನ್ನು ರೂಪಿಸಿ, ಪ್ರತಿಭೆ ಗುರುತಿಸುವ ಕಾರ್ಯ ನಡೆಯಿತು. ಜೆಫ್‌ಸನ್ ಕೋಟೆ ತಂಡದವರಿಂದ ಸಂಗೀತ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ತಹಸೀಲ್ದಾರ ಮಲ್ಲಿಕಾರ್ಜುನ ವಡ್ಡನಕೆರೆ, ತಾ.ಪಂ. ಇಒ ಸೂರ್ಯಕಾಂತ ಬಿರಾದಾರ, ದೈಹಿಕ ಶಿಕ್ಷಣ ಪರಿವೀಕ್ಷಕ ರೋಹಿದಾಸ ರಾಠೋಡ, ಕ್ಷೇತ್ರ ಸಮನ್ವಯಾಧಿಕಾರಿ ಮನೋಹರ ಹೊಳಕರ, ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಮಲ್ಲಿನಾಥ ಸಜ್ಜನ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಪತ್ರಾಂಕಿತ ವ್ಯವಸ್ಥಾಪಕ ಶಿವಕುಮಾರ ಫುಲಾರಿ ಉಪಸ್ಥಿತರಿದ್ದರು.

ಭಾಲ್ಕಿಯ ವತಿಯಿಂದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಸಂಸದ ಸಾಗರ ಖಂಡ್ರೆ ಉದ್ಘಾಟಿಸಿದರು.

> ಶಾಲಾ ಮತ್ತು ಕ್ಲಸ್ಟರ್ ಹಂತದಲ್ಲಿ ಉತ್ತಮ ಪ್ರತಿಭೆಗಳನ್ನು ಗುರುತಿಸಿ ತಾಲೂಕು ಮಟ್ಟಕ್ಕೆ ಕಳುಹಿಸಿಕೊಡಲಾಗಿದೆ. ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಪ್ರತಿಭೆಗಳು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಭಾಗವಹಿಸುವರು. ತೀರ್ಪುಗಾರರು ಉತ್ತಮ ಪ್ರತಿಭೆಗಳನ್ನು ಗುರುತಿಸಿ ಆಯ್ಕೆಮಾಡಬೇಕು.
> -ಸಿ.ಜಿ.ಹಳ್ಳದ, ಕ್ಷೇತ್ರ ಶಿಕ್ಷಣಾಧಿಕಾರಿ

ವಿದ್ಯಾರ್ಥಿಗಳಲ್ಲಿನ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸಿ

ಯಾದಗಿರಿ: ವಿದ್ಯಾರ್ಥಿಗಳಲ್ಲಿನ ಪ್ರತಿಭೆಗಳನ್ನು ಪ್ರೋತ್ಸಾಹಿಸಿ ಅವರ ಭವಿಷ್ಯ ರೂಪಿಸುವ ಜವಾಬ್ದಾರಿ ಶಿಕ್ಷಕರ ಮೇಲಿದ್ದು, ಹಿಂದುಳಿದ ಜಿಲ್ಲೆಯವರು ಎಂಬುವ ವಿದ್ಯಾರ್ಥಿಗಳಲ್ಲಿನ ಮನಸ್ಥಿತಿ ಬದಲಾಯಿಸಲು ಪ್ರಯತ್ನಿಸುವಂತೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಅವರು ಶಿಕ್ಷಕರಿಗೆ ಕರೆ ನೀಡಿದರು.

ನಗರದ ತಿಮ್ಮಣ್ಣ ಹೆಡಗಿಮದ್ರಿ, ಇಂಟರ್‌ನ್ಯಾಷನಲ್ ಸ್ಕೂಲ್, ಜಿಲ್ಲಾ ಪಂಚಾಯಿತಿ, ಉಪ ನಿರ್ದೇಶಕರ ಕಾರ್ಯಾಲಯ, ಶಾಲಾ ಶಿಕ್ಷಣ ಇಲಾಖೆ ಯಾದಗಿರಿ, ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ ಒರಡಿಯಾ ಮಾತನಾಡಿ, ಈ ಭಾಗದ ವಿದ್ಯಾರ್ಥಿಗಳಲ್ಲಿನ ಹಿಂದುಳಿದ ಭಾಗದವರು ಎಂಬ ಮನಸ್ಥಿತಿ ಹೋಗಬೇಕು. ಇಲ್ಲಿ ನಡೆಯುತ್ತಿರುವ ಇಂತಹ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಬೇಕು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ. ಸಿ.ಎಸ್.ಮುಧೋಳ್ ಮಾತನಾಡಿ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಇನ್ನೂ ಕೇವಲ 74 ದಿನಗಳು ಉಳಿದಿವೆ. ಕಾರಣ ಹೈಸ್ಕೂಲ್ ಶಿಕ್ಷಕರಿಗೆ ಬೇರೆ ಯಾವ ಕೆಲಸಗಳನ್ನು ಹಚ್ಚುವುದು ಬೇಡ ಎಂದು ಹೇಳಿ, ದಿನನಿತ್ಯ ವಿದ್ಯಾರ್ಥಿಗಳ ಪ್ರತಿಭೆ, ಫಲಿತಾಂಶ ಸುಧಾರಣೆಗೆ ಗಮನ ನೀಡಲು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಡಯಟ್ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕ ಜಿ.ಎಂ.ವೃಷಬೆಂದ್ರಯ್ಯ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ವಿನಾಯಕ ಮಾಲಿ ಪಾಟೀಲ್, ಕರ್ನಾಟಕ ರಾಜ್ಯ ಪ್ರೌಡ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ ಕುಮಾರ ಕೆಂಭಾವಿ, ತಾಲೂಕು ಅಧ್ಯಕ್ಷ ಶರಣಗೌಡ, ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಹಣಮಂತ ಹೊಸಮನಿ, ಲಿಪಿಕ ನೌಕರರ ಸಂಘದ ಅಧ್ಯಕ್ಷ ಆದೆಪ್ಪ ಬಾಗ್ಲಿ, ತಿಮ್ಮಣ್ಣ ಹೆಡಗಿಮದ್ರಿ, ಇಂಟರ್‌ನ್ಯಾಷನಲ್ ಸ್ಕೂಲ್ ಅಧ್ಯಕ್ಷ ಅನೀಲ ಕುಮಾರ ಹೆಡಗಿಮದ್ರಿ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಬಿ.ಪಾಟೀಲ್, ಶಿಕ್ಷಣ ಸಂಯೋಜಕ ಕಿಶನ್ ಪವಾರ್, ವಿಷಯ ಪರಿವೀಕ್ಷಕ ಬಸನಗೌಡ, ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಚಿತ್ರಶೇಖರ , ಸ್ಥಳೀಯ ಸಿಆರ್ ಪಿ ರವಿಚಂದ್ರ ನಾಯ್ಕಲ್, ಮುಖ್ಯಗುರುಗಳಾದ ಪುಷ್ಪಾಂಜಲಿ ಮಹಾಬಳೇಶ್ವರ, ಸಾನೀಯಾ ಸೈಯದ್ ಸೇರಿದಂತೆ ವಿವಿಧ ಶಾಲೆಯ ಮಕ್ಕಳು ಇದ್ದರು.

ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಉದ್ಘಾಟಿಸಿದರು.

> ಈ ಭಾಗದ ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಮುಂದೆ ಬರಬೇಕು. ಪರೀಕ್ಷೆಗಳಲ್ಲಿ ಫಲಿತಾಂಶ ಹೆಚ್ಚಳಕ್ಕೆ ವಿಶೇಷ ತರಬೇತಿ ನೀಡಿ ಮುಂದೆ ಬರುವಂತೆ ನೋಡಿಕೊಳ್ಳಲು ಶಿಕ್ಷಕರು ಹಾಗೂ ಪಾಲಕರಿಗೆ ಕರೆ ನೀಡಿದ ಅವರು ವಿದ್ಯಾರ್ಥಿಗಳೂ ಸಹ ಅಧ್ಯಯನದಲ್ಲಿ ವಿಶೇಷ ಗಮನ ನೀಡುವಂತೆ ಸಲಹೆ ನೀಡಿದರು.
> -ಚನ್ನಾರೆಡ್ಡಿ ಪಾಟೀಲ್ ತುನ್ನೂರ್, ಶಾಸಕ

ವಡಗೇರಾದಲ್ಲಿ ರೈಲು ನಿಲ್ದಾಣ ಸ್ಥಾಪನೆಗೆ ಸಂಸದರಿಗೆ ಮನವಿ

ಯಾದಗಿರಿ: ಆಲಮಟ್ಟಿ ರೈಲು ಮಾರ್ಗ ಪುನಾರಂಭ ಮತ್ತು ವಡಗೇರಾ ಮಾರ್ಗವಾಗಿ ರೈಲ್ವೆ ಆರಂಭ ಹಾಗೂ ವಡಗೇರ ಪಟ್ಟಣದಲ್ಲಿ ರೈಲ್ವೆ ನಿಲ್ದಾಣ ಸ್ಥಾಪಿಸಲು ರಾಯಚೂರು ಸಂಸದ ಜಿ. ಕುಮಾರ್ ನಾಯಕ್ ರವರಿಗೆ ಅವರ ಕಾರ್ಯಾಲಯದಲ್ಲಿ ಯುವ ಮುಖಂಡರಾದ ನಿಂಗಣ್ಣ ಜಡಿ ಮತ್ತು ಫಯಾಜ್ ಬಿ. ನಾಯ್ಕೋಡಿ ಮನವಿ ಸಲ್ಲಿಸಿದರು.

ದೇಶದ ಉತ್ತರ ರಾಜ್ಯಕ್ಕೆ ಹೋಲಿಸಿದಲ್ಲಿ ಕರ್ನಾಟಕದಲ್ಲಿ ರೈಲ್ವೆ ಮಾರ್ಗಗಳು ಬಹಳ ಕಡಿಮೆ ಇವೆ. ಅದರಲ್ಲಿಯು ಕಲ್ಯಾಣ ಕರ್ನಾಟಕದಲ್ಲಿ ರೈಲ್ವೆ ಜಾಲ ಇನ್ನು ಕಡಿಮೆ ಇವೆ ಅಂಕಿ ಅಂಶಗಳು ಹೇಳುತ್ತವೆ. ವಡಗೇರಾ ಅತಿ ಹಿಂದುಳಿದ ತಾಲೂಕು ಆಗಿದ್ದು, ತಾವು ಕೇಂದ್ರ ರೈಲ್ವೆ ಮಂತ್ರಿ ಅಶ್ವಿನಿ ವೈಷ್ಣವ್ ರಾಜ್ಯ ರೈಲ್ವೆ ಮಂತ್ರಿ ವಿ.ಸೋಮಣ್ಣ ಅವರಲ್ಲಿ ಈ ಕುರಿತು ಚರ್ಚಿಸಿ ವಡಗೇರಾ ಮೂಲಕ ರೈಲ್ವೆ ಮಾರ್ಗ ಮತ್ತು ರೈಲ್ವೆ ನಿಲ್ದಾಣ ಸ್ಥಾಪಿಸಲು ಕ್ರಮ ಕೈಗೊಳ್ಳುವುದರ ಜತೆಗೆ ಮುಂದಿನ ಕೇಂದ್ರ ಬಜೆಟ್‌ನಲ್ಲಿ ವಡಗೇರಾ ತಾಲೂಕಿನ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು.

ಯಾದಗಿರಿ-ಆಲಮಟ್ಟಿ ರೈಲು ಮಾರ್ಗ ವಡಗೇರಾ ಮಾರ್ಗವಾಗಿ ಪ್ರಾರಂಭ ಮಾಡಿ ವಡಗೇರಾದಲ್ಲಿ ರೈಲು ನಿಲ್ದಾಣ ಸ್ಥಾಪಿಸಿ ತಾಲೂಕಿನ ಬಹುತೇಕ ಗ್ರಾಮದ ಜನರು ದೂರದ ಪಟ್ಟಣಗಳಾದ ಯಾದಗಿರಿ ಮತ್ತು ಕಲಬುರಗಿ ನಿಲ್ದಾಣಗಳ ಮೇಲೆ ಅವಲಂಬನೆಯಾಗಿದ್ದು, ಅದನ್ನು ತಗ್ಗಿಸಲು ವಡಗೇರಾ ಪಟ್ಟಣದಲ್ಲಿ ರೈಲು ನಿಲ್ದಾಣ ಸ್ಥಾಪಿಸಿ ಭವಿಷ್ಯದ ದೃಷ್ಟಿಯಿಂದ 165 ಕಿ.ಮೀ ಉದ್ದದ ರೈಲ್ವೆ ಮಾರ್ಗ ಇದಾಗಿದೆ. ಇದರ ಮೂಲ ನಕ್ಷೆ ಮತ್ತೊಮ್ಮೆ ಪರಿಶೀಲಿಸಿ ವಡಗೇರಾ ತಾಲೂಕಿಗೆ ಸೂಕ್ತ ರೈಲ್ವೆಗೆ ಆದ್ಯತೆ ನೀಡುವಂತೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ಸಂಸದರು ಈ ಕುರಿತು ಸಂಬಂಧಿಸಿದ ಸಚಿವರು ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪಟ್ಟಣದ ಯುವ ಮುಖಂಡರಾದ ನಿಂಗಣ್ಣ ಜಡಿ, ಫಯಾಜ್ ಬಿ. ನಾಯ್ಕೋಡಿ ಉಪಸ್ಥಿತರಿದ್ದರು.

ರಾಯಚೂರು ಸಂಸದ ಜಿ. ಕುಮಾರ್ ನಾಯಕ್‌ರಿಗೆ ಯುವ ಮುಖಂಡ ನಿಂಗಣ್ಣ ಜಡಿ ಮತ್ತು ಫಯಾಜ್ ಬಿ. ನಾಯ್ಕೋಡಿ ಮನವಿ ಸಲ್ಲಿಸಿದರು.

ದೈಹಿಕ, ಮಾನಸಿಕ ಸಧೃಡ ಬೆಳವಣಿಗೆಗೆ ಕ್ರೀಡೆ ಅವಶ್ಯ

ಭಾಲ್ಕಿ: ಯುವಕರ ವ್ಯಕ್ತಿತ್ವ ವಿಕಸನಕ್ಕೆ ಅಧ್ಯಯನದ ಜತೆಗೆ ಕ್ರೀಡೆಗಳು ಬಹಳ ಅವಶ್ಯವಾಗಿವೆ ಎಂದು ಧನ್ನೂರ. ಎಚ್ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮುಖ್ಯಗುರುಗಳಾದ ಅರುಣಾಬಾಯಿ ಅವರು ತಿಳಿಸಿದರು.

ತಾಲೂಕಿನ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಸೂರ್ಯ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿದ್ದ ಕ್ರೀಡಾಕೂಟ ಸ್ಪರ್ಧೆಗಳ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಪ್ರಶಸ್ತಿ ವಿತರಿಸಿ ಅವರು ಮಾತನಾಡಿದರು.

ಗ್ರಾಮದ ಮುಖಂಡರಾದ ರಮೇಶ ಅವರು ಮಾತನಾಡಿ, ಪ್ರತಿಯೊಬ್ಬರಿಗೂ ಕ್ರೀಡೆಗಳ ಅವಶ್ಯಕತೆ ಇದೆ, ಹಿಂದಿನ ಕಾಲದಲ್ಲಿ ಪ್ರತಿಯೊಬ್ಬರು ವ್ಯವಸಾಯದಲ್ಲಿ ತೊಡಗಿಕೊಂಡು ಉತ್ತಮ ಆಹಾರ ಪದಾರ್ಥಗಳನ್ನು ಸೇವಿಸಿ ನೂರಾರು ವರ್ಷಗಳ ಕಾಲ ಜೀವನ ನಡೆಸುತ್ತಿದ್ದರು. ಆಧುನಿಕತೆ ಹೆಚ್ಚಾದಂತೆ ಮನುಷ್ಯ ಹಲವು ರೀತಿಯ ರೋಗಗಳಿಗೆ ಒಳಪಡುತ್ತಿದ್ದಾನೆ. ಈ ನಿಟ್ಟಿನಲ್ಲಿ ಮನುಷ್ಯ ಆರೋಗ್ಯವಾಗಿ ಜೀವನ ನಡೆಸಲು ಕ್ರೀಡೆಗಳಲ್ಲಿ ಭಾಗವಹಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದಲ್ಲಿ ಸೂರ್ಯ ಫೌಂಡೇಶನ್ ಅವರ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಸೂರ್ಯ ಫೌಂಡೇಶನ್ ಸಂಯೋಜಕ ಗುರುನಾಥ ರಾಜಗೀರಾ ಮಾತನಾಡಿ, ಫೌಂಡೇಶನ್ ಸಂಸ್ಥಾಪಕರಾದ ಪದ್ಮಶ್ರೀ ಜಯಪ್ರಕಾಶ್ ಅಗ್ರವಾಲ್ ಅವರ ಜನ್ಮದಿನದಿಂದ (ನ.14) ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದವರೆಗೆ (ಡಿ.25) ದೇಶಾದ್ಯಂತ 17 ರಾಜ್ಯಗಳಲ್ಲಿ ಕ್ರೀಡಾಕೂಟ ಸ್ಪರ್ಧೆಗಳು ನಡೆದಿವೆ ಎಂದರು. ಫೌಂಡೇಶನ್ ರಾಷ್ಟ್ರೀಯ ಉಪಾಧ್ಯಕ್ಷ ಅನಂತ ಬಿರಾದರ ಅವರ ಮಾರ್ಗದರ್ಶನದಲ್ಲಿ ವಿವಿಧ ಸೇವಾ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಇತ್ತೀಚಿಗೆ ಮಕ್ಕಳಿಗೆ ಹಮ್ಮಿಕೊಂಡ ಕಬ್ಬಡ್ಡಿ, ವಾಲಿಬಾಲ್, ರನ್ನಿಂಗ್ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ಹಾಗೂ ಭಾಗವಹಿಸಿದ ಎಲ್ಲ ಮಕ್ಕಳಿಗೆ ಪ್ರಶಸ್ತಿ ಪತ್ರ ಹಾಗೂ ಪದಕಗಳನ್ನು ನೀಡಿ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ತಿಳಿಸಿದರು. ಧನರಾಜ, ಶಿವಕುಮಾರ, ವಿಷ್ಣುಕಾಂತ ಠಾಕೂರ, ಶ್ರೀಧರ, ಸಿದ್ದು ಕಾಡೊದೆ, ರಮೇಶ ಅರಾಳೆ, ಸಂಗಮೇಶ ದಾನಿ ಸೇರಿದಂತೆ ಇತರರಿದ್ದರು.

ಭಾಲ್ಕಿ ತಾಲೂಕಿನ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಸೂರ್ಯ ಫೌಂಡೇಶನ್ ಕ್ರೀಡಾಕೂಟ ಸ್ಪರ್ಧೆಗಳ ಸಮಾರೋಪ ಸಮಾರಂಭದಲ್ಲಿ ನಡೆಯಿತು.

> ಕ್ರೀಡೆಗಳು ಇಲ್ಲದಿದ್ದರೆ ಯುವಕರು ಕ್ರಿಯಶೀಲರಾಗಿರಲು ಸಾಧ್ಯವಿಲ್ಲ ಅಧ್ಯಯನದ ಜತೆಗೆ ದೈಹಿಕ, ಮಾನಸಿಕ ಬೆಳವಣಿಗೆಗೆ ಕ್ರೀಡೆಗಳು ಅವಶ್ಯಕವಾಗಿವೆ. ಯುವಕರು ದುಶ್ಚಟಗಳಿಗೆ ಬಲಿಯಾಗದೆ ಆರೋಗ್ಯ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕಡ್ಡಾಯವಾಗಿ ಕ್ರೀಡೆಗಳಲ್ಲಿ ಭಾಗವಹಿಸಬೇಕು.
> -ಅರುಣಾಬಾಯಿ, ಮುಖ್ಯಗುರುಗಳು

ಕೆಂಭಾವಿ ಪುರಸಭೆಯ ನಗರ ಆಶ್ರಯ ಸಮಿತಿ ನೂತನ ಅಧ್ಯಕ್ಷರಾಗಿ ನಾಮನಿರ್ದೇಶನಗೊಂಡ ಶರಣಬಸವ (ಕಾಕಾ) ದಿಗ್ಗಾವಿ ಅವರಿಗೆ ವೆಂಕಟೇಶ್ವರ ಆಗ್ರೋ ಏಜೆನ್ಸಿ ವತಿಯಿಂದ ಮಾಲೀಕರಾದ ನರಸಿಂಹ ವದ್ಧಿ ಅವರು ಸನ್ಮಾನಿಸಿದರು. ಈ ವೇಳೆ ಪತ್ರಕರ್ತರಾದ ಗುಂಡ ಭಟ್ ಜೋಷಿ, ಗೌತಮ ವದ್ಧಿ, ವಿಶ್ವನಾಥ ಖಾನಾಪುರ, ಬಸನಗೌಡ ಹಲವರಿದ್ದರು.

ಕರ್ತವ್ಯದ ಅವಧಿಯಲ್ಲಿ ಅಧಿಕಾರಿಗಳ ಮೋಜು

ಬಸವಕಲ್ಯಾಣ: ಸರಕಾರಿ ಅಧಿಕಾರಿಗಳು ತಮ್ಮ ಕರ್ತವ್ಯದ ಅವಧಿಯಲ್ಲಿ ಯಾವುದೇ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಬಾರದೆಂದು ಸರಕಾರದ ಕಟ್ಟುನಿಟ್ಟಿನ ಸೂಚನೆ ಮತ್ತು ಸುತ್ತೋಲೆಗಳಿವೆ. ಆದರೂ ಬಸವಕಲ್ಯಾಣದ ಕೆಲ ಇಲಾಖೆಯ ಅಧಿಕಾರಿಗಳು ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿ ತಮ್ಮ ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ಹೊರ ಹಾಕುತ್ತಿದ್ದಾರೆ. ಈ ಬೆಳವಣಿಗೆ ತೀವ್ರವಾಗಿದ್ದು, ಬಸವಕಲ್ಯಾಣದಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಸರಕಾರಿ ಅಧಿಕಾರಿಗಳು ತಮ್ಮ ಕರ್ತವ್ಯದ ಅವಧಿಯಲ್ಲಿ ಜನಪ್ರತಿನಿಧಿಗಳು ಅಥವಾ ಮಠಾಧೀಶರು ಆಯೋಜಿಸಿರುವ ಕಾರ್ಯಕ್ರಮಗಳಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಸರಕಾರಿ ಅಧಿಕಾರಿಗಳಲ್ಲಿ ಸಮಯ ಪ್ರಜ್ಞೆ ಮತ್ತು ಕಾರ್ಯನಿಷ್ಠೆಯ ಕೊರತೆ ಎದ್ದು ಕಾಣುತ್ತಿದೆ. ಸಂಘ, ಸಂಸ್ಥೆ, ಮಠ, ರಾಜಕಾರಣಿಗಳ ಹೆಸರಿನಲ್ಲಿ ಕೆಲಸಕ್ಕೆ ಚಕ್ಕರ್: ಕೆಲ ಸರಕಾರಿ ಅಧಿಕಾರಿಗಳು ತಮ್ಮ ಕರ್ತವ್ಯದ ಅವಧಿಯಲ್ಲಿ ಸಂಘಟನೆಗಳ ಹೆಸರಿನಲ್ಲಿ ಖಾಸಗಿ ಕಾರ್ಯಕ್ರಮಗಳಲ್ಲಿ ಭಾಗವಹಿ ಸುತ್ತಿರುವುದು ಕಂಡು ಬರುತ್ತಿದ್ದು, ಇವರ ಈ ಕಾರ್ಯಕ್ಕೆ ತಾಲೂಕಿನ ಮಠಾಧೀಶರು ಹಾಗೂ ಜನಪ್ರತಿನಿಧಿಗಳಿಂದ ಪ್ರೋತ್ಸಾಹ ಸಿಗುತಿರು ವಂತೆ ಕಾಣುತ್ತಿದೆ. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಈ ಕಡೆ ಗಮನಹರಿಸಿ ಅಧಿಕಾರಿಗಳಿಗೆ ಸೂಚನೆ ನೀಡಿ ಕರ್ತವ್ಯದ ಅವಧಿ ಯಲ್ಲಿ ಕಾಲಹರಣ ಮಾಡದಂತೆ ಎಚ್ಚರಿಕೆ ನೀಡಬೇಕಿದೆ.

ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಇಂದು

ಶಹಾಪುರ: ತಾಲೂಕಿನ ಸುಕ್ಷೇತ್ರ ದೊಡ್ಡ ಸಗರ ಗ್ರಾಮದ ಶ್ರೀಬೀರಲಿಂಗೇಶ್ವರ ಪಲ್ಲಕ್ಕಿ ಮಹೋತ್ಸವವು ಜ.5 ರಂದು ಪಲ್ಲಕ್ಕಿಯು ಮುಂಜಾನೆ 8 ಗಂಟೆಗೆ ಗಂಗಾಸ್ನಾನ ಹಾಗೂ ಮಹಾಪ್ರಸಾದ ನಡೆಯಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಸಿದ್ರಾಮಯ್ಯ ಗುರಗುಳಿ ಗುರವಿನಮಠ ತಿಳಿಸಿದ್ದಾರೆ. ಪಲ್ಲಕ್ಕಿ ಉತ್ಸವದ ದಿವ್ಯ ಮೆರವಣಿಗೆಯು ಶ್ರೀಸಿದ್ದರಾಮನಂದ ಮಹಾಸ್ವಾಮಿಗಳು (ಕನಕಗುರು ಪೀಠ ಕಲಬುರಗಿ ವಿಭಾಗ ತಿಂಥಣಿ ಬ್ರಿಡ್ಜ್) ಅವರ ನೇತೃತ್ವದಲ್ಲಿ ನಡೆಯಲಿದೆ. ಪಲ್ಲಕ್ಕಿ ಉತ್ಸವ ಹಿನ್ನೆಲೆ ಸಕಲ ಸದ್ಭಕ್ತರ ಸೇವೆಯೊಂದಿಗೆ ಕುಂಭ, ಕಳಸ, ಡೊಳ್ಳುಗಳ ವಾದ್ಯ ಮೇಳದೊಂದಿಗೆ , ಜಲ್ಲಿ ಆಳುಗಳ ಸೇವೆಯೊಂದಿಗೆ ಗ್ರಾಮದ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಪೀಠ ಅಲಂಕರಿಸುವುದು. ಜ.6 ಮುಂಜಾನೆ 10 ಗಂಟೆಗೆ ಚೀಲ ಎತ್ತುವ ಸ್ಪರ್ಧೆಗಳಿರುತ್ತವೆ. ಸ್ಪರ್ಧೆಗಳಲ್ಲಿ ಜಯಶಾಲಿಯಾದವರಿಗೆ ಬೆಳ್ಳಿ ಖಡಗ ಹಾಗೂ 5001 ರು.ಬಹುಮಾನ ವಿತರಿಸಲಾಗುವುದು.



ಬೆಂಕಿ ಅವಘಡ: ತೊಗರಿ ಬೆಳೆ ಹಾನಿ

ಗುರುಮಠಕಲ್: ತಾಲೂಕಿನ ಚಪೆಟ್ಲ ಗ್ರಾಮದಲ್ಲಿ ರಾಶಿಗೆ ಕಟಾವು ಮಾಡಿದ್ದ ತೊಗರಿ ಬೆಳೆಗೆ ಬೆಂಕಿ ಬಿದ್ದು ರಾಶಿ ಸುಟ್ಟು ಹೋದ ಘಟನೆ ಜರುಗಿದೆ. ತಾಲೂಕಿನ ಚಪೆಟ್ಲಾ ಗ್ರಾಮದ ಸಣ್ಣ ಮೊಗುಲಪ್ಪ ತಂದೆ ಮಗಲಪ್ಪ ಚೌವಲಕಾರ್ ಎಂಬುವವರಿಗೆ ಸೇರಿದ ಹೊಲದಲ್ಲಿ ಆಕಸ್ಮಿಕ ಬೆಂಕಿ ತಗುಲಿ ರಾಶಿ ಮಾಡಲು ಕಟಾವು ಮಾಡಿ ಹಾಕಿದ್ದ ತೊಗರಿಬೇಳೆ ಸಂಪೂರ್ಣ ಭಸ್ಮವಾಗಿದೆ ಎಂದು ತಿಳಿದುಬಂದಿದೆ. ರಾಶಿಯು 2 ಎಕರೆ 20 ಗುಂಟೆ ಜಮೀನಿನಲ್ಲಿ ಬೆಳೆದಿದ್ದು ಡಿ.30 ಮಧ್ಯಾಹ್ನ 2 ಗಂಟೆಗೆ ಸುಮಾರಿಗೆ ಜರುಗಿದೆ. ಈ ಬಾರಿ ತೊಗರಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆಯಿದ್ದು ಇನ್ನೇನು ರಾಶಿಮಾಡಿಕೊಂಡು ಮಾರಾಟ ಮಾಡಬೇಕಾದ ಸಂದರ್ಭದಲ್ಲಿ ಬೆಂಕಿಗೆ ಆಹುತಿಯಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಪರಿಸ್ಥಿತಿಗೆ ರೈತ ಕಂಗಾಲಾಗಿದ್ದು ಪರಿಹಾರ ಒದಗಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ: ನಾಲ್ವರ ಬಂಧನ

ಬಸವಕಲ್ಯಾಣ: ತಾಲೂಕಿನ ಕಲಖೋರಾ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದ ಕಿಡಿಗೇಡಿ ಗಳನ್ನು ಬಂಧಿಸುವಲ್ಲಿ ಮುಡುಬಿ ಪೊಲೀಸ್ ತಂಡ ಯಶಸ್ವಿಯಾಗಿದೆ. ಡಿಸೆಂಬರ್ ಕೊನೆಯ ವಾರದಲ್ಲಿ ಕಲ ಖೋರಾ ಗ್ರಾಮದ ಕೆಲ ಯುವಕರು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದು ಕಾಲಿನಿಂದ ತುಳಿದು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿದ್ದಾರೆ, ಬಳಿಕ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅವಮಾನಿ ಸಿದ ವಿಡಿಯೋ ವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿ ಬಿಟ್ಟಿದ್ದರು. ಘಟನೆ ಸಂಬಂಧ ಮುಡಬಿ ಠಾಣೆಯಲ್ಲಿ ಐದು ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ನಾಲ್ವರು ಆರೋಪಿ ಗಳನ್ನು ಪೊಲೀಸರು ಬಂಧಿಸಿ ದ್ದಾರೆ. ಮುಡಬಿ ಠಾಣೆಯ ಪೊಲೀಸ್ ಪೇದೆಯೊಬ್ಬರು ಹೊಸ ವರ್ಷದ ಬಂದೋಬಸ್ತ್ ಕರ್ತವ್ಯ ನಿಮಿತ್ತ ಕಲಖೋರಾ ಗ್ರಾಮಕ್ಕೆ ಭೇಟಿ ನೀಡಿದ್ದ ವೇಳೆ ಘಟನೆ ಕುರಿತು ಗ್ರಾಮಸ್ಥರೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಘಟನೆ ಸಂಬಂಧ ಯಾರೂ ದೂರು ನೀಡದ ಕಾರಣ ಜ.1ರಂದು ಪೊಲೀ ಸರೆ ಐದು ಜನ ಆರೋಪಿಗಳ ವಿರುದ್ಧ ಕಲಂ 189(2), 353(2), 298, 190 (ಬಿ) ಎನ್‌ಎಸ್ ಅಡಿ ಪ್ರಕರಣ ದಾಖಲಿಸಿ ಕೊಂಡಿ ದ್ದಾರೆ. ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದ ಘಟನೆ ಸಂಬಂಧ ಈಗಾಗಲೇ ಓರ್ವ ಯುವಕ ಸೇರಿ ಮೂವರು ಅಪ್ರಾಪ್ತ ಬಾಲಕರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸಮಾಚಾರ ಸಣ್ಣದಲ್ಲ

ಬಸ್ ದರ ಹೆಚ್ಚಳ: ಅಹ್ಮದ್ ವಿರೋಧ

ಕಲಬುರಗಿ: ರಾಜ್ಯದಲ್ಲಿ ಬಸ್ ಪ್ರಯಾಣ ದರ ಹೆಚ್ಚಳದ ಬಗ್ಗೆ ರಾಜ್ಯ ಸರಕಾರ ತನ್ನ ನಿರ್ಧಾರ ಕೂಡಲೇ ಹಿಂಪಡೆಯಬೇಕೆಂದು ವೆಲ್ಫೇರ್ ಪಾರ್ಟಿ ರಾಜ್ಯ ಕಾರ್ಯದರ್ಶಿ ಮುಬಿನ್ ಅಹ್ಮದ್ ಅಗ್ರಹಿಸಿದ್ದಾರೆ.

ದೇಶದಲ್ಲಿ ದಿನೇ ದಿನೇ ಅಗತ್ಯ ವಸ್ತುಗಳ ಬೆಲೆ ಏರುತ್ತಲೇ ಇದ್ದು ಜನ ಸಂಕಷ್ಟದಲ್ಲಿ ಇದ್ದಾರೆ. ಇಂಥಹ ಸಂಧರ್ಭದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ಜನರಿಗೆ ನೆರವು ನೀಡುವ ಬದಲು ಬೆಲೆ ಏರಿಕೆ ಮಾಡಿ ಗಾಯದ ಮೇಲೆ ಬರೇ ಎಳೆಯುವ ಕೆಲಸ ಮಾಡುತ್ತಿದೆ. ಬಸ್ ಪ್ರಯಾಣ ದರ ಇದ್ದಕಿದ್ದಂತೆ 15% ಏರಿಕೆ ಮಾಡುವ ನಿರ್ಧಾರ ಖಂಡನೀಯ. ಗ್ಯಾರಂಟಿ ಯೋಜನೆಯಿಂದ ಆಗುವ ನಷ್ಟದ ಹೊರೆ ಜನರ ಮೇಲೆ ಯಾವುದೇ ಕಾರಣಕ್ಕೂ ಹಾಕಬಾರದು. ಯೋಜನೆ ನಡೆಸಲಿಕ್ಕೆ ಸಮರ್ಥ ಕಾರ್ಯತಂತ್ರ ರೋಪಿಸಬೇಕೆಂದು ಅವರು ಹೇಳಿದ್ದಾರೆ. ಕೋವಿಡ್ ಸಂಧರ್ಭದಲ್ಲಿ ತನ್ನ ಪ್ರಾಣ ಕಳೆದುಕೊಂಡ ಸಿಬಂದಿ ಕುಟುಂಬಗಳಿಗೆ ಇವರೆಗೂ ಪರಿಹಾರ ಸಿಗದೇ ಕಚೇರಿಗಳಿಗೆ ಅಲೆದಾಡುತ್ತಿದ್ದಾರೆ. ಈ ಬಗ್ಗೆ ಸಾರಿಗೆ ಸಚಿವರ ಗಮನಕ್ಕೆ ವಿಷಯ ತಂದು ಒಂದು ವರುಷವಾದರೂ ಇನ್ನು ತನಕ ಇದರ ಬಗ್ಗೆ ಯಾವುದೇ ಕ್ರಮ ತಗೆದುಕೊಂಡಿಲ್ಲ. ಸರಕಾರ ಬೆಲೆ ಹೆಚ್ಚಳ ಮಾಡುವ ಬದಲು ಇಂಥ ಸಮಸ್ಯೆಗಳ ಬಗ್ಗೆ ಕೂಡಲೇ ಗಮನಹರಿಸಬೇಕೆಂದು ಅವರು ಒತ್ತಾಯಿಸಿದ್ದಾರೆ.

ಸಾವಿತ್ರಿಬಾಯಿ ಪುಲೆ ಜಯಂತಿ ಆಚರಣೆ

ಆಳಂದ: ಭಾರತದಲ್ಲಿ ಅಕ್ಷರ ಕಾಂತ್ರಿ ಆರಂಭಿಸಿದ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಪುಲೆಯವರ ಕಾರ್ಯ ನಮ್ಮೆಲ್ಲರಿಗೂ ಮಾದರಿ ಎಂದು ಕದಂಬ ಕಂಪ್ಯೂಟರ ತರಬೇತಿ ಕೇಂದ್ರ ಸಂಸ್ಥೆಯ ನಿರ್ದೇಶಕ ಸುನೀಲ ಹಿರೋಳ್ಳಿಕರ ಅವರು ಹೇಳಿದರು. ಪಟ್ಟಣದ ಕದಂಬ ಕಂಪ್ಯೂಟರ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿದ ಸಾವಿತ್ರಿಬಾಯಿ ಪುಲೆರವರ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಭಾರತದ ಮೊದಲ ಮಹಿಳಾ ಶಿಕ್ಷಕಿ ಎಲ್ಲಾ ವರ್ಗದ ಮಹಿಳೆಯರಿಗೆ ಅಕ್ಷರ ಜ್ಞಾನ ನೀಡಿ ಹೊಸ ಮನ್ವಂತರಕ್ಕೆ ನಾಂದಿ ಹಾಕಿದರು, ಅದಲ್ಲದೆ ಬಾಲ್ಯ ವಿವಾಹ ಸೇರಿ ಅನೇಕ ಪದ್ಧತಿಗಳ ವಿರುದ್ಧ ಧ್ವನಿ ಎತ್ತಿದ ಸಾವಿತ್ರಿಬಾಯಿ ಮಹಿಳೆಯರಿಗಾಗಿ ಪ್ರತ್ಯೇಕ ಶಾಲೆ ತೆರೆದರು ಎಂದು ತಿಳಿಸಿದರು. ಈ ಎಲ್ಲಾ ಕೆಲಸಗಳನ್ನು ಗಮನಿಸಿದ ಅಂದಿನ ಬ್ರಿಟಿಷ ಸರಕಾರ ,ಇಂಡಿಯಾಸ ಫಸ್ಟ್ ಲೇಡಿ ಟೀಚರ ಎಂಬ ಬಿರಿದು ಕೊಟ್ಟಿತ್ತು ಎಂದು ಹೇಳಿದರು. ಈ ಸಂದರ್ಭದಲ್ಲಿ ಯುವ ಮುಖಂಡರಾದ ಸೀತರಾಮ ಜಮದಾರ, ಸಂಸ್ಥೆಯ ಶಿಕ್ಷಕಿರಾದ ಆಯಿಷಾ ಸಯ್ಯದ,ಸಂಗೀತಾ ರಾಠೋಡ,ಆರೀಪಅಲಿ ಕುಮಸೆ,ರಾಹುಲ ಉಕಂಡ್ರೆ, ಹಾಗೂ ವಿಧ್ಯಾರ್ಥಿಗಳು ಉಪಸ್ಥಿತಿದ್ದರು.

ಪಾಲಿಕೆ 1,020 ಕೋಟಿ ರು ಅನುದಾನ ನೀಡಲು ಮನವಿ

ಕಲಬುರಗಿ: ನಗರಕ್ಕೆ ಆಗಮಿಸಿದ ನಗರಾಭಿವೃದ್ಧಿ ಮತ್ತು ಪಟ್ಟಣ ಯೋಜನೆ ಸಚಿವರಾದಭೈರತಿ ಸುರೇಶ ಅವರನ್ನು ಕಲಬುರಗಿ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡ ಕಲಬುರಗಿ ಮಹಾನಗರ ಪಾಲಿಕೆಯ ಮಹಾಪೌ ರರಾದ ಯಲ್ಲಪ್ಪ ಎಸ್. ನಾಯಕೋಡಿ ನೇತೃತ್ವ ದ ಪಾಲಿಕೆ ನಿಯೋಗವು ಮಹಾನಗರದ ಸಮಗ್ರ ಮೂಲಸೌಕರ್ಯ ಅಭಿವೃದ್ದಿಗೆ 1,020 ಕೋಟಿ ರು. ಅನುದಾನ ನೀಡಿವಂತೆ ಮನವಿ ಸಲ್ಲಿಸಿದ್ದಾರೆ.

ರಸ್ತೆ ಮತ್ತು ಒಳಚರಂಡಿಗಳಿಗೆ 70 ಕೋಟಿ ನಗರದ ಹೊರವಲಯದಲ್ಲಿ ನಾಲ್ಕು ದಿಕ್ಕಿನಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆ ಸಲುವಾಗಿ ಭೂಮಿ ಖರೀದಿಸುವುದಕ್ಕಾಗಿ 100 ಕೋಟಿ ರು, ಮಹಾನಗರ ಪಾಲಿಕೆಯ ಸಭಾಭವನ ಕಟ್ಟಡಕ್ಕಾಗಿ 20 ಕೋಟಿ, ರಸ್ತೆ ಅಗಲೀಕರಣಕ್ಕಾಗಿ 20 ಕೋಟಿ, ಸರಡಗಿ ನಾಲಾ ಡೈವರ್ಶನ ಕಾಮಗಾರಿಗೆ10 ಕೋಟಿ ನೀರು ಸರಬರಾಜು ಯೋಜನೆಗೆ 190.4 ಕೋಟಿ ರು. ಒಳಚರಂಡಿ ವ್ಯವಸ್ಥೆಗಾಗಿ 350 ಕೋಟಿ ರು. ಉದ್ಯಾನವನ ಅಭ್ಯವೃದ್ಧಿಗಾಗಿ 100 ಕೋಟಿ ಅನುದಾನ ಸೇರಿ ಒಟ್ಟಾರೆ 1020.04 ಕೋಟಿ ರು. ಅನುದಾನ ಪಾಲಿಕೆಗೆ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಲಾಯಿತು.

ಅಲ್ಲದೇ ಕಲಬುರಗಿ ಸ್ಥಳೀಯ ಪ್ರದೇಶದಲ್ಲಿ ಮಂಡಲ/ ನಿಯೋಗದಲ್ಲಿದ್ದ ಮಾಜಿ ಮಹಾಪೌರರಾದ ಸಯ್ಯದ್ ಅಹ್ಮದ, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಪರವೀನ್ ಬೇಗಂ, ಸಚಿನ ಶಿರವಾಳ, ಮಹಮ್ಮದ್ ಅಜೀಮೊದ್ದಿನ್, ಇರ್ಫಾನಾ ಪರವೀನ್, ಲತಾ ರವೀಂದ್ರಕುಮಾರ ಸೇರಿದಂತೆ ಪಾಲಿಕೆ ಸದಸ್ಯರು ಸಚಿವರನ್ನು ಭೇಟಿ ಮಾಡಿ, ಮನವಿ ಪತ್ರ ಸಲ್ಲಿಸಿ ಅನುದಾನದ ಅವಶ್ಯಕತೆ ಕುರಿತು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು. ಪಾಲಿಕೆಯ ಆಯುಕ್ತ ಅವಿನಾಶ ಸಂಜೀವನ್ ಶಿಂಧೆ, ಉಪ ಆಯುಕ್ತ ಆರ್.ಪಿ. ಜಾಧವ ಉಪಸ್ಥಿತರಿದ್ದರು.

{ಸಿಟಿ ರವಿ, } ಮೇಲ್ಮನೆ ಸದಸ್ಯ

ಹಿಂದೆ ಈಶ್ವರಪ್ಪನವರ ಮೇಲೆ ಆರೋಪ ಬಂದಾಗ ಪ್ರಿಯಾಂಕ್ ಖರ್ಗೆ ಏನು ಆರೋಪ ಮಾಡಿದ್ದರು, ಆಗ ಏನು ನಿಲುವಿತ್ತೋ ಅದನ್ನೇ ಅವರು ಈಗ ಪಾಲಿಸಲಿ. ನ್ಯಾಯ ಸಮ್ಮತ ತನಿಖೆಗೆ ಪ್ರಿಯಾಂಕ ಖರ್ಗೆ ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ. ಅವರಿಗೆ ವಿಶೇಷ ಕಾನೂನಿಲ್ಲ.

ಕುಡಿಯುವ ನೀರು ಕಾಮಗಾರಿ 2026ರೊಳಗೆ ಪೂರ್ಣಗೊಳಿಸಿ

ನಗರಾಭಿವೃದ್ಧಿ ಸಚಿವರಿಂದ ಪ್ರಗತಿ ಪರಿಶೀಲನಾ ಸಭೆ | ನಗರ ಯೋಜನಾ ಸಚಿವ ಬೈರತಿ ಸುರೇಶ ಸೂಚನೆ

ಕಲಬುರಗಿ: ಮಹಾನಗರದಲ್ಲಿ ಪ್ರಗತಿ ಯಲ್ಲಿರುವ 24 ಗಂಟೆ ನಿರಂತರ ಕುಡಿಯುವ ನೀರಿ ನ ಯೋಜನೆ ಕಾಮಗಾರಿ 2026ರ ಡಿಸೆಂಬರ್ ಅಂತ್ಯದ ವರೆಗೆ ಮುಗಿಸುವಂತೆ ಕಾಮಗಾರಿಯ ಟೆಂಡರ್ ಪಡೆದಿರುವ ಎಲ್ ಟಿ ಕಂಪನಿ ಅಧಿಕಾರಿ ಗಳಿಗೆ ರಾಜ್ಯದ ನಗರಾಭಿವೃದ್ಧಿ ಮತ್ತು ನಗರ ಯೋ ಜನೆ ಸಚಿವ ಬೈರತಿ ಸುರೇಶ ಗಡುವು ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ ಮಹಾನಗರ ಪಾಲಿಕೆ, ನಗರ ಮತ್ತು ಗ್ರಾಮಾಂತರ ಯೋಜನಾ, ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ ಹಾಗೂ ಕೆ.ಯು.ಐ.ಎಫ್.ಡಿ.ಸಿ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಒಪ್ಪಂದಂತೆ ಇದೇ ವರ್ಷದ ಜೂನ್ ವರೆಗೆ ಕಾಮಗಾರಿ ಮುಗಿಸಬೇಕಿತ್ತು. ಕಂಪನಿ ನಿಧಾನಗತಿ ಕೆಲಸಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಜನವರಿ ಅಂತ್ಯಕ್ಕೆ ಈಗಿರುವ 380ರ ಬದಲಾಗಿ 700 ಕಾರ್ಮಿಕರನ್ನು ನಿಯೋಜಿಸಿ ಕಾಮಗಾರಿಗೆ ವೇಗ ನೀಡಬೇಕೆಂದರು.

ಇನ್ನು ಕಾಮಗಾರಿ ಪೂರ್ಣಗೊಳ್ಳುವವರೆಗೆ ಬೇಸಿಗೆ ಕಾಲ ಸೇರಿದಂತೆ ನಗರದ 55 ವಾರ್ಡುಗಳಿಗೆ ಟ್ಯಾಂಕರ್ ಮೂಲಕ ನಿತ್ಯ ನೀರು ಪೂರೈಕೆ ಮಾಡಬೇಕು. ಇನ್ನು ಕಾಲಮಿತಿಯಲ್ಲಿ ಕೆಲಸ ಮಾಡದಿದ್ದಲ್ಲಿ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿ ರಾಜ್ಯದಲ್ಲಿ ಯಾವುದೇ ಟೆಂಡರ್ ಪಡೆಯದಂತೆ ಕ್ರಮ ವಹಿಸಲಾಗುವುದು ಎಂದು ಕಂಪನಿಯ ಕ್ಲಸ್ಟರ್ ಹೆಡ್ ಅಧಿಕಾರಿ ನಾಗೇಂದ್ರ ಮತ್ತು ಕುಮಾರಸೇನ್ ಅವರಿಗೆ ಎಚ್ಚರಿಕೆ ನೀಡಿದರು.

ಎಲ್ ಟಿ ಕಂಪನಿಯ ಕ್ಲಸ್ಟರ್ ಹೆಡ್ ನಾಗೇಂದ್ರ ಮಾತನಾಡಿ, ಉದ್ದೇಶಿತ ಯೋಜನೆಯಲ್ಲಿ ನಗರದಲ್ಲಿ 12 ಓವರ್ ಹೆಡ್ ಟ್ಯಾಂಕ್ ನಿರ್ಮಿಸಲಾಗುತ್ತಿದ್ದು, ಇದರಲ್ಲಿ ಒಂದು ಪೂರ್ಣಗೊಳಿಸಿ ಅದರ ಮೂಲಕ ಒಟ್ಟಾರೆ 225 ಮನೆಗಳಿಗೆ ಗೃಹ ನಳ ಸಂಪರ್ಕದ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. 6 ಟ್ಯಾಂಕ್ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದವು ಪ್ರಗತಿಯಲ್ಲಿವೆ. ಒಟ್ಟಾರೆ 62,000 ಮನೆಗಳಿಗೆ ನಲ್ಲಿ ಮೂಲಕ ಶುದ್ಧ ಕುಡಿಯುವ ಪೂರೈಕೆಯ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು. ಸಚಿವ ಬೈರತಿ ಸುರೇಶ ಮಾತನಾಡಿ ಸಿವಿಲ್ ಕಾಮಗಾರಿ ಮುಗಿಸಿದರೆ ಅದು ಸಂಪೂರ್ಣ ಆಗುವುದಿಲ್ಲ, ಜನರಿಗೆ ಮನೆಗೆ ನೀರು ತಲುಪಬೇಕು ಆಗಲೆ ಕಾಮಗಾರಿ ಪೂರ್ಣ ಎಂದು ಭಾವಿಸಲಾಗುತ್ತದೆ ಎಂದರು.

ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ, ಉದ್ದೇಶಿತ ಕುಡಿಯುವ ನೀರಿನ ಕಾಮಗಾರಿ ನಿಧಾನಗತಿಯಿಂದ ನಗರದಲ್ಲಿ ನೀರಿನ ಸಮಸ್ಯೆ ಹೆಚ್ಚಿದ್ದು, ಬೇಸಿಗೆಯಲ್ಲಿ ಹಾಹಾಕಾರಕ್ಕೆ ಕಾರಣವಾಗುತ್ತಿದೆ. ನಗರಕ್ಕೆ 34 ಎಂ.ಎಲ್.ಡಿ. ನೀರಿನ ಕೊರತೆ ಇದೆ. ಹೀಗಾಗಿ ನಗರದಲ್ಲಿನ 1,968 ಕೊಳವೆ ಬಾವಿ ಪೈಕಿ 400 ರಲ್ಲಿ ನೀರಿದ್ದು, ಫ್ಲಶ್, ಮೋಟಾರ್ ಅಳವಡಿಕೆಯಂತಹ ದುರಸ್ತಿ ಮಾಡಲು ಕಂಪನಿ ಮುಂದಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಧ್ವನಿಗೂಡಿಸಿದ ಎಂ.ಎಲ್.ಸಿ. ತಿಪ್ಪಣ್ಣಪ್ಪ ಕಮಕನೂರ ಎಲ್ ಟಿ ಕಂಪನಿಯಿಂದ ಈ ಕಾಮಗಾರಿ ಪೂರ್ಣವಾಗಲ್ಲ, ಕೂಡಲೆ ಟೆಂಡರ್ ರದ್ದುಪಡಿಸಿ ಬೇರೆ ಸಂಸ್ಥೆಗೆ ನೀಡುವಂತೆ ಒತ್ತಾಯಿಸಿದರು.

ಸಚಿವ ಬೈರತಿ ಸುರೇಶ ಮಾತನಾಡಿ, ನಗರದಲ್ಲಿರುವ ಎಲ್ಲಾ 1,900 ಕೊಳೆ ಬಾವಿ ನಿರ್ವಹಣೆ ಜವಾಬ್ದಾರಿ ಎಲ್ ಟಿ ಕಂಪನಿಗೆ ಸೇರಿದ್ದಾಗಿದೆ. ಕೆಟ್ಟ ಕೊಳವೆ ಬಾವಿ ಫ್ಲಶ್ ಮಾಡಲು ಈಗಿರುವ ಒಂದು ಮಶೀನ್‌ಗಳಿಂದ ಸಾಲಲ್ಲ. ಇದನ್ನು 4ಕ್ಕೆ ಹೆಚ್ಚಿಸಬೇಕು. ಪ್ರತಿ ವಾರ್ಡ್ಗೆ ಕನಿಷ್ಠ 2ರಂತೆ ಟೆಕ್ನೋ ಸಬ್‌ಸ್ಟಿಬಲ್ ಮೋಟಾರ್‌ಗಳು ಸ್ಟಾಕ್‌ನಲ್ಲಿಟ್ಟುಕೊಂಡು ಮೋಟಾರ್ ಕೆಟ್ಟದಲ್ಲಿ ಕೂಡಲೆ ಅಳವಡಿಸುವ ಕೆಲಸವಾಗಬೇಕೆಂದು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.

ಪಾಲಿಕೆಯಿಂದ ಇ-ಸ್ವತ್ತು ನೀಡುವಲ್ಲಿ ವಲಯ 3ರ ಆಯುಕ್ತ ಮುಜಾಮಿಲ್ ಅವರ ನಿಧಾನಗತಿ ಪ್ರಗತಿಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವ ಬೈರತಿ ಸುರೇಶ ಅವರು ಕಾರಣ ಕೇಳುವ ನೋಟಿಸ್ ಜಾರಿಗೊಳಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಿದರು. ಮೂರು ತಿಂಗಳೊಳಗೆ ಪ್ರಗತಿ ಸಾಧಿಸದಿದ್ದಲ್ಲಿ ಶಿಸ್ತು ಕ್ರಮ ಕೈಗೊಳ್ಳಾಗುವುದು ಎಂದು ವಲಯ ಆಯುಕ್ತರಿಗೆ ಎಚ್ಚರಿಕೆ ನೀಡಿದರು.

ತ್ಯಾಜ್ಯ ಸಂಗ್ರಹಣೆಗೆ ಜಮೀನು ಕೊಡಿ: ಸಭೆಯಲ್ಲಿ ಕಲಬುರಗಿ ಪಾಲಿಕೆ ಮೇಯರ್ ಯಲ್ಲಪ್ಪ ನಾಯ್ಕೋಡಿ ಮಾತನಾಡಿ ಕಲಬುರಗಿ ನಗರ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಈಗಿರುವ ಉದನೂರ ಎಸ್.ಡಬ್ಲ್ಯೂ.ಎಂ. ಘಟಕದಲ್ಲಿ ಕಸ ತುಂಬಿರುವ ಕಾರಣ ನಗರದ ನಾಲ್ಕು ದಿಕ್ಕನಲ್ಲಿ ಕಸ ಸಂಗ್ರಹಿಸಿ ವೈಜ್ಞಾನಿಕ ವಿಲೇವಾರಿ ಮಾಡಲು ತಲಾ 25 ಎಕರೆ ಜಮೀನು ಒದಗಿಸಬೇಕು ಎಂದು ಸಚಿವರಲ್ಲಿ ಮನವಿ ಮಾಡಿಕೊಂಡರು. ಇದಕ್ಕೆ ಸಚಿವರು ಪ್ರತಿಕ್ರಿಯಿಸಿ ನಗರದಿಂದ 15-20 ಕಿ.ಮೀ. ದೂರ ಅಂತರದಲ್ಲಿ ಸರ್ಕಾರಿ ಜಮೀನು ಕೊಡಿ ಎಂದು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಶಾಸಕರಾದ ಎಂ.ವೈ.ಪಾಟೀಲ, ವಿಧಾನ ಪರಿಷತ್ ಶಾಸಕರಾದ ಜಗದೇವ ಗುತ್ತೇದಾರ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಕೆ.ಯು.ಐ.ಡಿ.ಎಫ್.ಸಿ ವ್ಯವಸ್ಥಾಪಕ ನಿರ್ದೇಶಕ ಬಿ.ಶರತ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು.

ಕಲಬುರಗಿಗೆ ವಿಶೇಷ ಪ್ಯಾಕೇಜ್ ಕೊಡಿ

ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ, ನಗರದಲ್ಲಿ ಯು.ಜಿ.ಡಿ. ಸಂಘರ್ಕ ಸಮರ್ಪಕವಾಗಿಲ್ಲ. ಹಳೇಯದೆಲ್ಲ ಹಾಳಾಗಿದೆ. 700 ಕಿ.ಮೀ. ಒಳಚರಂಡಿ ಸಂಘರ್ಕ ಕಲ್ಪಿಸಲು 300 ಕೋಟಿರು. ಅವಶ್ಯಕತೆ ಇದ್ದು, ಬುರವ ಆಯವ್ಯಯದಲ್ಲಿ ಇದಕ್ಕೆ ಅನುದಾನ ಮೀಸಲಿರಿಸಬೇಕು. ನಗರದಲ್ಲಿನ 1,200 ವಿದ್ಯುತ್ ಕಂಬಗಳು ಶಿಥಿಲಾವಸ್ಥೆಯಲ್ಲಿದ್ದು, ಇತ್ತೀಚೆಗೆ ವಿದ್ಯುತ್ ಅವಘಡದಿಂದ ಇಬ್ಬರು ಸಾವನ'ಪ್ಪಿದರೆ ಓರ್ವ ಮಹಿಳೆ ಸ್ಥಿತಿ ಚಿಂತಾಜನಕವಾಗಿದೆ. ಕೂಡಲೆ ಇದನ್ನು ಗಂಭೀರವಾಗಿ ಪರಿಗಣಿಸಿ ವಿಶೇಷ ಪ್ಯಾಕೇಜ್ ಘೋಷಿಸಿ ವಿದ್ಯುತ್ ಕಂಬಗಳನ್ನು ಬದಲಾಯಿಸಬೇಕೆಂದು ಸಚಿವರಲ್ಲಿ ಮನವಿ ಮಾಡಿಕೊಂಡರು. ಇದಕ್ಕೆ ಉತ್ತರಿಸಿದ ಸಚಿವ ಬೈರತಿ ಸುರೇಶ ಸಿ.ಎಂ. ಜತೆಗೆ ಚರ್ಚಿಸಲಾಗುವುದು ಎಂದರು.

ಕರವಸೂಲಿ ಮಾಡಿ,ಒತ್ತುವರಿ ತೆರವುಗೊಳಿಸಿ

ನಗರದ ಅಭಿವೃದ್ಧಿಗೆ ಆರ್ಥಿಕ ಸಂಪನ್ಮೂಲ ಕ್ರೋಢಿಕರಣ ಮುಖ್ಯವಾಗಿದೆ. ಕರ ವಸೂಲಾತಿಗೆ ಒತ್ತು ನೀಡಬೇಕು. ಕರ ವಸೂಲು ಮಾಡದಿದ್ರೆ ಸಿಬ್ಬಂದಿ ವೇತನ ಹೇಗೆ ಪಾವತಿಸುತ್ತೀರಿ ಎಂದ ಸಚಿವ ಬಿ.ಎಸ್. ಸುರೇಶ ಅವರು, ಕರ ವಸೂಲು ಮಾಡಲು ಬಾಕಿ ಇರಿಸಿಕೊಂಡವರ ಮನೆ, ಅಂಗಡಿ, ವಾಣಿಜ್ಯ ಮುಂಗಟ್ಟುಗಳಿಗೆ ಪೌರಕಾರ್ಮಿಕರಿಂದಲೆ ಬೀಗ ಹಾಕಿಸಿ ಎಂದು ಪಾಲಿಕೆಯ ಮೇಯರ್ ಮತ್ತು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದಲ್ಲಿ ಒತ್ತುವರಿ ಹೆಚ್ಚಿದೆ, ಉದ್ಯಾನವನದಲ್ಲಿ ಮನೆ ನಿರ್ಮಿಸಲಾಗಿದೆ ಎಂದು ಮೇಯರ್ ಯಲ್ಲಪ್ಪ ನಾಯ್ಕೋಡಿ ಸಭೆಯ ಗಮನ ಸವಳೆದಾಗ ಗರಂ ಆದ ಸಚಿವರು, ಉದ್ಯಾನವನದಲ್ಲಿ ಮನೆ ನಿರ್ಮಾಣ ಮಾಡುವಾಗ ನೀವೇನು ಮಾಡುತ್ತಿದ್ದೀರಿ ಎಂದು ಪಾಲಿಕೆ ಆಯುಕ್ತರು ಮತ್ತು ವಲಯ ಆಯುಕ್ತರನ್ನು ಪ್ರಶ್ನಿಸಿದರು. ಕೂಡಲೆ ಉದ್ಯಾನವನ ಸೇರಿದಂತೆ ನಗರದೆಲ್ಲಡೆ ಒತ್ತುವರಿ ತೆರವು ಕಾರ್ಯ ಬರುವ ಸೋಮವಾರದಿಂದಲೆ ಅಭಿಯಾನದ ಮೂಲಕ ಆರಂಭಿಸಬೇಕು ಎಂದು ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರಿಗೆ ಸೂಚಿಸಿದರು.

ಇನ್ನು ನಗರದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆಯದೆ ಅನಧಿಕೃತವಾಗಿ ತಲೆ ಎತ್ತಿರುವ ಲೇಔಟ್ ಮಾಲೀಕರಿಗೆ ಕೂಡಲೆ ನೋಟಿಸ್ ಜಾರಿಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪ್ರಾಧಿಕಾರದ ಆಯುಕ್ತ ಗಂಗಾಧರ ಮಾಳಗಿ ಅವರಿಗೆ ಸಚಿವ ಬಿ.ಎಸ್.ಸುರೇಶ ಸೂಚಿಸಿದರು.

ಸಂಶೋಧನೆ ಮಾನವಕುಲಕ್ಕೆ ಪ್ರಯೋಜನವಾಗಲಿ

ಕಲಬುರಗಿ: ಮೂಲಭೂತ ವಿಜ್ಞಾನ ಅಥವಾ ಅನ್ವಯಿಕ ವಿಜ್ಞಾನದ ಯಾವುದೇ ಸಂಶೋಧನೆಯ ಫಲಿತಾಂಶವು ಮನುಕುಲಕ್ಕೆ ಉಪಯೋಗವಾಗುವ ಉದ್ದೇಶದಿಂದ ಹೊಂದಿರಬೇಕು ಹೊರತು ಮನುಕುಲದ ನಾಶಕ್ಕೆ ಬಳಕೆಯಾಗಬಾರದು ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ದಯಾನಂದ ಅಗಸರ್ ಅಭಿಪ್ರಾಯ ಪಟ್ಟರು.

ಶನಿವಾರ ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾಮಂಟಪದಲ್ಲಿ ಶರಣಬಸವ ವಿಶ್ವವಿದ್ಯಾಲಯ ಮತ್ತು ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 2 ದಿನಗಳ ಶುದ್ಧ ಮತ್ತು ಅನ್ವಯಿಕ ವಿಜ್ಞಾನಗಳ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಡಾ. ಅಗಸರ್, ಪ್ರಪಂಚದಲ್ಲಿ ವಿವಿಧ ದೇಶಗಳ ನಡುವಿನ ಸಂಘರ್ಷಗಳು ಮಾನವನ ಜೀವ ಮತ್ತು ಆಸ್ತಿಗೆ ವ್ಯಾಪಕವಾದ ನಷ್ಟವನ್ನು ಉಂಟುಮಾಡುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಾಡಿದ ಪ್ರಗತಿಯನ್ನು ಈ ಯುದ್ಧಗಳಲ್ಲಿ ಮನಕುಲದ ಪರಸ್ಪರ ವಿನಾಶಕ್ಕೆ ಬಳಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಗತ್ತಿನಾದ್ಯಂತ ನಡೆಯುತ್ತಿರುವ ಈ ಘರ್ಷಣೆಗಳು ಮಾನವನ ಜೀವಕ್ಕೆ ಮತ್ತು ಪರಿಸರ ವ್ಯವಸ್ಥೆಗೆ ಶಾಶ್ವತವಾಗಿ ದೊಡ್ಡಮಟ್ಟದ ಹಾನಿಯನ್ನುಂಟುಮಾಡುವ ಸಂಘರ್ಷಗಳು ಎಲ್ಲರಿಗೂ ಪಾಠವಾಗಬೇಕು ಮತ್ತು ಕನಿಷ್ಠ ಭವಿಷ್ಯದಲ್ಲಿ ಎಲ್ಲಾ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳು ಮಾನವೀಯತೆಯನ್ನು ಹೊಂದಿರಬೇಕು ಹಾಗೂ ಅದನ್ನು ಮಾನವಕುಲದ ಕಲ್ಯಾಣ ಮತ್ತು ಪ್ರಯೋಜನಕ್ಕಾಗಿ ಬಳಸಬೇಕು ಎಂದರು.

ಜೀನೋಮ್‌ಗೆ ಗುಲಬರ್ಗಾ ವಿಶ್ವವಿದ್ಯಾಲಯ ಮತ್ತು ಗುಲಬರ್ಗಾ ಜಿಲ್ಲೆಯ ಪ್ರಯೋಗಾಲಯದ ಹೆಸರನ್ನು ಇಡಲಾಗಿದೆ ಹಾಗೂ ವಿವಿಧ ಉತ್ಪನ್ನಗಳಲ್ಲಿ ಬಳಸಲು ಹೆಚ್ಚಿನ ಪರೀಕ್ಷೆಗಳಿಗಾಗಿ ವಿಶ್ವದ ವಿವಿಧ ಪ್ರಯೋಗಾಲಯಗಳಲ್ಲಿ ಇದನ್ನು ಮಾನವಕುಲದ ಪ್ರಯೋಜನಕ್ಕಾಗಿ ಬಳಸಲಾಗುತ್ತದೆ.

-ಡಾ. ಅಗಸರ್

ಜೀನೋಮ್ ಮತ್ತು ಅದರ ಬಹು ವಿಶ್ವವಿದ್ಯಾಲಯಗಳ ಆವಿಷ್ಕಾರವು ಯುನೈಟೆಡ್ ಕಿಂಗ್‌ಡಂನ ಗ್ಲ್ಯಾಸ್ಗೋ ವಿಶ್ವವಿದ್ಯಾಲಯದೊಂದಿಗೆ ಮಧುಮೇಹಿಗಳ ಔಷಧದ ನಿರೋಧಕ ಹುಣ್ಣುಗಳ ಸಮಸ್ಯೆಗೆ ಒಳಗಾಗುವ ರೋಗಿಗಳ ಚಿಕಿತ್ಸೆಗಾಗಿ ಔಷಧದ ಸಂಶೋಧನೆ ಮತ್ತು ಅಭಿವೃದ್ಧಿಗೆ ತಿಳುವಳಿಕೆ ಒಪ್ಪಂದಕ್ಕೆ ಕಾರಣವಾಗಿದೆ ಎಂದರು.

ಜಮೈಕಾದ ವೆಸ್ಟ್ ಇಂಡೀಸ್ ವಿಶ್ವವಿದ್ಯಾಲಯದ ಡಾ. ಮಹೇಶ ನಾರಾಯಣ್ ಮುಖ್ಯ ಭಾಷಣ ಮಾಡಿದರು. ಸಮ್ಮೇಳನದ ಆರಂಭದಲ್ಲಿ ಡಾ. ಬಿ. ರಾಮಕೃಷ್ಣ ರೆಡ್ಡಿ , ವಿವಿ ಕುಲಸಚಿವ ಡಾ. ಎಸ್.ಜಿ.ಡೊಳ್ಳೇಗೌಡರ, ಶರಣಬಸವ ವಿವಿಯ ಉಪಕುಲಪತಿ ಪ್ರೊ. ಅನಿಲಕುಮಾರ ಬಿಡವೆ, ದೇಶ ವಿದೇಶದ ವಿವಿಧ ಭಾಗಗಳಿಂದ ಸುಮಾರು 250 ಕ್ಕೂ ಹೆಚ್ಚು ಪ್ರತಿನಿಧಿಗಳು ಇದ್ದರು.

ಶಿಕ್ಷಣದಿಂದ ಮಾತ್ರ ಉಜ್ವಲ ಭವಿಷ್ಯ: ಡಿಸಿ

ಕಲಬುರಗಿ: ಜೀವನದಲ್ಲಿ ಮುಂದೆ ಏನಾದರು ಸಾಧಿಸಬೇಕು ಮತ್ತು ಸಮಾಜಕ್ಕೆ ಒಳಿತು ಮಾಡಬೇಕೆಂದರೆ ಶಿಕ್ಷಣ ಅತೀ ಅವಶ್ಯಕವಾಗಿದೆ. ಶಿಕ್ಷಣದಿಂದಲೆ ನಿಮ್ಮ ಭವಿಷ್ಯ ಉಜ್ವಲವಾಗಲಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನನುಮ್ ಹೇಳಿದರು.

ಕಲಬುರಗಿ ನಗರದ ಎಂ.ಎಸ್.ಕೆ.ಮಿಲ್ ರಸ್ತೆಯಲ್ಲಿರುನ ಸರಕಾರಿ ಐ.ಟಿ.ಐ.(ಪರುಷ) ಕಾಲೇಜಿನಲ್ಲಿ ಆಯೋಜಿಸಿದ ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರ 194ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಕ್ಷರದವ್ವನ ಕೊಡುಗೆಯನ್ನು ಸ್ಮರಿಸಿದರು.

ಒಂಭತನ್ನೇ ವಯಸ್ಸಿನಲ್ಲಿಯೇ ಮದುವೆಯಾದ ಸಾವಿತ್ರಿಬಾಯಿ ಫುಲೆ ಅವರು ಮುಂದೆ ಪತಿ ಜ್ಯೋತಿಭಾ ಫುಲೆ ಅವರ ಸಹಾಯದಿಂದ ಅಕ್ಷರದ ಜ್ಞಾನ ಪಡೆದುಕೊಂಡರು. ಬರೀ ಅವರಷ್ಟೆ ಅಕ್ಷರ ಕಲಿಯಲ್ಲಿಲ್ಲ. ಬದಲಾಗಿ ಪುರುಷ ಪ್ರಧಾನವಾದ ಈ ದೇಶದಲ್ಲಿ ಶಿಕ್ಷಣದಿಂದ ವಂಚಿತ ಶೋಷಿತ, ಹಿಂದುಳಿದ, ದಲಿತ ಸಮುದಾಯದ ಹೆಣ್ಣು ಮಕ್ಕಳಿಗೆ ಅಕ್ಷರದ ಬೆಳಕು ಚೆಲ್ಲಿದ ಶ್ರೇಷ್ಠ ಶಿಕ್ಷಕಿಯಾಗಿ ಹೊರಹೊಮ್ಮಿದ್ದಾರೆ ಎಂದರು.

ನೀವೆಲ್ಲ ಐ.ಟಿ.ಐ. ವೃತ್ತಿ ಆಯ್ಕೆ ಮಾಡಿಕೊಂಡಿರುವುದು ಒಳ್ಳೇಯದೆ. ಕೈಗಾರಿಕೆಯಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಕೌಶಲ್ಯದ ಅವಶ್ಯಕತೆ ಇದ್ದು, ಇಲ್ಲಿ ನೀಡಲಾಗುವ ತರಬೇತಿಯ ಸಂಪೂರ್ಣ ಲಾಭ ಪಡೆಯಬೇಕು. ನೌಕರಿಯಲ್ಲಿ ಸಣ್ಣದು-ದೊಡ್ಡದು ಎನ್ನದೆ ಕಾಯಕದಲ್ಲಿ ವಿಶ್ವಾಸ ಇಟ್ಟು ಮುನ್ನಗ್ಗಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ಕರೆ ನೀಡಿದರು. ಗೋದುತಾಯಿ ಪದವಿ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಡಾ.ನೀಲಾಂಬಿಕಾ ಪೊಲೀಸ್ ಪಾಟೀಲ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕೌಶಲ್ಯಭಿವೃದ್ಧಿ ಅಧಿಕಾರಿ ಮತ್ತು ಸರಕಾರಿ ಐ.ಟಿ.ಐ (ಪುರುಷ) ಕಾಲೇಜಿನ ಪ್ರಾಂಶುಪಾಲ ಮುರಳಿಧರರಾವ ರತ್ನಗಿರಿ, ಜಿಲ್ಲಾ ಉದ್ಯೋಗ ವಿನಿಮಿಯ ಕಚೇರಿಯ ಸಹಾಯಕ ನಿರ್ದೇಶಕಿ ಭಾರತಿ, ಕಾಲೇಜಿನ ಆಡಳಿತಾಧಿಕಾರಿ ಸುರೇಶ ವಗ್ಗೆ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರು.

ಸರಕಾರಿ ಐ.ಟಿ.ಐ.(ಪರುಷ) ಕಾಲೇಜಿನಲ್ಲಿ ಆಯೋಜಿಸಿದ ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಅವರ 194ನೇ ಜಯಂತಿ ಆಚರಣೆ ಮಾಡಿದರು.

ಕಿರಿಯ ವಯಸ್ಸಿನಲ್ಲಿ ಮಕ್ಕಳಿಗೆ ಅಕ್ಷರ ಜ್ಯೋತಿ ಕಲಿಸಿದ ಗುರು

ಆಳಂದ: ಜ್ಞಾನಕ್ಕೆ ವಯಸ್ಸಿನ ಪರಿಮೆ ಇಲ್ಲವೆಂಬಂತೆ ಕಿರಿಯ ವಯಸ್ಸಿನಲ್ಲಿ ಮಕ್ಕಳಿಗೆ ತಮ್ಮ ಜ್ಞಾನದ ಅನುಭವದ ಮುಖಾಂತರ ಅಕ್ಷರದ ಜ್ಞಾನದ ಜ್ಯೋತಿ ಕಲಿಸಿದ ಗುರು ಆಗಿದ್ದ ರೆಂದು ಶ್ರೀ ಹಿರೇಮಠ ಸಂಸ್ಥಾನದ ಶ್ರೀ ಸಿದ್ದೇಶ್ವರ ಶಿವಾಚಾರ್ಯರು ಅವರು ಹೇಳಿದರು.

ಶನಿವಾರ ಪಟ್ಟಣದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಶಿಕ್ಷಕ ದಿ. ಪ್ರದೀಪ್ ಯಲಶಟ್ಟಿ ಅವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಿಂದ ನಮ್ಮ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ವಿದ್ಯಾರ್ಥಿಗಳ ಅಚ್ಚು ಮೆಚ್ಚಿನ ಶಿಕ್ಷಕರಲ್ಲಿ ಒಬ್ಬರಾಗಿದ್ದರು ಅಲ್ಲದೇ ಇಂದಿನ ಆಧುನಿಕ ಯುಗದಲ್ಲಿ ಸಹ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆ ಎಂದರೆ ಭಯ ಪಡುತ್ತಿದ್ದರು ಇವರ ಬೋಧನೆಯಿಂದ ಶಾಲೆಯ ವಿದ್ಯಾರ್ಥಿಗಳು ಇಂಗ್ಲೀಷ್ ಅನ್ನು ಸರಳವಾಗಿ ಮಾತನಾಡಲು ಕಲಿತಿದ್ದರು, ಸಾವಿನಲ್ಲೂ ಸಹ ಮತ್ತೊಬ್ಬರ ಬಾಳಿಗೆ ಬೆಳಕು ಆಗಲು ನೇತ್ರದಾನ ಮಾಡುವ ಮೂಲಕ ಸಾರ್ಥಕತೆ ಬರೆದಿದ್ದಾರೆ, ಇವರ ಕುಟುಂಬಕ್ಕೆ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸದಾ ಇರುತ್ತದೆ ಎಂದರು.

ಹಿರೇಮಠ ಶಾಲೆಯಲ್ಲಿ ದಿ.ಪ್ರದೀಪ ಯಲಶಟ್ಟಿಗೆ ನುಡಿ ನಮನ ಸಲ್ಲಿಸಿದರು.

ಕಾರ್ಯಕ್ರಮದ ಸಮ್ಮುಖ ವಹಿಸಿದ ತೋಂಟದಾರ್ಯ ಅನುಭವ ಮಂಟಪದ ಶ್ರೀ ವಿಶ್ವನಾಥ ಕೋರಣೇಶ್ವರ ಸ್ವಾಮೀಜೀ ಮಾತನಾಡಿ ಮಾತನಾಡಿ ದೇಶ ಕಾಯುವ ಯೋಧ, ಅನ್ನ ಕೊಡುವ ರೈತ, ಶಿಕ್ಷಣ ಕಲಿಸುವ ಶಿಕ್ಷಕ ಭಾರತ ದೇಶದ ರತ್ನಗಳು , ಯಲಶಟ್ಟಿ ಸರ್ ಅವರ ಆದರ್ಶ ವಿಚಾರಗಳು ವಿದ್ಯಾರ್ಥಿಗಳು ಮೈಗುಡಿಸಿಕೊಳ್ಳಿ ಅಂದಾಗ ಮಾತ್ರ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ ಎಂದರು.

ಶ್ರೀಶೈಲ ಮಾಡಿಯಾಳೆ, ಸುಭಾಷ್ ಪಾಟೀಲ್, ರಾಮಣಾ ಸುತಾರಾ ಮಾತನಾಡಿದರು.

ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಲ್ಲಿನಾಥ ಯಲಶಟ್ಟಿ ಮತ್ತು ಸಿದ್ದಯ್ಯ ಸ್ವಾಮಿ, ಪೀರಪ್ಪ ಏರೋ ಡಗಿ, ರಮೇಶ ಕಲಶಟ್ಟಿ ಜಗನ್ನಾಥ್ ದೇಶಮುಖ, ಶರಣಬಸಪ್ಪ ಮೇತ್ರೆ, ಅರವಿಂದ ಮೇತ್ರೆ, ಈರಣ್ಣ ಕಲಬುರ್ಗಿ, ಬಸವರಾಜ ಯಲಶಟ್ಟಿ, ಅಣ್ಣಾರಾವ ಪಾಟೀಲ್, ಮಡಿವಾಳಯ್ಯ ಮಠಪತಿ, ಕಲ್ಯಾಣಿ ಕಲಶಟ್ಟಿ , ಪೃಥ್ವಿರಾಜ್ ಮೊದಲೇ, ರುಕ್ಮಿಣಿ ಕಡಗಂಚಿ, ಆಶಾಲತಾ ಮಠಪತಿ ಸೇರಿದಂತೆ ನಾಗಲೇಗಾಂವ ಗ್ರಾಮದ ಯಲಶಟ್ಟಿ ಕುಟುಂಬ ವರ್ಗದವರು ಇದ್ದರು.

ನಗರಾಭಿವೃದ್ಧಿಗೆ 668 ಕೋಟಿ ರು. ಅನುದಾನ ನೀಡಲು ಒತ್ತಾಯ

ಕಲಬುರಗಿ: ಕಲಬುರಗಿ ನಗರದಲ್ಲಿ 24 ಗಂಟೆ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಲು, ಒಳಚರಂಡಿ ಸಂಪರ್ಕ ಕಲ್ಪಿಸಲು, ಸಿ.ಸಿ. ರಸ್ತೆ, ಉದ್ಯಾವನ ನಿರ್ಮಾಣಕ್ಕೆ ಒಟ್ಟಾರೆ 668 ಕೋಟಿ ರು. ನೀಡುವಂತೆ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಒತ್ತಾಯ ಮಾಡಿದ್ದಾರೆ.

ಕಲಬುರಗಿ ನಗರದಲ್ಲಿ ನಗರಾಭಿವೃದ್ಧಿ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಲು ಬಂದಿದ್ದ ರಾಜ್ಯದ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ ಅವರಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಿರುವ ಅವರು, ವಿಶೇಷ ಅನುದಾನದ ಪ್ಯಾಕೇಜ್ ಬರುವ ಆಯವ್ಯಯದಲ್ಲಿ ಘೋಷಿಸಿಬೇಕೆಂದು ಅವರು ಕೋರಿದ್ದಾರೆ. ಕಲಬುರಗಿ ನಗರದಲ್ಲಿ ನಿರಂತರ ಕುಡಿಯುವ ನೀರಿನ ಯೋಜನೆ 47ರಲ್ಲಿ 32 ವಲಯಕ್ಕೆ ಸೀಮಿತವಾಗಿದ್ದು, ಬಾಕಿ 15 ವಲಯದ 29,522 ಗೃಹ ನಳ ಸಂಪರ್ಕ ಜಾಲ ವಿಸ್ತರಣೆ ಸೇರಿದಂತೆ ಇತರೆ ಕಾಮಗಾರಿಗಳಿಗೆ 385 ಕೋಟಿ ರು., 320 ಕಿ.ಮೀ. ರಸ್ತೆ ನಿರ್ಮಾಣಕ್ಕೆ 160 ಕೋಟಿ ರು., ಬಾಕಿ ಇರುವ 280 ಉದ್ಯಾನವನಗಳ ಪೈಕಿ ಮೊದಲನೆ ಹಂತದಲ್ಲಿ 125 ಉದ್ಯಾನವನಗಳ ಅಭಿವೃದ್ಧಿಗೆ 100 ಕೋಟಿ ರೂ., ಸರಡಗಿ ಇನ್‌ಟೇಕ್ ವೆಲ್ ಹತ್ತಿರದ ಬ್ಯಾರೇಜಿಗೆ ಚರಂಡಿ ನೀರು ಸೇರದಂತೆ ನಾಲಾ ಡೈವರ್ಸನ್ ಕಾಮಗಾರಿಗೆ 10 ಕೋಟಿ ರೂ. ನೀಡುವಂತೆ ಒತ್ತಾಯ ಮಾಡಿದ್ದಾರೆ. ಇದಲ್ಲದೆ ಬೇಸಿಗೆ ಕಾಲದಲ್ಲಿ ನೀರು ಪೂರೈಕೆ, ಬೋರವೆಲ್ ದುರಸ್ತಿಗೆ 3 ಕೋಟಿ ರು., ನಗರಾಭಿವೃದ್ಧಿ ಪ್ರಾಧಿಕಾರದ ಅಧೀನದ 36 ಉದ್ಯಾವನಗಳ ಅಭಿವೃದ್ಧಿಗೆ 5 ಕೋಟಿ ರು. ಹಾಗೂ ಧರಿಯಾಪೂರ-ಕೋಟನೂರ ಜಿ.ಡಿ.ಎ. ಬಡಾವಣೆಯಲ್ಲಿರುವ 18 ಎಕರೆ ಪ್ರದೇಶದದಲ್ಲಿನ ಉದ್ಯಾನವನ ಅಭಿವೃದ್ಧಿಗೆ 5 ಕೋಟಿ ರು. ಅನುದಾನ ನೀಡುವಂತೆ ಮನವಿ ಪತ್ರದಲ್ಲಿ ಕೇಳಿಕೊಂಡಿದ್ದಾರೆ. ಎಸ್‌ಸಿ-ಎಸ್‌ಟಿ ಕಾಲೋನಿ ಅಭಿವೃದ್ಧಿಗೆ 20 ಕೋಟಿ ರು. ಕೊಡಿ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಬರುವ 23 ವಾರ್ಡುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಎಸ್.ಸಿ-ಎಸ್.ಟಿ. ಜನ ವಾಸಿಸುತ್ತಿದು, ಪರಿಶಿಷ್ಟರ ಕಾಲೋನಿಯಲ್ಲಿ ಸಂಪರ್ಕ ರಸ್ತೆ, ಚರಂಡಿ ಇಲ್ಲ. ಮೂಲಸೌಕರ್ಯ ಬಲಪಡಿಸಲು 20 ಕೋಟಿ ರೂ. ವಿಶೇಷ ಅನುದಾನ ಒದಗಿಸಬೇಕೆಂದು ಶಾಸಕ ಅಲ್ಲಮಪ್ರಭು ಪಾಟೀಲ ಮನವಿ ಮಾಡಿದ್ದಾರೆ.

ಕೋಲಿ ಸಮಾಜದ ಅಧ್ಯಕ್ಷರಾಗಿ ನಿಂಗಣ್ಣಾ

ಚಿತ್ತಾಪುರ: ತಾಲೂಕು ಕೋಲಿ ಸಮಾಜದ ಸಂಘಟನೆ, ಒಗ್ಗಟ್ಟು, ಐಕ್ಯತೆಯಿಂದ ಸಮಾಜದ ಎಲ್ಲರೂ ಸಾಮೂಹಿಕವಾಗಿ ಸಮಾಜ ಪರ ಕೆಲಸ ಮಾಡುವ ಹಾಗೂ ಸಮಾಜದಲ್ಲಿ ಸಾಮರಸ್ಯೆ ಮೂಡಿಸುವ ದೃಷ್ಟಿಯಿಂದ ಅಧ್ಯಕ್ಷರ ಮೂರು ವರ್ಷದ ಅಧಿಕಾರ ಅವಧಿಯನ್ನು ಇಬ್ಬರು ಆಕಾಂಕ್ಷಿಗಳಿಗೆ ಹಂಚಿಕೆ ಮಾಡಲು ನಿರ್ಣಯಿಸಿ ಮೊದಲ 18 ತಿಂಗಳ ಅವಧಿಗಾಗಿ ಡೋಣಗಾಂವ ಗ್ರಾಮದ ನಿಂಗಣ್ಣಾ ದೇವಿಂದ್ರಪ್ಪಾ ಹೆಗಲೇರಿ ಅವರ ನ್ನು ನೂತನ ಆಯ್ಕೆ ಮಾಡಲಾಯಿತು.

ತಾಲೂಕು ಘಟಕದ ಅಧ್ಯಕ್ಷರ ಆಯ್ಕೆ ಮಾಡುವ ಕುರಿತು ಅರ್ಜಿ ಆಹ್ವಾನಿದಾಗ , ಐದು ಜನರು ಅಧ್ಯಕ್ಷ ಹುದ್ದೆಗೆ ಆಕಾಂಕ್ಷಿಗಳಾಗಿ ಅರ್ಜಿ ಸಲ್ಲಿಸಿದ್ದರು. ಅಧ್ಯಕ್ಷರ ಆಯ್ಕೆ ಕುರಿತು ಕಳೆದ ಡಿ. 20 ರಂದು ಆಯೋಜಿಸಿದ್ದ ಕೋಲಿ ಸಮಾಜದ ಸಭೆಯಲ್ಲಿ ಅಧ್ಯಕ್ಷರ ಆಯ್ಕೆಯ ಘೋಷಣೆ ಮಾಡಿದ್ದನ್ನು ಚಿತ್ತಾಪುರ ನಗರ ಘಟಕದ ಅಧ್ಯಕ್ಷರಾಗಿ ಪಟ್ಟಣದ ಪ್ರಭು ಹಲಕರ್ಟಿ ಅವರನ್ನು ನೇಮಿಸಲಾಗಿದೆ. ತಾಲೂಕು ಘಟಕದ ಮತ್ತು ನಗರ ಘಟಕದ ಎಲ್ಲಾ ಪದಾಧಿಕಾರಿಗಳ ತಂಡದೊಂದಿಗೆ ಸಮಾಜಪರ ಕೆಲಸ ಮಾಡುತ್ತಾ ಸಮಾಜವನ್ನು ಸಂಘಟಿಸಬೇಕು. ಕೋಲಿ ಸಮಾಜ ದ ಹಿರಿಯ ಮುಖಂಡ ಭೀಮಣ್ಣ ಸಾಲಿ, ಬಸವರಾಜ ಚಿನ್ನಮಳ್ಳಿ, ಮಲ್ಲಿಕಾರ್ಜುನ ಎಮ್ಮೆನೋರ್, ಹಣಮಂತ ಸಂಕನೂರುಇದ್ದರು.

ಸ್ಥಾಯಿ ಸಮಿತಿ ಅಧ್ಯಕ್ಷ ಜಗನ್ನಾಥ ಪದಗ್ರಹಣ

ಚಿಂಚೋಳಿ: ಪುರಸಭೆಯ ಸ್ಥಾಯಿ ಸಮಿತಿಯ ನೂತನ ಅಧ್ಯಕ್ಷರಾಗಿ ಜಗನ್ನಾಥ್ ಗುತ್ತೇದಾರ ಅವರ ಪದಗ್ರಹಣ ಸಮಾರಂಭ ಶುಕ್ರವಾರ ಜರುಗಿತು.



ಈ ವೇಳೆ ಮಾತನಾಡಿದ ನೂತನ ಸ್ಥಾಯಿ ಸಮಿತಿ ಅಧ್ಯಕ್ಷ ಗುತ್ತೇದಾರ, ಹಿರಿಯರ ಮಾರ್ಗದರ್ಶನದಲ್ಲಿ ಪುರಸಭೆ ಪ್ರತಿಯೊಂದು ವಾರ್ಡಗಳ ಸಮಸ್ಯೆಗಳು ಅರೆತು ಅಧ್ಯಕ್ಷರೊಂದಿಗೆ ಸ್ಪಂದಿಸುವ ಕೆಲಸ ಮಾಡುವುದರ ಮೂಲಕ ಪಟ್ಟಣದ ನೈರ್ಮಲ್ಯದ ಸ್ವಚ್ಚತೆ ಮತ್ತು ಬೀದಿ ದೀಪಗಳ ನಿರ್ವಹಣೆಯೊಂದಿಗೆ ವ್ಯಾಪ್ತಿಯ ಎಲ್ಲಾ ವಾರ್ಡಗಳಿಗೂ ನೀರಿನ ಸಮಸ್ಯೆ ಆಗದಂತೆ ನಿಗವಹಿಸಲಾಗುವುದು ಎಂದರು.

ಪುರಸಭೆ ಮುಖ್ಯಧಿಕಾರಿ ಕಾಶಿನಾಥ ಧನ್ನಿ ಸ್ವಾಗತಿಸಿ,ಮಾತನಾಡಿದವರು, ಹಲವು ದಿನಗಳಿಂದ ನೆನೆಗುಂದಿಗೆ ಬಿದ್ದ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ಜಗನ್ನಾಥ ಗುತ್ತೇದಾರ ಅವರು ಆಯ್ಕೆಗೊಂಡು ಹೊಸ ವರ್ಷದ ಪ್ರಾರಂಭದಲ್ಲಿ ಅಧಿಕಾರ ಪದಗ್ರಹಣೆಸಿದ್ದು ಪುರಸಭೆ ಆಡಳಿತಕ್ಕೆ ಮೆರಗು ಬಂದಿದ್ದು, ಅಧ್ಯಕ್ಷರ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಮನ್ವಯತೆಯಿಂದ ನಡೆದು ಪುರಸಭೆ ವ್ಯಾಪ್ತಿಯ ಸಮಸ್ಯೆಗಳಿಗೆ ಸಕರಾತ್ಮಕ ಸ್ಪಂದಿಸಿ ನಿವಾರಿಸುವಲ್ಲಿ ಜನತೆಗೆ ಉತ್ತಮ ಆಡಳಿತ ಕ್ಕೆ ಕೈಜೊಡಿಸುತ್ತೇವೆ ಎಂದರು.

ರಾಜಕೀಯದಲ್ಲಿರುವ ಮುಖಂಡರಿಗೆ ತಾಳ್ಮೆ ಇದ್ದರೆ ಅಧಿಕಾರಗಳು ಹುಡುಕಿಕೊಂಡು ತಮ್ಮಲ್ಲಿಗೆ ಬರುತ್ತವೆ. ದೇವರ ಸ್ಥಾನದಲ್ಲಿರುವ ಹೈಕಮಾಂಡ್ ಎಲ್ಲವನ್ನು ಗಮನಿಸಿ ನೋಡುತ್ತಾ ಇರುತ್ತದೆ .

-ಅಬ್ದುಲ್ ಬಾಶೀದ್, ಹಾಲಿ ಸದಸ್ಯ

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಮಲಿ, ಅನೀಲ ದೇವೀಂದ್ರಪ್ಪ ಜಮದಾರ, ಶರಣು ಪಾಟೀಲ ಮೋತಕಪಳ್ಳಿ, ಅಬ್ದುಲ್ ಬಾಷಿದ್, ಅನ್ವರಖತೀಬ್, ಹಾದಿ ಸಾಬ್, ಸಂತೋಷ ಗುತ್ತೇದಾರ, ಬಸವರಾಜ ವಾಡಿ, ಹಣಮಂತ ಭೋವಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯ ಸೈಯದ್ ಶಬ್ಬೀರ್, ರಾಧಬಾಯಿ ಓಲಗೇರಿ, ಬಸವರಾಜ ಸಿರಸಿ, ಲಕ್ಷ್ಮೀಕಾಂತ ಸುಂಕದ, ಶಶಿಧರ ಕಳಸ್ಕರ್, ಶ್ರೀನಿವಾಸ ಬಂಡಿ, ನೀಲಕಂಠ ಸಿಳ್ಳಿನ್, ಗುಂಡಯ್ಯ ಸ್ವಾಮಿ, ಸುಭಾಷ್ಚಂದ್ರ ಯಂಪಳ್ಳಿ, ಶಿವರಾಜ ಪಾಟೀಲ ಐನಾಪೂರ, ನಾಗೇಶ ಗುಣಾಜಿ, ಗಂಗಾಧರ ಗಡ್ಡಿಮನಿ, ಚಾಂದ್, ವಿಠಲ್ ಕುಸಾಳೆ, ರಾಜು ಪವಾರ, ಸುರೇಶ ಸಂದಾಪೂರ, ಸುರೇಶ ಹುಡಗಿ ಇದರು.

ಶಾ ಹೇಳಿಕೆ ಖಂಡಿಸಿ, ಚಿಂಚೋಳಿ ಬಂದ್‌ಗೆ ಕರೆ

ಚಿಂಚೋಳಿ : ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಖಂಡಿಸಿ ಈ ಕೂಡಲೇ ಕ್ಷಮೆಯಾಚಿಸಬೇಕೆಂದು ಇದೇ ಜ.6 ರ ಸೋಮವಾರ ಚಿಂಚೋಳಿ ಪಟ್ಟಣ ಬಂದ್ ಗೆ ಚಿಂಚೋಳಿ ನಾಗರೀಕ ಹಿತರಕ್ಷಣಾ ಸಮಿತಿ ವತಿಯಿಂದ ಕರೆ ನೀಡಲಾಗಿದೆ.ಈ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಚಿಂಚೋಳಿ - ಚಂದಾಪೂರ ಅವಳಿ ಪಟಣದ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ರಜೆ ಘೋಷಣೆ ಮಾಡಿ ಬಿಇಒ ಅವರು ಆದೇಶ ಹೊರಡಿಸಿದ್ದಾರೆ ಎನ್ನಲಾದ ಪತ್ರ ಸಹ ಎಲ್ಲೆಡೆ ಹರಿದಾಡು ತ್ತಿದೆ.

ಇನ್ನೂ ಚಿಂಚೋಳಿ ನಾಗರಿಕ ಹಿತರಕ್ಷಣಾ ಸಮಿತಿ ಕೊಟ್ಟಿರುವ ಚಿಂಚೋಳಿ- ಚಂದಾಪೂರ ಅವಳಿ ಪಟ್ಟಣ ಬಂದ್ ಕರೆ ಹಿನ್ನಲೆಯಲ್ಲಿ ಅಂದು ರಸ್ತೆಯ ಮೇಲೆ ಯಾವುದೇ ಸಾರಿಗೆ ಮತ್ತು ವಾಹನಗಳ ಓಡಾಟಕ್ಕೆ ಆಸ್ಪದ ಇರುವುದಿಲ್ಲವೆಂದು ಪೊಲೀಸ್ ಇಲಾಖೆ ತಿಳಿಸಿದೆ. ತಾಲೂಕ ಆಡಳಿತ ತಹಸೀಲ್ ಕಾರ್ಯಾಲಯದಿಂದ ಪತ್ರ ಬಂದಿದೆ. ಆದರೆ ಪೊಲೀಸ್ ಇಲಾಖೆ ವತಿಯಿಂದ ಯಾವುದೇ ಆದೇಶ ಬಂದಿರುವುದಿಲ್ಲ. ಹೀಗಾಗಿ ಅಂದು ಸಮಯ ಸಂಧರ್ಭ ನೋಡಿಕೊಂಡು ರಸ್ತೆಗೆ ಸಾರಿಗೆ ಬಸ್ಸುಗಳು ಇಳಿಸಲು ತೀರ್ಮಾನ ಕೈಗೊಳಲಾಗುತ್ತದೆ ಎಂದು ಕೆಕೆ ಸಾರಿಗೆ ಇಲಾಖೆಯ ಚಿಂಚೋಳಿ ಡಿಪೋ ವ್ಯವಸ್ಥಾಪಕರು ಸುದ್ಧಿಗಾರರಿಗೆ ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಅವಧಿ ವಿಸ್ತರಣೆ

ಬೆಂಗಳೂರು: ರಾಜ್ಯ ಸಾರಿಗೆ ಇಲಾಖೆ ಇದೀಗ ಮತ್ತೊಂದು ಬಾರಿ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಗಡುವನ್ನು ಜನವರಿ 31 ರವರೆಗೆ ವಿಸ್ತರಿಸಿದೆ. ರಾಜ್ಯ ಸಾರಿಗೆ ಇಲಾಖೆಯು ಇದುವರೆಗೂ ಆರು ಬಾರಿ ಗಡುವು ವಿಸ್ತರಣೆ ಮಾಡಿ ರಾಜ್ಯ ಸಾರಿಗೆ ಇಲಾಖೆ ಆದೇಶ ನೀಡಿತ್ತು. ಇದೀಗ

ಮತ್ತೊಮ್ಮೆ ಅವಕಾಶ ನೀಡಿದ್ದು, ಜ.31 ರವರೆಗೆ ನಂಬರ್ ಪ್ಲೇಟ್ ಅಳವಡಿಕೆಗೆ ರಾಜ್ಯ ಸಾರಿಗೆ ಇಲಾಖೆ ಗಡುವು ವಿಸ್ತರಿಸಿ ಆದೇಶ ಹೊರಡಿಸಿದೆ. ಈ ಹಿಂದೆ ಈ ವಿಚಾರವಾಗಿ ಮುಂದಿನ ಆದೇಶದವರೆಗೂ ವಾಹನ ಮಾಲೀಕರ ಮೇಲೆ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ ಎಂದು ಹೈಕೋರ್ಟ್ ಈ ಹಿಂದೆ ಆದೇಶ ನೀಡಿತ್ತು. ಕಳೆದ ಒಂದುವರೆ ವರ್ಷದಿಂದ ಎರಡು ಕೋಟಿ ವಾಹನಗಳ ಪೈಕಿ ಇಲ್ಲಿಯವರೆಗೆ 56.40 ಲಕ್ಷ ವಾಹನಗಳಿಗೆ ಮಾತ್ರ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಮಾಡಲಾಗಿದೆ. ಇನ್ನೂ 1.40 ಕೋಟಿ ಹಳೆಯ ವಾಹನಗಳು ನಂಬರ್ ಪ್ಲೇಟ್ ಅಳವಡಿಸಿಕೊಳ್ಳಬೇಕಿದೆ.

ಸಿ.ಟಿ.ರವಿಯನ್ನು ಬಂಧಿಸಿ: ತಂಗಡಗಿ

ಕೊಪ್ಪಳ: ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರನ್ನು ಸದನದಲ್ಲಿ ಬಾಯಿಗೆ ಬಂದಂತೆ ಮಾತನಾಡಿದ ಕಾರಣಕ್ಕೆ ಮೊದಲು ಬಂಧಿಸಬೇಕುಎಂದು ಸಚಿವ ಶಿವರಾಜ ತಂಗಡಗಿ ಒತ್ತಾಯಿಸಿದ್ದಾರೆ.

ಕೊಪ್ಪಳದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಚಿವ ಪ್ರಿಯಾಂಕ್ ಖರ್ಗೆಯನ್ನು ಬಂಧಿಸಬೇಕೆಂಬ ಸಿ.ಟಿ. ರವಿ ಹೇಳಿಕೆಗೆ ತಿರುಗೇಟು ನೀಡಿದರು. ಪೋಸ್ಕೋ ಕಾಯ್ದೆಯಡಿ ಆರೋಪಿಯಾಗಿರುವ ಯಡಿಯೂರಪ್ಪ ಅವರನ್ನು ಬಂಧಿಸಬೇಕು. ಎಚ್ಐವಿ ಸೋಂಕಿತರ ರಕ್ತ ಇಂಜೆಕ್ಟ್ ಮಾಡುವ ಮುನಿರತ್ನ ಅವರನ್ನು ಪಕ್ಷದಿಂದ ಬಿಜೆಪಿ ಹೊರಗೆ ಹಾಕಿದೆಯೇ? ಬಿಜೆಪಿಗರ ಪಕ್ಷದಲ್ಲಿ ಕತ್ತೆ ಬಿದ್ದಿದೆ. ಬೇರೆಯವರ ತಟ್ಟೆಯಲ್ಲಿ ನೊಣ ನೋಡುತ್ತಿದ್ದಾರೆ. ಪ್ರಿಯಾಂಕ್ ಖರ್ಗೆ ರಾಜೀನಾಮೆ ಕೊಡುವ ಅಗತ್ಯವೇ ಇಲ್ಲ ಎಂದು ಪ್ರತಿಪಾದಿಸಿದರು.

ದಯಾಮರಣ ಕೋರಿ ರಾಜ್ಯಪಾಲ, ಸಿಎಂಗೆ ಗುತ್ತಿಗೆದಾರನಿಂದ ಪತ್ರ!

ಕಾಮಗಾರಿ ಮುಗಿಸಿ ಒಂದೂವರೆ ವರ್ಷ ಕಳೆದರೂ ಬಿಲ್ ಪಾವತಿಯಾಗಿಲ್ಲ

ದಾವಣಗೆರೆ: ಕಾಮಗಾರಿ ಮುಗಿಸಿ ಒಂದೂವರೆ ವರ್ಷ ಕಳೆದರು ಅನುದಾನ ಬಿಡುಗಡೆಯಾಗಿಲ್ಲ. ವಯಸ್ಸಿಗೆ ಬಂದ ಮಗಳಿಗೆ ಮದುವೆ ಮಾಡಲು ಹಣವಿಲ್ಲದೆ ಹರಿಹರದ ಗುತ್ತಿಗೆದಾರ ಅಸಹಾಯಕತೆಯಿಂದ ದಯಾಮರಣ ಕೋರಿ ಸಿಎಂ, ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ.

ಈ ಕುರಿತು ಗುತ್ತಿಗೆದಾರ ಮೊಹಮ್ಮದ್ ಮಝರ್ ಮಾತನಾಡಿ,2022-23ನೇ ಸಾಲಿನ ವಿಶೇಷ ಅನುದಾನ ಅಡಿಯಲ್ಲಿ ಟೆಂಡರ್ ಕರೆದಿದ್ದರು. ಟೆಂಡರ್ ಪಡೆಯಲು ನಾನು ಭಾಗಿಯಾಗಿದ್ದೆ. ಹರಿಹರ ನಗರಸಭೆ ಹಾಗೂ ಜಿಲ್ಲಾಧಿಕಾರಿ ಅವರು ಕಾಮಗಾರಿ ಕಾರ್ಯದೇಶ ನೀಡಿದ್ದರು. ಸಾಲಸೋಲ ಮಾಡಿ ಕಾಮಗಾರಿ ಮಾಡಿದ್ದೇನೆ. ಕಾಮಗಾರಿಗಾಗಿ ಸಾಮಗ್ರಿಗಳನ್ನು ಖರೀದಿಸಿದ್ದೇನೆ. ಅದರ ಬಿಲ್ ಸಂದಾಯ ಮಾಡಬೇಕು. ಹಣ ಬಿಡುಗಡೆ ಮಾಡಿ ಎಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ಸಾಕಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಕಾಮಗಾರಿ ನೋಡಿ ಬಿಲ್ ಪಾವತಿಸಿ: ನನ್ನ ಮಗಳ ಮದುವೆ ಇದೆ. ಮದುವೆ ದಿನಾಂಕ ನಿಗದಿ ಮಾಡಿಸಬೇಕಾಗಿದೆ. ಅದಕ್ಕಾಗಿ ಹಣ ಹೊಂದಿಸಲಾಗುತ್ತಿಲ್ಲ. ಹೀಗಾಗಿ ದಯಾಮರಣ ಕೋರಿ ಸಿಎಂ ಸಿದ್ದರಾಮಯ್ಯ ಹಾಗೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಪತ್ರ ಬರೆದಿದ್ದೇನೆ. ನಾನು ಕಣ್ಣು ಮುಚ್ಚಬಹುದು, ಆ ದೇವರು ಅವರನ್ನು ನೋಡಿಕೊಳ್ಳಲಿ. ಕಳೆದ ಸರಕಾರದಲ್ಲಿ ಹೀಗಾಯಿತು. ಇದೀಗ ಈ ಸರಕಾರದಲ್ಲೂ ಅದೇ ಆಗುತ್ತಿದೆ. ಮೊದಲು ನನ್ನ ಕಾಮಗಾರಿ ನೋಡಿ ಹಣ ಬಿಡುಗಡೆ ಮಾಡಲಿ ಎಂದು ಗುತ್ತಿಗೆದಾರ ಮನವಿ ಮಾಡಿದರು.

ಹರಿಹರದ ಗುತ್ತಿಗೆದಾರ ಮೊಹಮದ್ ವಝರ್. ಅವರು ನಿರ್ವಹಿಸಿದ ಕಾಮಗಾರಿಗಳ ಚಿತ್ರ.

> ಹರಿಹರ ನಗರಸಭೆ ವ್ಯಾಪ್ತಿಯಲ್ಲಿ 20 ಲಕ್ಷ ರು. ವೆಚ್ಚದಲ್ಲಿ ಶೌಚಾಲಯ ನಿರ್ಮಿಸಿದ್ದೇನೆ. 5 ಲಕ್ಷ ರು. ವೆಚ್ಚದಲ್ಲಿ ಸಿಸಿ ಚರಂಡಿ ನಿರ್ಮಾಣ ಮಾಡಿದ್ದೇನೆ. ಕಾಮಗಾರಿ ಮುಗಿದಿದೆ, ಹಣ ಕೇಳಿದರೆ ಅಧಿಕಾರಿಗಳು ಅಲೆದಾಡಿಸುತ್ತಿದ್ದಾರೆ. ನನಗೆ 25 ಲಕ್ಷ ರು. ಬರಬೇಕಾಗಿದೆ.
>
> -ಮೊಹಮ್ಮದ್ ಮಝರ್
> ಪ್ರಥಮ ದರ್ಜೆಯ ಗುತ್ತಿಗೆದಾರ

ಮದುವೆ ಮುಂದೂಡಿದ್ದೇನೆ

ಮಗಳು ಮದುವೆ ಇದೆ, ದಿನಾಂಕ ನಿಗದಿ ಮಾಡಬೇಕಾಗಿದೆ. ಹಣ ಇಲ್ಲದೇ ಮುಂದೂಡುತ್ತಿದ್ದೇನೆ. ಮದುವೆನೇ ಮುರಿದು ಬೀಳುವ ಹಂತಕ್ಕೆ ಬಂದಿದೆ. ಎಲ್ಲಿಂದ ಹಣ ತರಲಿ, ಮದುವೆ ಹೇಗೆ ಮಾಡಲಿ ಎಂದು ಮೊಹಮದ್ ಅವರು ಅಳಲು ತೋಡಿಕೊಂಡರು.

ಇ.ಡಿ ಅಧಿಕಾರಿಗಳ ಸೋಗಿನಲ್ಲಿ ದಾಳಿ: 30 ಲಕ್ಷ ರು. ಜತೆ ಪರಾರಿ

ಮಂಗಳೂರು: ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಸೋಗಿನಲ್ಲಿ ಕಾರಿನಲ್ಲಿ ಬಂದಿದ್ದ ಆರು ಮಂದಿಯ ತಂಡ ಬೀಡಿ ಉದ್ಯಮಿಯ ಮನೆ ಮೇಲೆ ಶುಕ್ರವಾರ ರಾತ್ರಿ ದಾಳಿ ನಡೆಸಿ, 30 ಲಕ್ಷ ನಗದು ಹಾಗೂ ಐದು ಮೊಬೈಲ್‌ಗಳೊಂದಿಗೆ ಪರಾರಿಯಾಗಿದೆ.

'ಬಂಟ್ವಾಳ ತಾಲ್ಲೂಕಿನ ಕೊಳ್ನಾಡು ನಿವಾಸಿ, ಬೀಡಿ ಉದ್ಯಮಿ ಸುಲೇಮಾನ್ ಅವರ ಮನೆಗೆ ಶುಕ್ರವಾರ ರಾತ್ರಿ 8.10ರ ಸುಮಾರಿಗೆ, ತಮಿಳುನಾಡಿನ ನೋಂದಣೆ ಹೊಂದಿರುವ ಕಾರಿನಲ್ಲಿ 6 ಜನ ಅಪರಿಚಿತ ವ್ಯಕ್ತಿಗಳು ಬಂದು, ತಮ್ಮನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳೆಂದು ಪರಿಚಯಿಸಿಕೊಂಡರು. ಮನೆಯನ್ನು ಪರಿಶೀಲನೆ ನಡೆಸಲು ಆದೇಶವಾಗಿರುತ್ತದೆ ಎಂದು ತಿಳಿಸಿ ಮನೆ ಒಳಗೆ ಬಂದರು. ಮನೆಯಲ್ಲಿದ್ದ 5 ಮೊಬೈಲ್ ಫೋನ್‌ಗಳನ್ನು ವಶಕ್ಕೆ ತೆಗೆದುಕೊಂಡು, ಮನೆಯನ್ನು ಹುಡುಕಾಡಿದರು ಎಂದು ಸುಲೇಮಾನ್ ಮನೆಯವರು ಮಾಹಿತಿ ನೀಡಿದ್ದಾರೆ.

ಇಷ್ಟು ಹಣ ಇಟ್ಟುಕೊಳ್ಳಲು ಅವಕಾಶವಿಲ್ಲ: ಮನೆಯ ಕೋಣೆಯ ಕಪಾಟಿನಲ್ಲಿ ವ್ಯವಹಾರಕ್ಕಾಗಿ ಇಟ್ಟಿದ್ದ 30 ಲಕ್ಷ ರು.ಗಳನ್ನು ತೆಗೆದುಕೊಂಡ ಅಪರಿಚಿತರು, 'ಇಷ್ಟೊಂದು ಹಣ ಇಟ್ಟುಕೊಳ್ಳಲು ನಿಮಗೆ ಅವಕಾಶವಿಲ್ಲ. ನಿಮ್ಮನ್ನು ಬಂಧಿಸಿ ಕಸ್ಟಡಿ ತೆಗೆದುಕೊಳ್ಳುತ್ತೇವೆ ಎಂದು ಎಚ್ಚರಿಕೆ ಕೊಟ್ಟರು. ಬಳಿಕ ಶುಕ್ರವಾರ ರಾತ್ರಿ ಸುಮಾರು 10.30 ನಂತರ ಮನೆಯಿಂದ ಹೊರಟರು. ಮನೆಯಲ್ಲಿ ಪತ್ತೆಯಾದ ಹಣಕ್ಕೆ ಸೂಕ್ತ ದಾಖಲೆ ನೀಡಿ, ಬೆಂಗಳೂರಿನಲ್ಲಿರುವ ಕಚೇರಿಯಿಂದ ಪಡೆದುಕೊಳ್ಳುವಂತೆ ತಿಳಿಸಿ ಹಣದೊಂದಿಗೆ ಹೊರಟು ಹೋದರು ಎಂದು ಸುಲೇಮಾನ್ ಪುತ್ರ ಮೊಹಮದ್ ಇಕ್ಬಾಲ್ ದೂರು ನೀಡಿದ್ದಾರೆ. ಈ ಬಗ್ಗೆ ವಿಟ್ಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಎಸ್‌ಎಂಎಸ್‌ಸಿಎಲ್: ವರ್ಷಗಳಿಂದ ಕಡತಗಳ ವಿಲೇವಾರಿಯಾಗದೆ ಪೂರೈಕೆದಾರರಿಗೆ ಸಂಕಷ್ಟ

766 ಕಡತಗಳು ಬಾಕಿ

ಬೆಂಗಳೂರು: ಕರ್ನಾಟಕ ರಾಜ್ಯ ವೈದ್ಯಕಿಯ ಸರಬರಾಜು ನಿಗಮದಲ್ಲಿ (ಕೆಎಸ್‌ಎಂಎಸ್‌ಸಿಎಲ್) ಕಡತಗಳ ವಿಲೇವಾರಿಯಾಗದೆ ರಾಶಿ ಬಿದ್ದಿವೆ.

ಆಡಳಿತ, ಔಷಧ, ವೈದ್ಯಕಿಯ ಪರಿಕರ, ಹಣಕಾಸು, ಐಟಿ, ಲೀಗಲ್, ಕ್ವಾಲಿಟಿ ಕಂಟ್ರೋಲ್ ಸೇರಿ ವಿವಿಧ ವಿಭಾಗಗಳಲ್ಲಿ ಬರೋಬ್ಬರಿ 766 ಕಡತಗಳು ವಿಲೇವಾರಿಯಾಗದೆ ಬಾಕಿ ಉಳಿದಿದ್ದು, ಸೂಕ್ತ ಕಾಲಕ್ಕೆ ಔಷಧ ಬಿಲ್‌ಗಳಿಗೆ ಹಣ ಪಾವತಿಯಾಗದೆ ಪೂರೈಕೆದಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ನಿಗಮ ಗುಣಮಟ್ಟ ನಿಯಂತ್ರಣ ವ್ಯವಸ್ಥಾಪಕರ (ಕ್ವಾಲಿಟಿ ಕಂಟ್ರೋಲ್) ಬಳಿ ಅತಿ ಹೆಚ್ಚು 160 ಫೈಲ್‌ಗಳು ಬಾಕಿ ಉಳಿದಿವೆ. ಹಣಕಾಸು ವಿಭಾಗದಲ್ಲಿ 74, ಧನಂಜಯ ಬಳಿ 74, ಔಷಧ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್.ಕೃಷ್ಣ ಬಳಿ 60 ಕಡತಗಳು ವಿಲೇವಾರಿಯಾಗದೆ ಅನೇಕ ವಾರಗಳಿಂದ ಹಾಗೇ ಉಳಿದಿವೆ.

ಅಧಿಕಾರಿಗಳ ನಿರ್ಲಕ್ಷ್ಯ: ಪ್ರತಿ ವಿಭಾಗದಲ್ಲೂ ಕನಿಷ್ಠ ಬಾಕಿ ಉಳಿದಿರುವ 20-30 ಕಡತಗಳು ವಿಲೇವಾರಿಯಾಗಿಲ್ಲ. ಇದರಿಂದಾಗಿ ನಿಗಮದ ಆಡಳಿತ ವ್ಯವಸ್ಥೆಯೇ ಹಳ್ಳ ಹಿಡಿಯುವಂತಾಗಿದೆ. ಫೈಲ್‌ಗಳ ವಿಲೇವಾರಿ ಮಾಡುವಂತೆ ಸರಕಾರ ಆದೇಶಿಸಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯವಹಿಸುವಂತಾಗಿದೆ.

ಶೇ.100 ಔಷಧ ಸರಬರಾಜು ಮಾಡಿರುವ ಕಂಪನಿಗಳಿಗೆ ಹಣ ಪಾವತಿಯಾಗಿಲ್ಲ. ಆನ್‌ಲೈನ್‌ನಲ್ಲಿ ಎಲ್ಲ ಬಿಲ್‌ಗಳು ಲಭ್ಯವಿದ್ದರೂ ಉದ್ದೇಶಪೂರ್ವಕವಾಗಿಯೇ ಅಧಿಕಾರಿಗಳು ಪಾವತಿ ಮಾಡುತ್ತಿಲ್ಲ. ಹಲವು ವರ್ಷಗಳಿಂದ ಬಾಕಿ ಔಷಧ ಬಿಲ್‌ಗಳ ಜತೆಗೆ ಕೋಟ್ಯಂತರ ರೂಪಾಯಿ ಭದ್ರತಾ ಠೇವಣಿ ಹಾಗೂ ಇಎಂಡಿ ಬಾಕಿಯಿವೆ. ಇವುಗಳನ್ನು ಕ್ಲಿಯರ್ ಮಾಡುತ್ತಿಲ್ಲ. ಟೆಂಡರ್ ನಿಯಮಾನುಸಾರ 30 ದಿನದೊಳಗೆ ಔಷಧ ಬಿಲ್‌ಗಳಿಗೆ ಹಣ ಪಾವತಿಸಬೇಕೆಂಬ ನಿಯಮವಿದೆ. ತಮಿಳುನಾಡು ಸೇರಿ ಇತರ ರಾಜ್ಯಗಳಲ್ಲಿ ನಿಗದಿತ ಸಮಯದಲ್ಲಿ ಔಷಧ ಪೇಮೆಂಟ್ ಆಗುತ್ತಿದೆ. ಆದರೆ, ನಿಗಮದಲ್ಲಿ ಸರಿಯಾದ ಸಮಯಕ್ಕೆ ಔಷಧ ಬಿಲ್‌ಗಳಿಗೆ ಹಣ ಪಾವತಿಯಾಗುತ್ತಿಲ್ಲ.

ಇಂದಿನಿಂದಲೇ ಹೊಸ ಪ್ರಯಾಣ ದರ ಜಾರಿ

← ಮೊದಲಪುಟದಿಂದ

ಬಸ್ ದರ

ಬಸ್ ಮಾರ್ಗ	ಹಿಂದಿನ ದರ	ಇಂದಿನ ದರ
ಬೆಂಗಳೂರು-ತುಮಕೂರು	80	91
ಬೆಂಗಳೂರು-ಮಂಡ್ಯ	116	131
ಬೆಂಗಳೂರು-ಮಂಗಳೂರು	398	454
ಬೆಂಗಳೂರು-ಉಡುಪಿ	452	516
ಬೆಂಗಳೂರು-ಮೈಸೂರು	141	162
ಬೆಂಗಳೂರು-ಹಾಸನ	217	246
ಬೆಂಗಳೂರು-ಬೆಳಗಾವಿ	617	697
ಬೆಂಗಳೂರು -ಶಿವಮೊಗ್ಗ	312	356
ಬೆಂಗಳೂರು-ಬಳ್ಳಾರಿ	374	424
ಬೆಂಗಳೂರು-ದಾವಣಗೆರೆ	320	36
ಬೆಂಗಳೂರು-ಚಿಕ್ಕಮಗಳೂರು	284	323
ಬೆಂಗಳೂರು-ಮಂಗಳೂರು	398	454
ಬೆಂಗಳೂರು-ಚಿಕ್ಕಬಳ್ಳಾಪುರ	72	81
ಬೆಂಗಳೂರು-ಚಿತ್ರದುರ್ಗ	242	274
ಬೆಂಗಳೂರು-ರಾಮನಗರ	45	52
ಬೆಂಗಳೂರು-ಚಾಮರಾಜನಗರ	179	206
ಬೆಂಗಳೂರು-ಮಡಿಕೇರಿ	265	313
ಬೆಂಗಳೂರು-ಪುತ್ತೂರು	401	457
ಬೆಂಗಳೂರು-ಕೋಲಾರ	74	85
ಬೆಂಗಳೂರು-ಬೀದರ್	821	936
ಬೆಂಗಳೂರು-ರಾಯಚೂರು	560	638
ಬೆಂಗಳೂರು-ಯಾದಗಿರಿ	662	755
ಬೆಂಗಳೂರು-ಕೊಪ್ಪಳ	447	506
ಬೆಂಗಳೂರು-ವಿಜಯಪುರ	691	779
ಬೆಂಗಳೂರು-ಚಿಕ್ಕೋಡಿ	708	801
ಬೆಂಗಳೂರು-ಬಾಗಲಕೋಟೆ	605	685
ಬೆಂಗಳೂರು-ಹುಬ್ಬಳ್ಳಿ	499	563
ಬೆಂಗಳೂರು-ಗದಗ	525	593
ಬೆಂಗಳೂರು-ಹಾವೇರಿ	420	474
ಬೆಂಗಳೂರು-ಶಿರಸಿ	455	520
ಬೆಂಗಳೂರು-ಕಾರವಾರ	614	699
ಬೆಂಗಳೂರು-ಹೊಸಪೇಟೆ	402	455

ಚಿಂತಕ ಪ್ರೊ.ಮುಜಾಫರ್ ಅಸ್ಸಾದಿ ವಿಧಿವಶ

ಅಸಂಖ್ಯ ಜನರಿಂದ ಅಂತಿಮ ನಮನ | ಮುಸ್ಲಿಮ್ ವಿಧಿ-ವಿಧಾನಗಳಂತೆ ಅಂತ್ಯಕ್ರಿಯೆ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ವಿಶ್ರಾಂತ ಕುಲಪತಿ, ಚಿಂತಕ ಪ್ರೊ.ಮುಜಾಫರ್ ಅಸ್ಸಾದಿ (63) ಶುಕ್ರವಾರ ರಾತ್ರಿ ವಿಧಿವಶರಾದರು.

ಆರು ತಿಂಗಳ ಹಿಂದೆಯಷ್ಟೆ ಅವರಿಗೆ ಹೃದಯಾಘಾತ ಸಂಭವಿಸಿ ರಕ್ತ ಸಂಚಾರ ಸ್ಥಗಿತಗೊಂಡಿತ್ತು. ಆ ವೇಳೆ ಮೈಸೂರಿನಲ್ಲಿಯೇ ಚಿಕಿತ್ಸೆ ಪಡೆದಿದ್ದ ಅವರು ಹೃದಯ ಶಸ್ತ್ರಚಿಕಿತ್ಸೆಗೆಂದು ಡಿ.31ರಂದು ಬೆಂಗಳೂರಿನ ಆಸ್ಟರ್ ಆಸ್ಪತ್ರೆಗೆ ದಾಖಲಾಗಿದ್ದರು. ಜ.2ರಂದು ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಮಾಡಲಾಯಿತಾದರೂ, ವೈದ್ಯರು ಎಷ್ಟೇ ಪ್ರಯತ್ನಪಟ್ಟರೂ ರಕ್ತಚಲನೆ ನಿಯಂತ್ರಣಕ್ಕೆ ಬರಲಿಲ್ಲ. ಶುಕ್ರವಾರ ರಾತ್ರಿ ಅಸ್ಸಾದಿ ಕೊನೆಯುಸಿರೆಳೆದರೆಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಗೃಹದಲ್ಲಿ ಅಂತಿಮ ದರ್ಶನ: ಪ್ರೊ.ಮುಜಾಫರ್ ಅಸ್ಸಾದಿ ಅವರ ಮೃತ ದೇಹವನ್ನು ಶನಿವಾರ ಬೆಳಗ್ಗೆ 8 ಗಂಟೆ ಸಮಯಕ್ಕೆ ಬೆಂಗಳೂರಿನಿಂದ ಮೈಸೂರಿನ ಸರಸ್ವತಿಪುರಂನ ಅವರ ಮನೆಯಲ್ಲಿ ಸಾರ್ವಜನಿಕ ಅಂತಿಮ ದರ್ಶನಕ್ಕೆ ಇಡಲಾಯಿತು. ಸಾರ್ವಜನಿಕರು, ಹಿತೈಷಿಗಳು, ಬಂಧುಗಳು, ಮತ್ತು ರಾಜಕೀಯ ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಬಳಿಕ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಎದುರಿಗಿರುವ ಮುಸ್ಲಿಂ ಹಾಸ್ಟೆಲ್‌ನಲ್ಲಿ ಸ್ವಲ್ಪ ಸಮಯ ಸಾರ್ವಜನಿಕರ ದರ್ಶನಕ್ಕೆ ಇಟ್ಟು ಸಂಜೆ ಮೈಸೂರು-ಬೆಂಗಳೂರು ರಸ್ತೆಯ ಬನ್ನಿಮಂಟಪದ ಬಳಿ ಇರುವ ಟಿಪ್ಪು ವೃತ್ತದ ಬಳಿಯ ಬಡೆ ಮಕಾನ್‌ಗೆ ಕೊಂಡೊಯ್ದು ಮುಸ್ಲಿಮ್ ವಿಧಿ-ವಿಧಾನಗಳಂತೆ ಅಂತ್ಯಕ್ರಿಯೆ ನಡೆಸಲಾಯಿತು.

ಚಿಂತಕ ಅಸ್ಸಾದಿ ನಿಧನಕ್ಕೆ ಸಿಎಂ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದಾರೆ.

ಗಣ್ಯರಿಂದ ಅಂತಿಮ ನಮನ: ಸಚಿವ ಡಾ.ಎಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ಸಂಸದ ಸುನೀಲ್ ಬೋಸ್, ಮಾಜಿ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಸಾಹಿತಿಗ ದೇವನೂರು ಮಹಾದೇವ, ಪತ್ನಿ ಪ್ರೊ.ಸುಮಿತ್ರಾಬಾಯಿ, , ಪ್ರೊ. ಅರವಿಂದ ಮಾಲಗತ್ತಿ, ರತಿರಾವ್, ಪ್ರೊ.ಲೋಲಾಕ್ಷಿ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕದ ಕಾನೂನು ವಿ.ವಿ.ವಿಶ್ರಾಂತ ಕುಲಪತಿ ಪ್ರೊ. ಈಶ್ವರ್ ಭಟ್, ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ನಿವೃತ್ತ ಐ.ಎ.ಎಸ್ ಅಧಿಕಾರಿ ಎ.ಬಿ.ಇಬ್ರಾಹಿಂ, ಮೈಸೂರು ವಿ.ವಿ ಕುಲಪತಿ ಪ್ರೊ. ಲೋಕನಾಥ್, ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಮೈಸೂರು ವಿ.ವಿ. ಅಂಬೇಡ್ಕರ್ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಜೆ.ಸೋಮಶೇಖರ್, ಮೈಸೂರು ವಿ.ವಿ.ಡೀನ್ ಪ್ರೊ.ಗುರುಸಿದ್ದಯ್ಯ, ರಂಗಕರ್ಮಿ ಜನಾರ್ದನ್ (ಜನ್ನಿ), ನಾ.ದಿವಾಕರ, ಪ್ರೊ.ಕಾಳಚನ್ನೇಗೌಡ, ಪ್ರೊ.ಶಬ್ಬೀರ್ ಮುಸ್ತಫಾ, ಪಿಯುಸಿಎಲ್ ಮೈಸೂರು ಜಿಲ್ಲಾಧ್ಯಕ್ಷ ಕಮಲ್ ಗೋಪಿನಾಥ್, ದಸಂಸ ಮುಖಂಡರಾದ ಬೆಟ್ಟಯ್ಯ ಕೋಟೆ, ಚೋರನಹಳ್ಳಿ ಶಿವಣ್ಣ, ಶಂಭುಲಿಂಗಸ್ವಾಮಿ, ಚುಂಚನಹಳ್ಳಿ ಮಲ್ಲೇಶ್, ನೆಲೆ ಹಿನ್ನೆಲೆ ಗೋಪಾಲಕೃಷ್ಣ ಮೊದಲಾದ ಅಂತಿಮ ದರ್ಶನ ಪಡೆದರು.

ನಾವು ಬೀದಿಗಿಳಿದರೆ ಬಿಜೆಪಿ ಮನೆ ಖಾಲಿ

ಸಿಬಿಐ ತನಿಖೆ ಅಗತ್ಯವಿಲ್ಲ: ಪ್ರಿಯಾಂಕ ಖರ್ಗೆ

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷ ಎಂಬ ಕಾರಣಕ್ಕೆ ಬಿ.ವೈ.ವಿಜಯೇಂದ್ರ ಅವರಿಗೆ ಗೌರವ ನೀಡಲಾಗುತ್ತದೆ. ಬಾಯಿಗೆ ಬಂದಂತೆ ಮಾತನಾಡಿದರೆ ಸಹಿಸಲಾಗುವುದಿಲ್ಲ. ನಾವು ಬೀದಿಗಿಳಿದರೆ ನೀವು ಮನೆ ಖಾಲಿ ಮಾಡಬೇಕಾಗುತ್ತದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿನ್ ಪಾಂಚಾಳ್ ಆತಹತ್ಯೆ ಪ್ರಕರಣದಲ್ಲಿ ಸುಪಾರಿ ನೀಡಲಾಗಿತ್ತು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಆರೋಪಕ್ಕೆ ತಿರುಗೇಟು ನೀಡಿದರು.

ಬಿಜೆಪಿಯಿಂದ ಒತ್ತಡ: ಸಚಿನ್ ಪಾಂಚಾಳ್ ಕುಟುಂಬದ ಸದಸ್ಯರ ಮೇಲೆ ಬಿಜೆಪಿಯವರು ಒತ್ತಡ ಹೇರುತ್ತಿದ್ದಾರೆ. ಪ್ರಕರಣದ ದಿಕ್ಕು ತಪ್ಪಿಸುವ ಹುನ್ನಾರ ನಡೆಯುತ್ತಿದೆ. ಈಗಾಗಲೇ ಪ್ರಕರಣ ಸಿಐಡಿ ತನಿಖೆ ನಡೆಸಲಾಗುತ್ತಿದೆ. ಸ್ಥಳ ಮಹಜರು ನಡೆದಿದೆ. ಪಾರದರ್ಶಕ ತನಿಖೆ ನಡೆಯಲಿದೆ ಎಂದು ತಾವು ಸಚಿನ್ ಕುಟುಂಬದ ಸದಸ್ಯರಿಗೆ ಭರವಸೆ ನೀಡಿದ್ದೇನೆ ಎಂದು ಖರ್ಗೆ ಸ್ಪಷ್ಟಪಡಿಸಿದರು.

ಹೆಚ್ಚುವರಿ ಪ್ರಕರಣಗಳನ್ನು ನಮ್ಮ ತನಿಖೆಗೆ ವಹಿಸಬೇಡಿ ಎಂದು ಸಿಬಿಐ ರಾಜ್ಯಗಳಿಗೆ ಪತ್ರ ಬರೆದು ಸೂಚನೆ ನೀಡಿದೆ. ಸಚಿನ್ ಪಾಂಚಾಳ್ ಪ್ರಕರಣ ಸಿಬಿಐ ತನಿಖೆಗೆ ಕೊಡುವ ಅಗತ್ಯವಿಲ್ಲ. ಬಿಜೆಪಿಯವರು ಕತೆ ಬರೆದಂತೆ ನಾವು ತಾಳ ಹಾಕಲಾಗುವುದಿಲ್ಲ. ಜೀವ ಹೋಗಿದೆ. ನ್ಯಾಯ ಕೊಡಿಸುವುದು ನಮ ಜವಾಬ್ದಾರಿ. ವಿರೋಧಪಕ್ಷಗಳು ರಾಜಕೀಯ ಮಾಡದೇ ಜವಾಬ್ದಾರಿಯುತವಾಗಿ ನಡೆದುಕೊಳ್ಳಲಿ ಎಂದರು.

ಪ್ರತಿಭಟನೆಗೆ ಬರುವಂತೆ ಕುಟುಂಬದ ಸದಸ್ಯರ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕುಟುಂಬದವರು ನಮಗೆ ಪ್ರಿಯಾಂಕ್ ಖರ್ಗೆ ಯಾರೆಂಬುದು ಗೊತ್ತಿಲ್ಲ. ನಮಗೂ ಅವರಿಗೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಸಚಿವ ಈಶ್ವರ್ ಖಂಡ್ರೆ, ಲಕ್ಷ್ಮಿ ಹೆಬ್ಬಾಳ್ಕರ್ ಅವರು ಸಚಿನ್ ಅವರ ಮನೆಗೆ ಭೇಟಿ ನೀಡಿ ಸಾಂತ್ವನ ನೀಡಿದ್ದು, ಸರಕಾರದಿಂದ ಅಗತ್ಯ ನೆರವು ಕೊಡಿಸುವ ಭರವಸೆ ನೀಡಿದ್ದಾರೆ ಎಂದರು.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ,
ಲಲಿತಮಹಲ್ ರಸ್ತೆ, ಮೈಸೂರು-570 011
ANSSIRD&PR
ಸಂಖ್ಯೆ:SIRDPR-ADM0EST2/5/2024 -25 ದಿನಾಂಕ: 04.01.2025

ಪ್ರಕಟಣೆ

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇಲ್ಲಿಗೆ ಅಗತ್ಯವಿರುವ ಹೌಸ್ ಕೀಪಿಂಗ್ ಸೇವೆಗಳನ್ನು ಒಂದು ವರ್ಷ ಅವಧಿಗೆ ಪಡೆಯುವ ಸಂಬಂಧ KTPP ಅಧಿನಿಯಮ 1999 ನಿಯಮಗಳು 2000 ರಂತೆ ಕರ್ನಾಟಕ ಸರ್ಕಾರದ e-Procurement portal ಮೂಲಕ ಮಾತ್ರ ಏಜೆನ್ಸಿಗಳಿಂದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ದಿ: 17.01.2025ರ ಸಂಜೆ 5.00 ಗಂಟೆಯ ವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://www.kppp.karnataka.gov.in ರಲ್ಲಿ ಪಡೆಯಬಹುದು ಅಥವಾ ಸಂಸ್ಥೆಯ ದೂರವಾಣಿ ಸಂಖ್ಯೆ: 0821-2522903 / 906 ಅನ್ನು ಸಂಪರ್ಕಿಸಬಹುದು.

ಸಹಿ/- ನಿರ್ದೇಶಕರು, ಅನಸಾರಾಗಾ & ಪಂ.ರಾ.ಸಂಸ್ಥೆ, ಮೈಸೂರು
DIPR/DDMYS/1050/KSMCA/708/2024-25

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
CIN :U70100KA2015SGC081817
ನಂ. 3, 4ನೇ ಮಹಡಿ, ಎಂಬಸ್ಸಿ ಐಕಾನ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001, ದೂರವಾಣಿ : 080-22352525
ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ
ಸಂಖ್ಯೆ: ಕೆ.ಟಿ.ಐ.ಎಲ್/ಯೋ-1/ಕ.ವಿ/ರಾ.ಜಿ/01/2024-25/83 ದಿನಾಂಕ: 03.01.2025

ಟೆಂಡರ್ ಪ್ರಕಟಣೆ

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್‌ಅನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಇ-ಸಂಗ್ರಹಣೆ (ಕೆ.ಪಿ.ಪಿ.ಪಿ) ವೇದಿಕೆಯಲ್ಲಿ ಲಭ್ಯವಿರುತ್ತದೆ.

ಕ್ರ ಸಂ	ಕಾಮಗಾರಿಯ ವಿವರ	ಟೆಂಡರ್ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ಟೆಂಡರ್ ವೇಳಾಪಟ್ಟಿ
1.	ರಾಯಚೂರು ಜಿಲ್ಲೆ, ರಾಯಚೂರು ನಗರ ಬಸ್ ನಿಲ್ದಾಣದ ಹತ್ತಿರವಿರುವ ಐತಿಹಾಸಿಕ ಮಕ್ಕಾ ದರ್ವಾಜ್ ಕೋಟೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಸಂರಕ್ಷಣಾ ಕಾಮಗಾರಿ (ಅಂದಾಜು ವೆಚ್ಚ ರೂ.100.00 ಲಕ್ಷಗಳು)	KTIL/2024-25/ BD/WORK_INDENT17	ಕೆ.ಪಿ.ಪಿ.ಪಿ ವೇದಿಕೆಯಲ್ಲಿ ನಮೂದಿಸಿರುವ ಪ್ರಕಾರ

ಟೆಂಡರ್ ವಿವರಗಳು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಲಭ್ಯವಿದ್ದು, (https://www.kppp.karnataka.gov.in) ದಿನಾಂಕ: 06.01.2025 ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (https://www.kppp.karnataka.gov.in) ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.

ಸಹಿ/-
ಕಾರ್ಯಪಾಲಕ ಅಭಿಯಂತರರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ.
DIPR/CP/4120/Zen/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU-22/23-24/2560/2024-25 ದಿನಾಂಕ:04.01.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಆರ್ ರಾವುಲ್ ಬೌರಾ ಮತ್ತು ಇತರರು, ನಂ.5, ಲಾವಣ್ಯ ಚಿತ್ರಮಂದಿರ ಶಿವಣ್ಣ ಶೆಟ್ಟಿ ಗಾರ್ಡನ್, ಬೆಂಗಳೂರು-560 042	ಯಲಹಂಕ	ಜಾಲ	ಬೆಟ್ಟ ಹಲಸೂರು	349/3	1ಎ-26ಗುಂ (0ಎ-6.50ಗುಂ ಖರಾಬು ಹೊರತುಪಡಿಸಿ)	ವ್ಯವಸಾಯ ವಲಯ	ವಸತಿ ಉಪಯೋಗ
					349/8	0ಎ-12ಗುಂ		
					ಒಟ್ಟು	1ಎ-38ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಈ ಜಮೀನಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಮಿಶ್ರ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗಳನ್ನು ಕೈಗೊಂಡಿದ್ದಲ್ಲಿ ಯೋಜಿತ ಬೆಳವಣಿಗೆಗೆ ಬೇಕಾಗುವ ಮೂಲಸೌಕರ್ಯಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃಭಾಜನಿನಿ, ಐಬಿಸಿ,
ನಿಮಪೋ ವಿಭಾಗ ರಾಂಪೂರ (ಪ.ಅ). ತಾ:ಸಿಂದಗಿ, ಜಿ:ವಿಜಯಪುರ.
ದೂರವಾಣಿ ಸಂ:08488-224328.ಇ-ಮೇಲ್:kbjnleerampur@gmail.com.
ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ-1/2024-25/2230 ದಿನಾಂಕ:02.01.2025

INFORMATION QUOTATION NOTIFICATION

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ನಿಯಮಾವಳಿಗಳಿಗೆ ಒಳಪಟ್ಟು ನೋಂದಾಯಿತ ಸಮಾಲೋಚಕರಿಂದ ಕೆಳಕಾಣಿಸಿದ ಕೆಲಸಕ್ಕೆ ಕೋಟೇಶನ್ ಗಳನ್ನು ಕರೆಯಲಾಗಿದೆ ಕೋಟೇಶನ್ ಗಳನ್ನು ಏಕಮಾತ್ರ ಲಕೋಟೆ ಪದ್ಧತಿಯಲ್ಲಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಆನ್ ಲೈನ್ ಮೂಲಕ ವೆಬ್ ಸೈಟ್ http://kppp.karnataka.gov.in ನಲ್ಲಿ ಮಾಹಿತಿ ಪಡೆಯುವುದು.

Sl.No	DESCRIPTION OF ITEM	QTY
1	Consultancy services for Preparation of DPR, Estimate and DTP for the work of : Survey, Investigation,Design of SCADA and PLC system for pumps which are automated to operate remotely and autonomously to maintain the required discharge in canal network of Indi Lift Canal including PLC system for Pump house and Sub station for monitoring basic parameters such as current, voltage, frequency and integration same with the master control station at DC, design of PLC and SCADA system for canal net work management system from ch: 0.00 to 97.300 km (including main canal/distributaries/ laterals/ DPO's) and from ch: 97.300 to 147.00 of Indi Lift Canal (including Main canal/Distry Head Regulators). The scope includes design of cross regulators/escapes in required chainages to maintain the required head main canal, vetting the proposal from SCADA experts, clearing the proposals from competent authority and TSC complete as directed by the Engineer in Charge.	01 Job Work

1) http://kppp.karnataka.gov.in ವೆಬ್ ಸೈಟನಲ್ಲಿ ಕಾಮಗಾರಿ / ಕೆಲಸಗಳಿಗೆ ಕೋಟೇಶನ್ ಸಲ್ಲಿಸುವ ದಿನಾಂಕ: 02-01-2025 ರಿಂದ 10-01-2025 ರ ಸಾಯಂಕಾಲ 4.30 ಗಂಟೆವರೆಗೆ
2) ಭರ್ತಿಗೊಳಿಸಿದ ಕೋಟೇಶನ್ ಸಲ್ಲಿಸುವ ಕೊನೆಯ ದಿನಾಂಕ: 10-01-2025 ಸಾಯಂಕಾಲ 4.30 ಗಂಟೆವರೆಗೆ
3) The rates shall be exclusive of GST and including transportation & delivery at site etc
4) ಕೋಟೇಶನ್ ಗಳನ್ನು ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ ಕಚೇರಿಯಲ್ಲಿ ದಿನಾಂಕ: 13-01-2025 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.
5) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ ಇವರ ಕಚೇರಿಯ ವೇಳೆಯಲ್ಲಿ ಪಡೆಯಬಹುದು ಅಥವಾ http://kppp.karnataka.gov.in ವೆಬ್ ಸೈಟಿನಿಂದ ಪಡೆಯಬಹುದಾಗಿದೆ.

ಸಹಿ/- (ಜಿ.ಎ.ನಾಗರಾಳ) ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ,ಐಬಿಸಿ ನಿಮಪೋ ವಿಭಾಗ ರಾಂಪೂರ(ಪಅ)
ವಾಸಾಸಂಇ/ವಿಜಯಪುರ/575/ಕೆಎಸ್‌ಎಂಸಿಎ/2024-25

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಸಾರಿಗೆ ಸಂಸ್ಥೆ ಹಿಂದೆಂದೂ ಕಂಡು ಕೇಳರಿಯದ ರೀತಿಯಲ್ಲಿ ಲಾಭದಲ್ಲಿದೆ ಎಂದು ಸುಳ್ಳು ಹೇಳಿದ ಸಚಿವ ರಾಮಲಿಂಗಾರೆಡ್ಡಿಯವರೇ, ನಿಮ್ಮ ದುರಾಡಳಿತದಿಂದ ಬಸ್ ನಿಲ್ದಾಣವನ್ನು ಲೀಸ್ ಗಿಡುವ ಹೀನಾಯ ಸ್ಥಿತಿಗೆ ಇಂದು ಕೆಎಸ್ಆರ್‌ಟಿಸಿ ತಲುಪಿದೆ. ಒಂದೆಡೆ ಶೇ.15 ಟಿಕೆಟ್ ದರ ಹೆಚ್ಚಳಕ್ಕೆ ರಾಜ್ಯ ಸಚಿವ ಸಂಪುಟ ಅನುಮತಿ ನೀಡಿದರೆ, ಮತ್ತೊಂದೆಡೆ 2 ಸಾವಿರ ಕೋಟಿ ರುಪಾಯಿ ಸಾಲ ಪಡೆಯಲು ಸಾರಿಗೆ ಸಂಸ್ಥೆಗೆ ಸರಕಾರ ಅನುಮತಿ ನೀಡಿದೆ. ಈಗ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆಂದು ಕಟ್ಟಿರುವ ಕಟ್ಟಡವನ್ನು ಲೀಸ್‌ಗೆ ನೀಡುತ್ತಿದೆ. ಅವೈಜ್ಞಾನಿಕ ಯೋಜನೆಗಳ ಮೂಲಕ ಸಾರಿಗೆ ಸಂಸ್ಥೆಯನ್ನು ದಿವಾಳಿ ಮಾಡಿದ ಕುಖ್ಯಾತಿ ಕಾಂಗ್ರೆಸ್‌ಗೆ ಸಲ್ಲುತ್ತದೆ.

ಗುರುರಾಜ, ಬೀದರ್

ಟ್ವೀಟ್ ಮಾಡೋದಲ್ಲ, ರಸ್ತೆಗೆ ಇಳಿದು ಹೋರಾಟ ನಡೆಸಿ. ಅಡ್ಜಸ್ಟ್‌ಮೆಂಟ್ ರಾಜಕಾರಣದಿಂದ ಲಾಭವಿಲ್ಲ.

ಬಸ್ ಪ್ರಯಾಣ ದರ ಏರಿಕೆಗೆ ವಿಜಯೇಂದ್ರ ಟೀಕೆ | ಮಹಿಳೆಯರಿಗೆ ಉಚಿತ- ಪುರುಷರಿಗೆ ಹೊರೆ ಖಚಿತ | ರಾಜ್ಯ ಕಾಂಗ್ರೆಸ್‌ನಲ್ಲಿ ಮುಸುಕಿನ ಗುದ್ದಾಟ ಆರಂಭ: ಬಿವೈವಿ

ಆರ್ಥಿಕ ಸ್ಥಿತಿ: ಶ್ವೇತಪತ್ರಕ್ಕೆ ಆಗ್ರಹ

ಶಿವಮೊಗ್ಗ: ರಾಜ್ಯದಲ್ಲಿ ಬಸ್ ಪ್ರಯಾಣ ದರ ಏರಿಕೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತೀವ್ರವಾಗಿ ವಿರೋಧಿಸಿದ್ದಾರೆ.

ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬಸ್ ಪ್ರಯಾಣದರವನ್ನು ಸರಕಾರವು ಶೇ 15ರಷ್ಟು ಹೆಚ್ಚಿಸಿದೆ. ಶಕ್ತಿ ಯೋಜನೆಗೆ ಹಣ ಹೊಂದಿಸಲು ಸಾಧ್ಯವಾಗದುದೇ ಇದಕ್ಕೆ ಕಾರಣ. ಸಾರಿಗೆ ಸಂಸ್ಥೆಗಳು ಸಾವಿರಾರು ಕೋಟಿ ನಷ್ಟ ಅನುಭವಿಸುತ್ತಿವೆ. ಸಾರಿಗೆ ಸಂಸ್ಥೆ ಮುಚ್ಚಿಹಾಕುವ ದುಸ್ಥಿತಿ ಬಂದಿದೆ. ಮಹಿಳೆಯರಿಗೆ ಉಚಿತ- ಪುರುಷರಿಗೆ ಅದರ ಹೊರೆ ಖಚಿತ ಎಂಬಂತೆ ಸರಕಾರವು ಬರೆ ಹಾಕುತ್ತಿದೆ ಎಂದು ಆರೋಪಿಸಿದರು.

ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಸರಕಾರ ಇದ್ದು ಹಣಕಾಸಿನ ಪರಿಸ್ಥಿತಿ ತೀವ್ರ ಹದಗೆಟ್ಟಿದೆ. ಅತಿಹೆಚ್ಚು ಬಜೆಟ್ ಮಂಡಿಸಿದ ಸಿದ್ದರಾಮಯ್ಯರಿಗೆ ಇಲ್ಲಿ ಹಣಕಾಸು ಇಲಾಖೆಯನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯದ ಬಡವರು, ರೈತರ ಮೇಲೆ ಬರೆ ಎಳೆಯುತ್ತಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಮುಖ್ಯಮಂತ್ರಿ ಶ್ವೇತಪತ್ರ ಹೊರಡಿಸಬೇಕೆಂದು ವಿಜಯೇಂದ್ರ ಒತ್ತಾಯಿಸಿದರು.

ಸಿಎಂ ವಿರುದ್ಧ ಸಮರ ಆರಂಭ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಕಾಂಗ್ರೆಸ್ಸಿನಲ್ಲಿ ಈಗಾಗಲೇ ಯುದ್ಧ ಆರಂಭವಾಗಿದೆ ಎಂದ ಅವರು, ನಾನು ಭವಿಷ್ಯ ನುಡಿಯುತ್ತೇನೋ, ನನ್ನ ರಾಜಕೀಯ ಲೆಕ್ಕಾಚಾರವೋ ಎಂಬುದು ಮುಂದಿನ ದಿನಗಳಲ್ಲಿ ಗೊತ್ತಾಗಲಿದೆ. ಒಂದಂತೂ ಸತ್ಯ. ರಾಜ್ಯ ಸರಕಾರದಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದಕ್ಕೆ ಡಿ.ಕೆ.ಶಿವಕುಮಾರ್ ಅನುಪಸ್ಥಿತಿಯಲ್ಲಿ ನಡೆದ ಸಿದ್ದರಾಮಯ್ಯ ಪ್ರಾಯೋಜಿತ ಔತಣಕೂಟವೇ ಸಾಕ್ಷಿ ಎಂದರು. ಸಿದ್ದರಾಮಯ್ಯ ಸಿಎಂ ಸ್ಥಾನ ಬಿಟ್ಟುಕೊಡಲು ಸಿದ್ಧರಿಲ್ಲ; ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಸಲು ಅವರ ವಿರೋಧಿ ಬಣಗಳೂ ಸಿದ್ಧವಿಲ್ಲ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ವಿಶ್ಲೇಷಿಸಿದರು.

ಉಗ್ರಾಣ ನಿಗಮದ ಮಾಜಿ ಅಧ್ಯಕ್ಷ ಮತ್ತು ಬಿಜೆಪಿ ಮುಖಂಡರಾದ ಬಳಿಗಾರ್ ನಿಧನರಾದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಶಿಕಾರಿಪುರಕ್ಕೆ ಬರಬೇಕಿತ್ತು. ಹೀಗಾಗಿ ಇವತ್ತುಕಲಬುರಗಿಗೆ ತೆರಳಲಾಗಿಲ್ಲ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಕರ್ನಾಟಕದ ಸಮಸ್ಯೆಗೆ ಶೀಘ್ರವೇ ಪರಿಹಾರ

ಹೈಕಮಾಂಡಿಗೆ ಕರ್ನಾಟಕವೊಂದೇ ಅಲ್ಲ; ಮಹಾರಾಷ್ಟ್ರ ಸೇರಿ ಅನೇಕ ಚುನಾವಣೆಗಳು ನಡೆದಿವೆ. ಇನ್ನು ಕರ್ನಾಟಕವನ್ನು ಆದ್ಯತೆಯಿಂದ ಪರಿಗಣಿಸಲಿದ್ದಾರೆ. ನಾನು ರಾಷ್ಟ್ರೀಯ ಅಧ್ಯಕ್ಷರಾದ ನಡ್ಡಾ, ಗೃಹ ಸಚಿವಅಮಿತ್ ಶಾ ಅವರಿಗೂ ಮನವಿ ಮಾಡಿದ್ದೇನೆ. ರಾಜ್ಯಾಧ್ಯಕ್ಷನಾಗಿ ರಾಜ್ಯದ ವಿದ್ಯಮಾನ, ವಾಸ್ತವಿಕ ಪರಿಸ್ಥಿತಿಯನ್ನು ಅವರ ಗಮನಕ್ಕೆ ತರುವ ಕೆಲಸ ಮಾಡಿದ್ದೇನೆ. ಅತಿಶೀಘ್ರವೇ ಈ ಎಲ್ಲ ಸಮಸ್ಯೆಗಳಿಗೆ ಇತಿಶ್ರೀ ಹಾಕುವ ಕೆಲಸವನ್ನು ವರಿಷ್ಠರು ಮಾಡುತ್ತಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಿಯಾಂಕ್ ರಾಜೀನಾಮೆ ನೀಡಲಿ

ಸಚಿನ್ ಪಾಂಚಾಳ ಅವರ ಆತ್ಮಹತ್ಯೆ ಸಂಬಂಧ ಕಲಬುರಗಿಯಲ್ಲಿ ಬಿಜೆಪಿ ವತಿಯಿಂದ ಪ್ರಿಯಾಂಕ ಖರ್ಗೆ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗಿದೆ.. ಪ್ರಿಯಾಂಕ್ ಆಪ್ತ ಮಿತ್ರ, ಕಾಂಗ್ರೆಸ್ ಮುಖಂಡ ರಾಜು ಕಪನೂರ್ ಬೆದರಿಕೆಯಿಂದ ಆತ್ಮಹತ್ಯೆ ನಡೆದಿದೆ. ಮೃತರ ಕುಟುಂಬದ ಕೋರಿಕೆಯಂತೆ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ ಎಂದ ಬಿಜೆಪಿ ರಾಜ್ಯಾಧ್ಯಕ್ಷರು, ಹಿಂದೂ- ಬಿಜೆಪಿ ಮುಖಂಡರ ಹತ್ಯೆಗೆ ಮಹಾರಾಷ್ಟ್ರದಿಂದ ಸುಪಾರಿ ಕಿಲ್ಲರ್‌ಗಳಿಗೆ ಕುಮ್ಮಕ್ಕು ಕೊಡಲಾಗಿದೆ ಎಂದು ಆರೋಪಿಸಿದರು. ಸಚಿವ ಪ್ರಿಯಾಂಕ್ ಖರ್ಗೆ ಪ್ರಾಮಾಣಿಕರಾಗಿದ್ದರೆ ಸಿಬಿಐ ತನಿಖೆಗೆ ಕೊಡಿಸಲಿ. ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಜಾರ್ಜ್ ರಾಜೀನಾಮೆ ನೀಡಿದ ಮಾದರಿಯಲ್ಲಿ ರಾಜೀನಾಮೆ ಕೊಟ್ಟು ಸಿಬಿಐ ತನಿಖೆ ಎದುರಿಸಿ ಎಂದು ವಿಜಯೇಂದ್ರ ಕಿವಿಮಾತು ಹೇಳಿದರು.

ಭೋಜನಕೂಟದ ಸಭೆ ರಾಜಕೀಯ ಪ್ರೇರಿತ: ಬಜೆಟ್ ಬಳಿಕ ಸಿದ್ದರಾಮಯ್ಯನವರು ರಾಜೀನಾಮೆ ಕೊಡುವ ಮತ್ತು ಆ ಸಂಬಂಧ ಕೇಂದ್ರದಲ್ಲಿ ಚರ್ಚೆ ನಡೆದಿರುವ ಬಗ್ಗೆ ಮಾಹಿತಿ ಹೊರಬರುತ್ತಿದೆ. ಬಜೆಟ್ ನಂತರದಲ್ಲಿ ಸಿದ್ದರಾಮಯ್ಯನವರು ರಾಜೀನಾಮೆ ಕೊಡಬೇಕಾಗುವ ಕಾರಣಕ್ಕೆ ಒಂದು ರಾಜಕೀಯ ದಾಳವನ್ನು ಉರುಳಿಸಲು ಮುನ್ನುಡಿ ಬರೆದಿದ್ದಾರೆ ಎಂದು ವಿಜಯೇಂದ್ರ ಸ್ಪಷ್ಟವಾಗಿ ಹೇಳಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿಯಾದ ಸಂಸದ ಚೌಟ
ಕರಾವಳಿ ಭಾಗದಲ್ಲಿ ಉಗ್ರ ಚಟುವಟಿಕೆ ನಿಗ್ರಹಕ್ಕೆ ಕ್ರಮ

ಮಂಗಳೂರಿನಲ್ಲಿ ಎನ್‌ಐಎ ಘಟಕ ಸ್ಥಾಪನೆಗೆ ಮನವಿ

ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವರನ್ನು ಭೇಟಿಮಾಡಿದ ವೇಳೆ ತುಳುನಾಡಿನ ಜನಪ್ರಿಯ ಕ್ರೀಡೆ ಕಂಬಳದ ಆಕರ್ಷಕ ಚಿತ್ರವನ್ನು ಸಂಸದ ಬ್ರಿಜೇಶ್ ಚೌಟ ಉಡುಗೊರೆಯಾಗಿ ನೀಡಿದರು.

ಮಂಗಳೂರು: ಉಗ್ರ ಚಟುವಟಿಕೆ ನಿಗ್ರಹಕ್ಕೆ ಮಂಗಳೂರಿನಲ್ಲಿ ಶೀಘ್ರವೇ ಎನ್‌ಐಎ ಘಟಕ ಸ್ಥಾಪಿಸುವಂತೆ ಕೋರಿ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಶುಕ್ರವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನವದೆಹಲಿಯಲ್ಲಿ ಮೊದಲ ಬಾರಿಗೆ ಭೇಟಿಯಾಗಿ ಮಹತ್ವದ ಚರ್ಚೆ ನಡೆಸಿದ್ದಾರೆ.

ಕರಾವಳಿ ತೀರದ ಸುರಕ್ಷತೆ ದೃಷ್ಟಿಯಿಂದ ಭಾರತೀಯ ಕರಾವಳಿ ಕಾವಲುಪಡೆ ಅಕಾಡೆಮಿ ಸ್ಥಾಪನೆ, ದಕ್ಷಿಣ ಕನ್ನಡದಲ್ಲಿ ಸೈನಿಕ ಶಾಲೆ-ಮಿಲಿಟರಿ ನೆಲೆ ಸ್ಥಾಪನೆ, ಮಂಗಳೂರು-ಬೆಂಗಳೂರು ನಡುವೆ ರೈಲು ಹಾಗೂ ರಸ್ತೆ ಸಂಪರ್ಕವನ್ನು ಮತ್ತಷ್ಟು ಸುಗಮಗೊಳಿಸುವುದು ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆ ಸಮಗ್ರ ಅಭಿವೃದ್ಧಿ ಮತ್ತು ಸುರಕ್ಷತೆ ಹೆಚ್ಚಳಕ್ಕೆ ಸಂಸದ ಚೌಟ ಗೃಹ ಸಚಿವರಿಗೆ ಮನವಿ ಮಾಡಿದ್ದಾರೆ. ಇದಕ್ಕೆ ಅಮಿತ್ ಶಾ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಕರಾವಳಿಯಲ್ಲಿ ಹೆಚ್ಚಿದ ಉಗ್ರರ ಚಟುವಟಿಕೆ: ಮಂಗಳೂರು ಸೇರಿ ಕರಾವಳಿಯಲ್ಲಿ ಎಸ್‌ಡಿಪಿಐ, ಪಿಎಫ್‌ಐನಂಥ ಮತಾಂಧ ಸಮಾಜಘಾತುಕ ಸಂಘಟನೆಗಳ ಮೂಲಕ ಸ್ಲೀಪರ್‌ಸೆಲ್‌ನಂತಿರುವ ಉಗ್ರ ಚಟುವಟಿಕೆ ಮಟ್ಟ ಹಾಕಬೇಕಾದರೆ ಕರಾವಳಿಯಲ್ಲಿ ಎನ್‌ಐಎ ಘಟಕ ಸ್ಥಾಪನೆ ಅತ್ಯಂತ ಅಗತ್ಯ. ಈ ಹಿಂದೆ ಸಿಎಎ ಪ್ರತಿಭಟನೆ ಹೆಸರಿನಲ್ಲಿ ನಡೆಸಿದ್ದ ಮೂಲಭೂತವಾದಿಗಳ ಗಲಭೆ ಕೂಡ ಕರಾವಳಿಯ ಭದ್ರತೆಗೆ ಎದುರಾದ ಸವಾಲಿಗೆ ಸ್ಪಷ್ಟ ನಿದರ್ಶನ. ಹೀಗಾಗಿ ಮಂಗಳೂರಿನಲ್ಲಿ ಎನ್‌ಐಎ ಘಟಕ ಸ್ಥಾಪನೆಯಾದರೆ ಈ ಭಾಗದಲ್ಲಿ ಉಗ್ರ ಚಟುವಟಿಕೆಯ ಮೂಲೋತ್ಪಾಟನೆ ಜತೆಗೆ ಕರಾವಳಿಯ ಸುರಕ್ಷತೆ ಹೆಚ್ಚಿಸುವುದಕ್ಕೂ ಅನುಕೂಲವಾಗಲಿದೆ ಎಂದು ಮನವಿಯಲ್ಲಿ ಕ್ಯಾ. ಚೌಟ ತಿಳಿಸಿದ್ದಾರೆ.

ಸೈನಿಕ ಶಾಲೆ - ಮಿಲಿಟರಿ ನೆಲೆಗೆ ವಿನಂತಿ: ಶೈಕ್ಷಣಿಕವಾಗಿ ವಿಶ್ವದರ್ಜೆ ಮನ್ನಣೆ ಪಡೆದಿರುವ ಮಂಗಳೂರು ಭಾಗದಲ್ಲಿ ದೇಶಸೇವೆಗೆ ಮುಂದಾಗಲು ಯುವಕರನ್ನು ಪ್ರೋತ್ಸಾಹಿಸಲು ಮತ್ತು ಹಾಗೂ ವಿದ್ಯಾರ್ಥಿಗಳಲ್ಲಿ ದೇಶಾಭಿಮಾನ, ಶಿಸ್ತು, ನಾಯಕತ್ವ ಗುಣ ಬೆಳೆಸಲು ಸೈನಿಕ ಶಾಲೆ ಸ್ಥಾಪನೆಯಾಗಬೇಕು. ಕರಾವಳಿ ತೀರದ ರಕ್ಷಣಾ ಸಾಮರ್ಥ್ಯ ಹಾಗೂ ರಾಷ್ಟ್ರೀಯ ಭದ್ರತೆ ಹೆಚ್ಚಿಸುವ ದೃಷ್ಟಿಯಿಂದ ಮಿಲಿಟರಿ ನೆಲೆಯನ್ನು ಮಂಗಳೂರಿನಲ್ಲಿ ಸ್ಥಾಪಿಸಬೇಕು ಎಂದು ಸಂಸದ ಚೌಟ ಕೇಂದ್ರ ಗೃಹ ಸಚಿವರನ್ನು ವಿನಂತಿಸಿದ್ದಾರೆ. ಅಲ್ಲದೆ, ಸಹಕಾರ ಬ್ಯಾಂಕಿಂಗ್ ವಲಯದ ಅಭಿವೃದ್ಧಿಗೆ ಉತ್ತೇಜನ ನೀಡುವುದರಿಂದ ಸಣ್ಣ ಉದ್ಯಮಿಗಳು ಮತ್ತು ಕೃಷಿಕರಿಗೆ ಹೆಚ್ಚಿನ ಆರ್ಥಿಕ ನೆರವು ದೊರೆಯಲಿದೆ ಎಂಬುದನ್ನೂ ಕೇಂದ್ರದ ಗಮನಕ್ಕೆ ತಂದಿದ್ದಾರೆ.

ಸಚಿನ್ ಆತ್ಮಹತ್ಯೆ ಪ್ರಕರಣ: ಕಲಬುರಗಿಯಲ್ಲಿ ಬಿಜೆಪಿ ಭಾರಿ ಪ್ರತಿಭಟನೆ | ಗಾಳಿ ಬಿಟ್ಟರೆ ಎಲ್ಲದಕ್ಕೂ ತೆರಿಗೆ ಹಾಕಿದ ಸರಕಾರ

ನ್ಯಾಯ ಕೊಡಿಸುವವರೆಗೆ ಬಿಜೆಪಿ ವಿರಮಿಸುವುದಿಲ್ಲ

ಕಲಬುರಗಿ: ರಾಜ್ಯದ ಕಾಂಗ್ರೆಸ್ ಸರಕಾರ ಗಾಳಿ ಒಂದನ್ನು ಬಿಟ್ಟು ಬೇರೆಲ್ಲದಕ್ಕೂ ತೆರಿಗೆ ಹಾಕಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಸಂಬಂಧ ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿ ಕಲಬುರಗಿಯ ಜಗತ್ ಸರ್ಕಲ್ ಬಳಿ ಇಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಅಶೋಕ್, ಹಾಲು, ಪೆಟ್ರೋಲ್, ಆಲ್ಕೋಹಾಲ್, ವಿದ್ಯುತ್, ಬಸ್ ಪ್ರಯಾಣ ಸೇರಿ ಎಲ್ಲ ದರಗಳನ್ನು ಹೆಚ್ಚಿಸಿದ್ದಾರೆ ಎಂದು ಆಕ್ಷೇಪಿಸಿದರು.

ಸಚಿನ್ ಆತ್ಮಹತ್ಯೆಗೆ ಕಾರಣನಾದ ರಾಜು ಕಪನೂರ್ ಗೂಂಡಾ. ಆತನನ್ನು ಕಾಂಗ್ರೆಸ್ಸಿಗರು ಗೂಂಡಾ ಕಾಯಿದೆಯಿಂದ ತೆಗೆಸಿದ್ದಾರೆ.

ಈಗ ನಮ್ಮವನಲ್ಲ ಎನ್ನುತ್ತಿದ್ದಾರೆ ಎಂದು ದೂರಿದ ಅಶೋಕ, ಆರೋಪಿಗಳಲ್ಲಿ ಮೊದಲ ಮೂವರು ಕಾಂಗ್ರೆಸ್ಸಿಗರು ಎಂದು ಗಮನ ಸೆಳೆದರು. ಈ ಭ್ರಷ್ಟ, ಆತ್ಮಹತ್ಯೆಗಳಿಗೆ ಕಾರಣವಾಗುವ ಸರಕಾರಕ್ಕೆ ತಕ್ಕ ಪಾಠ ಕಲಿಸಬೇಕಿದೆ. ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ನ್ಯಾಯ ಕೊಡಿಸುವವರೆಗೆ ಬಿಜೆಪಿ ವಿರಮಿಸುವುದಿಲ್ಲ ಎಂದು ಪ್ರಕಟಿಸಿದರು.

ಸಂವಿಧಾನ ದುರುಪಯೋಗ: ಮಾತನಾಡಿ, ಪ್ರಿಯಾಂಕ್ ಖರ್ಗೆಯವರು ಸಚಿವರಾಗಲು ಮೆರಿಟ್ ಕೋಟಾ ಇತ್ತೇ ಅಥವಾ ಪೇಮೆಂಟ್ ಕೋಟಾ ಇತ್ತೇ ಎಂದು ಪ್ರಶ್ನಿಸಿದರು. ಇದು ಬಾಬಾಸಾಹೇಬ ಅಂಬೇಡ್ಕರರು ಕೊಟ್ಟ ಸಾಂವಿಧಾನಿಕ ಹಕ್ಕಿನ ದುರುಪಯೋಗ ಎಂದು ಆಕ್ಷೇಪಿಸಿದರು.

ಗುತ್ತಿಗೆದಾರ ಸಚಿನ್ ಪಾಂಚಾಳ್ ಪ್ರಕರಣ ಸಂಬಂಧ ಕಲಬುರಗಿಯಲ್ಲಿ ಬಿಜೆಪಿ ಶನಿವಾರ ನಡೆಸಿದ ಬೃಹತ್ ಹೋರಾಟದಲ್ಲಿ ಸಹಸ್ರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸುಪಾರಿ ರಾಜಕಾರಣ ನಡೆಯದು: ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಮಾತನಾಡಿ, ರಾಜ್ಯದಲ್ಲಿ ಸುಪಾರಿ ರಾಜಕಾರಣ ನಡೆಯಲು ಸಾಧ್ಯವಿಲ್ಲ; ಇಲ್ಲಿ ಸಂವಿಧಾನಬದ್ಧ ರಾಜಕಾರಣ ಮಾತ್ರ ನಡೆಯಬೇಕು ಎಂದು ಆಗ್ರಹಿಸಿದರು. ಸುಪಾರಿ ರಾಜಕಾರಣ ಮಾಡುವವರಿಗೆ ಕಲಬುರಗಿಯ ಜನತೆ ಅವಕಾಶ ಕೊಡುವುದಿಲ್ಲ ಎಂದು ಘೋಷಿಸಿದರು. ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ವಿಧಾನಪರಿಷತ್ ಸದಸ್ಯ ರವಿಕುಮಾರ, ಮೇಲ್ಮನೆ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಮಾಜಿ ಸಂಸದ ಡಾ. ಉಮೇಶ್ ಜಾಧವ್ ಮೊದಲಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ತಂದೆಯ ಕೊಲೆ: ಮಗನ ಸೆರೆ

ಹಾಸನ: ತಂದೆಯನ್ನೇ ಕೊಲೆಮಾಡಿ ಹೃದಯಾಘಾತ ಎಂದು ಬಿಂಬಿಸಿದ್ದ ಆರೋಪಿಯನ್ನು ಪೊಲೀಸರು ಸಕಲೇಶ ಪುರದ ಲಿಂಗಾಪುರ ಗ್ರಾಮದಲ್ಲಿ ಬಂಧಿಸಿದ್ದಾರೆ. ಶಶಿಧರ್ (58) ಮಗನಿಂದ ಕೊಲೆಗೀಡಾದ ವ್ಯಕ್ತಿ. ದಿನೇಶ್ ಬಂಧಿತ ಆರೋಪಿ. ಕಂಠಪೂರ್ತಿ ಕುಡಿದು ಬಂದು ದಿನೇಶ್ ತಂದೆ ಜೊತೆ ಜಗಳವಾಡಿ ಒದ್ದಿದ್ದ. ಈ ವೇಳೆ ಶಶಿಧರ್ ಕುಸಿದು ಬಿದ್ದಿದ್ದರು. ನಂತರ ದಿನೇಶ್, ತಂದೆಗೆ ಹೃದಯಾಘಾತವಾಗಿದೆ ಎಂದು ಅರೇಹಳ್ಳಿ ಆಸ್ಪತ್ರೆಗೆ ದಾಖಲಿಸಿದ್ದ. ಆದರೆ ಶಶಿಧರ್ ಮೃತಪಟ್ಟಿದ್ದನ್ನು ಆಸ್ಪತ್ರೆಯಲ್ಲಿ ವೈದ್ಯರು ದೃಢಪಡಿ ಸಿದ್ದರು. ಬಳಿಕ ಮೃತದೇಹವನ್ನು ಅಂತ್ಯಸಂಸ್ಕಾರಕ್ಕೆ ತಂದಿದ್ದಾಗ ತಂದೆ ಜೊತೆ ಜಗಳವಾಡಿದ್ದನ್ನು ನೋಡಿದ್ದ ಗ್ರಾಮಸ್ಥರು ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರು. ಬಳಿಕ ದಿನೇಶ್ ವಿರುದ್ಧ ಆತನ ತಾಯಿ ಅರೇಹಳ್ಳಿ ಪೊಲೀಸರಿಗೆ ದೂರು ನೀಡಿದ್ದರು. ಪೊಲೀಸರು ಆರೋಪಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಬೈಕ್ ಅಡ್ಡಗಟ್ಟಿ ದಳ ಮುಖಂಡನ ಕೊಲೆ

ಚಿಕ್ಕಬಳ್ಳಾಪುರ: ನಡುರಸ್ತೆಯಲ್ಲೇ ಮಾರಕಾಸ್ತ್ರಗಳಿಂದ ದಾಳಿಮಾಡಿ ಜೆಡಿಎಸ್ ಮುಖಂಡನೊಬ್ಬನ ಕೊಲೆಗೈದ ಘಟನೆ ತಾಲೂಕಿನ ತಮ್ಮನಾಯಕಹಳ್ಳಿಯ ಗೇಟ್ ಬಳಿ ಶುಕ್ರವಾರ ಸಂಜೆ ನಡೆದಿದೆ. ವೆಂಕಟೇಶ್ (52) ಕೊಲೆಯಾದ ಜೆಡಿಎಸ್ ಮುಖಂಡ. ನಾಯಕನಹಳ್ಳಿ ಗೇಟ್‌ನಿಂದ ವೆಂಕಟೇಶ್ ತಮ್ಮ ಗ್ರಾಮ ತಮ್ಮನಾಯಕನಹಳ್ಳಿ ಗೆ ಬೈಕ್‌ನಲ್ಲಿ ತೆರಳು ತ್ತಿದ್ದರು. ಈ ವೇಳೆ ದುಷ್ಕರ್ಮಿಗಳ ತಂಡ ಅಡ್ಡಗಟ್ಟಿ ಮಚ್ಚು-ಲಾಂಗುಗಳಿಂದ ಮನಸೋ ಇಚ್ಛೆ ಕೊಚ್ಚಿ ಕೊಲೆಗೈದು ಪರಾರಿ ಯಾಗಿದ್ದಾರೆ. ಈ ಮಾರಣಾಂತಿಕ ದಾಳಿಯಲ್ಲಿ ವೆಂಕಟೇಶ್ ಕೈ ತುಂಡಾಗಿದೆ ರಕ್ತದ ಮಡುವಿನಲ್ಲಿ ಒದ್ದಾಡುತ್ತಾ ವೆಂಕಟೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಧಾವಿಸಿದ ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠ ಕುಶಾಲ್ ಚೌಕ್ಸೆ ಹಾಗೂ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಹಂತಕರಿಗಾಗಿ ಕಾರ್ಯಾಚರಣೆ ನಡೆಸಲಾಗಿದೆ.

ಕಾರು ಅಪಘಾತ - ಇಬ್ಬರ ಸಾವು

ಗದಗ್: ಹೈಸ್ಕೂಲ್ ವಿದ್ಯಾರ್ಥಿಗಳು ಚಲಾಯಿಸುತ್ತಿದ್ದ ಕಾರು ಅಪಘಾತಕ್ಕೆ ಗುರಿಯಾಗಿ ಇಬ್ಬರು ಸಾವಿಗೀಡಾಗಿದ್ದು, ಮತ್ತಿಬ್ಬರು ಗಾಯಗೊಂಡಿದ್ದಾರೆ. ಹುಲಕೋಟಿ ರೂರಲ್ ಇಂಜಿನಿಯರಿಂಗ್ ಕಾಲೇಜ್ ಬಳಿ ವೇಗವಾಗಿ ಬಂದ ಕಾರು, ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಮಹಮ್ಮದ್ ಮುಜಾವರ್ (16) ಮತ್ತು ಸಂಜೀವ್ ಗಿರಡ್ಡಿ (16) ಮೃತಪಟ್ಟಿದ್ದಾರೆ. ಗಾಯಗೊಂಡ ಇಬ್ಬರು ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿಕ್ಕಿ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡಿದೆ. ಗದಗ್ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೀತಿಸಿದವಳು ಸಿಗದಿದ್ದಕ್ಕೆ ಆತ್ಮಹತ್ಯೆ

ಸಂಡೂರು(ಬಳ್ಳಾರಿ): ಪ್ರೀತಿಸಿದ ಯುವತಿ ಸಿಗದ ಕಾರಣಕ್ಕೆ ಮನನೊಂದು ಯುವಕನೊಬ್ಬ ಸಂಡೂರಿನಲ್ಲಿ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಹೊಸಪೇಟೆಯ ಪಾಪಿನಾಯಕನಹಳ್ಳಿಯ ಬಾಳೆಹಣ್ಣಿನ ವ್ಯಾಪಾರಿ ನವೀನ್ ಕುಮಾರ್ ಮೃತ ಯುವಕ.

ಯುವತಿ ಕುಟುಂಬಸ್ಥರ ಮೇಲೆ ಹಲ್ಲೆ: ನವೀನ್ ಸಂಡೂರಿನ ಶಿಕ್ಷಕರ ಕಾಲೋನಿಯ ಯುವತಿಯೊಬ್ಬಳನ್ನು ಕಾಲೇಜು ದಿನಗಳಲ್ಲಿ ಪ್ರೀತಿಸಿದ್ದ. ಆಕೆಗೆ ಬಲವಂತವಾಗಿ ತಾಳಿಯನ್ನೂ ಕಟ್ಟಿದ್ದ ಎನ್ನಲಾಗಿದೆ. ಶುಕ್ರವಾರ ಯುವತಿಯ ಮನೆಯ ಬಳಿಗೆ ಬಂದ ನವೀನ್, ಕುಟುಂಬಸ್ಥರೊಂದಿಗೆ ಜಗಳ ತೆಗೆದಿದ್ದ. ಯುವತಿಯನ್ನು ತನ್ನೊಂದಿಗೆ ಕಳುಹಿಸುವಂತೆ ಒತ್ತಾಯಿಸಿದ್ದ. ಈ ವೇಳೆ, ಮಾತಿಗೆ ಮಾತು ಬೆಳೆದು ಯುವತಿ, ಆಕೆಯ ತಾಯಿ ಮತ್ತು ಸೋದರನ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ್ದ. ಯುವತಿಯ ಸೋದರ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾನೆ. ಸಂಡೂರಿನ ಯಶವಂತನಗರದ ಗಂಡಿಮಲಿಯಮ್ಮ ದೇವಸ್ಥಾನದ ಹತ್ತಿರ ಕಾರು ಬಿಟ್ಟು ನವೀನ್ ಪರಾರಿಯಾಗಿದ್ದ. ಆತನಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿರುವಾಗಲೇ, ಶನಿವಾರ ರೈಲ್ವೆ ಹಳಿಯ ಮೇಲೆ ರುಂಡ -ಮುಂಡ ಬೇರ್ಪಟ್ಟ ಸ್ಥಿತಿಯಲ್ಲಿ ನವೀನ್ ಮೃತದೇಹ ದೇಹ ಪತ್ತೆಯಾಗಿದೆ.

ವಿರಾಮ
ಪ್ರತಿ ಭಾನುವಾರ

ಅಂಗನವಾಡಿ ಮೇಲ್ಚಾವಣಿ ಕುಸಿದು ನಾಲ್ವರು ಚಿಣ್ಣರು ಆಸ್ಪತ್ರೆಗೆ ದಾಖಲು

ಕೋಲಾರ: ಅಂಗನವಾಡಿ ಕೇಂದ್ರದ ಮೇಲ್ಚಾವಣಿ ಕುಸಿದು ನಾಲ್ವರು ಮಕ್ಕಳಿಗೆ ಗಾಯಗಳಾಗಿದ್ದು ಯಾವುದೇ ಪ್ರಾಣಾಪಾಯವಾಗಿಲ್ಲ. ಬಂಗಾರಪೇಟೆ ತಾಲೂಕಿನ ದಾಸರಹೊಸಹಳ್ಳಿ ಅಂಗನವಾಡಿ ಕೇಂದ್ರದಲ್ಲಿ ದುರ್ಘಟನೆ ನಡೆದಿದ್ದು ಚಿಣ್ಣರ ಕೈ ಮತ್ತು ತಲೆಗೆ ಗಾಯಗಳಾಗಿವೆ.

ವಿದ್ಯಾರ್ಥಿನಿಯೊಬ್ಬಳಿಗೆ ಕಾಲು ಮುರಿದಿದ್ದು, ಶಸ್ತ್ರಚಿಕಿತ್ಸೆ ಮಾಡಲಾಗಿದೆ. ತಲೆಗೆ ಪೆಟ್ಟು ತಿಂದ ಇನ್ನಿಬ್ಬರನ್ನು ಬಂಗಾರಪೇಟೆಯ ಸರ್ಕಾರಿ ಆಸ್ಪತ್ರೆಯಲಿ ಚಿಕಿತ್ಸೆ ನೀಡಲಾಗುತ್ತಿದೆ.

ಹಳೆಯ ಕಟ್ಟಡ: ಶನಿವಾರ ಬೆಳಗ್ಗೆ 9 ಗಂಟೆಗೆ ಮಕ್ಕಳನ್ನು ಬಿಟ್ಟು ಬಂದ ಕೆಲವೇ ಸಮಯದಲ್ಲಿ ಮೇಲ್ಚಾವಣಿ ಕುಸಿದಿದೆ. ಕಟ್ಟಡ ಹಳೆಯದಾಗಿದ್ದು ಮೇಲ್ಚಾವಣಿ ನೆರೆ ಬಿಟ್ಟಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿರಲಿಲ್ಲ ಎಂಬುದು ಪೋಷಕರ ಆರೋಪವಾಗಿದೆ. 30 ವರ್ಷದ ಹಳೆಯ ಕಟ್ಟಡವನ್ನು 8 ವರ್ಷದ ಹಿಂದೆ ನವೀಕರಣ ಮಾಡಲಾಗಿತ್ತು. ಕಳಪೆ ಕಾಮಗಾರಿಯಿಂದ ಮೇಲ್ಚಾವಣಿ ಕುಸಿದಿದೆ ಎಂದು ಗ್ರಾಮಸ್ಥರು ದೂರಿದರು. ಶಾಸಕ ಎಸ್.ಎನ್.ನಾರಾಯಣಸ್ವಾಮಿ ಮಕ್ಕಳ ಯೋಗಕ್ಷೇಮ ವಿಚಾರಿಸಿ ಪೋಷಕರಿಗೆ ಧೈರ್ಯ ತುಂಬಿದರು. ಸಿಡಿಪಿಓ ಮುನಿರಾಜು ಅವರು ಜಿಲ್ಲಾಡಳಿತ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ವರದಿ ನೀಡಿದ್ದು ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದೆಂದು ಇಲಾಖೆ ಉಪ ನಿರ್ದೇಶಕ ನಾರಾಯಣಸ್ವಾಮಿ ಮಾಹಿತಿ ನೀಡಿದ್ದಾರೆ.



ಶಾಸಕ ನಾರಾಯಣಸ್ವಾಮಿ ಅವರು ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಚಿಕಿತ್ಸೆಗೆ ವ್ಯವಸ್ಥೆ ಮಾಡಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯ

ಇಡೀ ರಾಜ್ಯಕ್ಕೆ ಸಿದ್ದರಾಮಯ್ಯ ಹೆಸರಿಡಿ

ಮೈಸೂರು: ಕೆಆರ್‌ಎಸ್ ರಸ್ತೆಗೆ ಸಿಎಂ ಸಿದ್ದರಾಮಯ್ಯ ಹೆಸರಿಡುವ ವಿಚಾರ ಕುರಿತು ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಇಡೀ ರಾಜ್ಯಕ್ಕೆ ಸಿದ್ದರಾ ಮಯ್ಯ ಹೆಸರಿಡಿ ಎಂದು ಟೀಕಾಪ್ರಹಾರ ನಡೆಸಿದರು.



ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೇವನೂರು ಬಡಾವಣೆಗೆ ಸಿಎಂ ಸಿದ್ದರಾಮಯ್ಯ ಹೆಸರಿಡಲಿ, ಅಷ್ಟೇ ಏಕೆ ಕೆಸರೆ ಗ್ರಾಮಕ್ಕೂ ಸಿದ್ದರಾಮಯ್ಯ ಹೆಸರಿಡಿ, ಎಲ್ಲಾ ಕಡೆಗೂ ಇಡಿ ಎಂದು ವ್ಯಂಗ್ಯವಾಗಿ ಹೇಳಿದರು.

ಪ್ರಿನ್ಸೆಸ್ ರಸ್ತೆ ಬದಲಾವಣೆ ಮುನ್ನಲೆಗೆ ಬಂದಾಗಲೂ ಸಿದ್ದರಾಮಯ್ಯ ಮೌನವಾಗಿದ್ದಾರೆ. ಸಿಎಂ ರಸ್ತೆ ವಿಷಯದಲ್ಲಿ ಜಾಣ ಮೌನವಾಗಿದ್ದಾರೆ ಎಂದು ಅವರು ತಿರುಗೇಟು ನೀಡಿದರು.

ನರ ಹೃದಯದಲ್ಲಿರಬೇಕು: 2006-2007ರಲ್ಲಿ ನಾನು ಮೈಸೂರಿಗೆ ಸಾಕಷ್ಟು ಅನುದಾನ ಕೊಟ್ಟಿದ್ದೇನೆ. ಬಂಬೂಬಜಾರ್‌ನಲ್ಲಿ ಎಷ್ಟು ಮನೆ ಕಟ್ಟಿದ್ದೇನೆ. ರಾಜಕಾಲುವೆ ಕೆಲಸ ಮಾಡಿಸಿದ್ದೇನೆ. ಅದೆಲ್ಲ ನಾನು ಮಾಡಿದ್ದು ಅಂತ ನನ್ನ ಹೆಸರಿಡಿ ಅಂತ ಹೇಳಿದ್ದೀನಾ. ನಾನು ಜನರ ಹೃದಯದಲ್ಲಿರಬೇಕು ಅಷ್ಟೆ ಎಂದು ಹೇಳಿದರು.

ಜನರಿಂದ ಲೂಟಿ: ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಹೆಚ್ಚಳ ಖಂಡಿಸಿದ ಕುಮಾರಸ್ವಾಮಿ, ದರ ಹೆಚ್ಚಳ ಜನಕ್ಕೆ ತಾನೇ? ಮಂತ್ರಿಗಳಿಗೆ ಅಲ್ಲ, ಜನರ ಜೇಬಿಗೆ ಕೈ ಹಾಕಿ ಲೂಟಿ ಮಾಡುತ್ತಿದ್ದಾರೆ. ಜನರಿಗೆ ಕಷ್ಟ ಕೊಟ್ಟು ಖುಷಿ ಪಡುವ ಸರಕಾರ ಇದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂತ್ರಿಗಳ ಅಭಿವೃದ್ಧಿ ಆಗುತ್ತಿದೆ. ಜನಗಳ ಅಭಿವೃದ್ಧಿ ಯಾರಿಗೆ ಬೇಕು. ಎಲ್ಲದಕ್ಕೂ ಕೂಡ ಪರ್ಸಂಟೇಜ್ ಕೇಳುತ್ತಾರೆ. ಆಶ್ರಯ ಮನೆಗಳಿಗೂ ವಿಧಾನಸಭೆಯಲ್ಲಿ ವಸೂಲಿ ಶುರು ಆಗಿದೆಯಂತೆ ಎಂದು ಆರೋಪಿಸಿದರು.

ಆಪರೇಷನ್ ಹಸ್ತ: ಅಪರೇಷನ್ ಹಸ್ತ ವಿಚಾರ ಕುರಿತು ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಅದು ನಡೀತಾನೇ ಇದೆ. ಜೆಡಿಎಸ್‌ನ 18 ಜನ ಶಾಸಕರು ಒಟ್ಟಾಗಿದ್ದಾರೆ. ಅದನ್ನೇ ಹರೀಶ್ ಗೌಡ ಹೇಳಿರೋದು. ಒತ್ತಡ ಅಂತೂ ಇರುತ್ತದೆ. ಅದನ್ನೇ ಬೆಳಗಾವಿಯಲ್ಲಿ ಶಾಸಕರು ಕೂತು ಮಾತನಾಡಿದ್ದಾರೆ ಅಷ್ಟೇ. ನಮ್ಮ ಶಾಸಕರು ನಮ್ಮ ಜೊತೆ ಇರುತ್ತಾರೆ ಎಂದು ಸ್ಪಷ್ಟಪಡಿಸಿದರು.

ಜಿಟಿಡಿ ಜತೆಗಿನ ಭಿನ್ನಾಭಿಪ್ರಾಯ ಶೀಘ್ರ ದೂರ

ಶಾಸಕ ಜಿ.ಟಿ.ದೇವೇಗೌಡರ ನಡುವಿನ ಮುನಿಸಿನ ಕುರಿತು ಪ್ರತಿಕ್ರಿಯಿಸಿ, ಮನೆ ಎಂದ ಮೇಲೆ ಮುನಿಸು ಇರುತ್ತದೆ, ಜೆಡಿಎಸ್ ಮತ್ತು ಜಿಟಿಡಿದು ಗಂಡ- ಹೆಂಡತಿ ಜಗಳದ ರೀತಿ. ನಮ್ಮಲ್ಲಿ ಇರುವ ಭಿನ್ನಾಭಿಪ್ರಾಯ ದೂರ ಆಗುತ್ತವೆ. ಎಲ್ಲವೂ ಸರಿಹೋಗುತ್ತದೆ ಎಂದು ಕೇಂದ್ರ ಸಚಿವರು ಮಾರ್ಮಿಕವಾಗಿ ನುಡಿದರು.

ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಭೇಟಿ | ಅಭಿವೃದ್ಧಿ ಚಟುವಟಿಕೆಗಳ ಪರಿಶೀಲನೆ

ಪ್ರವಾಸಿಗರ ಸ್ನೇಹಿ, ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ

ನರಸಿಂಹರಾಜಪುರ: ಚಿಕ್ಕಮಗಳೂರು ಜಿಲ್ಲೆಯಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆ ಹಾಗೂ ನಿಗಮದ ಜಂಟಿ ಸಹಯೋಗದಲ್ಲಿ ಪ್ರವಾಸಿಗರ ಸ್ನೇಹಿ ಮತ್ತು ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹೇಳಿದರು.

ರಾವೂರು ಗ್ರಾಮದ ಹೊನ್ನೆಕೂಡಿಗೆ ಸೇತುವೆ ಬಳಿ ಮೂರು ಎಕರೆ ಪ್ರದೇಶದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಚಟುವಟಿಕೆಗಳಿಗೆ ಶುಕ್ರವಾರ ಸ್ಥಳ ಪರಿಶೀಲಿಸಿ ಶ್ರೀನಿವಾಸ್ ಮಾತನಾಡಿದರು.

ಮೂಲಸೌಕರ್ಯ ಹೆಚ್ಚಳಕ್ಕೆ ಕ್ರಮ

ಚಿಕ್ಕಮಗಳೂರು ಜಿಲ್ಲೆ ಕುದುರೆಮುಖ, ಮುಳ್ಳಯ್ಯನ ಗಿರಿ ಪ್ರದೇಶಗಳು ಪ್ರವಾಸಿಗರನ್ನು ಆಕರ್ಷಿಸುವ ಹಲವು ನೈಸರ್ಗಿಕ ತಾಣಗಳನ್ನು ಹೊಂದಿದೆ. ಈ ಸ್ಥಳಗಳಲ್ಲಿ ಪ್ರವಾಸೋದ್ಯಮದ ಇಲಾಖೆ ಮತ್ತು ನಿಗಮದಿಂದ ಸಾರಿಗೆ ಸೌಕರ್ಯ ಹೆಚ್ಚಿಸುವುದು,ವಾಸ್ತವ್ಯ ಹೂಡುವವರಿಗೆ ಲಾಡ್ಜ್, ಹೋಟೆಲ್ ಮತ್ತಿತರ ಸೌಲಭ್ಯಗಳನ್ನು ಕೈಗೆಟುಕುವ ದರದಲ್ಲಿ ಅಭಿವೃದ್ಧಿ ಪಡಿಸುವ ಮೂಲಕ ಆದಾಯವನ್ನು ಕಂಡುಕೊಂಡು ಬೇರೆ ಕಡೆ ಪ್ರವಾಸೋದ್ಯಮ ಹೂಡಿಕೆ ಮಾಡುವ ಉದ್ದೇಶ ಹೊಂದಲಾಗಿದೆ ಎಂದರು.

ಕೃಷಿ ಪ್ರವಾಸೋದ್ಯಮ ಜಾರಿ

ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಕೆ.ವಿ. ರಾಜೇಂದ್ರ ಮಾತನಾಡಿ, ರಾಜ್ಯದಲ್ಲಿ 50 ಪ್ರಗತಿಪರ ರೈತರನ್ನು ಗುರುತಿಸಿ ಕೃಷಿ ಪ್ರವಾಸೋದ್ಯಮ (ಅಗ್ರಿ ಟೂರಿಸಂ) ಎಂಬ ಹೊಸ ಕಾರ್ಯಕ್ರಮ ಜಾರಿಗೆ ತರಲಾಗಿದೆ. ಪ್ರವಾಸಿಗರಿಗೆ ಸುರಕ್ಷಿತವಾದ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಲಾಗಿದೆ. ಸಾರ್ವಜನಿಕ -ಖಾಸಗಿ ಸಹಭಾಗಿತ್ವದಲ್ಲಿ ಹೋಟೆಲ್ ಸ್ಥಾಪಿಸುವ ಬಗ್ಗೆ ಚರ್ಚೆ ನಡೆದಿದೆ. ಜಿಲ್ಲೆಯಲ್ಲಿ ಸರ್ಕಾರದಿಂದ ಬರುವ ಅನುದಾನ, ಲ್ಯಾಂಡ್ ಬ್ಯಾಂಕಿನಿಂದ ಬರುವ ಅನುದಾನ ಬಳಸಿಕೊಂಡು ಪ್ರವಾಸೋದ್ಯಮ ಅಭಿವೃದ್ಧಿ ನಿಗಮದೊಂದಿಗೆ ಒಡಂಬಡಿಕೆಯ ಮೂಲಕ 20ಎಕರೆ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲಾಗುವುದು. ಶಿವಮೊಗ್ಗ ವಿಮಾನ ನಿಲ್ದಾಣದಿಂದ ನರಸಿಂಹರಾಜಪುರ ತಾಲ್ಲೂಕು ಬಹಳ ಹತ್ತಿರದಲ್ಲಿರುವುದರಿಂದ ಭದ್ರಾ ಅಣೆಕಟ್ಟು ಮತ್ತು ತುಂಗಾ ಅಣೆಕಟ್ಟು ಇರುವುದರಿಂದ ಹೆಚ್ಚಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಅವಕಾಶವಿದೆ.ಹಾಗಾಗಿ ಪ್ರವಾಸಿಗರಿಗೆ ಕೈಗೆಟಕುವ ರೀತಿಯಲ್ಲಿ, ಸುರಕ್ಷತೆ ಹಾಗೂ ವಾಣಿಜ್ಯ ಚಟುವಟಿಕೆಗಳು ಬೆಳೆಯುವ ರೀತಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲಾಗುವುದು ಎಂದರು.

ರಾಜ್ಯ ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಚಿಕ್ಕಮಗಳೂರು ಜಿಲ್ಲೆಯ ಹೊನ್ನಕೂಡಿಗೆ ಸೇತುವೆ ಪ್ರದೇಶಕ್ಕೆ ಭೇಟಿ ನೀಡಿ ವಿವಿಧ ಚಟುವಟಿಕೆಗಳನ್ನು ಪರಿಶೀಲಿಸಿದರು.

ನರಸಿಂಹರಾಜಪುರದ ಭದ್ರಾ ಹಿನ್ನೀರಿನ ಮೂಲಕ ಲಕ್ಕವಳ್ಳಿಯವರೆಗೆ ಲಾಂಚ್ ಸೌಲಭ್ಯ ಕಲ್ಪಿಸುವ ಬಗ್ಗೆ ಪ್ರವಾಸೋದ್ಯಮ ಇಲಾಖೆಯಿಂದ ಪರಿಶೀಲಿಸಲಾಗುವುದು.

ಎಂ. ಶ್ರೀನಿವಾಸ್, ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ

20 ಎಕರೆ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

ಇಲಾಖೆಗೆ ಸೇರಿದ 20 ಎಕರೆ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ. ಪ್ರವಾಸಿಗರು ಪ್ರಮುಖವಾಗಿ ಐತಿಹಾಸಿಕ ದೇವಾಲಯ, ಸಂಸ್ಕೃತಿ, ಐತಿಹಾಸಿಕ ಸ್ಥಳ, ಟ್ರೆಕ್ಕಿಂಗ್, ಸಾಹಸ ಪ್ರವಾಸೋದ್ಯಮ,ನೈಸರ್ಗಿಕ ಪ್ರವಾಸೋದ್ಯಮ, ಜಲಕ್ರೀಡೆ,ಹೆಲಿ ಟೂರಿಸಂ ಗೆ ಆಕರ್ಷಿತರಾಗುವುದರಿಂದ ಇವುಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಪ್ರವಾಸೋದ್ಯಮ ಇಲಾಖೆಗೆ ಸಿರಿಮನೆ ಫಾಲ್ಸ್, ಕೆಮ್ಮಣ್ಣುಗುಂಡಿ, ಕುದುರೆಮುಖದಲ್ಲೂ ಜಾಗವಿದೆ. ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲೆಯ ಶಾಸಕರು,ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವರ ವಿಶೇಷ ಅನುದಾನ ಮತ್ತು ರಾಜ್ಯ ಪ್ರವಾಸೋದ್ಯಮ ನಿಗಮದ ಅನುದಾನ ಬಳಸುವ ಬಗ್ಗೆ ಚರ್ಚಿಸಲಾಗುವುದು ಎಂದು ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ನುಡಿದರು.

ಕೂಸಗಲ್‌ನಲ್ಲಿ ನೇಚರ್ ಕ್ಯಾಂಪ್

ಕೊಪ್ಪ ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ ನಂದೀಶ್ ಮಾಹಿತಿ ನೀಡಿ,ತಾಲ್ಲೂಕಿನ ಕೂಸಗಲ್ ಗ್ರಾಮದಲ್ಲಿ ನೇಚರ್ ಕ್ಯಾಂಪ್ ಮಾಡಲು ಜಂಗಲ್ ಸಫಾರಿಗೆ ಹೆಚ್ಚಿನ ಅವಕಾಶ, ಹಲವು ನೈಸರ್ಗಿಕ ಆಹ್ಲಾದಕರ ತಾಣಗಳು ಸಹ ಇದೆ. ಭದ್ರಾ ನದಿ ಇರುವುದರಿಂದ ದೋಣಿ ವಿಹಾರ ಮಾಡಲು ಅವಕಾಶವಿದೆ. ರಾವೂರು ಗ್ರಾಮದಲ್ಲಿ ಸಾಹಸಮಯ ಪ್ರವಾಸೋದ್ಯಮಕ್ಕೆ ಅವಕಾಶವಿದೆ. ಆನೆ ಬಿಡಾರ ಆರಂಭಿಸಿದರೆ ಪರಿಸರ ಪ್ರವಾಸೋದ್ಯಮಕ್ಕೂ ಅವಕಾಶವಿದೆ. ಕೂಸಗಲ್ ನಿಂದ ಕಳಸ 25 ಕಿ.ಮೀ ಆಗುವುದರಿಂದ ಹೊರನಾಡು, ಶೃಂಗೇರಿಗೆ ಹೋಗಬಹುದು. ಹಲವು ಪ್ರದೇಶಗಳಲ್ಲಿ ಟ್ರೆಕ್ಕಿಂಗ್ ಗೂ ಅವಕಾಶವಿದೆ ಎಂದರು.

ನರಸಿಂಹರಾಜಪುರ ತಹಶೀಲ್ದಾರ್ ತನುಜಾ ಟಿ. ಸವದತ್ತಿ,ಪಟ್ಟಣ ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಶಾಂತ್ ಶೆಟ್ಟಿ, ಕೆಪಿಸಿಸಿ ಸದಸ್ಯ ಪಿ.ಆರ್. ಸದಾಶಿವ,ಎಸಿಎಫ್ ಪ್ರವೀಣ್ ಕುಮಾರ್, ಪಟ್ಟಣ ಪಂಚಾಯಿತಿ ಸದಸ್ಯ ಮುನಾವರ್ ಪಾಷಾ, ಮಾಜಿ ಸದಸ್ಯ ಸುನಿಲ್ ಕುಮಾರ್ ಮತ್ತಿತರರಿದ್ದರು.

ಜಪಾನಿನಲ್ಲಿ ಎಲ್ಲರೂ ಜಾಡಮಾಲಿಗಳಾಗಲೂ ಸಿದ್ಧರಿರಬೇಕು!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಟೋಕಿಯೋ ನಗರದಲ್ಲಿ ನೀವು ಮನೆ ಮಾಡಿದರೆ, ಅಲ್ಲಿ ನಿಮ್ಮ ಮನೆಯನ್ನು ನೀವೇ ಸ್ವಚ್ಛಗೊಳಿಸಿಕೊಳ್ಳಬೇಕು. ಕಾರಣ ಮನೆಯಲ್ಲಿ ಕೆಲಸ ಮಾಡುವ ಸೇವಕರು ಅಥವಾ ಕೆಲಸದಾಳುಗಳು ಅಲ್ಲಿ ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೂ, ಅವರ ಸೇವೆಯನ್ನು ಪಡೆಯಲು ಸಾಧ್ಯವಾಗದಷ್ಟು ದುಬಾರಿ.

ಹಾಗೇ ಟೋಕಿಯೋದಲ್ಲಿ ಪೌರ ಕಾರ್ಮಿಕರೂ ಇಲ್ಲ. ನಮ್ಮ ಬೀದಿಯನ್ನು ನಾವೇ ಸ್ವಚ್ಛಗೊಳಿಸಿಕೊಳ್ಳಬೇಕು. ನಮ್ಮ ಮನೆ ಸುತ್ತ-ಮುತ್ತಲಿನ ಪ್ರದೇಶ, ಕಾಲುದಾರಿಗಳನ್ನೂ ಆಯಾ ಮನೆಯವರೇ ಗುಡಿಸಿ ಒಪ್ಪವಾಗಿಟ್ಟುಕೊಳ್ಳಬೇಕು. ಅವರು ಅದೆಷ್ಟೇ ಉನ್ನತ ಹುದ್ದೆಯಲ್ಲಿರಬಹುದು, ಈ ವಿಷಯದಲ್ಲಿ ಯಾರೂ ತಮ್ಮ ಅಂತಸ್ತುಗಳನ್ನು ಮೆರೆಯುವುದಿಲ್ಲ. ಅಷ್ಟಕ್ಕೂ ಅವರ ಮನೆಯನ್ನು ಬೇರೆಯವರು ಬಂದು ಸ್ವಚ್ಛಗೊಳಿಸಿ ಹೋಗುವುದಿಲ್ಲ. ಕಾರಣ ಅಲ್ಲಿ ಪೌರ ಕಾರ್ಮಿಕ ಎಂಬ concept ಇಲ್ಲವೇ ಇಲ್ಲ.

ಈ ಕಾರಣದಿಂದ ಯಾರೂ ತಮ್ಮ ಮನೆಗಳಿಂದ ಒಂದು ಸಣ್ಣ ಕಸ-ಕಡ್ಡಿಯನ್ನೂ ಬೀದಿಗೆ ಎಸೆಯುವುದಿಲ್ಲ. ನಮ್ಮಲ್ಲಿ ಎಲ್ಲರ ಮನೆಗಳು ಸ್ವಚ್ಛವಾಗಿರುತ್ತವೆ, ಆದರೆ ಬೀದಿಗಳೆಲ್ಲ ಕಸಕಡ್ಡಿಗಳಿಂದ ತುಂಬಿರುತ್ತವೆ. ಇದಕ್ಕೆ ಕಾರಣ ನಾವು ಎಸೆದ ಹೊಲಸು, ಕಸ, ತ್ಯಾಜ್ಯಗಳನ್ನು ಬೇರೆಯವರು ಸ್ವಚ್ಛಗೊಳಿಸಬೇಕು ಎಂದು ಅಪೇಕ್ಷಿಸುತ್ತೇವೆ. ಬೀದಿಯನ್ನು ಸ್ವಚ್ಛವಾಗಿಸುವುದು ನಮ್ಮ ಕೆಲಸ ಅಲ್ಲ ಎಂದು ನಾವು ಭಾವಿಸಿದ್ದೇವೆ.

ಹೀಗಾಗಿ ಇಲ್ಲಿ ಕಸ ಎಸೆಯುವವರೂ ನಾವೇ. ಆದರೆ ಅಲ್ಲಿ ಸರಿ ವಿರುದ್ಧ. ನಮ್ಮ ಮನೆಯನ್ನು ಚೆಂದವಾಗಿಟ್ಟುಕೊಳ್ಳುವಂತೆ, ಮನೆ ಮುಂದಿನ ಬೀದಿಯನ್ನೂ ಸ್ವಚ್ಛವಾಗಿಟ್ಟುಕೊಳ್ಳುವ ಹೊಣೆಗಾರಿಕೆ ಮನೆಯವರದೇ. ಈ ಕಾರಣದಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಯನ್ನಷ್ಟೇ ಅಲ್ಲ, ಸುತ್ತಲಿನ ಬೀದಿ ಮತ್ತು ಪರಿಸರವನ್ನು ಅಂದವಾಗಿಟ್ಟುಕೊಳ್ಳುತ್ತಾರೆ. ಸಾಧ್ಯವಾದಷ್ಟು ಹೂಕುಂಡಗಳನ್ನಿಟ್ಟು ಅಲಂಕರಿಸಿರುತ್ತಾರೆ. ತಮ್ಮ ಮನೆ ಸುತ್ತಮುತ್ತ ಮರ-ಗಿಡಗಳನ್ನು ಬೆಳೆಸುವುದರಲ್ಲಿ ಆಸಕ್ತಿ ತೋರಿಸುತ್ತಾರೆ. ಅಂದರೆ ಮನೆಯೊಳಗಿನ ಸ್ವಚ್ಛತೆಗಷ್ಟೇ ಅಲ್ಲ, ಮನೆ ಹೊರಗಿನ ಅಂದ ಮತ್ತು ಸ್ವಚ್ಛತೆಗೂ ಮಹತ್ವ ನೀಡುತ್ತಾರೆ.

ಹೀಗಾಗಿ ಅಲ್ಲಿ ಗಲೀಜಾಗಿರುವ ಬೀದಿಯನ್ನು ನೋಡಲು ಸಾಧ್ಯವಿಲ್ಲ. ಕೆಲವು ಬೀದಿಗಳಲ್ಲಿ ವಯಸ್ಸಾದವರಿದ್ದರೆ, ಅವರು ತಮ್ಮ ಮನೆ ಮುಂದಿನ ಜಾಗವನ್ನಷ್ಟೇ ಅಲ್ಲ, ಅಕ್ಕ-ಪಕ್ಕದವರ ಮನೆಗಳನ್ನೂ ಸ್ವಚ್ಛಗೊಳಿಸುತ್ತಾರೆ. ಅಲ್ಲಿನ ಎಲ್ಲ ಬೀದಿಗಳಲ್ಲೂ ಇದೇ ನಿಯಮ ಆದೇಶವಿಲ್ಲದೇ ಜಾರಿಯಾಗಿರುವುದನ್ನು ಕಾಣಬಹುದು.

ಈ ಬಡಾವಣೆಗಳಲ್ಲಿ ಕಾಣುವ ಇನ್ನೊಂದು ಪ್ರಮುಖ ಅಂಶವೆಂದರೆ, ನೀರವ ಪರಿಸರ. ಎಲ್ಲೂ ಗೌಜು-ಗದ್ದಲ ಕೇಳಲು ಸಾಧ್ಯವೇ ಇಲ್ಲ. ಮುಖ್ಯರಸ್ತೆಯ ವಾಹನಗಳ ಓಡಾಟದ ಸದ್ದು ಕೇಳಿಸಬಾರದೆಂದು ಅಲ್ಯೂಮಿನಿಯಂ ಅಥವಾ ಗಾಜಿನ ತಡೆಗೋಡೆ ನಿಲ್ಲಿಸಿರುವುದನ್ನು ಕಾಣಬಹುದು. ಹಳ್ಳಿಯಲ್ಲಿ ಮಾತ್ರ ಅಲ್ಲ, ಟೋಕಿಯೋದಂಥ ನಗರಗಳಲ್ಲೂ ಜನವಸತಿ ಪ್ರದೇಶಗಳು ಗದ್ದಲಮುಕ್ತ. ಈ ವಿಷಯದಲ್ಲಿ ಟೋಕಿಯೋ ಜಗತ್ತಿನ ಉಳಿದ ನಗರಗಳಿಗಿಂತ ವಿಭಿನ್ನ. ಏಕೆಂದರೆ ಅಲ್ಲಿ Tranquility (ಶಾಂತಿ) ಮತ್ತು Activity (ಚಟುವಟಿಕೆ) ಎರಡೂ ಒಂದೆಡೆ ನೆಲೆಸಿವೆ.

ನಗರ ಜೀವನ ಗದ್ದಲಮಯ ಎಂದು ಭಾವಿಸಿದವರಿಗೆ ಟೋಕಿಯೋ ಒಂದು 'ಸಾಂಸ್ಕೃತಿಕ ಆಘಾತ' ನೀಡುತ್ತದೆ. ಜನನಿಬಿಡ, ಜನವಸತಿಯುಕ್ತ ಪ್ರದೇಶ ಎಂದ ಮಾತ್ರಕ್ಕೆ ಅದು ಗದ್ದಲಮಯವಾಗಿರಬೇಕು ಎಂಬ ನಿಯಮವೇನಿಲ್ಲ ಎಂಬುದನ್ನು ಟೋಕಿಯೋದಲ್ಲಿ ಅನುಭವಿಸಬಹುದು. ಇಡೀ ನಗರ ತನ್ನ ಪಾಡಿಗೆ ಅಧ್ಯಯನದಲ್ಲಿ ನಿರತವಾದಂತೆ, ಧ್ಯಾನದಲ್ಲಿ ಮಗ್ನವಾದಂತೆ ಭಾಸವಾಗುತ್ತದೆ.

ಜಪಾನಿನ ಹಳ್ಳಿಗಳು ಶಾಂತ ಪರಿಸರಕ್ಕೆ ಎಷ್ಟು ಪ್ರಸಿದ್ಧವೋ, ನಗರಗಳೂ ಆ ಮಾತಿಗೆ ಹತ್ತಿರವಾಗಿರುವ ವಿಸ್ಮಯವನ್ನು ಅನುಭವಿಸಬಹುದು. ನಗರ ಎಂದ ಮಾತ್ರಕ್ಕೆ ಗದ್ದಲಗಳಿಂದಲೇ ಏಕೆ ಕೂಡಿರಬೇಕು ಎಂಬುದು ಜಪಾನಿಯರ ವಾದ. ಹೀಗಾಗಿ ತಮ್ಮ ಸುತ್ತಮುತ್ತ ಅವರು ಶಾಂತ ವಾತಾವರಣವನ್ನು ಸಹಜವಾಗಿ ನಿರ್ಮಿಸಿಕೊಳ್ಳುತ್ತಾರೆ.

Look at London or Paris; they're both filthy. You don't get that in Tokyo. The proud residents look after their city ಎಂದು ತಡವೋ ಅಂದೋ ಎಂಬ ಜಪಾನಿನ ಖ್ಯಾತ ವಾಸ್ತುಶಾಸ್ತ್ರಜ್ಞ ಹೇಳುತ್ತಾನೆ. ನಮ್ಮ ನಗರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕಾದ ಹೊಣೆಗಾರಿಕೆ ಸರಕಾರದ್ದಲ್ಲ, ಜನರದ್ದು. ನಾವು ಮಾಡಿದ ಹೊಲಸನ್ನು ಸರಕಾರ ತೆಗೆದು ಸ್ವಚ್ಛಗೊಳಿಸಬೇಕು ಎಂದು ಯೋಚಿಸುವುದೇ ಸರಿಯಲ್ಲ ಎಂದು ಆತ ಹೇಳುತ್ತಾನೆ.

ಜಪಾನಿನಲ್ಲಿ ಬೀದಿ ಚೊಕ್ಕವಾಗಿರಲು ತಂತ್ರಜ್ಞಾನ, ಸಂಪ್ರದಾಯ ಮತ್ತು ಸ್ವಚ್ಛತೆಗೆ ಆ ದೇಶ ನೀಡಿದ ಮಹತ್ವವೇ ಕಾರಣ. ಜಪಾನ್ ಈ ಮೂರು ಸಂಗತಿಗಳ ಸಂಗಮವಾಗಿರುವುದನ್ನು ಗುರುತಿಸಬಹುದು. ಗದ್ದಲದ ನಗರಗಳಿಂದ ಶಾಂತವಾದ ಉಪನಗರ ಪ್ರದೇಶಗಳವರೆಗೆ, ಜಪಾನ್ ರಸ್ತೆ ಶುಚಿಗೊಳಿಸುವ ವಿಷಯದಲ್ಲಿ ನವೀನ ವಿಧಾನಗಳನ್ನು ಅಭಿವೃದ್ಧಿಪಡಿಸಿದೆ. ಅದು ಆದೇಶ ಮತ್ತು ದಕ್ಷತೆಯ ಸಾಂಸ್ಕೃತಿಕ ಗೌರವವನ್ನು ಪ್ರತಿಬಿಂಬಿಸುತ್ತದೆ.

ಜಪಾನಿನ ಸ್ವಚ್ಛತೆ ಕೇವಲ ಆಧುನಿಕ ವಿದ್ಯಮಾನವಲ್ಲ. ಇದು ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದೆ. ಅಲ್ಲಿನ ಬೀದಿಗಳಲ್ಲಿ ಯಂತ್ರಗಳಲ್ಲಿ ಸ್ವಚ್ಛಗೊಳಿಸುವವರ ಹಾಗೆಯೇ, ಕೈಯಲ್ಲಿ ಗುಡಿಸುವವರನ್ನೂ ಕಾಣಬಹುದು. ಈ ಕಸ ಗುಡಿಸುವ ಯಂತ್ರಗಳು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿವೆ. ಧೂಳಿನ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ಸುಧಾರಿತ ಶೋಧನೆ ವ್ಯವಸ್ಥೆಗಳನ್ನು ಒಳಗೊಂಡಂತೆ, ಜಪಾನಿನ ಪರಿಸರ ಆ ಆಶಯಕ್ಕೆ ಹೊಂದಿಕೆಯಾಗುತ್ತದೆ. ಅಂಗಡಿಯವರು ಮತ್ತು ನೆರೆಹೊರೆಯ ನಿವಾಸಿಗಳು ಸೇರಿದಂತೆ ನಾಗರಿಕರು, ಸ್ವಚ್ಛವಾದ ಬೀದಿಗಳನ್ನು ನಿರ್ವಹಿಸಲು ಸಮುದಾಯದ ಪ್ರಯತ್ನಗಳಲ್ಲೂ ಆಗಾಗ ಪಾಲ್ಗೊಳ್ಳುವುದು ಸಹಜ.

ಜಪಾನಿನಲ್ಲಿ ಬೀದಿ ಗುಡಿಸುವವರು ಬೀದಿಗಳನ್ನು ಸ್ವಚ್ಛವಾಗಿಡುವ ಸಂಗತಿಗಿಂತ ಇನ್ನೂ ಹೆಚ್ಚಿನದನ್ನು ಸಂಕೇತಿಸುತ್ತಾರೆ. ಅವರು ನಿಖರತೆ, ದಕ್ಷತೆ ಮತ್ತು ಪರಿಸರ ನಿರ್ವಹಣೆ ಎಂಬ ಜಪಾನಿನ ಅನನ್ಯ ಮೌಲ್ಯಗಳನ್ನು ಪ್ರತಿನಿಧಿಸುತ್ತಾರೆ. ಪ್ರಪಂಚದಾದ್ಯಂತದ ನಗರಗಳು ಶುಚಿತ್ವ ಮತ್ತು ಸುಸ್ಥಿರತೆಯನ್ನು ಸುಧಾರಿಸಲು ಪ್ರಯತ್ನಿಸುತ್ತಿರುವಾಗ, ರಸ್ತೆ ಗುಡಿಸುವ ಜಪಾನಿನ ವಿಧಾನವು ಇತರ ದೇಶಗಳಿಗೆ ಅನುಸರಿಸಲು ಮಾದರಿಯಾಗಿ ಕಾರ್ಯನಿರ್ವಹಿಸುತಿರುವುದು ಗಮನಾರ್ಹ.

ಜಪಾನಿನಲ್ಲಿ ಸ್ವಚ್ಛತೆಯ ಪಾಠವನ್ನು ಮಕ್ಕಳಿಗೆ ಸಣ್ಣವರಿರುವಾಗಲೇ, ಮನೆ ಮತ್ತು ಶಾಲೆಗಳಲ್ಲಿ ಕಲಿಸುತ್ತಾರೆ. ಅಷ್ಟೇ ಅಲ್ಲ, ಆಗಾಗ ಸ್ಪೋಗೋಮಿ ವಿಶ್ವಕಪ್ (SpoGomi World Cup) ಎಂಬ ಸ್ಪರ್ಧೆಯನ್ನು ಸಂಘಟಿಸಲಾಗುತ್ತದೆ. ಸರಳವಾಗಿ ಹೇಳಬೇಕೆಂದರೆ, ಇದು ಕಸ ಹೆಕ್ಕುವ ಕ್ರೀಡೆ. ಸಾರ್ವಜನಿಕ ಸ್ಥಳಗಳಲ್ಲಿ ಯಾರು ಹೆಚ್ಚು ಕಸವನ್ನು ಆಯುತ್ತಾರೋ, ಆತನೇ ವಿಜಯಿ. ಆತನಿಗೆ ಕಪ್ ನೀಡಿ ಗೌರವಿಸಲಾಗುತ್ತದೆ. ಈ ಕ್ರೀಡೆಯಲ್ಲಿ ಇಪ್ಪತ್ತು-ಐವತ್ತು ಜನರುಳ್ಳ ತಂಡಗಳೂ ಭಾಗವಹಿಸುವುದುಂಟು.

ಟೋಕಿಯೋದ ಬಹಳಷ್ಟು ಕಂಪನಿಗಳಲ್ಲಿ ಆಫೀಸನ್ನು ಅಲ್ಲಿನ ಸಿಬ್ಬಂದಿಯೇ ಸ್ವಚ್ಛಗೊಳಿಸುತ್ತಾರೆ. ಕಂಪನಿಯ ಮುಖ್ಯಸ್ಥ ಟಾಯ್ಲೆಟ್‌ನಿಂದ ಹಿಡಿದು, ತನ್ನ ಕೋಣೆಯನ್ನೂ ಸ್ವಚ್ಛಗೊಳಿಸಿಕೊಳ್ಳುತ್ತಾನೆ. ಅದಕ್ಕೆಂದೇ ಪ್ರತ್ಯೇಕ ವಿಭಾಗವಿಲ್ಲ. ಜನರು ತಮ್ಮನ್ನು ತಾವು ಸ್ವಚ್ಛಗೊಳಿಸಬೇಕೆಂದು ಅವರು ಬಯಸುತ್ತಾರೆ ಎಂಬುದು ಇದಕ್ಕೆ ಕಾರಣ. ಜಪಾನಿಯರು ತಮ್ಮ ಸುತ್ತ ಸಾಕಷ್ಟು ಕಸದ ತೊಟ್ಟಿಗಳನ್ನು ಇಟ್ಟಿರುವುದಿಲ್ಲ. ಬಹಳಷ್ಟು ಕಸದ ಡಬ್ಬಿಗಳಿದ್ದರೆ, ಎಲ್ಲಿ ಬೇಕಾದರೆ ಅಲ್ಲಿ, ಮನಸೋ ಇಚ್ಛೆ ಎಲ್ಲ ಕಸವನ್ನು ಎಸೆಯುವಂತೆ ಪ್ರೇರೇಪಿಸುತ್ತದೆ. ಆದರೆ ಯಾವುದೇ ಕಸದ ಡಬ್ಬಿಗಳನ್ನು ಹೊಂದಿಲ್ಲದಿದ್ದರೆ, ಅಕ್ಷರಶಃ ನಮ್ಮ ಕೈಯಲ್ಲಿಯೇ ಕಸವನ್ನು ಹೆಚ್ಚು ಹೊತ್ತು ಹಿಡಿದಿಟ್ಟುಕೊಳ್ಳಬೇಕಲ್ಲ? ದುರ್ನಾತ ಬೀರುವ ಕಸವನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡಬೇಕಾಗುವುದರಿಂದ ಅಂಥ ಆಹಾರ ತ್ಯಾಜ್ಯವನ್ನು ತರುವ ಸಾಧ್ಯತೆ ಕಡಿಮೆ.

ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಕಾಪಾಡಲು ಕಸವನ್ನು ಆರಿಸಲು 'ಸಮುರೈ ಸ್ಟ್ರೀಟ್ ಕ್ಲೀನರ್ಸ್' ಎಂಬ ತಂಡವೂ ಇದೆ. ಈ ಕಾರ್ಯತಂಡ ಟೋಕಿಯೋದ ಬೀದಿಗಳನ್ನು ಸ್ವಚ್ಛಗೊಳಿಸಲು ಕಸವನ್ನು ಆರಿಸುವ ಸಾಧನವಾಗಿ ಸಮುರೈ ಕತ್ತಿಗಳನ್ನು ಬಳಸುತ್ತದೆ. ಅವರು ತಮ್ಮ ಬೆನ್ನಿನ ಮೇಲೆ ಕಸದ ಪೆಟ್ಟಿಗೆಗಳನ್ನು ಒಯ್ಯುತ್ತಾರೆ. ಆ ಪೆಟ್ಟಿಗೆಗಳಲ್ಲಿ 45 ಲೀಟರುಗಳಷ್ಟು ಕಸವನ್ನು ಹಿಡಿದಿಟ್ಟುಕೊಳ್ಳಬಹುದು. ಜಪಾನಿನಲ್ಲಿ ಇದ್ದಷ್ಟು ಹೊತ್ತು ಸುಂದರ ಪರಿಸರದಲ್ಲಿ, ಸುಂದರ ತಾಣದಲ್ಲಿ, ಸುಂದರ ಮನಸ್ಸಿನ ಜನರೊಂದಿಗೆ ಇದ್ದೀರಿ ಎಂಬ ಭಾವನೆ ಮೂಡುತ್ತದೆ ಎಂಬುದು ಅತಿಶಯೋಕ್ತಿಯಲ್ಲ. ನಮ್ಮ ದೇಶದಲ್ಲಿ ಕಸ ಯಾರ ಸ್ವತ್ತೂ ಅಲ್ಲ. ಅದನ್ನು ತೆಗೆಯುವ ಹೊಣೆಗಾರಿಕೆ ಬೇರೆಯವರದ್ದೇ ಹೊರತು ನಮ್ಮದಲ್ಲ. ಆದರೆ ಜಪಾನಿನಲ್ಲಿ ಕಸ ಪ್ರತಿಯೊಬ್ಬನ ಸ್ವತ್ತು. ಎಲ್ಲರೂ ತಮ್ಮ ಕಸವನ್ನು ತಾವೇ ತೆಗೆದು ಸ್ವಚ್ಛಗೊಳಿಸುತ್ತಾರೆ. ಬೇರೆಯವರ ಕಸ ಕಂಡರೆ, ಅದನ್ನು ತೆಗೆಯುವುದೂ ತಮ್ಮದೇ ಜವಾಬ್ದಾರಿ ಎಂದು ಭಾವಿಸುತ್ತಾರೆ.

ನಮ್ಮ ದೇಶದಲ್ಲಿ ಪೌರ ಕಾರ್ಮಿಕರ ಜತೆಗೆ ಹೆಚ್ಚೆಂದರೆ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಸಾರ್ವಜನಿಕವಾಗಿ ಪೊರಕೆ ಹಿಡಿಯಬಹುದು. ಆದರೆ ಜಪಾನಿನಲ್ಲಿ ಎಲ್ಲರೂ ಜಾಡಮಾಲಿಗಳಾಗಲು ಸಿದ್ಧರಿರಬೇಕು!

ಆತ್ಮಹತ್ಯೆ: ದಂಡ ಯಾರಿಗೆ?

ಜಪಾನಿನ ರಾಜಧಾನಿ ಟೋಕಿಯೊದಲ್ಲಿದ್ದಷ್ಟು ಹೊತ್ತು, ಟ್ರೇನಿನ ಸದ್ದಿನಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ರಾತ್ರಿ ಹನ್ನೆರಡರಿಂದ ಬೆಳಗಿನ ಜಾವ ಐದರ ತನಕ ಆ ಸದ್ದಿನ ಅಂತರ ಜಾಸ್ತಿಯಾಗಬಹುದಷ್ಟೆ. ಟೋಕಿಯೋದಲ್ಲಿ ಒಂದು ಡಜನ್‌ಗಿಂತ ಜಾಸ್ತಿ ಬೇರೆ ಬೇರೆ ರೈಲು ಮಾರ್ಗಗಳಿರಬಹುದು ಮತ್ತು ಅದಕ್ಕೆ ತಕ್ಕ ರೈಲುಗಳಿರಬಹುದು. ಆ ಪೈಕಿ ಯಮನೊತೆ ಲೈನಿನಲ್ಲಿ ಪ್ರತಿ ಎರಡು ನಿಮಿಷಗಳಿಗೊಮ್ಮೆ ಟ್ರೇನು ಹಾದು ಹೋಗುತ್ತಿರುತ್ತದೆ.

ಈ ಮಾರ್ಗದಲ್ಲಿ ಸಂಚರಿಸುವ ಟ್ರೇನು ನೂರಕ್ಕೂ ಹೆಚ್ಚು ನಿಲ್ದಾಣಗಳನ್ನು ಬಳಸಿ ಹೋಗುವಾಗ ದಿನದಲ್ಲಿ ಕನಿಷ್ಠ ಮೂವತ್ತು ಲಕ್ಷ ಜನರನ್ನು ಹೇರಿಕೊಂಡು ಹೋಗುವುದು ಸಣ್ಣ ಸಂಗತಿಯಲ್ಲ. ಇನ್ನು ಬೇರೆ ಬೇರೆ ಟ್ರೇನುಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆಯನ್ನು ಲೆಕ್ಕ ಹಾಕಿದರೆ, ಅದು ಐವತ್ತು-ಅರವತ್ತು ಲಕ್ಷ ದಾಟಬಹುದು. ಟೋಕಿಯೋದ ಯಾವ ಭಾಗದಲ್ಲಿದ್ದರೂ ಟ್ರೇನಿನ ಸದ್ದು ಹಿನ್ನೆಲೆ ಸಂಗೀತದಂತೆ ಕೇಳುತ್ತಲೇ ಇರುವುದು ಸುಳ್ಳಲ್ಲ.

ಟೋಕಿಯೋದಲ್ಲಿ ನಾನು ತಂಗಿದ್ದ ಹೋಟೆಲಿನ ಸನಿಹದಲ್ಲಿಯೇ ರೈಲುಮಾರ್ಗ ಹಾದುಹೋಗಿತ್ತು. ಪ್ರತಿ ಎರಡು ನಿಮಿಷಕ್ಕೊಮ್ಮೆ ರೈಲಿನ ಸದ್ದು ಕಿರಿಕಿರಿಯನ್ನುಂಟು ಮಾಡಿದರೂ, ಕ್ರಮೇಣ ಅದಕ್ಕೆ ಹೊಂದಿಕೊಂಡಿದ್ದೆ. ಟೋಕಿಯೋದಲ್ಲಿ ಇದ್ದಷ್ಟು ಹೊತ್ತು ಟ್ರೇನಿನ ಸಪ್ಪಳ ಕೇಳಿಸದಿದ್ದರೆ ಜನಜೀವನ ಅಸ್ತವ್ಯಸ್ತವಾಗಿದೆ ಎಂದೇ ಅರ್ಥ. ಅದು ಕೇಳಿಸುತ್ತಿದ್ದರೇ ಸಮಾಧಾನ.

ನಮ್ಮ ದೇಶದಲ್ಲಿರುವಂತೆ, ಜಪಾನಿನಲ್ಲೂ ರೈಲು ಬರುತ್ತಿರುವಾಗ ಹಳಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳುವುದುಂಟು. ಆದರೆ ಇಂಥ ಘಟನೆ ಇತ್ತೀಚಿನ ದಿನಗಳಲ್ಲಿ ತೀರಾ ವಿರಳ. ಇದಕ್ಕೆ ಕಾರಣ, ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೋ, ಅಂಥವರ ಕುಟುಂಬ ವರ್ಗದವರು ರೈಲು ಇಲಾಖೆಗೆ ದಂಡ ಪಾವತಿಸಬೇಕು. ಹೀಗಾಗಿ ಆತ್ಮಹತ್ಯೆಗೆ ಆಲೋಚಿಸುವವರು, ತಮ್ಮ ಕೃತ್ಯದಿಂದಾಗಿ ಬದುಕಿದ್ದವರನ್ನು ತೊಂದರೆಗೆ ಸಿಲುಕಿಸುವುದು ಬೇಡ ಎಂಬ ಕಾರಣಕ್ಕೆ ರೈಲು ಹಳಿಗಳ ಮೇಲೆ ಬಿದ್ದು ಆತ್ಮಹತ್ಯೆಗೆ ಮುಂದಾಗುವುದಿಲ್ಲ.

ಈ ಕಾನೂನು ಜಾರಿಗೆ ತಂದ ನಂತರ, ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಕಮ್ಮಿಯಾಗಿದೆಯಂತೆ. ಅಷ್ಟಾಗಿಯೂ ಆತ್ಮಹತ್ಯೆಗೆ ಮುಂದಾಗುವವರು ಹೆಚ್ಚಿನ ಸಂದರ್ಭಗಳಲ್ಲಿ ತೀವ್ರ ಖಿನ್ನತೆಗೆ ಒಳಗಾಗಿ ಒಬ್ಬಂಟಿ ಜೀವನ ಸಾಗಿಸುವವರಾಗಿರುತ್ತಾರೆ.

ಸೃಜನಶೀಲ ನಗರ

ಜಗತ್ತಿನಲ್ಲಿಯೇ ಟೋಕಿಯೋವನ್ನು ಅತ್ಯಂತ ವಿಭಿನ್ನ ಮತ್ತು ಸೃಜನಶೀಲ ನಗರ ಎಂದು ಕರೆಯುತ್ತಾರೆ. ಟೋಕಿಯೋಕ್ಕೆ ಮಾತ್ರ ಈ ವಿಶೇಷ 'ಹಣೆಪಟ್ಟಿ' ಏಕೆ ಎಂದು ಯಾರಿಗಾದರೂ ಅನಿಸದಿರದು. ಟೋಕಿಯೋ ನಗರದಲ್ಲಿ ಒಂದು ಪ್ರದೇಶ ಅಥವಾ ಒಂದು ಬಡಾವಣೆ ಇದ್ದ ಹಾಗೆ ಮತ್ತೊಂದಿಲ್ಲ. ಪ್ರತಿಯೊಂದೂ ಭಿನ್ನ.

ಟೋಕಿಯೋದಲ್ಲಿ ಹರಾಜುಕು ಎಂಬ ಪ್ರದೇಶವಿದೆ. ಅಲ್ಲಿ ಹೆಚ್ಚಾಗಿ ಯುವ ಜನರನ್ನು ಕಾಣಬಹುದು. ಅಲ್ಲಿ ವಾಸಿಸುವವರ ಪೈಕಿ ಶೇ.80ರಷ್ಟು ಮಂದಿ, 45 ವರ್ಷಕ್ಕಿಂತ ಕಮ್ಮಿ ವಯಸ್ಸಿನವರು. ಆ ಪ್ರದೇಶವನ್ನು ಅತ್ಯಂತ fashionable ಅಂತಲೂ ಕರೆಯುತ್ತಾರೆ. ಹಾಗೆ ಮುಂದಕ್ಕೆ ಹೋದರೆ, ಶಿಂಜುಕು ಎಂಬ ಪ್ರದೇಶವಿದೆ. ಅಲ್ಲಿ ವಾಸಿಸುವವರಲ್ಲಿ 60 ವರ್ಷ ದಾಟಿದವರ ಸಂಖ್ಯೆ ಹೆಚ್ಚು. ಅಲ್ಲಿ ದುಬಾರಿ ಅಂಗಡಿಗಳ ಸಂಖ್ಯೆಯೂ ಹೆಚ್ಚು.

ಹಾಗೇ ಮುಂದಕ್ಕೆ ಹೋದರೆ ಶಿನ್-ಒಕುಬೊ ಎಂಬ ಪ್ರದೇಶ ಸಿಗುತ್ತದೆ. ಅಲ್ಲಿ ವಾಸಿಸುವವರಲ್ಲಿ ಹೆಚ್ಚಿನವರು ಕೊರಿಯಾ ಮೂಲದವರು. ಯಾರನ್ನು ನೋಡಿದರೂ ಒಂದೇ ರೀತಿ ಕಾಣುತ್ತಾರೆ. ಅಲ್ಲಿ ನಾವೇನಾದರೂ ತಪ್ಪಿಸಿಕೊಂಡರೆ ಹುಡುಕುವುದು ಸುಲಭ. ಹಾಗೇ ಸುಗಮೋ ಎಂಬ ಇನ್ನೊಂದು ಪ್ರದೇಶವಿದೆ. ಅಲ್ಲಿ 70-80 ವರ್ಷ ಮೇಲ್ಪಟ್ಟ ಅಜ್ಜ-ಅಜ್ಜಿಯರೇ ಕಾಣುತ್ತಾರೆ. ಅಂದ ಹಾಗೆ ಅಲ್ಲಿನ ಒಂದು ಬೀದಿಯಲ್ಲಿ ಬರೀ ಊರುಗೋಲು (ವಾಕಿಂಗ್ ಸ್ಟಿಕ್) ಮತ್ತು ವಿಗ್ ಅಂಗಡಿಗಳೇ ಕಾಣುತ್ತವೆ.

ಶಿಮೊಕೀಟಜವಾ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜಾಜ್ ಕ್ಲಬ್‌ಗಳಿವೆ ಮತ್ತು ಸೆಕೆಂಡ್ ಹ್ಯಾಂಡ್ ಬಟ್ಟೆ ಅಂಗಡಿಗಳಿವೆ. ಕೊಎನ್ಜಿ ಎಂಬ ಪ್ರದೇಶದಲ್ಲಿ 10-20 ಮಂದಿಯನ್ನು ಕುಳ್ಳಿರಿಸಿಕೊಂಡು, ಅವರ ಮನರಂಜನೆಗೆ ಹಾಡುವ ಸಂಗೀತಗಾರರು ಕಾಣುತ್ತಾರೆ. ಇಬ್ಬರು-ಮೂವರು ಕೇಳುಗರಿದ್ದರೂ ಸಾಕು, ಅಲ್ಲೊಂದು ಪುಟ್ಟ ಸಂಗೀತಗೋಷ್ಠಿ ಏರ್ಪಟ್ಟಿರುತ್ತದೆ.

ಇಂಥ ಗುಣವಿಶೇಷವುಳ್ಳವರು, ಇಂಥದೇ ಪ್ರದೇಶದಲ್ಲಿ ವಾಸಿಸಬೇಕು ಎಂದು ಯಾರು ನಿರ್ಧರಿಸುತ್ತಾರೋ ಎಂಬ ಸೋಜಿಗದ ಪ್ರಶ್ನೆ ಪ್ರತಿ ಬಡಾವಣೆಗೆ ಹೋದಾಗಲೂ ಮೂಡುತ್ತದೆ. ಪ್ರತಿ ಬಡಾವಣೆಯೂ ಒಂದಿಲ್ಲೊಂದು ಕಾರಣಕ್ಕೆ ಹೆಸರುವಾಸಿಯಾಗಿರುವುದು ವಿಶೇಷ. ಪ್ರಾಯಶಃ ಈ ಕಾರಣಕ್ಕೇ ಇರಬೇಕು, ಟೋಕಿಯೋವನ್ನು 'ಸೃಜನಶೀಲ ನಗರ' ಎಂದು ಕರೆಯುವುದು.

ನಿರಂತರ ಬದಲಾವಣೆಯ ನಗರ

25-30 ವರ್ಷಗಳ ಹಿಂದೆ, ನೀವು ಲಂಡನ್ನಿನ ಬೀದಿಯಲ್ಲಿ ಓಡಾಡಿದ್ದರೆ, ಈಗ ಅಲ್ಲಿ ತಿರುಗುವಾಗ ಹೆಚ್ಚಿನ ವ್ಯತ್ಯಾಸಗಳೇನೂ ಕಾಣುವುದಿಲ್ಲ. ಅಲ್ಲಿ ಹೊಸ ಕಟ್ಟಡಗಳು ತಲೆಯೆತ್ತಿರುವ ಸಾಧ್ಯತೆ ತೀರಾ ಕಮ್ಮಿ. ರಸ್ತೆಯ ರೂಪ ಬದಲಾಗಿರುವ ಸಾಧ್ಯತೆಯೂ ಕಮ್ಮಿ. ಅದರಲ್ಲೂ ಲಂಡನ್‌ನ ಪಾರ್ಲಿಮೆಂಟ್ ಸ್ಟ್ರೀಟ್, ಬಿಗ್ ಬೆನ್ ಗಡಿಯಾರ ಪ್ರದೇಶ, ಟ್ರಫಲಗರ್ ವೃತ್ತಕ್ಕೆ ಹೋಗುವ ದಾರಿ, ಕಳೆದ ಕಾಲು ಶತಮಾನಗಳಿಂದ ಹೇಗಿವೆಯೋ, ಇಂದಿಗೂ ಹಾಗೇ ಇವೆ. ಆ ಬೀದಿಗಳಲ್ಲಿದ್ದ ಕೆಂಪು ಟೆಲಿಫೋನ್ ಬೂತ್‌ಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ, ಅದರೊಳಗೆ ಈಗ ಟೆಲಿಫೋನ್ ಇಲ್ಲದಿದ್ದರೂ. ಅಷ್ಟರಮಟ್ಟಿಗೆ ಬ್ರಿಟಿಷರು ಸ್ಥಿರತೆಯನ್ನು ಕಾಪಾಡಿಕೊಂಡಿದ್ದಾರೆ.

ಈ ಮಾತಿಗೆ ಜಪಾನಿಯರು ಸರಿ ವಿರುದ್ಧ. ಒಂದು ವರ್ಷದ ಹಿಂದೆ ಟೋಕಿಯೋ ನಗರಕ್ಕೆ ಬಂದವರಿಗೆ ಎಲ್ಲವೂ ಹೊಸತು ಎಂಬ ಭಾವನೆ ಮೂಡಿದರೆ ಅಚ್ಚರಿಯಿಲ್ಲ. ಕಾರಣ ಟೋಕಿಯೋ ನಿರಂತರವಾಗಿ ಬದಲಾಗುತ್ತಲೇ ಬಂದಿದೆ.

ಟೋಕಿಯೋದಲ್ಲಿ 1981ಕ್ಕಿಂತ ಹಿಂದೆ ಕಟ್ಟಿದ ಕಟ್ಟಡಗಳನ್ನು ಕಾಣುವುದು ಸಾಧ್ಯವಿಲ್ಲ. ಕಾರಣ 1981ರಲ್ಲಿ ಕಟ್ಟಡ ನಿರ್ಮಾಣ ನಿಯಮವನ್ನು ಸಂಪೂರ್ಣ ಬದಲಾಯಿಸಲಾಯಿತು. ಭೂಕಂಪದ ಹೊಡೆತಗಳನ್ನು ತಡೆದುಕೊಳ್ಳಲು ಕಟ್ಟಡ ನಿರ್ಮಾಣ ನಿಯಮಗಳಿಗೆ ಸಾಕಷ್ಟು ತಿದ್ದುಪಡಿ ತರಲಾಯಿತು. ಅದು ಅನಿವಾರ್ಯವೂ ಆಗಿತ್ತು.

ಸಾಮಾನ್ಯವಾಗಿ ಪ್ರತಿ ಎರಡು-ಮೂರು ವರ್ಷಗಳ ಅವಧಿಯಲ್ಲಿ ಟೋಕಿಯೋದ ಬೀದಿಗಳು ಹೊಸ ರೂಪ ಪಡೆಯುತ್ತವೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಜಗಮಗಿಸುವ ನಿಯಾನ್ ಫಲಕಗಳು ಮತ್ತು ದೀಪಗಳುಳ್ಳ 'ಶಿಬುಯಾ ಪ್ರದೇಶ' ಪ್ರತಿ ಎರಡು ವರ್ಷಗಳಿಗೊಮ್ಮೆ ತನ್ನ ಖದರನ್ನೇ ಪೂರ್ತಿ ಬದಲಿಸಿಕೊಳ್ಳುತ್ತದೆ. ಎರಡು ವರ್ಷ ಬಿಟ್ಟು ಅಲ್ಲಿಗೆ ಹೋದರೆ, ಯಾವುದೋ ಅಪರಿಚಿತ ಸ್ಥಳಕ್ಕೆ ಅಥವಾ ಸಂಪೂರ್ಣ ಹೊಸ ಪ್ರದೇಶಕ್ಕೆ ಭೇಟಿ ನೀಡಿದ ಅನುಭವವಾಗುವಷ್ಟು ಬದಲಾಗಿರುತ್ತದೆ.

ತಮ್ಮ ದೇಶ ಆಗಾಗ ಪ್ರಾಕೃತಿಕ ದುರಂತಗಳಿಗೆ ತುತ್ತಾಗುವುದರಿಂದ, ಯಾವುದೂ ಶಾಶ್ವತ ಅಲ್ಲ ಎಂಬ ಭಾವನೆ ಜಪಾನಿಯರಲ್ಲಿದೆ. ಹೀಗಾಗಿ ಎಲ್ಲವೂ ಹೊಸ ಹೊಸ ಸ್ವರೂಪದಲ್ಲಿ ಕಾಣಿಸಿಕೊಳ್ಳಬೇಕು ಎಂಬುದು ಅವರ ಯೋಚನೆಯಲ್ಲಿ ಅಂತರ್ಗತವಾಗಿರುವ ಅಂಶ. ಟೋಕಿಯೋದಲ್ಲಿ ಒಂದು ಕಟ್ಟಡದ ಸರಾಸರಿ ಜೀವಿತ ಅವಧಿ 40 ವರ್ಷ ಅಥವಾ ಅದಕ್ಕಿಂತ ಕಮ್ಮಿ. ಯಾರಾದರೂ 'ನಾನು 15 ವರ್ಷಗಳ ಹಿಂದೆ ಟೋಕಿಯೋಕ್ಕೆ ಹೋಗಿದ್ದೆ' ಅಂತ ಹೇಳಿದರೆ, ಈಗ ಆ ಟೋಕಿಯೋ ಅಸ್ತಿತ್ವದಲ್ಲಿ ಇಲ್ಲ ಎಂಬುದನ್ನು ಜೀರ್ಣಿಸಿಕೊಳ್ಳಲು ಅಸಾಧ್ಯವಾಗಬಹುದು. ಟೋಕಿಯೋದಲ್ಲಿ ಸ್ಥಿರವಾಗಿರುವುದು ನಿರಂತರ ಬದಲಾವಣೆಯೊಂದೇ.

ಕಾರಿನ ಹಂಗಿಲ್ಲ

ಸ್ವಂತ ಕಾರು ಇಲ್ಲದೆ ಅಮೆರಿಕದ ಯಾವ ನಗರದಲ್ಲೂ ಇರಲು ಸಾಧ್ಯವಿಲ್ಲ. ಹೀಗಾಗಿ ಅಮೆರಿಕಕ್ಕೆ ಹೋದವರು ಎಲ್ಲಕ್ಕಿಂತ ಮುನ್ನ ಹೇಗಾದರೂ ಮಾಡಿ ಕಾರನ್ನು ಖರೀದಿಸಲು ಹಣ ಕೂಡಿಡುತ್ತಾರೆ.

ಆದರೆ ಟೋಕಿಯೋ ನಗರದಲ್ಲಿ ಕಾರಿನ ಅಗತ್ಯವೇ ಕಂಡುಬರುವುದಿಲ್ಲ. ಸಾರ್ವಜನಿಕ ಸಾರಿಗೆ (Public transport) ವ್ಯವಸ್ಥೆ ಅಷ್ಟು ಅಚ್ಚುಕಟ್ಟಾಗಿದೆ. ಅದು ಜಗತ್ತಿನಲ್ಲಿಯೇ ಅತ್ಯುತ್ತಮ ಎಂದು ಹೇಳಬಹುದು. ಟ್ರೇನು ಮತ್ತು ಬಸ್ಸು ಸಂಪರ್ಕ ಅದೆಷ್ಟು ವ್ಯವಸ್ಥಿತವಾಗಿದೆಯೆಂದರೆ, ಯಾವ ಪ್ರದೇಶ ಅಥವಾ ಕಟ್ಟಡವನ್ನು ತಲುಪಲೂ ಮುನ್ನೂರು ಮೀಟರಿಗಿಂತ ಹೆಚ್ಚು ನಡೆಯಬೇಕಿಲ್ಲ.

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ನೀವು ಸ್ವಂತ ಕಾರಿನಲ್ಲಿ ಹೋಗುವುದಕ್ಕಿಂತ ಬೇಗ, ಟ್ರೇನು ಅಥವಾ ಬಸ್ಸಿನಲ್ಲಿ ಹೋಗಿ ತಲುಪಬಹುದು. ಒಂದು ಅಥವಾ ಎರಡು ಕಿ.ಮೀ. ದೂರ ಕ್ರಮಿಸಲು ಸೈಕಲ್ ವಾಸಿ.

ಟೋಕಿಯೋದಲ್ಲಿ ಕಾರು ಖರೀದಿಸುವ ಮುನ್ನ ಪಾರ್ಕಿಂಗ್ ತಾಣವನ್ನು ಖರೀದಿಸುವುದು ಅನಿವಾರ್ಯ. ಇಲ್ಲದಿದ್ದರೆ ಕಾರು ಖರೀದಿಸಲು ಅನುಮತಿ ನೀಡುವುದಿಲ್ಲ. ಈ ಎಲ್ಲ ಉಸಾಬರಿಗೆ ಮದ್ದೆಂದರೆ ಸಾರ್ವಜನಿಕ ಸಾರಿಗೆಗೆ ಶರಣಾಗುವುದು. ಟೋಕಿಯೋದಲ್ಲಿ ಹತ್ತಾರು ವರ್ಷವಿದ್ದೂ ಸ್ವಂತ ಕಾರು ಖರೀದಿಸದಿರುವ ದೊಡ್ಡ ವರ್ಗವೇ ಇದೆ. ಅವರಿಗೆ ಕಾರಿನ ಅಗತ್ಯವೇ ಕಂಡುಬಂದಿಲ್ಲ. ಸೋಜಿಗವೆಂದರೆ, ಅಲ್ಲಿ ಸ್ವಂತ ಕಾರನ್ನು ಇಟ್ಟುಕೊಳ್ಳುವುದು ಪ್ರತಿಷ್ಠೆಯ ಸಂಕೇತವೂ ಅಲ್ಲ.

ಹೊಸವರ್ಷದ ನಿರ್ಧಾರಗಳು ಅಲ್ಪಾಯುಷಿ ಆಗುತ್ತವೇಕೆ?

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಲ್ಪಾಯುಷಿಯೋ ಅಮರತ್ವವುಳ್ಳದ್ದೋ ಎಂಬುದನ್ನು ವಿಶ್ಲೇಷಿಸುವ ಮೊದಲು ಈ ಪದಚಮತ್ಕಾರವನ್ನೊಮ್ಮೆ ಗಮನಿಸಿ: ಕಳೆದ ಒಂದು ಸಹಸ್ರಮಾನಕ್ಕಿಂತಲೂ ಹೆಚ್ಚು ವರ್ಷಗಳಿಂದ ಪ್ರತಿ ಹೊಸ ವರ್ಷದ ಇಸವಿಯನ್ನು ಉಚ್ಚರಿಸುವಾಗೆಲ್ಲ 'ಸಾವಿರದ' ಎಂಬ ಪದವನ್ನು (ಒಂದು ಸಾವಿರದ..., ಎರಡು ಸಾವಿರದ... ಇತ್ಯಾದಿ) ಉಪಯೋಗಿಸುತ್ತಲೇ ಬಂದಿದ್ದೇವೆ. ವಿಪರ್ಯಾಸವೆಂದರೆ ಒಂದೊಂದು ಇಸವಿಯೂ ನಮ್ಮ ನಿರೀಕ್ಷೆಯನ್ನು ಮೀರಿ 'ಸಾವಿರುವ' ವರ್ಷವಾಗಿಯೇ ಪರಿಣಮಿಸಿದೆ, ನಮ್ಮನ್ನು ದಂಗುಬಡಿಸಿದೆ, ದಿಗ್ಭ್ರಮೆಗೊಳಿಸಿದೆ! ಮೊನ್ನೆಯಷ್ಟೇ ಮುಗಿದ ಎರಡು 'ಸಾವಿರದ' ಇಪ್ಪತ್ತನಾಲ್ಕು ಏನು ಕಡಿಮೆಯಿತ್ತೇ? ವರ್ಷದುದ್ದಕ್ಕೂ ಸಂಭವಿಸಿದ ಸಾವು-ನೋವುಗಳು ಸಾಲದೇನೋ ಎಂಬಂತೆ ಕೊನೆಯ ದಿನಗಳಲ್ಲಂತೂ ನಮ್ಮ ಆಪ್ತವಲಯದ ಬಂಧುಮಿತ್ರರಲ್ಲಿ ಮತ್ತು ರಾಜ್ಯ-ದೇಶ-ವಿಶ್ವ ಸ್ತರದಲ್ಲಿ ಪರಿಚಿತರು, ಝಾಕಿರ್ ಹುಸೇನ್, ಶ್ಯಾಮ್ ಬೆನಗಲ್, ಮನಮೋಹನ್ ಸಿಂಗ್, ಜಿಮ್ಮಿ ಕಾರ್ಟರ್ ಮುಂತಾದ ಪ್ರಸಿದ್ಧರು- ಹೀಗೆ ಅನೇಕರು ಕೊನೆಯುಸಿರೆಳೆದರು. ಡಿಸೆಂಬರ್ ತಿಂಗಳೇಕೆ ಇಷ್ಟೊಂದು ಕ್ರೂರಿ ಎಂದು ದಿಗಿಲುಪಡುವಂತಾಯಿತು. ಅಂದರೆ 2024 ಸಹ 'ಸಾವಿರುವ' ಇಪ್ಪತ್ತನಾಲ್ಕು ಎಂಬ ಮುದ್ರೆಯನ್ನೊತ್ತಿಕೊಂಡು ಕರಾಳ ಛಾಯೆಯೊಂದಿಗೇ ಇತಿಹಾಸಕ್ಕೆ ಸೇರಿತು. ಹಾಗಂತ, ಯಾರಿಗೂ ಯಾವತ್ತಿಗೂ ಸಾವಿರಲೇಬಾರದು ಎಂದು ಅಪೇಕ್ಷಿಸುವುದೂ ಸರಿಯಲ್ಲವೆನ್ನಿ. ಸಾವಿರದ ಮನೆಯ ಸಾಸಿವೆಕಾಳಿನ ಕತೆ ನಮಗೆಲ್ಲ ಗೊತ್ತೇ ಇದೆ. 'ಜಾತಸ್ಯ ಮರಣಂ ಧ್ರುವಮ್' ಎಂಬಂತೆ ಹುಟ್ಟಿದವರು ಸಾಯಲೇಬೇಕು. ಕೆಲವರು ಬೇಗ, ಕೆಲವರು ತಡವಾಗಿ, ಅಷ್ಟೇ. ಅಂತಕನ ದೂತರಿಗೆ ಕಿಂಚಿತ್ತೂ ದಯವಿಲ್ಲ.

ಇರಲಿ, ಎರಡು 'ಸಾವಿರದ' ಇಪ್ಪತ್ತೈದು ಶುರುವಾಗಿ ಈಗಿನ್ನೂ ಐದು ದಿನಗಳೂ ಕಳೆದಿಲ್ಲ ಸದ್ಯಕ್ಕೆ ಸಾವಿನ ಸುದ್ದಿ ಬೇಡ. ಆದರೂ ಏನ್ಮಾಡೋದು ಸಾವು ಸಂಭವಿಸಿದೆ, ಸಂಭವಿಸುತ್ತಿದೆ, ಸಂಭವಿಸುವುದಿದೆ. ಯಾರ ಸಾವು ಅಂತೀರಾ? ನಮ್ಮ ನಿಮ್ಮ ನ್ಯೂ ಇಯರ್ ರಿಸೊಲ್ಯೂಷನ್‌ಗಳದ್ದು! "ಬೆಳಗ್ಗೆ ಬೇಗ ಏಳುವ ಅಭ್ಯಾಸ ಮಾಡಿಕೊಳ್ಳುತ್ತೇನೆ"ಯಿಂದ ಹಿಡಿದು "ರಾತ್ರಿ ಮಲಗುವ ಮುನ್ನ ಒಳ್ಳೆಯದೊಂದು ಪುಸ್ತಕದ ಕೆಲವು ಪುಟಗಳನ್ನಾದರೂ ಓದಿ ಮಲಗುತ್ತೇನೆ"ವರೆಗೆ; "ದಿನಾ 108 ಸೂರ್ಯನಮಸ್ಕಾರ ಮಾಡುತ್ತೇನೆ, ಹಿತಮಿತವಾಗಿ ತಿಂದು ದೇಹದ ತೂಕವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತೇನೆ"ಯಿಂದ ಹಿಡಿದು "ವರ್ಕ್‌ಲೈಫ್ ಫ್ಯಾಮಿಲಿಲೈಫ್ ಸಮತೋಲನ ಸಾಧಿಸುತ್ತೇನೆ"ವರೆಗೆ, "ಮೂರುಹೊತ್ತೂ ಸೋಷಿಯಲ್ ಮೀಡಿಯಾದಲ್ಲಿ ಒತ್ಲಾ ಹೊಡೆಯುವುದನ್ನು ನಿಲ್ಲಿಸುತ್ತೇನೆ"ಯಿಂದ ಹಿಡಿದು "ಜನವರಿ 1ರ ವಿಶ್ವವಾಣಿಯ ಮುಖಪುಟದಲ್ಲಿ ಬಂದ 25 ಯಶಸ್ಸೂತ್ರಗಳನ್ನು ಪಾಲಿಸುತ್ತ ನಡೆ-ನುಡಿಯಲ್ಲಿ ಸವ್ಯಸಾಚಿಯಾಗುತ್ತೇನೆ"ವರೆಗೆ- ತೀವ್ರತೆಯ ವಿವಿಧ ಪ್ರಮಾಣದಲ್ಲಿ ಕೈಗೊಂಡ, ಅನುಷ್ಠಾನಕ್ಕೆ ತಂದ ನಿರ್ಧಾರಗಳೆಲ್ಲ ಒಂದೊಂದಾಗಿ ಗೊಟಕ್ ಎನ್ನುತ್ತವೆ. ಬಹುಶಃ ಅವುಗಳದೂ ನೀರಿನ ಮೇಲಿನ ಗುಳ್ಳೆಯ ತೆರದಿ ಮೂರು ದಿನದ ಬಾಳು. ಜನವರಿ ಮೂರನೆಯ ತಾರೀಖಿಗೆ ಅವುಗಳ ಆಯುಷ್ಯ ಮುಗಿಯುತ್ತದೆ. ನನ್ನೊಬ್ಬ ಸ್ನೇಹಿತನಂತೂ ಉತ್ಪ್ರೇಕ್ಷೆಯಿಂದ ಹೇಳುವುದೇನೆಂದರೆ ನ್ಯೂ ಇಯರ್ ರಿಸೊಲ್ಯೂಷನ್ಸ್ ಬರೀ ಅಲ್ಪಾಯುಷಿಗಳಲ್ಲ, ಅವು ಹುಟ್ಟುವಾಗಲೇ ಸತ್ತಿರುತ್ತವೆ. ಇಂಗ್ಲಿಷ್‌ನಲ್ಲಿ stillbirth ಎನ್ನುವಂತೆ.

ಹೀಗೇಕಾಗುತ್ತದೆ? ಹೊಸವರ್ಷಕ್ಕೆಂದು ಮಾಡಿದ ನಿರ್ಧಾರಗಳೇಕೆ ಮುರಿದು ಬೀಳುತ್ತವೆ? ಈ ಬಗ್ಗೆ ಮನಃಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಏನನ್ನುತ್ತಾರೆ? ಇಲ್ಲಿವೆ, ಅಧ್ಯಯನಗಳನ್ನಾಧರಿಸಿದ ಒಂದಿಷ್ಟು ಅಂಶಗಳು.

ಒಂದು ನಂಬಿಕೆಯಿದೆ ಏನೆಂದರೆ, ಬದಲಾವಣೆಗೆ ವಿರೋಧ (resistance to change) ಎನ್ನುವುದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸ್ವಲ್ಪವಾದರೂ ಇದ್ದೇಇರುತ್ತದೆ. ಈಗಿದ್ದಂತೆಯೇ ಇರೋಣ, ಸುಮ್ಮನೆ ಬದಲಾಗುವುದೇಕೆ ಎಂಬ ಉದಾಸೀನತೆ. ಅಥವಾ ಒಂದು ನಮೂನೆಯ ತಾತ್ಸಾರ. ಅದೇವೇಳೆಗೆ, ಎಲ್ಲರಲ್ಲೂ ಅಲ್ಲದಿದ್ದರೂ ಹೆಚ್ಚಿನವರಲ್ಲಿ ಮಹತ್ವಾಕಾಂಕ್ಷೆಗಳೂ ಮನೆಮಾಡಿರುತ್ತವೆ ಎನ್ನುವುದೂ ಅಷ್ಟೇ ಸತ್ಯ. ಮಹತ್ತರವೇನನ್ನಾದರೂ ಸಾಧಿಸಬೇಕು, ಸಂಶೋಧಿಸಬೇಕು, ತಾನು ಬದಲಾಗುವುದಷ್ಟೇ ಅಲ್ಲ ಪ್ರಪಂಚಕ್ಕೂ ಒಳ್ಳೆಯ ರೀತಿಯ ಬದಲಾವಣೆಯನ್ನು ತರಬೇಕು ಎಂಬ ಕನಸುಳ್ಳವರು ಇರುತ್ತಾರೆ. ಅವರು ಸರ್ ಎಂ.ವಿಶ್ವೇಶ್ವರಯ್ಯ, ಅಬ್ದುಲ್ ಕಲಾಮ್, ಸುಧಾಮೂರ್ತಿಯಂಥವರಷ್ಟೇ ಆಗಿರಬೇಕಂತೇನಿಲ್ಲ; ನಮ್ಮಂಥ ಸಾಮಾನ್ಯರ ನಡುವೆಯೂ ಆ ರೀತಿ ಕನಸು ಹೊತ್ತವರು ಎಷ್ಟೋ ಜನರಿರುತ್ತೇವೆ. ಅಂಥವರ ಅಂತರಾಳದಲ್ಲಿ ಅದಮ್ಯ ಉತ್ಸಾಹವಿರುತ್ತದೆ. ಇಲ್ಲದಿದ್ದರೂ ಸೃಷ್ಟಿಸಿಕೊಳ್ಳುವ ಛಲವಿರುತ್ತದೆ. ಇದಕ್ಕಾಗಿ ವಿವಿಧ ಹಂತಗಳಲ್ಲಿ ಬದುಕನ್ನು ಬದಲಾಯಿಸಿಕೊಳ್ಳುವ, ದುರಭ್ಯಾಸಗಳನ್ನು ಕಿತ್ತೆಸೆಯುವ, ಉಪಯೋಗಕ್ಕೆ ಬಾರದ ಆಚಾರ-ವಿಚಾರಗಳಿಂದ ದೂರವುಳಿಯುವ ನಿರ್ಧಾರಗಳನ್ನು ಕೈಗೊಳ್ಳುತ್ತೇವೆ. ಧೂಮಪಾನ ಮಾಡುವುದಿಲ್ಲ, ಮದ್ಯ ಸೇವಿಸುವುದಿಲ್ಲ, ಮೂರು ಬಿಳಿವಿಷ (ಸಕ್ಕರೆ, ಮೈದಾ, ಉಪ್ಪು)ಗಳನ್ನು ಮುಟ್ಟುವುದಿಲ್ಲ ಅಂತಲೋ, ಸಜ್ಜನರೊಂದಿಗಷ್ಟೇ ಸಖ್ಯ ಬೆಳೆಸುತ್ತೇನೆ ಅಂತಲೋ, ಹೊಸದೊಂದು ತಂತ್ರಜ್ಞಾನವನ್ನು ಕಲಿತುಕೊಳ್ಳುತ್ತೇನೆ ಅಂತಲೋ ಬಹಳ ಸ್ಟ್ರಾಂಗ್ ವಿಲ್‌ಪವರ್ ಪ್ರಯೋಗಿಸಿ ಕೈಗೊಳ್ಳುವ ನಿರ್ಧಾರಗಳು ಅವು. ಫಲರೂಪವಾಗಿ ಅಲ್ಪಸ್ವಲ್ಪ ಆರಂಭಿಕ ಯಶಸ್ಸನ್ನೂ ಕಂಡುಕೊಳ್ಳುತ್ತೇವೆ. ಅದು ಮತ್ತಷ್ಟು ಸಾಧನೆಗೆ ಸೋಪಾನವಾಗಬಹುದು ಅಂತಲೂ ಅಂದುಕೊಳ್ಳುತ್ತೇವೆ. ಆದರೆ, ಕೆಲವರಿಗಷ್ಟೇ ಅದು ಸಿದ್ಧಿಸುತ್ತದೆ, ಇನ್ನುಳಿದವರಿಗೆ 'ಮೊದಲೆಲ್ಲಿದ್ದೆವೋ ಅಲ್ಲಿಗೇ ಹಿಂದಿರುಗಿದೆವು' ಅಂತಾಗುವುದೇ ಹೆಚ್ಚು. ಅಷ್ಟೇಅಲ್ಲ, ಬದಲಾಗಬೇಕೆಂಬ ಉತ್ಸಾಹ, ಅಲ್ಪ ಯಶಸ್ಸು, ನಿರಾಸಕ್ತಿ, ಮರುಪ್ರಯತ್ನ... ಇವು ಒಂಥರ ಆವರ್ತನಗೊಳ್ಳುವ ಸಂದರ್ಭಗಳೂ ಇರುತ್ತವೆ. ಉದಾಹರಣೆಗೆ ಪ್ರತಿ 3-4 ವರ್ಷಗಳಿಗೊಮ್ಮೆ ಉದ್ಯೋಗ ಬದಲಾವಣೆ (ಈಗೀಗ ಕಾರು ಬದಲಾವಣೆ, ಮನೆ ಬದಲಾವಣೆ, ತೀರಾ ವಿಪರೀತ ಕೇಸ್‌ಗಳಲ್ಲಿ ಸಂಗಾತಿಯ ಬದಲಾವಣೆ ಎಂದು ಬೇಕಾದರೂ ಅನ್ನಿ) ಮಾಡುವವರು ನಮ್ಮಲ್ಲಿ ಬೇಕಷ್ಟಿದ್ದಾರೆ.

ಲಂಡನ್‌ನಲ್ಲಿ ಥೇಮ್ಸ್ ನದಿಗೆ ಅಡ್ಡವಾಗಿ 'ಮಿಲೇನಿಯಮ್ ಬ್ರಿಡ್ಜ್' ಎಂಬ ಒಂದು ಕಾಲ್ಸೇತುವೆಯನ್ನು ಕಟ್ಟಲಾಯಿತು. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಿದ ಸೇತುವೆ. ಇಸವಿ 2000ದಲ್ಲಿ ಅದು ಸಾರ್ವಜನಿಕ ಸಂಚಾರಕ್ಕೆ ತೆರೆಯಲ್ಪಟ್ಟಿತು. ತಾಂತ್ರಿಕ ಕೌಶಲದ ಪರಮಾವಧಿ ಎನಿಸಿಕೊಂಡಿದ್ದ ಆ ಸೇತುವೆ ಜನಸಂಚಾರಕ್ಕೆ ಮೈಯೊಡ್ಡಿಕೊಳ್ಳುವವರೆಗೆ ಎಲ್ಲವೂ ಚೆನ್ನಾಗಿಯೇ ಇತ್ತು. ಆದರೆ ಹೆಚ್ಚುಹೆಚ್ಚು ಜನರು ಅದನ್ನು ಉಪಯೋಗಿಸತೊಡಗಿದಂತೆ ಸೇತುವೆ ಓಲಾಡತೊಡಗಿತು. ಅದರ ಮೇಲೆ ನಡೆದುಕೊಂಡು ಹೋಗುವುದು ಅಪಾಯವೆಂದಾಯಿತು! ಕೊನೆಗೂ ಅದನ್ನು ಮುಚ್ಚಿಬಿಡಬೇಕಾಯಿತು. ಕಟ್ಟುವಾಗ ಸುದೃಢವಾಗಿಯೇ ಇದ್ದ ಸೇತುವೆಗೆ ಜನರು ನಡೆದಾಡತೊಡಗಿದಾಗ ಏನಾಯ್ತು? ಆ ಸೇತುವೆಯನ್ನು ಮತ್ತೆ ಉಪಯೋಗಿಸುವಂತಾಗಲು ಪರಿಹಾರೋಪಾಯವೇನು? ಸೇತುವೆಯನ್ನು ಹಾಗೆಯೇ ಉಳಿಸಿ ಅದರ ಮೇಲೆ ಜನಸಂಚಾರವನ್ನು ನಿಯಂತ್ರಿಸುವುದು (ಅಂದರೆ ಒಮ್ಮೆಗೆ ಇಂತಿಷ್ಟು ಜನರು ಮಾತ್ರ ಸೇತುವೆಯ ಮೇಲಿರಬಹುದು, ಒಂದು ದಿಕ್ಕಿನಲ್ಲಿ ಇಂತಿಷ್ಟು ಜನರು ಮಾತ್ರ ಸಂಚರಿಸಬಹುದು ಇತ್ಯಾದಿ) ಒಂದು ಉಪಾಯ. ಅಥವಾ, ಸೇತುವೆಯ ಮೂಲಭೂತ ರಚನೆಯನ್ನೇ ಬದಲಾಯಿಸುವುದು ಇನ್ನೊಂದು ಉಪಾಯ. ಸಹಜವಾಗಿಯೇ ಎರಡನೆಯದು ಹೆಚ್ಚು ಪ್ರಾಕ್ಟಿಕಲ್ ಪರಿಹಾರ. ಅದನ್ನೇ ಮಾಡಿದರು. ಸೇತುವೆ ಮತ್ತೊಮ್ಮೆ ಸಾರ್ವಜನಿಕ ಉಪಯೋಗಕ್ಕೆ ತೆರೆದುಕೊಂಡಿತು. ಲಂಡನ್ ಬ್ರಿಡ್ಜ್‌ನ ಕಥೆ ಹೇಳಿದ್ದೇಕೆಂದರೆ, ಎಷ್ಟೋ ಸಲ ನಾವು ಬದುಕಿನಲ್ಲಿ ಸಮಸ್ಯೆಗಳನ್ನು ಎದುರಿಸುವಾಗ ನಮ್ಮ ವ್ಯಕ್ತಿತ್ವದ ಸಂರಚನೆಯನ್ನು ಬದಲಾಯಿಸುವ (structural change) ಗೋಜಿಗೆ ಹೋಗುವುದಿಲ್ಲ, ವರ್ತನೆಯನ್ನಷ್ಟೇ ಬದಲಾಯಿಸುವ ಪ್ರಯತ್ನ ಮಾಡುತ್ತೇವೆ. ಅದು ನಮ್ಮ ವರ್ತನೆಯಾದರೂ ಸೈ, ಇತರರ ವರ್ತನೆಯಾದರೂ ಸೈ. ಎಷ್ಟೋ ಸಂದರ್ಭಗಳಲ್ಲಿ ನಮಗೆ ನಮ್ಮ ವ್ಯಕ್ತಿತ್ವದ್ದೊಂದು ಸಂರಚನೆ (structure) ಅಂತ ಇರುತ್ತದೆ ಮತ್ತು ಅದರ ಮೇಲೆಯೇ ನಮ್ಮ ವರ್ತನೆ ಅವಲಂಬಿತವಾಗಿರುತ್ತದೆ ಎನ್ನುವ ಅಂಶವೇ ಗೊತ್ತಿರುವುದಿಲ್ಲ. ವ್ಯಕ್ತಿತ್ವದ ಸಂರಚನೆಯನ್ನು ಸರಿಯಾಗಿ ಅರ್ಥಮಾಡಿಕೊಂಡರಷ್ಟೇ ಅದನ್ನು ಬದಲಾಯಿಸಬಹುದು. ಕೆಟ್ಟ ವರ್ತನೆ ಅಂತ ಏನಿದೆಯೋ ಅದು ಕೆಟ್ಟ ಸಂರಚನೆಯಿಂದಲೇ ಉಂಟಾಗುವುದು. ಆದ್ದರಿಂದ ಕೆಟ್ಟ ವರ್ತನೆಯನ್ನು ಬದಲಾಯಿಸಬೇಕಾದರೆ ಕೆಟ್ಟ ಸಂರಚನೆಗಳನ್ನು ಬದಲಾಯಿಸಬೇಕು. ಒಳ್ಳೆಯದಿರಲಿ ಕೆಟ್ಟದಿರಲಿ ವರ್ತನೆಯನ್ನಷ್ಟೇ ಬದಲಾಯಿಸಲು ಹೊರಟರೆ ಹೊಸವರ್ಷದ ರಿಸೊಲ್ಯೂಷನ್‌ಗಳದೇ ಗತಿಯಾಗುವುದು. ಒಮ್ಮೆ ಆರಂಭಿಕ ಯಶಸ್ಸು, ಆಮೇಲೆ ಅದೇ ಹಳೆಯ ಚಾಳಿಯ ಮರುಕಳಿಕೆ.

ಸರಿ, ಆದರೆ ವ್ಯಕ್ತಿತ್ವದ ಸಂರಚನೆ ಎಂದರೇನು? ಅದನ್ನು ಬದಲಾಯಿಸುವುದಾದರೂ ಸುಲಭಸಾಧ್ಯ ಕಾರ್ಯವೇ? ಭೌತಶಾಸ್ತ್ರದ ಕೆಲವು ತತ್ತ್ವಗಳನ್ನು ಅನ್ವಯಿಸಿ ಇದನ್ನು ಅರ್ಥಮಾಡಿಕೊಳ್ಳಬಹುದು. ಒಂದನೆಯದಾಗಿ, ಶಕ್ತಿಯ ಪ್ರವಾಹವು ಯಾವಾಗಲೂ ಅತ್ಯಂತ ಕಡಿಮೆ ನಿರೋಧದ ಮಾರ್ಗವನ್ನೇ ಆಯ್ದುಕೊಳ್ಳುತ್ತದೆ. ಇಂಗ್ಲಿಷ್‌ನಲ್ಲಿ ಇದನ್ನೇ Least resistance path ಎನ್ನುವುದು. ಎರಡನೆಯದಾಗಿ ಒತ್ತಡ (ಟೆನ್ಷನ್) ಇರುವ ಸನ್ನಿವೇಶ ಶೀಘ್ರವಾಗಿ ಅದರ ನಿವಾರಣೆಯನ್ನು ಕಂಡುಕೊಳ್ಳುತ್ತದೆ. ಏನೋ ಒಂದು ವಸ್ತು ಅಥವಾ ಸೌಕರ್ಯ ನಮ್ಮಲ್ಲಿಲ್ಲ, ಆದರೆ ನಮಗದು ಬೇಕು ಅಂತಿಟ್ಟುಕೊಳ್ಳಿ. ಭೌತಶಾಸ್ತ್ರದ ದೃಷ್ಟಿಯಿಂದ ನೋಡುವುದಾದರೆ, ಬೇಕು ಎಂಬ ಆ ಬಯಕೆಯೇ ಒಂದು 'ಟೆನ್ಷನ್'. ಅದೇರೀತಿ ಏನೋ ಒಂದು ವಸ್ತು ಅಥವಾ ದುರಭ್ಯಾಸ ನಮ್ಮಲ್ಲಿದೆ, ಅದರಿಂದ ಮುಕ್ತಿ ಪಡೆಯಬೇಕಾಗಿದೆ, ಆಗಲೂ ಅಲ್ಲೊಂದು 'ಟೆನ್ಷನ್' ನಿರ್ಮಾಣವಾಗಿರುತ್ತದೆ. ಇಂಥ ಅದೆಷ್ಟೋ ಟೆನ್ಷನ್‌ಗಳು ನಮ್ಮ ಬದುಕಿನ ಅವಿಭಾಜ್ಯ ಅಂಗಗಳಾಗಿ ಬಿಟ್ಟಿರುತ್ತವೆ. ಅಷ್ಟೇಅಲ್ಲ ಬಹಳ ಸಂಕೀರ್ಣವಾಗಿಯೂ ಇರುತ್ತವೆ. ಉದಾಹರಣೆಗೆ, ಹಸಿವು (ಆಹಾರ ಬೇಕು) ಎನ್ನುವುದು ಒಂದು ಟೆನ್ಷನ್. ಅದರ ನಿವಾರಣೆಯಾಗಬೇಕಾದರೆ ಆಹಾರ ತಿನ್ನಲೇಬೇಕು. ಆದರೆ, ಸ್ಥೂಲಕಾಯ ಎನ್ನುವುದೂ ಒಂದು ಟೆನ್ಷನ್. ಅದರ ನಿವಾರಣೆಯಾಗಬೇಕಾದರೆ ಆಹಾರ ತಿನ್ನಬಾರದು. ಒಂದಕ್ಕೊಂದು ವಿರುದ್ಧ ಟೆನ್ಷನ್‌ಗಳು! ಅವುಗಳ ನಿವಾರಣೆ ಕಷ್ಟಸಾಧ್ಯವಾಗುತ್ತ ಹೋಗುತ್ತದೆ, ಹತಾಶೆಯಾಗುತ್ತದೆ, ಆಗ ಅದೇ ಒಂದು ಹೊಸ ಟೆನ್ಷನ್!

ಸಂಕೀರ್ಣ ಟೆನ್ಷನ್ ಸಿಸ್ಟಮ್‌ನ ಇನ್ನೊಂದು ಉದಾಹರಣೆಯನ್ನು ನೋಡೋಣ. ಪ್ರಾಣಕ್ಕಿಂತಲೂ ಹೆಚ್ಚಾಗಿ ಪರಸ್ಪರ ಪ್ರೀತಿಸುವ ಒಂದು ಗಂಡು-ಹೆಣ್ಣು ಜೋಡಿ. ಅವರಿಬ್ಬರಲ್ಲಿ ಎಲ್ಲ ಚೆನ್ನಾಗಿಯೇ ಇದೆ, ಆದರೆ ಹುಡುಗನ ಗುಣದಲ್ಲಿ ಏನೋ ಒಂದು ಸಣ್ಣ ಅಂಶ ಹುಡುಗಿಗೆ ಇಷ್ಟವಿಲ್ಲ. ಅದರಿಂದ ಅವನು ಮುಕ್ತನಾಗಬೇಕು ಎನ್ನುವುದು ಅವಳ ಬಯಕೆ. ಹಾಗಾಗಬೇಕಿದ್ದರೆ ಅದನ್ನವಳು ಆತನಲ್ಲಿ ಹೇಳಬೇಕು. ಅವನೆಲ್ಲಿ ನೊಂದುಕೊಳ್ಳುತ್ತಾನೋ ಎಂದು ಆಕೆ ಅದನ್ನು ಪ್ರಸ್ತಾವಿಸುವುದೇ ಇಲ್ಲ. ಆದರೂ ಮನದಲ್ಲಿ ಕೊರಗು, ಛೇ ಅದೊಂದು ಕೆಟ್ಟ ಅಭ್ಯಾಸವಿಲ್ಲದಿರುತ್ತಿದ್ದರೆ ಎಷ್ಟು ಒಳ್ಳೆಯ ಸಂಗಾತಿ ಸಿಕ್ಕಿದ್ದಾನೆ ತನಗೆ! ಒಂದುವೇಳೆ ಹೇಳಿಬಿಡುವ ಧೈರ್ಯ ಮಾಡಿದರೆ ಆಗ ಅವನು ನೊಂದುಕೊಂಡು ತನ್ನನ್ನು ತೊರೆದರೆ? ಅಂದರೆ, ಕೆಟ್ಟ ಗುಣದ ಬಗ್ಗೆ ಅವಳು ಪ್ರಸ್ತಾವಿಸದೆ ಇದ್ದರೆ ಅವರ ಪ್ರೇಮ ಖಂಡಿತವಾಗಿ ಹೆಚ್ಚುತ್ತದೆ, ಆದರೆ ಪ್ರೀತಿ-ಸಲಿಗೆಯಿಂದಾಗಿ ಅವಳು ಅದನ್ನು ಪ್ರಸ್ತಾವಿಸುವ ಸಂಭವನೀಯತೆಯೂ ಹೆಚ್ಚುತ್ತದೆ! ಪ್ರಸ್ತಾವಿಸಿದ್ದೇ ಆದರೆ ಅವನು ನೊಂದುಕೊಂಡು ಅವಳನ್ನು ಬಿಟ್ಟುಬಿಡುವ ಸಾಧ್ಯತೆಯೂ ಹೆಚ್ಚುತ್ತದೆ. ಅವೆಲ್ಲ ಒಂದಕ್ಕೊಂದು ತಳುಕುಹಾಕಿಕೊಂಡ ಒತ್ತಡಗಳು.

ಈ ರೀತಿ ಸಂಕೀರ್ಣ ಒತ್ತಡಗಳ ಒಟ್ಟು ವ್ಯವಸ್ಥೆಯನ್ನೇ ವ್ಯಕ್ತಿತ್ವದ ಸಂರಚನೆ ಎನ್ನುವುದು. ಮನಃಶಾಸ್ತ್ರದಲ್ಲಿ ಇಂಥ ಸಂಕೀರ್ಣ ಒತ್ತಡಗಳ ಬಗ್ಗೆ, ಅವುಗಳ ನಿವಾರಣೋಪಾಯಗಳ ಬಗ್ಗೆ ಇನ್ನಷ್ಟು ವಿಸ್ತೃತವಾಗಿ ವಿವರಿಸಿದ್ದಿರುತ್ತದೆ. ಒತ್ತಡಗಳನ್ನು ನಿವಾರಿಸಬೇಕೆಂಬ ಆಸೆಯಿರುವುದು ಸಹಜವೇ, ಅವುಗಳ ನಿವಾರಣೆ ಕಷ್ಟಸಾಧ್ಯ ಎಂಬ ಅರಿವು ಬೇಕೆನ್ನುವುದೂ ಅಷ್ಟೇ ಸಹಜ. ಪ್ರೇರಣೆ ಇದ್ದರೆ ಮಾತ್ರ ಒತ್ತಡವನ್ನು ನಿವಾರಿಸಬಹುದು. ಒತ್ತಡ ಕಡಿಮೆಯಾದಂತೆಲ್ಲ ಪ್ರೇರಣೆ ಸಹ ಕಡಿಮೆಯಾಗಬಹುದು! ಉದ್ದೇಶಿತ ಗುರಿ ಸಮೀಪಿಸಿದಂತೆಲ್ಲ ಕಾರ್ಯಸಾಧನೆ ಕಷ್ಟಕರವಾಗುತ್ತ ಹೋಗುವುದು ಅದೇ ಕಾರಣಕ್ಕೆ. ಡಿಸೆಂಬರ್ 31ರ ಮಧ್ಯರಾತ್ರಿ ಹನ್ನೆರಡು ಹೊಡೆದಾಗ 'ಹ್ಯಾಪಿ ನ್ಯೂ ಇಯರ್!' ಎಂದು ಚೀರಿದ ಆ ಕ್ಷಣದಿಂದ ಬದಲಾಗಿಬಿಡುತ್ತೇನೆ ಎಂದು ಕೈಗೊಂಡ ನಿರ್ಧಾರಗಳು ಹೊಸವರ್ಷದ ಮೊದಲ ವಾರದಲ್ಲೇ, ಮೂರು ದಿನಗಳಲ್ಲೇ ಮುರಿದು ಬೀಳುವುದೂ ಅದೇ ಕಾರಣಕ್ಕೆ! ಅಂದಹಾಗೆ ನೀವೇನಾದರೂ 2025ಕ್ಕೆಂದು ನಿರ್ಧಾರಗಳನ್ನು ಕೈಗೊಂಡಿದ್ದೀರಾದರೆ ಹೀಗೆ ಅಪಶಕುನ ನುಡಿಯಲಾರೆ. ನಿಮ್ಮ ನಿರ್ಧಾರಗಳು ಅಲ್ಪಾಯುಷಿಗಳಾಗದೆ ಯಶಸ್ಸನ್ನು ಕಾಣಲೆಂದೇ ನನ್ನ ಹಾರೈಕೆ.



ಮಾತು ನ್ಯೂ ಇಯರ್ ರಿಸೊಲ್ಯೂಷನ್‌ಗಳದ್ದಾದ್ದರಿಂದ ಮೊನ್ನೆ ಒಂದು ಕಡೆ ಓದಿದ ಒಂದು ಪಟ್ಟಿಯನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ. ಇದು ರಿಸೊಲ್ಯೂಷನ್‌ಗಳ ಪಟ್ಟಿಯಲ್ಲ, ವ್ಯಕ್ತಿತ್ವವಿಕಸನದ ಮ್ಯಾನೇಜ್‌ಮೆಂಟ್ ಗುರುಗಳ ಬೋಧನೆಯೂ ಅಲ್ಲ. ವಿಜ್ಞಾನಿಗಳು ಸಂಶೋಧನೆ ಮತ್ತು ಸಮೀಕ್ಷೆಗಳನ್ನು ಆಧರಿಸಿ ಮಾಡಿರುವುದು. ಪ್ರಕೃತಿಯ ಒಡನಾಟದಿಂದ, ಹೊರಾಂಗಣ (ಔಟ್‌ಡೋರ್)ದಲ್ಲಿ ದಿನಾ ಸ್ವಲ್ಪ ಹೊತ್ತು ಕಳೆಯುವುದರಿಂದ ನಮ್ಮ ಮಿದುಳಿಗೆ, ದೇಹಕ್ಕೆ ಮತ್ತು ಆತ್ಮಕ್ಕೆ ವೈಜ್ಞಾನಿಕ ರೀತ್ಯಾ ಪ್ರಯೋಜನಗಳೇನು ಎಂಬ ಪಟ್ಟಿ. 'ಹದುಳ ಹೆಚ್ಚಿಸಲಿಕ್ಕೆ ಹೊರಾಂಗಣದಲ್ಲಿ ಹತ್ತು ಹೆಜ್ಜೆ' ಅಂತ ಇದಕ್ಕೊಂದು 'ಹ-ಕಾರ' 'ಹೆಡ್‌ಲೈನ್' ಅಷ್ಟೇ ನನ್ನ ಕಡೆಯಿಂದ. ಹದುಳ ಅಂದರೆ ಕ್ಷೇಮ. ಇಷ್ಟವಾದರೆ ಇದನ್ನೊಂದು ದೀರ್ಘಾಯುಷಿ ರಿಸೊಲ್ಯೂಷನ್ ಆಗಿ ನೀವೂ ಪರಿಗಣಿಸಬಹುದು.

1. ಹೊರಾಂಗಣದಲ್ಲಿ ಬರೀ 20 ನಿಮಿಷಗಳಷ್ಟಿದ್ದರೂ ಸಾಕು, ಒಂದು ಕಪ್ ಕಾಫಿ ಸೇವನೆಯು ಕೊಡಬಹುದಾದಷ್ಟು ಚೈತನ್ಯವು ಮಿದುಳಿಗೆ ಸಿಗುತ್ತದೆ, ಕೆಫಿನ್‌ನ ಅಡ್ಡಪರಿಣಾಮಗಳಿಲ್ಲದೆ. 2. ಹೊರಾಂಗಣದಲ್ಲಿ ವ್ಯಾಯಾಮ ಮಾಡುವುದು ಒಳಾಂಗಣದಲ್ಲಿ ಮಾಡುವುದಕ್ಕಿಂತ ಕಡಿಮೆ ಶ್ರಮದಾಯಕ. ಹುಲ್ಲು, ಮರಗಿಡಗಳ ಹಸುರು ಬಣ್ಣವು ಮಾನಸಿಕವಾಗಿಯೂ ಶಕ್ತಿವರ್ಧಕವಾಗುತ್ತದೆ. 3. ಚಿಕ್ಕಂದಿನಿಂದಲೇ ಹೊರಾಂಗಣ ಚಟುವಟಿಕೆಗಳ ಅಭ್ಯಾಸ ಬೆಳೆಸಿಕೊಂಡರೆ ದೃಷ್ಟಿದೋಷಗಳು ಬರುವ ಸಾಧ್ಯತೆ ಕಡಿಮೆ. 4. ಸೂರ್ಯಕಿರಣಗಳಿಗೆ ನಮ್ಮ ದೇಹದ ನೋವು ನಿವಾರಿಸುವ ಶಕ್ತಿಯಿರುತ್ತದೆ, ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೂ ಸ್ವಲ್ಪ ಹೊತ್ತಾದರೂ ಬಿಸಿಲಿಗೆ ಮೈಯೊಡ್ಡುವ ಅವಕಾಶ ಸಿಕ್ಕಿದರೆ ಅವರ ದುಗುಡ-ದುಮ್ಮಾನ ಕಡಿಮೆಯಾಗುತ್ತದೆ. 5. ಮರಗಿಡಗಳು ಉತ್ಪಾದಿಸುವ ವಿಶೇಷ ರಾಸಾಯನಿಕಗಳು ಗಾಳಿಯಲ್ಲಿ ಸೇರಿ ನಮ್ಮ ಉಸಿರಿನ ಮೂಲಕ ದೇಹ ಪ್ರವೇಶಿಸಿದರೆ ಬಿಳಿರಕ್ತಕಣಗಳ ಸಂಖ್ಯೆ ವೃದ್ಧಿಯಾಗಿ ನಮ್ಮಲ್ಲಿ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. 6. ಗುಲಾಬಿ, ಸೇವಂತಿಗೆ, ಜಾಜಿಯಂಥ ಹೂವುಗಳದಿರಲಿ, ಕತ್ತರಿಸಿದ ಹುಲ್ಲಿನದಿರಲಿ, ಮರಗಳಿಂದ ಉದುರಿದ ಕಾಯಿಗಳದೇ ಇರಲಿ- ವಿವಿಧ ಪರಿಮಳಗಳು ಉಚಿತ ಅರೋಮಾಥೆರಪಿಯಂತೆ ಕಾರ್ಯವೆಸಗಿ ಮನಸ್ಸನ್ನು ಶಾಂತ ಮತ್ತು ಒತ್ತಡರಹಿತವಾಗಿಸುತ್ತವೆ. 7. ಸೃಷ್ಟಿಯ ಮಡಿಲಲ್ಲಿ ಒಂದಿಷ್ಟು ಕಾಲ ಕಳೆಯುವುದು ನಮ್ಮಲ್ಲಿನ ಸೃಷ್ಟಿಶೀಲತೆ (ಕ್ರಿಯೇಟಿವಿಟಿ)ಯನ್ನು ಹೆಚ್ಚಿಸುತ್ತದೆ. ನದೀತಟದಲ್ಲಿ, ಜುಳುಜುಳು ನೀರು ಹರಿಯುವಲ್ಲಿ ಕಾವ್ಯಕಲ್ಪನೆ ಹರಿಯುತ್ತದೆಂದು ಕವಿಗಳೂ ಇದನ್ನು ಅನುಮೋದಿಸಬಲ್ಲರು. 8. ಚಳಿಗಾಲದಲ್ಲಿ ಹವಾಮಾನದ ಥಂಡಿಯಿಂದ, ಹಗಲಿನ ಅವಧಿ ಕಡಿಮೆಯಾಗುವುದರಿಂದ, ಉಂಟಾಗುವ ಸೀಸನಲ್ ಎಫೆಕ್ಟಿವ್ ಡಿಸಾರ್ಡರ್‌ನ ತೀವ್ರತೆ ಸಹ, ಹೊರಾಂಗಣದಲ್ಲಿ ಸ್ವಲ್ಪ ಹೊತ್ತನ್ನು ಕಳೆದರೆ ತಗ್ಗುತ್ತದೆ. 9. ನಮ್ಮ ಶರೀರಕ್ಕೆ ಅತ್ಯಾವಶ್ಯಕ ಪೋಷಕಾಂಶವಾದ ಡಿ-ಜೀವಸತ್ತ್ವ ಸೂರ್ಯರಶ್ಮಿಯಲ್ಲೇ ಹೇರಳವಾಗಿ ಇರುವುದು. ಆಹಾರಪದಾರ್ಥಗಳಿಂದ ಅಥವಾ ಮಾತ್ರೆಗಳಿಂದ ಅದನ್ನು ಅರೆಬರೆಯಾಗಿ ಪಡೆಯುವುದಕ್ಕಿಂತ ಸೂರ್ಯಪ್ರಸಾದವೆಂಬಂತೆ ಭರಪೂರವಾಗಿ ಪಡೆಯಬಹುದು. 10. ಮನೆಯೊಳಗೆ, ಆಫೀಸಿನ ನಾಲ್ಕು ಗೋಡೆಗಳೊಳಗೆ ದೊರಕಿಸಿಕೊಳ್ಳಲಾಗದ ಏಕಾಗ್ರತೆಯನ್ನು, ಉದ್ಯಾನದಲ್ಲೋ ಹುಲ್ಲುಗಾವಲಿನಲ್ಲೋ ಹತ್ತಿಪ್ಪತ್ತು ನಿಮಿಷ ನಡೆಯುವುದರಿಂದ ಪಡೆಯಬಹುದು. ಒಟ್ಟಿನಲ್ಲಿ ದೈನಂದಿನ ಜೀವನದ ಜಂಜಾಟಗಳನ್ನೆಲ್ಲ ಮರೆತು ಆತ್ಮ-ಪರಮಾತ್ಮ, ವ್ಯಕ್ತಿಗತ ಸಂಬಂಧಗಳು, ಸಹಬಾಳ್ವೆ-ಸಮಾಜಸಂಗ-ಸತ್ಸಂಗಗಳ ಒಳ್ಳೆಯ ವಿಚಾರಗಳನ್ನು ಉದ್ದೀಪನಗೊಳಿಸಲಿಕ್ಕೆ, ತನ್ಮೂಲಕ ನಮ್ಮನ್ನು ಒಳ್ಳೆಯ ಮನುಷ್ಯರಾಗಿಸುವುದಕ್ಕೆ ಪ್ರಕೃತಿಯ ಮಡಿಲಿಗೆ ಪರ್ಯಾಯವಾದುದು ಬೇರೆ ಇಲ್ಲ, ಅದರ ಫಲಾನುಭವಿಗಳಾಗುತ್ತೇವೆ ಎಂಬ ಪಣ ತೊಡಬೇಕು, ಪ್ರತಿದಿನವೂ ಪ್ರವೃತ್ತರಾಗಬೇಕು ಅಷ್ಟೇ.

ಮನಮೋಹನ-ಮೌನದ ಕುರಿತು ನಾಲ್ಕು ಮಾತುಗಳು

‘ಮೌನ’ ಎನ್ನುವುದು ಕೇವಲ ‘ಮಾತನಾಡದೇ ಇರುವ’ ಸ್ಥಿತಿಯಲ್ಲ ಎಂಬುದು ಮೊದಲಿಗೆ ಎಲ್ಲರಿಗೂ ಮನವರಿಕೆಯಾಗಬೇಕಾದ ವಿಷಯ. ಮೌನಕ್ಕೆ ಅತ್ಯಂತ ವಿಶಾಲಾರ್ಥವಿದೆ. ಮೌನ ಎಂಬುದು ಗುಣವೂ ಹೌದು, ದೋಷವೂ ಹೌದು. ಯಾವ್ಯಾವ ಸಂದರ್ಭಗಳಲ್ಲಿ ಸುಮ್ಮನಿರುವುದರಿಂದ ಸಂಘರ್ಷಗಳು ತಪ್ಪುತ್ತವೆಯೋ ಅಥವಾ ಸಂಬಂಧಗಳು ಉಳಿದುಕೊಳ್ಳುತ್ತವೆಯೋ, ಅಲ್ಲಿ ಅದು ‘ಗುಣ’ವಾಗಿ ಗಣಿಸಲ್ಪಡುತ್ತದೆ. ಆದರೆ, ಎಲ್ಲಿ ಮಾತು ಅತ್ಯವಶ್ಯವೋ ಅಲ್ಲಿ ಸುಮ್ಮನಿದ್ದರೆ, ಅದು ದೋಷವಾಗಿ ಪರಿಗಣಿತವಾಗುತ್ತದೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಖ್ಯಾತ ಅರ್ಥಶಾಸ್ತ್ರಜ್ಞ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ಮೊನ್ನೆ ನಿಧನರಾದ ಮೇಲೆ, ಅವರ ಮೌನದ ಕುರಿತಾದ ಚರ್ಚೆಗಳು ಇದ್ದಕ್ಕಿದ್ದ ಹಾಗೆ ಶುರುವಾದವು. ‘‘ಈಗಿರುವ ವಾಚಾಳಿ ಪ್ರಧಾನಿಯ ಮುಂದೆ ‘ಮೌನಿ’ ಸಿಂಗ್ ಅವರೇ ಲೇಸು’’ ಎಂದೆಲ್ಲಾ ವಿಶ್ಲೇಷಿಸಲು ಕೆಲವರು ಶುರುವಿಟ್ಟುಕೊಂಡರು. ಸಿಂಗ್ ಅವರ ಕಾಲದಲ್ಲಿ ವಿಪಕ್ಷಗಳು ಅವರನ್ನು ‘ಮೌನ’ಮೋಹನ್ ಸಿಂಗ್ ಅಂತಲೂ, ಮನ‘ಮೌನ’ ಸಿಂಗ್ ಅಂತಲೂ ಕರೆಯುತ್ತಿದ್ದುದನ್ನು ನಾವು ನೆನಪಿಸಿಕೊಳ್ಳಬಹುದು. ‘‘ಸಿಂಗ್ ಅವರ ನಿಧನವಾರ್ತೆ ಪ್ರಕಟಿಸುವಾಗ ಕನ್ನಡದ 3 ಜನಪ್ರಿಯ ದಿನಪತ್ರಿಕೆಗಳು ‘ಚಿರಮೌನ’ ಎಂಬ ಪದ ಬಳಸಿ ಅವರಿಗೆ ಒಂದು ರೀತಿಯಲ್ಲಿ ಅಗೌರವ ತೋರಿವೆ. ಮೌನ ಎನ್ನುವ ನರೇಟಿವ್‌ನಿಂದ ಪ್ರೇರಿತವಾದ ಈ ಶೀರ್ಷಿಕೆಗಳ ಹಿಂದಿನ ಕ್ರೌರ್ಯ ನಮ್ಮ ಇಂದಿನ ಸಾಮಾಜಿಕ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ’’ ಎಂದೆಲ್ಲಾ ಈಗ ನೆಟ್ಟಿಗರು ಹೇಳಿಕೊಳ್ಳುತ್ತಿದ್ದಾರೆ. ‘‘ಮಾತಾಡಲೇಬೇಕಾದಲ್ಲಿ ಸಿಂಗ್ ಯಾವತ್ತೂ ಮೌನವಾಗಿರಲಿಲ್ಲ; ಅವರು ಮಾಡಿದ ಕೆಲಸಗಳೇ ಮಾತನಾಡುತ್ತಿದ್ದುದರಿಂದ ಅವರು ಮಾತನಾಡುವ ಅಗತ್ಯ ಬರಲಿಲ್ಲ’’ ಎಂದೆಲ್ಲಾ ಮಾತನಾಡಿಕೊಳ್ಳುವವರಿದ್ದಾರೆ.

ಆದರೆ, ಸಿಂಗ್ ಅವರ ಮರಣವಾರ್ತೆಯನ್ನು ಪ್ರಕಟಿಸುವಾಗ ಯಾವ ಪತ್ರಿಕೆಯವರಿಗೂ ಅವರನ್ನು ಅಗೌರವಿಸುವ ಉದ್ದೇಶವಿತ್ತು ಎಂದು ನನಗಂತೂ ಅನಿಸುವುದಿಲ್ಲ. ಹಿಂದೆ ಅನೇಕ ನಾಯಕರ ಮರಣವಾರ್ತೆ ಪ್ರಕಟವಾದ ಸಂದರ್ಭದಲ್ಲೂ ‘ಚಿರಮೌನ’ ಎಂಬ ಪದವನ್ನು ಪತ್ರಿಕೆಗಳು ಬಳಸಿರುವುದನ್ನು ನೋಡಿದ್ದೇವೆ. ಆದರೆ ಈಗೇಕೋ ಕೆಲವರಿಗೆ ಅದು ನೋವುಂಟುಮಾಡಿರುವಂತೆ ತೋರುತ್ತಿದೆ. ಸಿಂಗ್‌ರ ಅಧಿಕಾರಾವಧಿಯಲ್ಲಿ ಅವರನ್ನು ಜರಿದವರೂ, ಇಂದು ಅವರ ಮೌನದ ಪರವಾಗಿ ಮಾತನಾಡುತ್ತಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಇರಲಿ, ‘ಮೌನ’ ಎನ್ನುವುದು ಕೇವಲ ‘ಮಾತನಾಡದೇ ಇರುವ’ ಸ್ಥಿತಿಯಲ್ಲ ಎಂಬುದು ಮೊದಲಿಗೆ ಎಲ್ಲರಿಗೂ ಮನವರಿಕೆಯಾಗಬೇಕಾದ ವಿಷಯ. ಮೌನಕ್ಕೆ ಅತ್ಯಂತ ವಿಶಾಲಾರ್ಥವಿದೆ. ಮನುಷ್ಯನಿಗೆ ಮಾತನಾಡದೇ ಇರಲು ಅವನ ಒಂದು ನಿರ್ಧಾರ ಸಾಕು; ಆದರೆ ಮೌನವಾಗಿರಲು ನಿರ್ಧಾರವೊಂದೇ ಸಾಲದು, ಸಾಧನೆಯೂ ಬೇಕಾಗುತ್ತದೆ. ‘ಮೌನ’ ಎನ್ನುವುದು ಮುನಿಯ ಭಾವ. ಅದು ನಾಲಿಗೆಯನ್ನು (ವಾಕ್) ದಾಟಿ, ಮನಸ್ಸನ್ನೂ ಮೀರಿರುವ, ಮನಸ್ಸೇ ಮೌನವಾದ ಒಂದು ಪ್ರಶಾಂತ ಸ್ಥಿತಿ. ತನ್ನ ಮನಸ್ಸು ಲಯವಾದ ಅಥವಾ ಕಳೆದುಹೋದ ಸ್ಥಿತಿಯನ್ನು ಯಾರಾದರೂ ಅನುಭವಿಸುತ್ತಿದ್ದರೆ, ಅವರನ್ನು ಮೌನಿಗಳು ಎನ್ನಬಹುದು (ಯನ್ಮನೋ ವಿಲಯಂ ಯಾಂತಿ..). ಹಾಗಾಗಿ, ಮನಮೋಹನರು ಹೆಚ್ಚು ಮಾತನಾಡುತ್ತಿರಲಿಲ್ಲ ಎನ್ನಬಹುದೇ ವಿನಾ, ಅವರನ್ನು ಮೌನಿಗಳು ಎಂದರೆ ತಪ್ಪಾಗಿ ಅರ್ಥೈಸಿದಂತಾಗುತ್ತದೆ. ಏನೋ ಪ್ರಾಸವನ್ನು ಹೊಂದಿಸಿ ಹೇಳಲು ಅನುಕೂಲ್ಯವಿರುವುದರಿಂದ ‘ಮೌನ ಮೋಹನ’ ಎಂದು ಜನ ಕರೆಯುತ್ತಿದ್ದರೇನೋ, ಅಷ್ಟೇ. ಮೌನ ಎನ್ನುವುದು ಬೇರೆ, ಮಾತನಾಡದಿರುವ ಸ್ಥಿತಿ ಬೇರೆ ಎಂದು ತಿಳಿಸಲು ಇಷ್ಟೆಲ್ಲಾ ಹೇಳಬೇಕಾಯಿತು.

ಇನ್ನು, ನಾವು ಸಾಮಾನ್ಯವಾಗಿ ಅರ್ಥೈಸುವ ‘ಮಾತನಾಡದಿರುವ ಮೌನ’ಕ್ಕೆ ಅನೇಕ ಮಜಲುಗಳಿವೆ. ಉದಾಹರಣೆಗೆ, ಒಂದು ವಿಷಯದ ಕುರಿತು ನಾಲ್ಕೈದು ಜನ ಕುಳಿತು ನಿರ್ಧರಿಸಬೇಕಾದಾಗ, ಒಬ್ಬ ಮಾತನಾಡದೇ ಸುಮ್ಮನಿದ್ದಾನೆ ಎಂದರೆ ಅವನ ಮೌನವನ್ನು ‘ಸ್ವೀಕೃತಿ’ ಅಥವಾ ‘ಸಮ್ಮತಿ’ಯೆಂತಲೂ ಪರಿಗಣಿಸುವ ಸಾಧ್ಯತೆಯಿದೆ (ಮೌನಂ ಸಮ್ಮತಿ ಲಕ್ಷಣಂ). ಇನ್ನು, ಕೆಲ ಸಂದರ್ಭದಲ್ಲಿ ಮಾತನಾಡದಿರುವುದರ ಮರ್ಮ– ‘ವೃಥಾ ಸಂಘರ್ಷ ಬೇಡ’ ಎನ್ನುವುದೂ ಆಗಿರುತ್ತದೆ. ‘ಸುಮ್ಮನಿರುವವರಿಗೆ ಜಗಳದ ಗೋಜಿಲ್ಲ’ ಎನ್ನುತ್ತಾರಲ್ಲಾ, ಹಾಗೆ (ಮೌನೇನ ಕಲಹಂ ನಾಸ್ತಿ). ಇಂಥ ಸಂದರ್ಭಗಳಲ್ಲಿ ಬಹಳ ಜನ ಮಾತನಾಡದೇ ಸುಮ್ಮನಿರಲು ಆಯ್ಕೆಮಾಡುವುದನ್ನು ನಿತ್ಯಜೀವನದಲ್ಲಿ ನೋಡುತ್ತೇವೆ. ಇನ್ನು, ‘ನಾನು ಮಾತನಾಡಿದರೆ ಕೆಟ್ಟವನಾಗಿಬಿಡುತ್ತೇನೆ’ ಎಂಬ ಭಯವೂ ಮನುಷ್ಯರನ್ನು ಸುಮ್ಮನಿರಿಸಲು ಕಾರಣವಾಗುತ್ತದೆ. ‘ನಚ ಕಶ್ಚಿತ್ ಶೃಣೋತಿ ಮಾಮ್’– ನನ್ನ ಮಾತನ್ನು ಯಾರೂ ಕೇಳುವುದಿಲ್ಲವಾದ್ದರಿಂದ, ನಾನು ಸುಮ್ಮನಿರುವುದೇ ಲೇಸು ಎಂಬುದು ಮತ್ತೊಂದು ಆಯಾಮ. ಈ ಕೊನೆಯ ಆಯಾಮ ಡಾ.ಮನಮೋಹನ್ ಸಿಂಗ್‌ರ ಮೌನಕ್ಕೆ ಕಾರಣವಾಗಿತ್ತೋ ಏನೋ!

ಸರಿಯಾಗಿ ಅವಲೋಕಿಸಿದರೆ, ಮೌನ ಎನ್ನುವುದು ಗುಣವೂ ಹೌದು, ದೋಷವೂ ಹೌದು. ಯಾವ್ಯಾವ ಸಂದರ್ಭಗಳಲ್ಲಿ ಸುಮ್ಮನಿರುವುದರಿಂದ ಸಂಘರ್ಷಗಳು ತಪ್ಪುತ್ತವೆಯೋ ಅಥವಾ ಸಂಬಂಧಗಳು ಉಳಿದುಕೊಳ್ಳುತ್ತವೆಯೋ, ಅಲ್ಲಿ ಅದು ‘ಗುಣ’ವಾಗಿ ಗಣಿಸಲ್ಪಡುತ್ತದೆ. ಆದರೆ, ಎಲ್ಲಿ ಮಾತು ಅತ್ಯವಶ್ಯವೋ ಅಲ್ಲಿ ಸುಮ್ಮನಿದ್ದರೆ, ಅದು ದೋಷವಾಗಿ ಪರಿಗಣಿತವಾಗುತ್ತದೆ. ‘ಮಾತು ಬೆಳ್ಳಿ, ಮೌನ ಬಂಗಾರ’ ಎನ್ನುವ ನಾಣ್ನುಡಿ ಎಲ್ಲರಿಗೂ ಎಲ್ಲ ಕಾಲಕ್ಕೂ ಸಲ್ಲುವ ಮಾತಲ್ಲ; ಮಾತೂ ಬಂಗಾರವಾಗುವ ಸನ್ನಿವೇಶಗಳುಂಟು. ಸಾಮಾನ್ಯವಾಗಿ ಮೌನದ ವಿಷಯದಲ್ಲಿ ಇನ್ನೊಂದು ತಪ್ಪುನಂಬಿಕೆಯಿದೆ, ಅದೆಂದರೆ– ‘ಮೌನ (ಸುಮ್ಮನಿರುವುದು) ಶಾಂತಿಕಾರಕ’ ಎಂಬುದು. ಅದು ಸುಳ್ಳು ಎನ್ನುವುದನ್ನು ಮಹಾಭಾರತ ಸಾಬೀತುಪಡಿಸಿದೆ. ಪಾಂಚಾಲಿಯ ವಸ್ತ್ರಾಪಹರಣದ ವೇಳೆ, ಭೀಷ್ಮ, ದ್ರೋಣ, ಧೃತರಾಷ್ಟ್ರ ಮುಂತಾದ ದೊಡ್ಡವರ ಮೌನವೇ ಕುರುಕ್ಷೇತ್ರ ಯುದ್ಧಕ್ಕೆ ನಾಂದಿಹಾಡಿತು ಎಂದು ಅರ್ಥೈಸುವವರಿದ್ದಾರೆ. ಅಂದು, ಮಾತನಾಡುವ ಜಾಗದಲ್ಲಿದ್ದ ಅವರುಗಳು ಎದ್ದುನಿಂತು ಖಂಡನೆಯ ಮಾತುಗಳನ್ನಾಡಿದ್ದರೆ, ಮುಂದೆ ನಡೆದ ಐತಿಹಾಸಿಕ ಮಹಾಸಂಘರ್ಷವನ್ನು, ಅದರಿಂದಾದ ಅಪಾರ ಸಾವು–ನೋವುಗಳನ್ನು ಮತ್ತು ಕುರುಕುಲ ಕ್ಷಯವನ್ನು ತಡೆಯಬಹುದಿತ್ತೇನೋ ಎನಿಸಿದರೆ ತಪ್ಪಲ್ಲ. ಹಾಗೆ, 10 ವರ್ಷದ ತಮ್ಮ ‘ಪ್ರಧಾನಿಗಿರಿ’ಯಲ್ಲಿ ಮನಮೋಹನ್‌ರು ಮಾತನಾಡಬೇಕಾದಾಗ ಮಾತನಾಡಿದ್ದರೆ, ಕಾಂಗ್ರೆಸ್ ಈಗಿನ ಹೀನಾಯ ಸ್ಥಿತಿಯನ್ನು ತಲುಪುತ್ತಿರಲಿಲ್ಲವೇನೋ ಎಂದು ವಿಶ್ಲೇಷಿಸುವವರಿದ್ದಾರೆ. ಗುಲಾಮ್ ನಬಿ ಆಜಾದ್‌ರಂಥ ಕೆಲವು ಹಿರಿಯ ಕಾಂಗ್ರೆಸ್ಸಿಗರು ಹೀಗೆ ಅಭಿಪ್ರಾಯಪಟ್ಟಿದ್ದಿದೆ.

2013ರಲ್ಲಿ ಮನಮೋಹನ್‌ರ ಸರಕಾರ ಬೆಂಬಲಿಸಿದ್ದ ಸುಗ್ರೀವಾಜ್ಞೆಯ ಪ್ರತಿಯನ್ನು ಸಾರ್ವಜನಿಕವಾಗಿ ಹರಿದು ಹಾಕುವ ಮೂಲಕ ರಾಹುಲ್ ಗಾಂಧಿಯವರು ಮರ್ಯಾದೆಯ ಸೀಮೆ ಮೀರಿ ಕೆಟ್ಟ ಪರಿಪಾಠವೊಂದಕ್ಕೆ ಕಾರಣರಾಗಿದ್ದರು. ಈ ಸುಗ್ರೀವಾಜ್ಞೆಗೆ ಕಾಂಗ್ರೆಸ್‌ನ ಕೋರ್ ಕಮಿಟಿಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು ಮತ್ತು ಪ್ರಧಾನ ಮಂತ್ರಿಗಳ ಕೇಂದ್ರ ಸಚಿವ ಸಂಪುಟವು ತರುವಾಯದಲ್ಲಿ ಇದನ್ನು ಸರ್ವಾನುಮತದಿಂದ ಅನುಮೋದಿಸಿತ್ತು. ಭಾರತದ ರಾಷ್ಟ್ರಪತಿಗಳ ಅಂಗೀಕಾರದ ಮುದ್ರೆಯೂ ಅದಕ್ಕೆ ಬಿದ್ದಿತ್ತು. ಆದರೆ ರಾಹುಲರ ಈ ಬಾಲಿಶ ವರ್ತನೆಯು ಪ್ರಧಾನ ಮಂತ್ರಿಗಳ ಸ್ಥಾನ ಮತ್ತು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಘನತೆಯನ್ನು ಪ್ರಶ್ನಿಸುವಂತಿತ್ತು. ಆಗ ಪ್ರಧಾನಿ ಸ್ಥಾನವನ್ನು ಅಲಂಕರಿಸಿದ್ದವರು ಮಾತನಾಡಲೇಬೇಕಾಗಿತ್ತು ಎಂಬುದು ಎಲ್ಲರೂ ಒಪ್ಪಬೇಕಾದ ಸಂಗತಿ.

ಇನ್ನು, ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫರು ಭಾರತದ ಪ್ರಧಾನಿ ಮನಮೋಹನ್ ಸಿಂಗ್‌ರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಪ್ರಕರಣ ನಿಮಗೆ ನೆನಪಿರಬಹುದು. ಸಿಂಗ್‌ರನ್ನು ‘ದೆಹಾತಿ ಔರತ್’ ಎಂದು ಕರೆದಿದ್ದ ಷರೀಫ್, ‘‘ಪಾಕಿಸ್ತಾನದ ಸರಕಾರದ ಧೋರಣೆಗಳ ಬಗ್ಗೆ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾರಿಗೆ, ಹಳ್ಳಿಯ ಅಶಿಕ್ಷಿತ ಹೆಂಗಸಿನಂತೆ ಪದೇಪದೆ ದೂರು ನೀಡುತ್ತಲೇ ಇದ್ದಾರೆ’’ ಎಂದು ಆರೋಪಿಸಿದ್ದರು. ಡಾ.ಸಿಂಗ್ ವಿರುದ್ಧದ ಇಂಥ ಅವಹೇಳನಕಾರಿ ಹೇಳಿಕೆಗಾಗಿ ಆಗ ಷರೀಫರನ್ನು ತರಾಟೆಗೆ ತೆಗೆದುಕೊಂಡವರಲ್ಲಿ ಈಗಿನ ಪ್ರಧಾನಿ ನರೇಂದ್ರ ಮೋದಿಯವರೂ ಪ್ರಮುಖರು. ‘‘ನಾವು ನಮ್ಮ ಪ್ರಧಾನಿ

ಯೊಂದಿಗೆ, ಅವರ ನೀತಿಗಳ ಬಗ್ಗೆ ದೇಶದೊಳಗೆ ಹೋರಾಡುತ್ತೇವೆ. ಆದರೆ, ಅವರು 125 ಕೋಟಿ ನಾಗರಿಕರಿರುವ ದೇಶದ ಪ್ರಧಾನಿಯಾಗಿದ್ದಾರೆ. ಅಂಥವರನ್ನು ‘ದೆಹಾತಿ ಔರತ್’ ಎನ್ನಲು ನಿಮಗೇನು ನೈತಿಕತೆಯಿದೆ?’’ ಎಂದು ಮೋದಿ ಗುಡುಗಿದ್ದರು. ಇಷ್ಟೆಲ್ಲಾ ಆದರೂ, ಅಂದು ಸರಕಾರದ ಸೂತ್ರಧಾರರಾಗಿದ್ದ ಮನಮೋಹನ್‌ರು ಚಕಾರವೆತ್ತಿರಲಿಲ್ಲ ಎಂಬುದು ವಾಸ್ತವ.

ಹಾಗಂತ, ಮನಮೋಹನರ ‘ಮಹಾಮೌನ’ಕ್ಕೆ ಕಾರಣವೂ ತಿಳಿಯದ್ದಲ್ಲ. ‘ನಾನು ಕೌರವನ ಉಪ್ಪು ತಿಂದಿದ್ದೇನೆ, ಅವನ ಋಣ ನನ್ನ ಮೇಲಿರುವ ಕಾರಣ ಅವನ ಅನ್ಯಾಯಗಳನ್ನೆಲ್ಲಾ ಸಹಿಸಿಕೊಂಡು ಸುಮ್ಮನಿದ್ದೇನೆ’ ಎನ್ನುವ ಭೀಷ್ಮಾಚಾರ್ಯರ ಧೋರಣೆಯಂತೆ, ‘ಗಾಂಧಿ ಕುಟುಂಬದ ದಯೆಯಿಂದ ನನಗೆ ಪ್ರಧಾನಮಂತ್ರಿಯ ಸ್ಥಾನ ದೊರೆತುದರಿಂದ, ನಾನು ಅವರಿಗೆ ಋಣಿಯಾಗಿರಬೇಕು’ ಎಂದು ಸಿಂಗ್ ಭಾವಿಸಿದ್ದರೋ ಏನೋ! ಅದು ತಿಳಿಯದು. ಸಿಂಗ್ ಪ್ರಧಾನ ಮಂತ್ರಿಯ ಸ್ಥಾನಕ್ಕಾಗಿ ಹಪಹಪಿಸಿ ಅದನ್ನು ಪಡೆದವರಾಗಿರಲಿಲ್ಲ, ಅದು ಅವರಿಗೆ ಆಕಸ್ಮಿಕವಾಗಿ ಒಲಿದು ಬಂದ ಹುದ್ದೆಯಾಗಿತ್ತು. ಹಾಗಾಗಿ, ಅದು ಹೋದರೂ ಅವರಿಗೆ ಚಿಂತೆ ಇರಬೇಕಾಗಿರಲಿಲ್ಲ. ಆಗೆಲ್ಲಾ ಅವರು ಮೌನ ಮುರಿದು ಸಾತ್ವಿಕ ಪ್ರತಿರೋಧವನ್ನು ವ್ಯಕ್ತಪಡಿಸಿದ್ದಿದ್ದರೆ ಒಳ್ಳೆಯದಿತ್ತೇನೋ ಎನ್ನುವುದು ಸಹಜ ನಿರೀಕ್ಷೆ.

ಆ ಅವಧಿಯಲ್ಲಿ ಸೋನಿಯಾ ಗಾಂಧಿಯವರು ಅಧಿಕಾರದ ನಿಜವಾದ ಕೇಂದ್ರವಾಗಿದ್ದರು, ಎಲ್ಲ ವಿಷಯಗಳಲ್ಲೂ ಅವರ ಮಾತೇ ಅಂತಿಮವಾಗಿತ್ತು. ಆ ನಿಟ್ಟಿನಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್‌ರನ್ನು ಬಳಸಿಕೊಳ್ಳಲಾಯಿತು, ಅಷ್ಟೇ. ಸಿಂಗ್‌ರ ಮೃದುತ್ವವೇ ಅವರನ್ನು ಪ್ರಧಾನಮಂತ್ರಿಯನ್ನಾಗಿಸಲು ಕಾರಣವಾಗಿತ್ತು. ಅದಿಲ್ಲದಿದ್ದರೆ, ಅನುಭವಿಯೂ ಹಿರಿಯರೂ ಆಗಿದ್ದ ಪ್ರಣಬ್ ಮುಖರ್ಜಿಯವರು ಪ್ರಧಾನಿಯಾಗಬೇಕಿತ್ತು. ಆದರೆ ಪ್ರಣಬ್‌ರನ್ನು ಪ್ರಧಾನಿಯಾಗಿಸಿದರೆ, ಪಕ್ಷ ಹಾಗೂ ಸರಕಾರದ ಮೇಲೆ ಗಾಂಧಿ ಕುಟುಂಬದ ಹಿಡಿತ ತಪ್ಪುತ್ತದೆ ಎನ್ನುವ ಸ್ಪಷ್ಟ ಅರಿವು ಸೋನಿಯಾರಿಗೆ ಇತ್ತು. ನರಸಿಂಹ ರಾಯರಿಗೆ ಅಧಿಕಾರ ಕೊಟ್ಟು ಗಾಂಧಿ ಕುಟುಂಬವು ಒಮ್ಮೆ ಕೈಸುಟ್ಟುಕೊಂಡಿತ್ತು. ಈ ಕಾರಣಕ್ಕೇ ಪ್ರಧಾನಮಂತ್ರಿ ಸ್ಥಾನ ತಮಗೆ ಒಲಿದುಬಂದಿದೆ ಎನ್ನುವುದು ಸಿಂಗ್ ಅವರಿಗೂ ತಿಳಿದಿತ್ತು. ತಮ್ಮ ರಾಜಕೀಯ ಗುರುವಾಗಿದ್ದ ನರಸಿಂಹ ರಾಯರಂತೆ, ಗಾಂಧಿ ಕುಟುಂಬವನ್ನು ಎಲ್ಲಿಡಬೇಕೋ ಅಲ್ಲಿಟ್ಟು ಸ್ವತಂತ್ರವಾಗಿ ಕಾರ್ಯನಿರ್ವಹಿಸಲಾಗಲಿಲ್ಲ ಎನ್ನುವುದನ್ನು ಬಿಟ್ಟರೆ, ಸಿಂಗ್ ಅವರು ತಮ್ಮ 10 ವರ್ಷದ ಅಧಿಕಾರಾವಧಿಯಲ್ಲಿ ಕೈಕೊಳಕು ಮಾಡಿಕೊಳ್ಳದೇ ಹೊರಬಂದಿರುವುದು ಶ್ಲಾಘನೀಯವೇ. ಅಲ್ಲದೆ, ಹಿಂದೆ ಅವರು ಹಣಕಾಸು ಮಂತ್ರಿಯಾಗಿ ಕೈಗೊಂಡ ಅಭೂತಪೂರ್ವ ಕಾರ್ಯಗಳಿಂದಾಗಿ, ಅವರ ವೈಯಕ್ತಿಕ ವರ್ಚಸ್ಸು–ಗೌರವಗಳು ಕೊನೆಯವರೆಗೂ ಕುಂದಲಿಲ್ಲ ಎನ್ನುವುದು ಬೇರೆ ಮಾತು.

1991ರಲ್ಲಿ ದೇಶದ ಅರ್ಥವ್ಯವಸ್ಥೆ ಸಂಪೂರ್ಣ ಹದಗೆಟ್ಟಿತ್ತು. ಹದಿನೈದೇ ದಿನಗಳಲ್ಲಿ ದಿವಾಳಿಯಾಗುವಂಥ ಸ್ಥಿತಿಯನ್ನು ದೇಶ ತಲುಪಿತ್ತು. ಇಂಥ ಹೊತ್ತಿನಲ್ಲಿ ಕೇಂದ್ರ ಹಣಕಾಸು ಸಚಿವರಾಗಿ ಅಧಿಕಾರ ವಹಿಸಿಕೊಂಡ ಸಿಂಗ್, 1994–95ರ ಬಜೆಟ್‌ನಲ್ಲಿ ಭಾರಿ ಬದಲಾವಣೆಗೆ ಕೈಹಾಕಿದರು. ಎಲ್ಲವೂ ಅವರು ಅಂದುಕೊಂಡಂತೆಯೇ ಆಗಿದ್ದು, ಭಾರತವು ಈಗ ಆರ್ಥಿಕವಾಗಿ ಸುರಕ್ಷಿತವಾಗಿದೆ. ದೇಶವು ಇಂದು ವಿಶ್ವದ 5ನೇ ದೊಡ್ಡ ಆರ್ಥಿಕತೆ ಆಗಿದೆ ಎನ್ನುವುದಾದರೆ, ಅದಕ್ಕೆ ಕಾರಣ ಡಾ.ಮನಮೋಹನ್ ಸಿಂಗ್‌ರು ಹಾಕಿದ ದೂರದರ್ಶಿತ್ವದ ಅಡಿಪಾಯ. ಇದನ್ನು ಯಾರೂ ಮರೆಯುವಂತಿಲ್ಲ. ಹಾಗಾಗಿ, ಅವರಿಗೆ ಮರಣೋತ್ತರವಾಗಿ ‘ಭಾರತ ರತ್ನ’ವನ್ನು ನೀಡಬೇಕು ಎನ್ನುವವರಲ್ಲಿ ನಾನೂ ಒಬ್ಬ. ಹಾಗೆ ಅವರಿಗೆ ‘ಭಾರತ ರತ್ನ’ ದಕ್ಕಿದರೆ, ಅದು ಅವರು ಹಣಕಾಸು ಮಂತ್ರಿಯಾಗಿ ಮಾಡಿದ ಸಾಧನೆಗಳಿಗೆ ಅಥವಾ ಭಾರತದ ಅರ್ಥವ್ಯವಸ್ಥೆಯ ಶಾಶ್ವತ ಪುನರುತ್ಥಾನದ ನಿಟ್ಟಿನಲ್ಲಿ ಅವರು ಮಾಡಿದ ಉಪಕಾರಕ್ಕಾಗಿಯೇ ವಿನಾ, ಪ್ರಧಾನಮಂತ್ರಿ ಆಗಿದ್ದಾಗಿನ ಅವರ ಮೌನಕ್ಕಲ್ಲ.

ಕಾರಣಗಳು ಏನೂ ಇರಬಹುದು, ಆದರೆ ಮನಮೋಹನ್ ಸಿಂಗ್‌ರಿಗೆ ‘ಮೌನ’ ಎನ್ನುವುದು– ಭೀಷ್ಮ ಮತ್ತು ದ್ರೋಣರಿಗೆ ಹೇಗೋ ಹಾಗೆ– ಕೊನೆಯವರೆಗೂ ಕಳಂಕವಾಗಿಯೇ ಅಂಟಿಕೊಂಡಿತ್ತು ಎನ್ನುವುದನ್ನು ಒಪ್ಪಿಕೊಳ್ಳದೇ ಅನ್ಯ ಉಪಾಯವಿಲ್ಲ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಹೋಮ್ ಮಿನಿಸ್ಟರ್ ಅಂದ್ರೆ ವಸತಿ ಸಚಿವರಾ?

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಅಮೆಜಾನ್ ಪ್ರೈಮ್ ವಿಡಿಯೋ ಒಟಿಟಿಯಲ್ಲಿ ಇತ್ತೀಚೆಗೆ ಕೆಲವು ಚಿತ್ರಗಳು, ಥಿಯೇಟರ್‌ನಲ್ಲಿ ಬಿಡುಗಡೆ ಆದ ತಿಂಗಳಿಗೇ ಬಿಡುಗಡೆ ಯಾಗುತ್ತವೆ. ಆದರೆ ಅದು ‘ರೆಂಟ್ ಬೇಸಿಸ್’ ಮೇಲೆ. ಅದಕ್ಕೆ ನಮ್ಮ ಸಿನಿಪ್ರಿಯರು, ‘‘ವಾರ್ಷಿಕ ಚಂದಾದಾರರಾದ ಮೇಲೂ ಮತ್ತೆ ದುಡ್ಡು ಕೊಟ್ಟು ನೋಡಬೇಕಾ?’’ ಅಂತ ವರಾತ ತೆಗೆಯುತ್ತಾರೆ. ಅದು ಸಹಜ ಕೂಡಾ. ಆದರೆ ಕೆಲವೇ ದಿನಗಳಲ್ಲಿ, ರೆಂಟ್ ಬೇಸಿಸ್‌ನಲ್ಲಿ ಇದ್ದ ಚಿತ್ರಗಳು ನಂತರ ಉಚಿತ ವೀಕ್ಷಣೆಗೆ ಲಭ್ಯವಾಗುತ್ತವೆ. ಇಲ್ಲಿ ಅಮೆಜಾನ್ ಅವರ ಪಾಲಿಸಿ ಮತ್ತು ಆಲೋಚನೆ ಹೇಗಿದೆ ಅನ್ನೋದನ್ನ ಅರ್ಥಮಾಡಿಕೊಳ್ಳೋದೇ ಕಷ್ಟ. ಹೀಗೆ ಮೂರು ದಿನಕ್ಕೆ ಇವರು ತಮ್ಮ ಪ್ಲ್ಯಾನ್ ಚೇಂಜ್ ಮಾಡಿದರೆ ಯಾವ ಗ್ರಾಹಕರು ತಾನೆ ರೆಂಟ್ ಕೊಟ್ಟು ಇವರು ಹಾಕುವ ಸಿನಿಮಾಗಳನ್ನು ನೋಡುತ್ತಾರೆ? ಚಿತ್ರವೊಂದು ಥಿಯೇಟರ್‌ನಲ್ಲಿ ಸದ್ದು ಮಾಡುತ್ತಿದ್ದರೂ, ‘‘ಅಯ್ಯೋ, ಒಟಿಟಿಯಲ್ಲಿ ಬಂದಾಗ ನೋಡೋಣ ಬಿಡಿ’’ ಅಂತ ತಿಂಗಳುಗಟ್ಟಲೆ ಕಾಯುವ ನಮ್ಮ ಮಂದಿ, ಒಂದು ವಾರ ಕಾಯದೇ, ಇವರಿಗೆ ರೆಂಟ್ ಕೊಟ್ಟು ಸಿನಿಮಾ ನೋಡುತ್ತಾರಾ? ಯಾವುದೋ ಕೆಲವು ದೊಡ್ಡ ಬಜೆಟ್‌ನ, ಅತಿಯಾದ ನಿರೀಕ್ಷೆ ಇದ್ದ ಚಿತ್ರಗಳು ಅನ್ನೋ ಕಾರಣಕ್ಕೆ ಹಾಗೆ ಮಾಡಿರಬಹುದು ಅಂದುಕೊಂಡರೆ ಅದು ತಪ್ಪು. ಯಾಕಂದ್ರೆ ಇವರು ಮಾಮೂಲಿ ಸ್ಟಾರ್ ಇಲ್ಲದೆ ಲೋ ಬಜೆಟ್ ಚಿತ್ರಗಳನ್ನೂ ಬಾಡಿಗೆಗೆ ಕೊಡುತ್ತಾರೆ. ಅವೇನೂ ದೊಡ್ಡ ಸಿನಿಮಾ ಆಗಿರೊಲ್ಲ, ಚಿತ್ರಮಂದಿರಗಳಲ್ಲಿ ಯಶಸ್ವಿ ಪ್ರದರ್ಶನ ಕಂಡ ಚಿತ್ರಗಳೂ ಅಲ್ಲ. ಅಲ್ಲದೆ, ಅದು ಕೂಡಾ ಇನ್ನೊಂದು ಮೂರು ದಿನದಲ್ಲಿ ಫ್ರೀ ಆಗಿ ಸಿಗುತ್ತೆ ಅಂತ ಗೊತ್ತಿರೋ ಗ್ರಾಹಕರು ಈಗಲೇ ರೆಂಟ್ ಕೊಟ್ಟು ನೋಡ್ತಾರೆ ಅಂತ ಪ್ರೈಮ್ ವಿಡಿಯೋದವರಿಗೆ ಅದೇನು ನಂಬಿಕೆಯೋ ಗೊತ್ತಿಲ್ಲ. ಈ ನಡುವೆ ಇನ್ನೂ ಕೆಲವು ಒಟಿಟಿಯವರದ್ದು ಇನ್ನೊಂದು ಅಧ್ವಾನ. ನೀವು ಪೂರ್ತಿ ದುಡ್ಡು ಕೊಟ್ಟು ವಾರ್ಷಿಕ ಚಂದಾದಾರರಾದರೂ ನಿಮಗೆ ಸಿನಿಮಾಗಳನ್ನು ಕೇವಲ ‘480 ಪಿ’ ರೆಸಲ್ಯೂಷನ್‌ನಲ್ಲಿ ನೋಡಲು ಸಾಧ್ಯ. ಅಲ್ಲದೆ ನಾವು ಕೇವಲ ಸೆಲೆಕ್ಟೆಡ್ ಚಂದಾದಾರರಿಗೆ ಮಾತ್ರ ‘ಫುಲ್ ಎಚ್‌ಡಿ’ ಸೌಲಭ್ಯ ಕೊಡ್ತೀವಿ ಅನ್ನೋ ಲಾಜಿಕ್ ಇಲ್ಲದ ಅಧಿಕಪ್ರಸಂಗ ಬೇರೆ. ಈ ಒಟಿಟಿಗಳ ಅಧ್ವಾನಗಳು ಇನ್ನೂ ಎಲ್ಲಿಗೆ ಹೋಗಿ ಮುಟ್ಟುತ್ತವೋ ಏನೋ?

ಲೂಸ್ ಟಾಕ್

ಜಸ್‌ಪ್ರೀತ್ ಬುಮ್ರಾ

- **ಏನ್ ಬುಮ್ರಾ ಅವ್ರೇ, ಹೆಂಗಿದೆ ನಮ್ ಇಂಡಿಯಾ ಟೀಮ್ ಪರಿಸ್ಥಿತಿ?**
– ಏನ್ ಟೀಮೋ ಏನೋ. ನಮ್ ಟೀಮ್ ಒಂಥರಾ ‘ಬೆಂಕಿಯಲ್ಲಿ ಅರಳಿದ ಹೂವು’ ಸಿನಿಮಾದ ಸುಹಾಸಿನಿ ಫ್ಯಾಮಿಲಿ ಥರಾ ಆಗೋಗಿದೆ. ದುಡಿಯೋನು ನಾನೊಬ್ನೇ, ತಿನ್ನೋರು ಮಾತ್ರ ಹನ್ನೊಂದ್ ಜನ.
- **ಸರಿ ಹೋಯ್ತು. ಹೋಗ್ಲಿ, ಕೊನೆ ಟೆಸ್ಟ್ ಆದ್ರೂ ಗೆಲ್ತೀರಾ?**
– ಹಂಗೆಲ್ಲಾ ‘ಗ್ಯಾರಂಟಿ’ ಕೊಡೋಕೆ ನಮ್ಮದು ಸರಕಾರ ಅಲ್ಲ ಕಣ್ರೀ.
- **ಅದೂ ಕರೆಕ್ಟೇ ಬಿಡಿ. ಅಂದಂಗೆ, ಆಸ್ಟ್ರೇಲಿಯಾದ ಆ ಹೊಸ ಹುಡುಗ ಕೊನ್ಸಾಸ್ಟ್, ಆಡೋ ಅಂದ್ರೆ ಬರೀ ಎಗರಾಡ್ತಾ ಇರ್ತಾನಲ್ಲ?**
– ಅಯ್ಯೋ, ಅವತ್ತು ಯಾವತ್ತೋ ಒಂದ್ ಐವತ್ತು ಹೊಡೆದಿದ್ದಕ್ಕೆ ಇವತ್ತಿನವರೆಗೂ ಹಾರಾಡ್ತಾ ಇದ್ದಾನೆ. ಹಾಲ್ ಕುಡಿದಿರೋ ತುಟಿ ಇನ್ನೂ ಆರದೇ ಇರೋ ಟೈಮಲ್ಲೇ ನಮ್ಮ ಬೋಲರ್ಸ್ ಬಾಲ್‌ಗೆ ಬ್ಯಾಟಿಂಗ್ ಆಡೋಕೆ ಬಂದ್ರೆ ಹಿಂಗೇ ಆಗೋದು.
- **ಆ ಹೆಡ್ಡು ಮೊದ್ಲು ಭಾರಿ ತಲೆನೋವಾಗಿದ್ದ. ಈಗೀಗ ಬೇಗ ಔಟ್ ಆಗ್ತಾ ಇದ್ದಾನೆ ಅಲ್ವಾ?**
– ಯಾವಾಗ್ಲೂ ಹೆಡ್ಡೇ ಬೀಳುತ್ತಾ, ಟೈಲೂ ಬೀಳುತ್ತೆ ತಾನೇ. ಇದೂ ಹಂಗೇ. ಹೆಡ್ ಗಟ್ಟಿ ಇದೆ ಅಂತ ಬಂಡೆಗೆ ಚಚ್ಚಿಕೊಂಡ್ರೆ, ಟೈಲ್ ಮುದುರಿಕೊಂಡು ಹೋಗಬೇಕಾಗುತ್ತೆ.
- **ಹೌದು, ಕೊನೇ ಟೆಸ್ಟ್‌ಗೆ ರೋಹಿತ್ ಶರ್ಮಾ ಬದ್ಲು ನಿಮ್ಮನ್ನ ಕ್ಯಾಪ್ಟನ್ ಮಾಡಿದ್ರಲ್ಲ, ಯಾಕಿರಬಹುದು?**
– ಮೋಸ್ಟ್ಲೀ, ರೋಹಿತ್‌ಗಿಂತ ನಾನು ಚೆನ್ನಾಗಿ ಬ್ಯಾಟಿಂಗ್ ಮಾಡ್ತೀನಿ ಅಂತ ಇರಬೇಕು

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಮತ್ತು ಖೇಮುಶ್ರೀ ಮದುವೆ ಆಗಿ 5 ವರ್ಷ ಆಗಿದ್ರೂ ಅವರಿಗೆ ಮಕ್ಕಳಾಗಿರಲಿಲ್ಲ. ಈ ವಿಷಯಕ್ಕೆ ಇಬ್ಬರೂ ತುಂಬಾ ಬೇಸರದಲ್ಲಿದ್ದರು. ಇಬ್ಬರೂ ತಮಗೆ ಗೊತ್ತಿರೋ ಎಲ್ಲಾ ಡಾಕ್ಟರ್‌ಗಳು, ಎಲ್ಲಾ ದೇವರುಗಳನ್ನೂ ಸಂಪರ್ಕ ಮಾಡಿದ್ದರು. ಆದರೆ ಮಕ್ಕಳು ಮಾತ್ರ ಆಗಲೇ ಇಲ್ಲ. ಹೀಗೆ ಒಂದು ದಿನ ಇಬ್ಬರೂ ಮಾರ್ಕೆಟ್‌ನಲ್ಲಿ ಹೋಗುತಿರುವಾಗ ಅಲ್ಲಿ ಖೇಮುಶ್ರೀಯ ತವರುಮನೆಗೆ ಬರುತ್ತಿದ್ದ ಪೂಜಾರಿಯೊಬ್ಬರು ಆಕೆಯನ್ನು ಗುರುತು ಹಿಡಿದು ಮಾತನಾಡಿಸಿದರು. ‘‘ಎಲ್ಲಾ ಸೌಖ್ಯನೇನಮ್ಮ?’’ ಎಂದು ಅವರು ಕೇಳಿದಾಗ ಖೇಮುಶ್ರೀ, ‘‘ಜೀವನದಲ್ಲಿ ಎಲ್ಲವೂ ಸರಿ ಇದೆ, ಆದ್ರೆ ಇನ್ನೂ ಮಕ್ಕಳಾಗಿಲ್ಲ’’ ಎಂಬ ಕೊರಗನ್ನು ಹೇಳಿಕೊಂಡಳು. ಅದಕ್ಕೆ ಪೂಜಾರಿ, ‘‘ಯೋಚನೆ ಮಾಡಬೇಡಮ್ಮ, ನಾನು ಕಾಶಿಗೆ ಹೋಗ್ತಾ ಇದ್ದೀನಿ, ಅಲ್ಲಿ ದೇವರ ಸನ್ನಿಧಿಯಲ್ಲಿ ನಿನ್ನ ಹೆಸರಲ್ಲಿ ಒಂದು ದೀಪ ಹಚ್ಚೀನಿ. ಎಲ್ಲ ಸರಿ ಹೋಗುತ್ತೆ’’ ಅಂದ್ರು. ಅದಾಗಿ 5 ವರ್ಷ ಆಯ್ತು. ಒಂದು ದಿನ ಆ ಪೂಜಾರಿಯ ಮನೆ ಬಾಗಿಲು ಯಾರೋ ಬಡಿದಂತಾಯ್ತು. ಪೂಜಾರಿ ಎದ್ದು ಹೋಗಿ ಬಾಗಿಲು ತೆರೆದರೆ ಖೇಮು ನಿಂತಿದ್ದ. ಗುರುತು ಹಿಡಿದ ಪೂಜಾರಿ ಒಳಗೆ ಕರೆದು ಮಾತನಾಡಿಸಿದರು. ‘‘ಮಕ್ಕಳಾದ್ವಾ?’’ ಅಂತ ಪೂಜಾರು ಕೇಳಿದ ತಕ್ಷಣ ಖೇಮು ಅವರ ಕೈಯಲ್ಲಿ 25 ಸಾವಿರ ಹಣ ಇಟ್ಟು, ‘‘ದಯವಿಟ್ಟು ಇನ್ನೊಮ್ಮೆ ಕಾಶಿಗೆ ಹೋಗಿ ಬನ್ನಿ ಪೂಜಾರ್ರೇ’’ ಅಂದ. ‘‘ಯಾಕಪ್ಪಾ ಇನ್ನೂ ಮಕ್ಕಳಾಗಲಿಲ್ವಾ?’’ ಅಂತ ಕೇಳಿದ್ದಕ್ಕೆ ಖೇಮು ಹೇಳಿದ ‘‘ನೀವೇನೋ ಕಾಶಿಗೆ ಹೋಗಿ ದೀಪ ಹಚ್ಚಿ ಬಂದ್ರಿ, ಆದ್ರೆ ಯಾವನೋ ಬಡ್ಡಿಮಗ ಇನ್ನೂ ಅದಕ್ಕೆ ಡೈಲಿ ಎಣ್ಣೆ ಹಾಕ್ತಾ ಇದ್ದಾನೆ ಅನ್ಸುತ್ತೆ. ಖೇಮುಶ್ರೀ ಈಗಾಗ್ಲೇ 3 ಸಲ ಅವಳಿ–ಜವಳಿ ಮಕ್ಕಳನ್ನ ಹೆತ್ತಿದ್ದಾಳೆ. ಇನ್ನು ನನ್ನ ಕೈಲಿ ತಡ್ಕೊಳ್ಳೋಕಾಗಲ್ಲ. ಮೊದ್ಲು ಹೋಗಿ ಆ ದೀಪ ಆರಿಸಿ ಬನ್ನಿ’’.

ಲೈನ್ ಮ್ಯಾನ್

- **ಯಾರನ್ನಾದ್ರೂ ಪರೀಕ್ಷೆ ಮಾಡಬೇಕು ಅಂತ ಅವರಿಗೆ ಸಚಿವ ಸ್ಥಾನ ಕೊಟ್ರೆ ಅದು**
– ಸಂ‘ಪುಟಕ್ಕಿಟ್ಟ ಚಿನ್ನ’
- **ಹೋಮ್ ಮಿನಿಸ್ಟರ್‌ನ ಕನ್ನಡದಲ್ಲಿ ‘ಗೃಹಮಂತ್ರಿ’ ಅಂತಾರೆ**
– ಆಕ್ಚುವಲಿ, ಅದು ‘ವಸತಿ ಸಚಿವ’ ಆಗಬೇಕಲ್ವಾ?
- **ಮಿರರ್ ಮಾರುವವನಿಗೆ ಒಂದು ಹೆಸರು**
– ‘ಕನ್ನಡಿ’ಗ
- **ಮಿತಿಮೀರಿದ ಆಭಾಸ**
– ನಿದ್ದೆ ಮಾಡುವಾಗ ಕನಸಲ್ಲೂ ನಿದ್ದೆ ಮಾಡೋ ಥರ ಕನಸು ಬೀಳೋದು.
- Heights of curiosity
– ಸೆಲೆಬ್ರಿಟಿ ಶೋ ಮುಗಿದಮೇಲೆ ಸಿನಿಮಾ ನೋಡಿದ ಸೆಲೆಬ್ರಿಟಿಗಳು ಆ ಸಿನಿಮಾ ಬಗ್ಗೆ ಏನ್ ಹೇಳ್ತಾರೆ ಅಂತ ಕುತೂಹಲ ಇಟ್ಕೊಳ್ಳೋದು.
- **ಭೂಗೋಳ ರಹಸ್ಯ**
– ಭೂಮಿ ‘ಗುಂಡು’ ಗುಂಡಾಗಿದೆಯಂತೆ... ಅದಕ್ಕೇ ಬಡ್ಡಿಮಗಂದು ಟೈಟ್ ಆಗಿ ‘ತಿರುಗುತ್ತೆ’.
- **ನಶೆದಾತರಿಗೆ ತೋರಿಸೋ ತಾರತಮ್ಯ**
– ಎಣ್ಣೆನ ‘ಪರಮಾತ್ಮ’ ಅಂತ ಗೌರವದಿಂದ ಕರೀತೀವಿ. ಆದ್ರೆ ಸಿಗರೇಟ್‌ನ ಮಾತ್ರ ಸೇದಿದ ಮೇಲೆ ಕಾಲಲ್ಲಿ ಹೊಸಕಿ ಹಾಕ್ತೀವಿ.
- **ಕುಡುಕರ ಸ್ವಗತ**
– ಕುಡುಕರಿಗೆ ಒಂದು ಸಪರೇಟ್ ಧರ್ಮ ಬೇಕು.. ‘ಪ್ರಜ್ಞಾವಂತ’ರ ಲೋಕ ನಮಗೆ ಪರಮ ಬೋರು.
- **ಮನೆ ಕೆಲಸದವಳು ಪಕ್ಕದ ಮನೆಯವರ ಬಗ್ಗೆ ‘ಕಿವಿ’ ಊದಿದರೂ ಅದು..**
– ‘ಬಾಯಿ’ ಮಾತು
- **ಬ್ರೇಕ್ ಅಪ್, ಡೈವೋರ್ಸ್ ಆಗಿ ಬಿಟ್ಟು ಹೋಗುವಾಗ ಒಬ್ಬರ ಮೇಲೆ ಒಬ್ಬರು ಸಿಟ್ಟಿನಿಂದ ಆಡುವ ಮಾತುಗಳು**
– Byeಗುಳ

ರಸದೌತಣಕಾರರ್ ಆಸ್ಕ್ ದಿ ಎಡಿಟರ್ ಆದಾಗ...!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಓದುಗರು ಬರೆಯುವ ಪತ್ರ, ಲೇಖನ, ತೋಡಿಕೊಳ್ಳುವ ಅಳಲು, ಕುಂದುಕೊರತೆ ಇತ್ಯಾದಿಗಳಿಗೆ ದಿನಪತ್ರಿಕೆಗಳು ಪ್ರತ್ಯೇಕವಾದ ಇ-ಮೇಲ್ ವಿಳಾಸವನ್ನು ನೀಡುವುದು ವಾಡಿಕೆ. ಅಲ್ಲದೆ ಅಂಕಣಕಾರರ ಬರಹದ ಜತೆಗೂ ಇ-ಮೇಲ್ ವಿಳಾಸ ಪ್ರಕಟವಾಗುವುದು ಸಾಮಾನ್ಯ. ವಿಶ್ವವಾಣಿ ಪತ್ರಿಕೆಯಲ್ಲೂ ಇಂಥ ವ್ಯವಸ್ಥೆಯಿದೆ. ನಮ್ಮ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್ ಸರ್ ಅವರ ‘ಆಸ್ಕ್ ದಿ ಎಡಿಟರ್’ ಎಂಬ ಅಂಕಣ ಪ್ರತಿ ಭಾನುವಾರದ ‘ವಿರಾಮ’ ಪುರವಣಿಯಲ್ಲಿ ಪ್ರಕಟವಾಗುವುದೂ ನಿಮಗೆ ಗೊತ್ತು. ಓದುಗರು ತಮ್ಮನ್ನು ಕಾಡುತ್ತಿರುವ ವೈವಿಧ್ಯಮಯ ಪ್ರಶ್ನೆ, ಗೊಂದಲ ಅಥವಾ ಸಮಸ್ಯೆಗಳನ್ನು ಈ ವಿಭಾಗದಲ್ಲಿ ಹರವಿಟ್ಟು ಅವಕ್ಕೆ ‘ಸಾಂತ್ವನ’ ರೂಪದ ಉತ್ತರಗಳನ್ನು ಪಡೆಯುವುದಿದೆ. ಆದರೆ ಕೆಲವರು, ಪತ್ರಿಕೆಯ ಇಂಥ ಪ್ರತಿಯೊಂದು ಇ-ಮೇಲ್ ವಿಳಾಸಕ್ಕೂ, ಆಯಾ ವಿಭಾಗದ ಆಶಯಕ್ಕೆ ತಕ್ಕಂತೆ ಏಕಕಾಲಕ್ಕೆ ಬರಹಗಳನ್ನು ಕಳಿಸುವುದುಂಟು; ಅಂಥ ವೇಳೆ ಗಡಿಬಿಡಿಯಲ್ಲೋ ನಿರ್ಲಕ್ಷ್ಯದಲ್ಲೋ, ಒಂದು ವಿಭಾಗಕ್ಕೆ ಕಳಿಸಬೇಕಾದ್ದನ್ನು ಮತ್ತೊಂದಕ್ಕೆ ಕಳಿಸಿ ಕೈತೊಳೆದುಕೊಳ್ಳುವುದೂ ಉಂಟು! ಹೀಗೆ ‘ಆಸ್ಕ್ ದಿ ಎಡಿಟರ್’ ವಿಭಾಗಕ್ಕೆ ಕಳಿಸಬೇಕಾದ ಪ್ರಶ್ನೆಯನ್ನು ಒಂದೊಮ್ಮೆ ‘ರಸದೌತಣ’ ಅಂಕಣಕಾರರಿಗೆ ಕಳಿಸಿದರೆ, ಪ್ರಶ್ನಿಸಿದವರಿಗೆ ಸಿಗುವ ‘ಸಂಭಾವ್ಯ ಉತ್ತರ’ ಹೇಗಿರಬಹುದು ಎಂಬುದಕ್ಕೆ ಒಂದೆರಡು ಪುಟ್ಟ ಝಲಕ್ ಇಲ್ಲಿವೆ...

• • •

- **ಹೆಸರುಬೇಡ, ಪುಂಗನೂರು**

ಪ್ರಶ್ನೆ: ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್ಟರಿಗೆ ನಮಸ್ಕಾರ. ನನ್ನನ್ನು ಬಹಳ ದಿನಗಳಿಂದ ಕಾಡುತ್ತಿರುವ ಗೊಂದಲಕ್ಕೆ ಪರಿಹಾರ ಬಯಸಿ ಈ ಪ್ರಶ್ನೆ ಕಳಿಸಿರುವೆ. ನೆರವಾಗುವಿರಿ ಎಂಬ ವಿಶ್ವಾಸ ನನ್ನದು.

ಭಟ್ರೇ, ನನಗೊಂದು ವಿಚಿತ್ರ ಸಮಸ್ಯೆಯಿದೆ. ಮನೆಯಲ್ಲಿ ಶ್ರೀ ಸತ್ಯನಾರಾಯಣಸ್ವಾಮಿ ಪೂಜೆಯನ್ನೋ, ಯಾವುದಾದರೂ ವ್ರತವನ್ನೋ ಹಮ್ಮಿಕೊಂಡಾಗ ಸಾಕಷ್ಟು ಬಂಧು–ಮಿತ್ರರನ್ನು ಕರೆಯುವುದು ನನ್ನ ವಾಡಿಕೆ. ಇಂಥ ಸಂದರ್ಭದಲ್ಲಿ ಮಂತ್ರಘೋಷ, ಭಜನೆ ತಾರಕಕ್ಕೆ ಏರುತ್ತಿದ್ದಂತೆ, ದೇವರ ಮಂಟಪದ ಮುಂದೆ ಮಡಿಪಂಚೆ ಉಟ್ಟು ಕೂತಿದ್ದ ನಾನು ಇದ್ದಕ್ಕಿದ್ದಂತೆ ಎದ್ದು, ಎರಡೂ ಕೈಗಳನ್ನು ಮೇಲಕ್ಕೆತ್ತಿ ಒಮ್ಮೆ ‘‘ಹೋ.....ಹೋ...’’ ಎಂದು ಜೋರಾಗಿ ಕೂಗುತ್ತಾ (ಕೆಲವೊಮ್ಮೆ ಬಾಯಿ ಬಡ್ಕೊಂಡು), ಓಡುತ್ತಾ ಹಿತ್ತಲಿಗೆ ಬಂದು ಬಾವಿಯ ಬಳಿ ಕೂತುಬಿಡುತ್ತೇನೆ. ಆಹ್ವಾನಿತರ ಎದುರಿಗೆ ಹೀಗೆ ಮಾಡಿದ್ದಕ್ಕೆ ಮುಜುಗರಗೊಂಡ ನನ್ನ ಹೆಂಡತಿ ಮತ್ತು ದೊಡ್ಡ ಮಗ ಅಲ್ಲಿಗೆ ಬಂದು, ‘‘ಇದೇನಿದು ನಿಮ್ಮ ಅವಸ್ಥೆ? ಭಜನೆಯ ವೇಳೆ ಎಲ್ಲರೆದುರು ಹೀಗೆ ಕೂಗಾಡಿಕೊಂಡು, ಬಾಯಿ ಬಡ್ಕೊಂಡು ಬಂದು, ಬಾವಿಯ ಬಳಿ ಹೀಗೆ ಕುಕ್ಕರಗಾಲಲ್ಲಿ ಕೂತ್ಕೊಂಡ್ರೆ, ಆಹ್ವಾನಿತರು, ಮಕ್ಕಳು–ಮೊಮ್ಮಕ್ಕಳು ಏನಂದುಕೊಳ್ತಾರೆ?’’ ಎಂದು ಗದರಿಸಿ, ಎದ್ದು ಬರಲು ಹೇಳುತ್ತಾರೆ. ಬರೋಲ್ಲವೆಂದು ನಾನು ಹಟ ಮಾಡಿದರೆ, ಇಬ್ಬರೂ ಸೇರಿ ಅನಾಮತ್ತಾಗಿ ನನ್ನನ್ನು ಎತ್ತಿಕೊಂಡು ಬಂದು ದೇವರ ಮಂಟಪದ ಮುಂದೆ ಕುಕ್ಕರಿಸಿಬಿಡ್ತಾರೆ. ನನಗೆ ಸುಮಾರು 10 ವರ್ಷದಿಂದ ಈ ಸಮಸ್ಯೆ ಕಾಡ್ತಾ ಇದೆ ಭಟ್ರೇ. ಅಲೋಪತಿ, ನ್ಯಾಚುರೋಪತಿ, ಹೋಮಿಯೋಪತಿ ಎಲ್ಲ ಕಡೆ ತೋರಿಸಿದ್ರೂ, ವಿಧಿಯ ಈ ‘ಕಿತಾಪತಿ’ ನಿಂತಿಲ್ಲ ಭಟ್ರೇ... ನೀವಾದ್ರೂ ಪರಿಹಾರ ಸೂಚಿಸಿ ಪುಣ್ಯ ಕಟ್ಕೊಳ್ಳಿ...

ಉತ್ತರ: ಮಾನ್ಯರೇ, ‘ಆಸ್ಕ್ ದಿ ಎಡಿಟರ್’ ವಿಭಾಗಕ್ಕೆ ಪ್ರಶ್ನೆ ಕಳಿಸುವವರು ತಮ್ಮ ಮತ್ತು ಊರಿನ ಹೆಸರಿನ ಜತೆ, ತಮ್ಮ ವಯಸ್ಸೇನು, ತಾವು ವಿದ್ಯಾರ್ಥಿಯೋ ಉದ್ಯೋಗಿಯೋ ಎಂಬೆಲ್ಲ ಮಾಹಿತಿಯನ್ನೂ ನೀಡುವುದುಂಟು. ಪ್ರಶ್ನಿಸಿದವರ ಇಂಥ ಹಿನ್ನೆಲೆ ಗೊತ್ತಾದರೆ ಉತ್ತರಿಸಲು ನನಗೂ ಸುಲಭವಾಗುತ್ತದೆ. ನೀವಿಲ್ಲಿ ಪ್ರಶ್ನೆಯನ್ನೇನೋ ಕೇಳಿದ್ದೀರಿ,



ಮಕ್ಕಳು–ಮೊಮ್ಮಕ್ಕಳು ಇದ್ದಾರೆಂಬ ಮಾಹಿತಿ ನೀವಿತ್ತ ವಿವರದಲ್ಲೇ ಇರೋದ್ರಿಂದ ನೀವೊಬ್ಬರು ವಯೋವೃದ್ಧರು ಅಂದ್ಕೋಬಹುದು. ಆದರೆ ನಿಮ್ಮ ವೃತ್ತಿಯೇನು ಎಂಬುದನ್ನೇ ನೀವು ಹೇಳಿಕೊಂಡಿಲ್ಲ. ಆದರೂ ನನ್ನ ‘ಏಳನೇ ಇಂದ್ರಿಯ’ವನ್ನು ಬಳಸಿ ಊಹಿಸುವುದಾದರೆ, ನೀವೊಬ್ಬ ಮಾಜಿ ರಾಜಕಾರಣಿ ಎಂಬುದು 200% ಪಕ್ಕಾ! ನಿಮಗಿರುವ ಸಮಸ್ಯೆಯನ್ನು ಇಲ್ಲಿ ವಿಶ್ಲೇಷಿಸಲು ಯತ್ನಿಸುವೆ. ನೀವೊಬ್ಬ ಶಾಸಕರೋ ಸಂಸದರೋ ಆಗಿ ಈ ಹಿಂದೆ ಕಾರ್ಯನಿರ್ವಹಿಸಿದ್ದು, ಕಳೆದ ಒಂದೆರಡು ಅವಧಿಯಿಂದ ಜನರು ನಿಮಗೆ ಚುನಾವಣೆಯಲ್ಲಿ ಮಣ್ಣು ಮುಕ್ಕಿಸಿ, ಕೈಗೆ ‘ತಿಪಟೂರು ತೆಂಗಿನಕಾಯಿಯ ರಕ್ಷಾಕವಚ’ ನೀಡಿಬಿಟ್ಟಿದ್ದಾರೆ ಎನಿಸುತ್ತದೆ. ಇದಕ್ಕೂ ಮುನ್ನ ನೀವು ಚುನಾಯಿತ ಪ್ರತಿನಿಧಿಯಾಗಿ ಸದನವನ್ನು ಪ್ರವೇಶಿಸಿದ್ದ ಸಂದರ್ಭದಲ್ಲಿ, ಬಹುತೇಕವಾಗಿ ನಿಮಗೆ ಆಡಳಿತ ಪಕ್ಷದವರಾಗುವ ಸೌಭಾಗ್ಯ ಸಿಗದೆ, ಸತತವಾಗಿ ವಿಪಕ್ಷದ ಸ್ಥಾನದಲ್ಲಿ ಕೂತಿದ್ದಿರಿ ಎನಿಸುತ್ತದೆ. ಹೀಗಾಗಿ, ಆಳುಗರ ಕಡೆಯಿಂದ ಸದನದಲ್ಲಿ ಏನೇ ಪ್ರಸ್ತಾವ ಮಂಡನೆಯಾದರೂ ಅಥವಾ ಚರ್ಚೆಗೆ ಮೊದಲಿಟ್ಟರೂ, ವಿಪಕ್ಷದವರಾಗಿರುವ ಒಂದೇ ಕಾರಣಕ್ಕೆ ಅದನ್ನು ವಿರೋಧಿಸುವುದು ನಿಮಗೆ ಅಭ್ಯಾಸವಾಗಿಬಿಟ್ಟಿತ್ತು. ಆಗ ಸಹಜವಾಗೇ ಸದನದಲ್ಲಿ ಗದ್ದಲ ಮತ್ತು ‘ಹೊಯ್–ಕೈ’ ಶುರುವಾಗುತ್ತಿದ್ದಂತೆ, ನೀವು ಕೂತಿದ್ದ ಸ್ಥಾನದಿಂದ ಎದ್ದು, ಜೋರಾಗಿ ‘‘ಹೋ... ಹೋ...’’ ಎಂದು ಕೂಗುತ್ತಾ ಬಾಯಿಬಡ್ಕೊಂಡು, ಸದನದ ಸ್ಪೀಕರ್ ಮುಂದಿದ್ದ ಬಾವಿಯ ಬಳಿ ಕುಕ್ಕರಗಾಲಿನಲ್ಲಿ ಧರಣಿಗೆ ಕೂತುಬಿಡುತ್ತಿದ್ರಿ. ಸ್ವಸ್ಥಾನಕ್ಕೆ ಮರಳುವಂತೆ ಪದೇಪದೆ ಸೂಚನೆ ಬಂದರೂ ನೀವು ಕದಲದಿದ್ದಾಗ ಮಾರ್ಷಲ್‌ಗಳು ನಿಮ್ಮನ್ನು ಅನಾಮತ್ತಾಗಿ ಎತ್ತಿಕೊಂಡು ತಂದು ನಿಮ್ಮ ಸೀಟಿಗೆ ಕುಕ್ಕರಿಸುತ್ತಿದ್ದರು ಎಂಬುದು ನನ್ನ ಊಹೆ....

ಪುಂಗಣ್ಣ ಎಂಬ ಪುಢಾರಿ ಬರೆದಿರುವ ‘ಸದನದಲ್ಲಿ ಕದನ ಮಾಡೋದು ಹೇಗೆ?’ ಎಂಬ ರಾಜಕೀಯಶಾಸ್ತ್ರ ಕೃತಿಯ ‘ಸಭಾತ್ಯಾಗ’ ಅಧ್ಯಾಯದ 420ನೇ ಕಾಂಡದಲ್ಲಿ ನಿಮ್ಮ ಈ ವರ್ತನೆಯನ್ನು ‘‘ಪುನಃಪುನಃ ಬಾವಿ ಸಮೀಪೇ ಧರಣಿಕಾರಕ ಯೋಗಃ’’ ಎಂದೇ ಉಲ್ಲೇಖಿಸಲಾಗಿದೆ. ಇದು ವಿಪಕ್ಷದವರಾಗಿ ಇರುವಷ್ಟೂ ಅವಧಿಯಲ್ಲಿ ಸದಸ್ಯರನ್ನು ಅಮರಿಕೊಳ್ಳುವ ಯೋಗ ಅಥವಾ ರೋಗ. ಇದು ನಿಮ್ಮ ವ್ಯಕ್ತಿತ್ವದೊಳಗೆ ಆಳವಾಗಿ ಬೇರುಬಿಟ್ಟಿದೆ. ನಾನು ಮೊದಲೇ ಉಲ್ಲೇಖಿಸಿದಂತೆ, ನೀವು ಕಳೆದ ಕೆಲ ವರ್ಷಗಳಿಂದ ಚುನಾವಣೆಯಲ್ಲಿ ಗೆಲ್ಲಲಾಗದೆ ಮನೆಯಲ್ಲೇ ಝಂಡಾ ಊರುವಂತಾಗಿದೆ. ಜನರ್‍ಯಾರೂ ನಿಮ್ಮನ್ನು ಮೂಸುತ್ತಿಲ್ಲ, ಸಭೆ–ಸಮಾರಂಭ–ಚಳವಳಿಗೂ ಕರೆಯುತ್ತಿಲ್ಲ. ಹೀಗಾಗಿ ಪ್ರತಿಭಟನೆಗೆ, ಧರಣಿಗೆ ಕೂರುವ ಅವಕಾಶವೇ ನಿಮಗೆ ಸಿಗುತ್ತಿಲ್ಲ. ಆದರೆ, ಮನೆಯಲ್ಲಿನ ಪೂಜೆ–ಪುನಸ್ಕಾರದ ವೇಳೆ ಮಂತ್ರಘೋಷ, ಭಜನೆಯ ಸದ್ದು ತಾರಕಕ್ಕೆ ಏರುತ್ತಿದ್ದಂತೆ ನಿಮಗೆ ಹಿಂದೆ ಸದನದಲ್ಲಿ ನಡೆಯುತ್ತಿದ್ದ ಕದನ–ಕೋಲಾಹಲ ನೆನಪಾಗಿ, ‘ಸಭಾತ್ಯಾಗ’ದ ಆವೇಶ ಬಂದು, ದೇವರ ಮಂಟಪದ ಮುಂಭಾಗದಿಂದ ಎದ್ದು, ಬಾಯಿ ಬಡ್ಕೊಂಡು ಹಿತ್ತಲಿಗೆ ಬಂದು, ಬಾವಿಯ ಬಳಿ ಹಾಗೆ ಕುಕ್ಕರಗಾಲಲ್ಲಿ ಕೂರುವ ಅಭ್ಯಾಸ ಬೆಳೆದುಬಿಟ್ಟಿದೆ....

ಶಾಲಾದಿನಗಳಲ್ಲಿ ‘ಅನುವಂಶೀಯತೆ’ (Heridity) ಎಂಬ ಪಾಠವನ್ನು ನೀವು ಓದಿದ್ದರೆ, ‘ಜನ್ಮಜಾತ ಗುಣ’ ಮತ್ತು ‘ರೂಢಿಸಿಕೊಂಡ ಗುಣ’ ಎಂಬೆರಡು ಪರಿಕಲ್ಪನೆಗಳ ಪ್ರಸ್ತಾವ ನಿಮಗೆ ಕಂಡಿರುತ್ತದೆ. ಅಂತೆಯೇ, ನಿಮಗಿರುವ ಸಮಸ್ಯೆ ನೀವು ‘ರೂಢಿಸಿಕೊಂಡ ಗುಣ’ವೇ ವಿನಾ, ಅದು ವಿಧಿಯ ‘ಕಿತಾಪತಿ’ಯಲ್ಲ. ಹಾಗಾಗಿ ಈ ಕಿತಾಪತಿಗೆ ಅಲೋಪತಿ–ಹೋಮಿಯೋಪತಿ–ನ್ಯಾಚುರೋಪತಿ ವಿಧಾನದಲ್ಲೂ ಔಷಧವಿಲ್ಲ.

ಮತ್ತೊಮ್ಮೆ ಚುನಾವಣೆಯಲ್ಲಿ ಗೆದ್ದು, ಸದನ ಪ್ರವೇಶಿಸಿದರೆ ಮಾತ್ರವೇ ನಿಮ್ಮೀ ಸಮಸ್ಯೆ ತಹಬಂದಿಗೆ ಬಂದೀತು; ಅಲ್ಲಿಯವರೆಗೂ ಬಾಯಿಬಡ್ಕೊಳ್ಳೋದು, ಹಿತ್ತಲ ಬಾವಿಯ ಬಳಿ ಕುಕ್ಕರಗಾಲಲ್ಲಿ ಕೂರೋದು ನಿಮಗೆ ತಪ್ಪಿದ್ದಲ್ಲ...

• • •

- **ಕಪಿನೀಪತಿ, ಮಂಗನಪಾಳ್ಯ**

ಪ್ರಶ್ನೆ: ಭಟ್ರೇ ನಮಸ್ಕಾರ. ಯಾರಲ್ಲೂ ತೋಡಿಕೊಳ್ಳಲಾಗದ ಸಮಸ್ಯೆಯನ್ನು ನಿಮ್ಮಲ್ಲಿ ಹೇಳಿಕೊಳ್ಳುತ್ತಿರುವೆ. ಇದನ್ನು ಪರಿಹರಿಸಿದಲ್ಲಿ ನಿಮ್ಮ ಹೆಸರಲ್ಲಿ ಹನುಮಂತನ ಗುಡಿಯಲ್ಲಿ ನೂರು ಈಡುಗಾಯಿ ಒಡೆಯುವೆ.

ನಾನು ಒಂದು ಕಚೇರಿಯಲ್ಲಿ ಅಕೌಂಟೆಂಟ್. ನನ್ನ ಸಮಸ್ಯೆಯೇನು ಗೊತ್ತಾ? ಕಚೇರಿಯ ವ್ಯವಹಾರದ ಅವಧಿಯಲ್ಲೋ, ಊಟ–ತಿಂಡಿ ಮಾಡುವಾಗಲೋ ನಾನು ಸಹೋದ್ಯೋಗಿಗಳಿಗೆ ‘ಬೊಂಬಾಟ್ ಜೋಕ್’ ಹೇಳಿದರೂ ಅವರು ನಗುವುದೇ ಇಲ್ಲ. ಅಲ್ಲಿಯವರೆಗೂ ಹಸನ್ಮುಖಿಗಳಾಗಿದ್ದ ಅವರು, ನನ್ನ ಜೋಕ್ ಕೇಳುತ್ತಿದ್ದಂತೆ ಮುಖವನ್ನು ಹುಳ್ಳಗೆ ಮಾಡಿಕೊಳ್ಳುತ್ತಾರೆ. ಮತ್ತೊಂದೆಡೆ, ನಾನು ಏನಾದರೂ ಗಂಭೀರ ವಿಷಯವನ್ನೋ, ಗಹನ ಸಮಸ್ಯೆಯನ್ನೋ, ದುಃಖದ ಸಂಗತಿಯನ್ನೋ ಅವರೊಂದಿಗೆ ಚರ್ಚಿಸಿದರೆ, ಹೊಟ್ಟೆ ಹುಣ್ಣಾಗುವಂತೆ ಗಹಗಹಿಸಿ ನಗುತ್ತಾ ನೆಲದ ಮೇಲೆ ಬಿದ್ದು ಹೊರಳಾಡುತ್ತಾರೆ. ಇವರೆಲ್ಲಾ ಇತ್ತ ನನ್ನ ‘ಹಾಸ್ಯಪ್ರಜ್ಞೆ’ಯನ್ನೂ ಗುರುತಿಸದೆ, ಅತ್ತ ನನ್ನ ‘ಗಂಭೀರ ಗ್ರಹಿಕೆ’ಯನ್ನೂ ಲೆಕ್ಕಿಸದೆ ಅವಮಾನಿಸುತ್ತಿದ್ದಾರಾ? ನನ್ನ ಪ್ರತಿಭೆ ಕಂಡು ಅವರಿಗೆ ಅಸೂಯೆ, Insecured Feeling ಆಗುತ್ತಿದೆಯಾ? ಎಂಬ ಗೊಂದಲ ನನಗಾಗುತ್ತಿದೆ. ಸುದ್ದಿವಾಹಿನಿಯೊಂದರ ‘ನಿಮ್ಮ ಗ್ರಹಚಾರ’ ಲೈವ್ ಜ್ಯೋತಿಷ ಕಾರ್ಯಕ್ರಮದಲ್ಲಿ ‘ಅಂಡ–ಪಿಂಡ–ಬ್ರಹ್ಮಾಂಡ’ ಗುರುಗಳಲ್ಲೂ ಈ ಸಮಸ್ಯೆ ತೋಡಿಕೊಂಡೆ. ಆದರೆ ಅವರು, ‘‘ನಿನ್ ಮುಂಡಾಮೋಚ್ತು’’ ಎಂದು ಹೇಳಿ ಲೈನ್ ಕಟ್ ಮಾಡಿ ಕೈಬಿಟ್ರು. ನೀವಾದ್ರೂ ಕೈಹಿಡೀರಿ ಭಟ್ರೇ...

ಉತ್ತರ: ಮಂಗನಪಾಳ್ಯದ ಕಪಿನೀಪತಿಯವರೇ, ನಿಮ್ಮ ಸಮಸ್ಯೆ ಕೇಳಿ ನನಗೆ ಕಣ್ಣಲ್ಲಿ ನೀರು ಬಂತು (ಇನ್ನೆಲ್ಲಿಂದ ಬರೋಕ್ಕೆ ಸಾಧ್ಯ?!!). ನಿಮ್ಮ ಪ್ರಶ್ನೆಯನ್ನು ಕೂಲಂಕಷ ಅವಲೋಕಿಸಿದ ನಂತರ ನನಗಾದ ‘ಸತ್ಯದರ್ಶನ’ ಇಲ್ಲಿದೆ ನೋಡಿ:

ವಾಸ್ತವವಾಗಿ ನಿಮಗೆ ಹೇಳಿಕೊಳ್ಳುವಂಥ ಸಮಸ್ಯೆಯೇನೂ ಇಲ್ಲ; ಎಡವಟ್ಟು ಆಗಿರೋದು ನಿಮ್ಮ ಸಹೋದ್ಯೋಗಿಗಳಲ್ಲಿ. ಇದು ಹಳೆಯ ಸಮಸ್ಯೆಯಾದರೂ, ಕಳೆದ ದಶಕದಲ್ಲಿ ಅದರಲ್ಲೂ ‘ಗೋಲ್‌ಮಾಲ್ ರಾಧಾಕೃಷ್ಣ’ ಚಲನಚಿತ್ರ ಬಂದ ನಂತರ ಇದಕ್ಕೆ ‘Seetaapati Syndrome’ ಅಂತ ನಾಮಕರಣವಾಗಿದೆ. ‘ಉಮೇಶ್ ಊನ’ ಅಂತಲೂ ಇದನ್ನು ಕರೆಯಲಾಗುತ್ತೆ. ಸರಳವಾಗಿ ಹೇಳೋದಾದ್ರೆ ಇದನ್ನು ‘ಅಪಾರ್ಥರೋಗ’ ಎನ್ನಬಹುದು. ಅಂದರೆ, ನೀವು ಏನೇ ನಗೆಹನಿ ಹೇಳಿದರೂ, ಗೋಳು ತೋಡಿಕೊಂಡರೂ ನಿಖರವಾಗಿ ಅದರ ವಿರುದ್ಧ ದಿಕ್ಕಿನಲ್ಲಿ ಗ್ರಹಿಸುವ ಅಥವಾ ಅಪಾರ್ಥ ಮಾಡಿಕೊಳ್ಳುವ ರೋಗ. ಇದು ನಿಮ್ಮ ಸಹೋದ್ಯೋಗಿಗಳಲ್ಲಿ ಇದ್ದಂತಿದೆ. ಹೀಗಾಗಿ ನೀವು ಜೋಕ್ ಹೇಳಿದಾಗಲೂ ಮುಖ ಸಿಂಡರಿಸಿಕೊಳ್ಳುವ ಅಥವಾ ನಿಮ್ಮ ಗೋಳು ಹೇಳಿಕೊಂಡಾಗ ಗಹಗಹಿಸಿ ನಗುವ ವರ್ತನೆ ಅವರಿಂದ ಹೊಮ್ಮುತ್ತಿದೆ ಎನಿಸುತ್ತದೆ. ಆದ್ದರಿಂದ ಚಿಕಿತ್ಸೆ ಬೇಕಿರೋದು ನಿಮ್ಮ ಸಹೋದ್ಯೋಗಿಗಳಿಗೆ....

ಅಥವಾ, ಇನ್ನೊಂದು ಸಾಧ್ಯತೆಯೂ ಇದೆ. ಒಂದೊಮ್ಮೆ, ನೀವು ಜೋಕ್ ಹೇಳುವ ರೀತಿಯು ಯಾರದ್ದೋ ‘ಸತ್ತ ಸುದ್ದಿ’ ಹೇಳುವಂತೆಯೂ, ನೀವು ತೋಡಿಕೊಂಡ ಗೋಳು ‘ನಗೆಹನಿ’ಯಂತೆಯೂ ಅವರ ಕಿವಿಗೆ ಅಪ್ಪಳಿಸಿ, ನಿಮ್ಮ ನಿರೀಕ್ಷೆಗೆ ‘ವ್ಯತಿರಿಕ್ತವಾಗಿ’ ಅವರು ವರ್ತಿಸುತ್ತಿರಲೂ ಬಹುದು. ಹಾಗೇನಾದರೂ ಆಗಿದ್ದಲ್ಲಿ ಅದು ನಿಮ್ಮ ಸಮಸ್ಯೆ, ಅದಕ್ಕೊಂದು ಪರಿಹಾರವಿದೆ. ದಯವಿಟ್ಟು ದೃಶ್ಯಮಾಧ್ಯಮಗಳ ಜ್ಯೋತಿಷ ಕಾರ್ಯಕ್ರಮದ, ಚುನಾವಣಾಪೂರ್ವ ಮತ್ತು ಚುನಾವಣೋತ್ತರ ಸಮೀಕ್ಷೆಗಳ ವೀಕ್ಷಣೆಯನ್ನು ನಿಲ್ಲಿಸಿ. ಹಾಗೆ ಮಾಡಿದರೆ ನಿಮಗೂ ಕ್ಷೇಮ, ನಿಮ್ಮ ಸಹೋದ್ಯೋಗಿಗಳೂ ಸೇಫ್....

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 241

ಸಮಾಚಾರ ಸಣ್ಣದಲ್ಲ

ಸೇನಾ ವಾಹನ ಪ್ರಪಾತಕ್ಕೆ 4 ಯೋಧರು ಹುತಾತ್ಮ

ಬಂಡಿಪೋರಾ: ಕಣಿವೆಗಳ ನಾಡು ಜಮ್ಮು-ಕಾಶ್ಮೀರದಲ್ಲಿ ಸೇನಾ ವಾಹನ ಅಪಘಾತ ಸಂಖ್ಯೆ ಹೆಚ್ಚುತ್ತಿದೆ. ಕಳೆದ ವಾರ ಪೂಂಚ್ ಬಳಿ ಸೇನಾ ವಾಹನ ಕಮರಿಗೆ ಬಿದ್ದು ಕರ್ನಾಟಕದ ನಾಲ್ವರು ಸೇರಿದಂತೆ ಒಟ್ಟು ಐವರು ಯೋಧರು ಹುತಾತ್ಮರಾಗಿದ್ದರು. ಅದರ ನೆನಪು ಮಾಸುವ ಮುನ್ನವೇ ಮತ್ತೊಂದು ಸೇನಾ ವಾಹನ ಪ್ರಪಾತಕ್ಕೆ ಬಿದ್ದಿದ್ದರಿಂದ 4 ಯೋಧರು ಹುತಾತ್ಮರಾಗಿದ್ದಾರೆ. ಬಂಡಿಪೋರಾ ಜಿಲ್ಲೆಯಲ್ಲಿ ಸೇನಾ ವಾಹನ ಉತ್ತರ ಕಾಶ್ಮೀರ ಜಿಲ್ಲೆಯ ಎಸ್ಕೆ ಪಾಯೆನ್ ಬಳಿ ರಸ್ತೆಯಿಂದ ಜಾರಿ ಪ್ರಪಾತಕ್ಕೆ ಬಿದ್ದಿದೆ. ಅಪಘಾತದಲ್ಲಿ ಮೂವರು ಯೋಧರು ಗಾಯಗೊಂಡಿದ್ದು, ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಮೂವರು ಯೋಧರು ಪ್ರಾಣಪಾಯದಿಂದ ಪಾರಾಗಿದ್ದು, ಅವರನ್ನು ಶ್ರೀನಗರಕ್ಕೆ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಮಸ್ರತ್ ಇಕ್ಬಾಲ್ ಸುದ್ದಿಗಾರರಿಗೆ ತಿಳಿಸಿದರು.

ಸೂರತ್ ಸಿಐಎಸ್ಎಫ್ ಯೋಧ ಆತ್ಮಹತ್ಯೆ

ಸೂರತ್: ಗುಜರಾತಿನ ಸೂರತ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶನಿವಾರ ಸೆಂಟ್ರಲ್ ಇಂಡಸ್ಟ್ರಿಯಲ್ ಸೆಕ್ಯುರಿಟಿ ಫೋರ್ಸ್ (ಸಿಐಎಸ್ಎಫ್)ಗೆ ಸೇರಿದ ಯೋಧ ತನ್ನ ಸರ್ವೀಸ್ ರಿವಾಲ್ವಾರಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಿಐಎಸ್ಎಫ್ ಯೋಧ ಕಿಸನ್ ಸಿಂಗ್(32) ಶನಿವಾರ ಮಧ್ಯಾಹ್ನ 2.10ರ ವೇಳೆ ವಿಮಾನ ನಿಲ್ದಾಣದ ವಾಶ್ ರೂಂನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸೂರತ್ ವಿಮಾನ ನಿಲ್ದಾಣದಲ್ಲಿ ನಿಯೋಜಿಸಲಾಗಿದ್ದ ಜೈಪುರ ಮೂಲದ ಸಿಂಗ್ ಅವರು ತಮ್ಮ ಹೊಟ್ಟೆ ಭಾಗಕ್ಕೆ ಗುಂಡು ಹಾರಿಸಿಕೊಂಡಿದ್ದಾರೆ ಎಂದು ಡುಮಾಸ್ ಪೊಲೀಸ್ ಠಾಣೆಯ ಅಧಿಕಾರಿ ಎನ್ವಿ ಭಾರವಾಡ್ ವಿವರಿಸಿದ್ದಾರೆ. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಅದಾಗಲೇ ಸಿಂಗ್ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ. ಯೋಧನ ಆತ್ಮಹತ್ಯೆಗೆ ಕಾರಣ ಇನ್ನೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಎಚ್ಎಂಪಿವಿ ವೈರಸ್ ಭಾರತದಲ್ಲಿಲ್ಲ: ಕೇಂದ್ರ

ದೆಹಲಿ: ಚೀನಾದಲ್ಲಿ ವ್ಯಾಪಕವಾಗಿರುವ ಮರಣಾಂಕಿತ ಎಚ್ ಎಂಪಿವಿ ಸೋಂಕು ಸದ್ಯ ಭಾರತದಲ್ಲಿ ಕಾಣಿಸಿಕೊಂಡಿಲ್ಲ. ಯಾವುದೇ ಪ್ರಕರಣಗಳು ಪತ್ತೆಯಾಗಿಲ್ಲ. ಆತಂಕಪಡುವ ಅಗತ್ಯವಿಲ್ಲ ಎಂದು ಕೇಂದ್ರ ಸರಕಾರ ಶನಿವಾರ ಹೇಳಿದೆ. ಆರೋಗ್ಯ ಸೇವೆಗಳ ಮಹಾನಿರ್ದೇಶಕ ಡಾ.ಅತುಲ್ ಗೋಯಲ್ ಸುದ್ದಿಸಂಸ್ಥೆಗೆ ಶನಿವಾರ ಪ್ರತಿಕ್ರಿಯೆ ನೀಡಿದ್ದು, ಎಚ್ಎಂಪಿವಿ ವೈರಸ್ ಶೀತ ಸಮಸ್ಯೆ ಲಕ್ಷಣಗಳನ್ನು ಹೊಂದಿದ್ದು, ಮಕ್ಕಳು, ವೃದ್ಧರಲ್ಲಿ ಜ್ವರ ಕಾಣಿಸಿಕೊಳ್ಳಬಹುದು. 2024ರ ಡಿಸೆಂಬರ್‌ನಲ್ಲಿ ಉಸಿರಾಟ ಸಂಬಂಧಿ ಸಮಸ್ಯೆಗಳು ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿ ವರದಿಯಾಗಿಲ್ಲ. ಪ್ರಸ್ತುತ ಪರಿಸ್ಥಿತಿ ಅಪಾಯಕಾರಿಯಾಗಿಲ್ಲ. ಒಂದೊಮ್ಮೆ ಸಮಸ್ಯೆ ಉಲ್ಬಣಿಸಿದರೂ ದೇಶದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಬೇಕಾದಷ್ಟು ವ್ಯವಸ್ಥೆ ಲಭ್ಯವಿದೆ ಎಂದರು. ಉಸಿರಾಟ ಸಂಬಂಧಿ ಸಾಂಕ್ರಾಮಿಕ ರೋಗಗಳು ಮಕ್ಕಳು ಹಾಗೂ ಹಿರಿಯರಲ್ಲಿ ಬೇಗ ಕಾಣಿಸಿಕೊಳ್ಳುತ್ತವೆ. ಚೀನಾದಲ್ಲಿ ಚಳಿಗಾಲದಲ್ಲಿ ಕೆಲ ವೈರಸ್ ಆತಂಕ ಸೃಷ್ಟಿಸುವುದು ಸಾಮಾನ್ಯ. 5 ವರ್ಷದಲ್ಲಿ ಪ್ರತಿ ಚಳಿಗಾಲದಲ್ಲಿ ಚೀನಾದಲ್ಲಿ ಕೆಲ ವೈರಸ್ ಆತಂಕ ಸೃಷ್ಟಿಸಿವೆ. ಆದರೆ, ಭಾರತಕ್ಕೆ ಯಾವುದೇ ಆತಂಕವಿಲ್ಲ ಎಂದರು. ಚೀನಾದಲ್ಲಿ ಇನ್ ಫ್ಲೂಯೆನ್ಜಾ ಪ್ರಕರಣಗಳಲ್ಲಿ ಹೆಚ್ಚಳವಾಗಿದೆ. ಎಂಬ ವರದಿಗಳ ಹಿನ್ನೆಲೆಯಲ್ಲಿ ಭಾರತದಲ್ಲೂ ಇಂತಹ ಶೀತಜ್ವರ ಪ್ರಕರಣಗಳ ಬಗ್ಗೆ ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ ನಿಗಾ ವಹಿಸಿದ್ದು, ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿದೆ ಎಂದು ವಿವರಿಸಿದರು.

ಜಾಲತಾಣದಲ್ಲಿ ಖಾತೆ ಹೆತ್ತವರ ಸಮ್ಮತಿ ಅಗತ್ಯ

ದೆಹಲಿ: ಭಾರತದಲ್ಲಿ ಮಕ್ಕಳು ಸಾಮಾಜಿಕ ಜಾಲತಾಣ ಖಾತೆ ತೆರೆಯಲು ಪೋಷಕರ ಅನುಮತಿ ಇನ್ನು ಮುಂದೆ ಕಡ್ಡಾಯವಾಗಲಿದೆ. ಕೇಂದ್ರ ಸರಕಾರ ಜಾರಿ ಮಾಡಲು ಹೊರಟಿರುವ ಡಿಜಿಟಲ್ ವೈಯಕ್ತಿಕ ಮಾಹಿತಿ ರಕ್ಷಣಾ ಕರಡು ನಿಯಮಗಳಲ್ಲಿ ಈ ಅಂಶ ಉಲ್ಲೇಖಿಸಲಾಗಿದೆ. ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆಗೆ ಸಂಬಂಧಿಸಿ ಕೇಂದ್ರ ಸರಕಾರ 2024 ರಲ್ಲಿ ಮಂಡಿಸಿದ್ದ ಕರಡು ಮಸೂದೆಯನ್ನು ಕೇಂದ್ರ ಸರಕಾರ ಬಿಡುಗಡೆ ಮಾಡಿದೆ. ನಿಯಮ ಉಲ್ಲಂಘನೆಗೆ ವಿಧಿಸಬಹುದಾದ ದಂಡದ ಅಂಶ ಕರಡಲ್ಲಿ ಲಭ್ಯವಿಲ್ಲ. ಪೋಷಕರು ಒಪ್ಪಿಗೆ ನೀಡದ ಹೊರತು ಮಕ್ಕಳು ಸಾಮಾಜಿಕ ಜಾಲತಾಣದಲ್ಲಿ ಖಾತೆ ತೆರೆಯಲು ಸಾಮಾಜಿಕ ಜಾಲತಾಣ ಸಂಸ್ಥೆ ಅವಕಾಶ ನೀಡಬಾರದೆಂಬ ನಿಯಮವನ್ನು ಕಾಯ್ದೆ ಹೊಂದಿದೆ. ಇದನ್ನು ಸರಕಾರ ಪರಿಶೀಲಿಸಲು ಸಹ ಅವಕಾಶ ಇರಬೇಕು ಎಂದು ಸೂಚಿಸಿದೆ. ಆಸ್ಟ್ರೇಲಿಯ ಸರಕಾರ 16 ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ಜಾಲತಾಣ ಖಾತೆ ತೆರೆಯುವುದನ್ನು ನಿಷೇಧಿಸಿ ಕಾಯ್ದೆ ಅಂಗೀಕರಿಸಿದೆ.

{ಅಸಾದುದ್ದೀನ್ ಓವೈಸಿ} ಎಐಎಂಐಎಂ ಸಂಸದ

ಬಿಜೆಪಿ ಮತ್ತು ಎಎಪಿ ಸೈದ್ಧಾಂತಿಕವಾಗಿ ಒಂದೇ ಆಗಿವೆ. ಎರಡೂ ಪಕ್ಷಗಳು ಹಿಂದುತ್ವವನ್ನು ಪ್ರತಿಪಾದಿಸುತ್ತವೆ. ಎರಡರ ನಡುವೆ ಯಾವುದೇ ವ್ಯತ್ಯಾಸ ಇಲ್ಲ. ಅಲ್ಲದೇ ಇವೆರಡೂ ಪಕ್ಷಗಳಿಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘವೇ ತಾಯಿ. ಸಂಘ ಹಿಂದುತ್ವದ ಪ್ರಯೋಗಾಲಯ. ಎಎಪಿ ಅದರದೇ ಸೃಷ್ಟಿ.

ದೆಹಲಿಯಲ್ಲಿ ಗ್ರಾಮೀಣ ಭಾರತ ಮಹೋತ್ಸವ ಉದ್ಘಾಟಿಸಿದ ಪ್ರಧಾನಿ ಮೋದಿ
ದೇಶ ಮುಂದಕ್ಕೆ ತೆಗೆದುಕೊಂಡು ಹೋಗುವಲ್ಲಿ ಗ್ರಾಮಗಳ ಪಾತ್ರ ಪ್ರಮುಖ

ಶಾಂತಿ ಕದಡಲು ಜಾತಿ ರಾಜಕಾರಣ

ದೆಹಲಿ: ಜಾತಿ ರಾಜಕಾರಣ ಹೆಸರಲ್ಲಿ ಕೆಲವರು ಸಮಾಜದ ಶಾಂತಿ ಕದಡಲು ಯತ್ನಿಸುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ನಗರದಲ್ಲಿ ಕಿಡಿಕಾರಿದರು.

ದೇಶದ ಗ್ರಾಮೀಣ ಭಾಗಗಳಲ್ಲಿ ಸಾಮಾಜಿಕ ಸೌಹಾರ್ದತೆ ಕಾಪಾಡಬೇಕಿದೆ. ಅದಕ್ಕಾಗಿ ಶಾಂತಿ ಕದಡಲು ಯತ್ನಿಸುವವರ ಕುಕೃತ್ಯಗಳನ್ನು ವಿಫಲಗೊಳಿಸಬೇಕಿದೆ ಎಂದು ಕರೆ ನೀಡಿದ್ದಾರೆ.

ದೆಹಲಿಯಲ್ಲಿ ಶನಿವಾರ ಗ್ರಾಮೀಣ ಭಾರತ ಮಹೋತ್ಸವ ಉದ್ಘಾಟಿಸಿದ ಪ್ರಧಾನಿ ಮೋದಿ, 2047ರ ವೇಳೆಗೆ ವಿಕಸಿತ ಭಾರತ ಕನಸು ನನಸಾಗಲಿದೆ. ದೇಶವನ್ನು ಮುಂದಕ್ಕೆ ತೆಗೆದುಕೊಂಡು ಹೋಗುವಲ್ಲಿ ಗ್ರಾಮಗಳು ಪ್ರಮುಖ ಪಾತ್ರ ವಹಿಸಲಿವೆ. ಗ್ರಾಮಗಳಲ್ಲಿ ಶಾಂತಿ-ಸೌಹಾರ್ದ ಪರಂಪರೆಯನ್ನು ಬಲಪಡಿಸುವ ಕೆಲಸ ಮಾಡಬೇಕಾಗಿದೆ ಎಂದು ನುಡಿದರು. ಸ್ವಾತಂತ್ರ್ಯ ಸಿಕ್ಕಿದ ದಶಕಗಳ ನಂತರ ಗ್ರಾಮೀಣ ಭಾರತವನ್ನು ನಿರ್ಲಕ್ಷಿಸಲಾಗಿತ್ತು. ಹಿಂದಿನ ಸರಕಾರಗಳು ಮೂಲ ಸೌಕರ್ಯಗಳಿಂದ ವಂಚಿತವಾದ ಗ್ರಾಮಗಳನ್ನು ಬಿಟ್ಟುಹೋದವು. ನಮ್ಮ ಸರಕಾರ ಹಳ್ಳಿಗಳನ್ನು ಸಬಲೀಕರಣಗೊಳಿಸಲು ಗಮನಹರಿಸಿದೆ ಎಂದು ಒತ್ತಿ ಹೇಳಿದರು.

ಗ್ರಾಮೀಣಾಭಿವೃದ್ಧಿ ಕ್ರಮ: 2014ರಿಂದ ಎನ್ಡಿಎ ಸರಕಾರ ಗ್ರಾಮೀಣಾಭಿವೃದ್ಧಿಗಾಗಿ ಕೈಗೊಂಡ ಕ್ರಮಗಳನ್ನು ನೆನಪಿಸಿಕೊಂಡ ಪ್ರಧಾನಿ ನರೇಂದ್ರ ಮೋದಿ, ಎಸ್ಬಿಐ ಸಂಶೋಧನಾ ವರದಿ ಉಲ್ಲೇಖಿಸಿದರು. 2012ರಲ್ಲಿ ಗ್ರಾಮೀಣ ಭಾರತದಲ್ಲಿ ಬಡತನ ಶೇ.26ರಷ್ಟು ಇದ್ದಿತು. ಈಗ ಶೇ.5ಕ್ಕಿಂತಲು ಕಡಿಮೆ ಮಟ್ಟಕ್ಕೆ ತಗ್ಗಿದೆ ಎಂದು ಹೇಳಿದರು.

ದೆಹಲಿಯಲ್ಲಿ ಶನಿವಾರ ಉದ್ಘಾಟನೆಗೊಂಡ ಗ್ರಾಮೀಣ ಭಾರತ ಮಹೋತ್ಸವ ದಲ್ಲಿ ಮಾರಾಟ ಮಳಿಗೆಗಳನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವೀಕ್ಷಿಸಿ ವರ್ತಕರ ಜತೆ ಸಂವಾದ ನಡೆಸಿದರು.

ಗ್ರಾಮೀಣ ಸಮುದಾಯಗಳಲ್ಲಿ ನಾವೀನ್ಯತೆ ಬೆಳೆಸುವ ಗುರಿ: ನಿರ್ಮಲಾ

ಪ್ರಧಾನ ಮಂತ್ರಿ ಜನ್ ಧನ್ ಯೋಜನೆ, ಪಿಎಂ ಮುದ್ರಾ ಮತ್ತು ಪಿಎಂ ಸ್ವನಿಧಿ ಸೇರಿದಂತೆ 16 ಸರಕಾರಿ ಯೋಜನೆಗಳಿಗೆ ಬ್ಯಾಂಕ್‌ಗಳು ಸ್ಯಾಚುರೇಶನ್ ಅಭಿಯಾನ ಕೈಗೊಂಡಿವೆ. ಗ್ರಾಮೀಣ ಭಾರತ ಮಹೋತ್ಸವ ವಿವಿಧ ಚರ್ಚೆ, ಕಾರ್ಯಾಗಾರ ಮತ್ತು ಮಾಸ್ಟರ್ ಕ್ಲಾಸ್‌ಗಳ ಮೂಲಕ ಗ್ರಾಮೀಣ ಮೂಲಸೌಕರ್ಯಗಳನ್ನು ಹೆಚ್ಚಿಸಲು, ಸ್ವಾವಲಂಬಿ ಆರ್ಥಿಕತೆಯನ್ನು ಸೃಷ್ಟಿಸಲು ಮತ್ತು ಗ್ರಾಮೀಣ ಸಮುದಾಯಗಳಲ್ಲಿ ನಾವೀನ್ಯ ಬೆಳೆಸುವ ಗುರಿ ಹೊಂದಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು. ಗ್ರಾಮೀಣ ಭಾರತ ಮಹೋತ್ಸವದ ಉದ್ದೇಶಗಳು ಆರ್ಥಿಕ ಒಳಗೊಳ್ಳುವಿಕೆ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಬೆಂಬಲಿಸುವ ಮೂಲಕ ಈಶಾನ್ಯ ಭಾರತದ ಮೇಲೆ ವಿಶೇಷ ಗಮನ ನೀಡುವ ಮೂಲಕ ಗ್ರಾಮೀಣ ಜನಸಂಖ್ಯೆಯಲ್ಲಿ ಆರ್ಥಿಕ ಸ್ಥಿರತೆ ಮತ್ತು ಆರ್ಥಿಕ ಭದ್ರತೆ ಉತ್ತೇಜಿಸುವುದನ್ನು ಒಳಗೊಂಡಿವೆ ಎಂದರು.

ದೆಹಲಿ ದಟ್ಟಮಂಜು: 19 ವಿಮಾನ ಮಾರ್ಗ ಬದಲು, 81 ರೈಲು ವಿಳಂಬ

ದೆಹಲಿ: ದೇಶದ ರಾಜಧಾನಿ ದೆಹಲಿಯಲ್ಲಿ ಶನಿವಾರ ಕೂಡಾ ಬೆಳಗ್ಗೆ ದಟ್ಟ ಮಂಜು ಮುಸುಕಿದ್ದರಿಂದ ಹಲವಾರು ಪ್ರದೇಶಗಳಲ್ಲಿ ಗೋಚರತೆ ಪ್ರಮಾಣ ಶೂನ್ಯಕ್ಕೆ ಇಳಿದಿತ್ತು. ಪರಿಣಾಮ 19 ವಿಮಾನಗಳು ಮಾರ್ಗ ಬದಲಿಸಿ ಬೇರೆ ನಗರಗಳ ನಿಲ್ದಾಣಗಳಲ್ಲಿ ಇಳಿಯಬೇಕಾಯಿತು. 81 ರೈಲುಗಳ ಸಂಚಾರ ವಿಳಂಬಗೊಂಡವು ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ 11.30 ರಿಂದ ಪಾಲಮ್ ವಿಮಾನ ನಿಲ್ದಾಣ ಪ್ರದೇಶದಲ್ಲಿ ಮತ್ತು ಶನಿವಾರ ನಸುಕಿನ 12.30ರಿಂದ ಸಫ್ದರ್ಜಂಗ್ ಪ್ರದೇಶದಲ್ಲಿ ಗೋಚರತೆ ಪ್ರಮಾಣ ಶೂನ್ಯಕ್ಕೆ ಇಳಿದಿತ್ತು ಎಂದು ಹವಾಮಾನ ಕಚೇರಿ ತಿಳಿಸಿದೆ. ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಶನಿವಾರ ಬೆಳಗ್ಗೆ 7 ಗಂಟೆ ವೇಳೆಯಲ್ಲಿ ಕೂಡ ದಟ್ಟವಾದ ಮಂಜಿನಿಂದಾಗಿ ರನ್ವೇ ವಿಷುಯಲ್ ರೇಂಜ್ ಶೂನ್ಯಕ್ಕೆ ತಗ್ಗಿತ್ತು. ರನ್ವೇಗಳಲ್ಲಿ ಸಾಮಾನ್ಯ ಗೋಚರತೆ 100-250 ಮೀಟರ್ಗಳಷ್ಟು ದೂರದ ವರೆಗಷ್ಟೆ ಇತ್ತು. ಹಾಗಾಗಿ ದೆಹಲಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ಮತ್ತು ಟೇಕ್ಆಫ್ ಕಷ್ಟವಾಗಿದ್ದರಿಂದ 19 ವಿಮಾನಗಳ ಮಾರ್ಗ ಬದಲು ಮಾಡುವುದು ಅನಿವಾರ್ಯವಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ. ಅನಾನುಕೂಲತೆಗಾಗಿ ತೀವ್ರ ವಿಷಾದಿಸುತ್ತೇವೆ ಎಂದು ದೆಹಲಿ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಲಿ. ಎಕ್ಸ್ ಸಂದೇಶದಲ್ಲಿ ತಿಳಿಸಿದೆ.

ಇನ್ನೊಂದೆಡೆ, ಒಟ್ಟು 59 ರೈಲುಗಳು ಆರು ಗಂಟೆಗಳವರೆಗೆ ಮತ್ತು 22 ರೈಲುಗಳು ಸುಮಾರು ಎಂಟು ಗಂಟೆಗಳವರೆಗೆ ತಡವಾಗಿ ಸಂಚಾರ ಆರಂಭಿಸಿದವು ಎಂದು ಉತ್ತರ ರೈಲ್ವೆ ಹೇಳಿದೆ.

ಗಾಳಿ ಗುಣಮಟ್ಟ ಅತ್ಯಂತ ಕಳಪೆ

ದೆಹಲಿಯಲ್ಲಿ ಗಾಳಿ ಗುಣಮಟ್ಟ ಶನಿವಾರ ಬೆಳಗ್ಗೆ 'ಅತ್ಯಂತ ಕಳಪೆ' ಮಟ್ಟದಲ್ಲಿತ್ತು. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಂಕಿ ಅಂಶ ಪ್ರಕಾರ, ಬೆಳಗ್ಗೆ 9 ಗಂಟೆಗೆ rajadhani ವಾಯು ಗುಣಮಟ್ಟ ಸೂಚ್ಯಂಕ (AQI) 380 ರೀಡಿಂಗ್ ನಲ್ಲಿತ್ತು. ಗರಿಷ್ಠ ತಾಪಮಾನ 21 ಡಿಗ್ರಿ ಸೆಲ್ಸಿಯಸ್‌ನಲ್ಲಿ ಕನಿಷ್ಠ ತಾಪಮಾನ 5.3 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಪ್ರಧಾನಿ ಮೋದಿ ಈ ಅಪರಾಧದಿಂದ ತಪ್ಪಿಸಿಕೊಳ್ಳಲಾಗದು

ಮಣಿಪುರ ಸುಟ್ಟ ಬೆಂಕಿಕಡ್ಡಿ ಬಿಜೆಪಿ: ಖರ್ಗೆ

ದೆಹಲಿ: ಈಶಾನ್ಯ ರಾಜ್ಯ ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಬಿಜೆಪಿಯೆ ಮಣಿಪುರವನ್ನು ಸುಟ್ಟ ಬೆಂಕಿಕಡ್ಡಿ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.

ರಾಜಧರ್ಮ ಅನುಸರಿಸದ ಸಾಂವಿಧಾನಿಕ ಅಪರಾಧ ದಿಂದ ಪ್ರಧಾನಿ ನರೇಂದ್ರ ಮೋದಿ ತಪ್ಪಿಸಿಕೊಳ್ಳಲು ಸಾಧ್ಯ ವಿಲ್ಲ ಎಂದು ಖರ್ಗೆ ಕಿಡಿಕಾರಿದ್ದಾರೆ. ಬುಡಕಟ್ಟು ರಾಜ್ಯವನ್ನು ಕುದಿಯುವ ಸ್ಥಿತಿಯಲ್ಲಿಡಲು ಬಿಜೆಪಿಯ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತಿವೆ ಎಂದು ಖರ್ಗೆ 'ಎಕ್ಸ್' ಸಂದೇಶದಲ್ಲಿ ಆರೋಪಿಸಿದ್ದಾರೆ. ಜತೆಗೆ ಮಣಿಪುರದಲ್ಲಿನ ಇತ್ತೀಚಿನ ಹಿಂಸಾಚಾರ ಕುರಿತು ವರದಿಗಳ ಸ್ಕ್ರೀನ್ ಶಾಟ್ ಹಂಚಿಕೊಂಡಿದ್ದಾರೆ. ನರೇಂದ್ರ ಮೋದಿಯವರೇ, ನೀವು 2022ರ ಜನವರಿ ಯಲ್ಲಿ ಬಿಜೆಪಿಗೆ ಮತ ಕೇಳುವುದಕ್ಕಾಗಿ ಮಣಿಪುರಕ್ಕೆ ಹೋಗಿದ್ದು ನಿಮ್ಮ ಕೊನೆಯ ಭೇಟಿ. 2023ರ ಮೇ 3ರಂದು ರಾಜ್ಯದಲ್ಲಿ ಹಿಂಸಾಚಾರ ಭುಗಿಲೆದ್ದಿತು. 600ಕ್ಕೂ ಹೆಚ್ಚು ದಿನಗಳೆ ಕಳೆದಿವೆ ಎಂದು ಟೀಕಿಸಿದ್ದಾರೆ. ಇಂಫಾಲ್ ಪೂರ್ವ ಜಿಲ್ಲೆಯ ಗಡಿಯಲ್ಲಿರುವ ಸೈಬೋಲ್ ಗ್ರಾಮದಿಂದ ಕೇಂದ್ರ ಪಡೆಗಳನ್ನು ತೆಗೆದುಹಾಕುವಲ್ಲಿ ಅಧಿಕಾರಿ ವಿಫಲರಾಗಿದ್ದಾರೆ ಎಂದು ಆರೋಪಿಸಿದ ಜನರು, ಕಾಂಗ್ಪೋಕ್ಪಿ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಶುಕ್ರವಾರ ದಾಳಿ ನಡೆಸಿದ್ದು ಅಧಿಕಾರಿ ಗಾಯಗೊಂಡಿದ್ದಾರೆ. ಇದು ಹಿಂಸಾಚಾರದ ಮರು ಆರಂಭಕ್ಕೆ ಸಾಕ್ಷಿಯಾಗಿದೆ. ಆದರೆ, ನಿಮ್ಮ ಅಸಮರ್ಥ ಮುಖ್ಯಮಂತ್ರಿ ವಿಷಾದ ವ್ಯಕ್ತಪಡಿಸಿ ಸುಮ್ಮನಾಗಿದ್ದಾರೆ ಎಂದು ಖರ್ಗೆ ಪ್ರಧಾನಿ ಮೋದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಣಿಪುರ ಸ್ಥಿತಿಗತಿ

ಶಾಂತಿ ಮತ್ತು ಸಹಜ ಸ್ಥಿತಿ ಖಚಿತಪಡಿಸುವುದು ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರಾಥಮಿಕ ಜವಾಬ್ದಾರಿ ಎಂದು ಸುಪ್ರೀಂ ಕೋರ್ಟ್ ಕೂಡ ಹೇಳಿದೆ. ಆದರೆ ಗಡಿ ರಾಜ್ಯ ಕುದಿಯುತ್ತಿದೆ. ಮಣಿಪುರ ಹಿಂಸಾಚಾರದಲ್ಲಿ ಒಟ್ಟು 250ಕ್ಕೂ ಹೆಚ್ಚು ಸಾವಾಗಿದೆ. 60,000ಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. ಜನರು 20 ತಿಂಗಳಿಂದ ಶಿಬಿರಗಳಲ್ಲೇ ವಾಸಿಸುತ್ತಿದ್ದಾರೆ ಎಂದು ಖರ್ಗೆ ಮಣಿಪುರ ಸ್ಥಿತಿಗತಿ ವಿವರಿಸಿದ್ದಾರೆ.

ಜೈಪುರಕ್ಕೆ ಬಂದು ಅರ್ಪಿಸಿದ ಕೇಂದ್ರ ಸಚಿವ ಕಿರಣ್ ರಿಜಿಜು

ಅಜ್ಮೀರ್ ದರ್ಗಾಕ್ಕೆ ಮೋದಿ ಪರ ಚಾದರ

ಜೈಪುರ: ಸೂಫಿ ಸಂತ ಖಾಜಾ ಮೊಹಿನುದ್ದೀನ್ ಚಿಶ್ತಿ ಅವರ ಉರುಸ್ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಕಳುಹಿಸಿದ 'ಚಾದರ' ಅನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಶನಿವಾರ ಅಜ್ಮೀರ್ ದರ್ಗಾಕ್ಕೆ ಸಮರ್ಪಿಸಿದರು. ದೆಹಲಿಯಿಂದ ಜೈಪುರಕ್ಕೆ ಬಂದ ರಿಜಿಜು, ಬಳಿಕ ರಸ್ತೆ ಮಾರ್ಗ ಅಜ್ಮೀರ್ ತಲುಪಿದರು.

ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ರಿಜಿಜು, ಪ್ರಧಾನಿ ಮೋದಿ ಅವರ ಸಹೋದರತ್ವ ಹಾಗೂ ದೇಶ ಒಟ್ಟಾಗಿರಬೇಕು ಎನ್ನುವ ಸಂದೇಶದೊಂದಿಗೆ ಅಜ್ಮೀರ್‌ಗೆ ತೆರಳುತ್ತಿದ್ದೇನೆ ಎಂದು ಹೇಳಿದರು. ಬಿಜೆಪಿ ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಮುಖಂಡರು ವಿಮಾನ ನಿಲ್ದಾಣದಲ್ಲಿ ಸಚಿವರನ್ನು ಬರಮಾಡಿಕೊಂಡರು. ಉರುಸ್ ಶುಭ ಸಂದರ್ಭ ದೇಶದಲ್ಲಿ ಉತ್ತಮ ವಾತಾವರಣ ಸೃಷ್ಟಿಸಲು ಬಯಸುತ್ತೇವೆ. ದೇಶದ ಸಾಮರಸ್ಯಕ್ಕೆ ಧಕ್ಕೆಯಾಗುವ ಕೆಲಸ ಯಾರೂ ಮಾಡಬಾರದು ಎಂದು ರಿಜಿಜು ಹೇಳಿದರು.

ದಾವೆ ಬಗ್ಗೆ ಪ್ರತಿಕ್ರಿಯಿಸದ ರಿಜಿಜು

ಶಿವ ದೇಗುಲದ ಮೇಲೆ ದರ್ಗಾ ನಿರ್ಮಿಸಲಾಗಿದೆ ಎಂದು ಸ್ಥಳೀಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಕೆಯಾಗಿರುವ ಕುರಿತ ಪ್ರಶ್ನೆಗೆ, ಚಾದರ ಅರ್ಪಿಸಲಷ್ಟೇ ಬಂದಿದ್ದೇನೆ. ಏನಾದರೂ ಹೇಳಲು ಬಂದಿಲ್ಲ. ದೇಶದ ಜನರೆಲ್ಲರೂ ನೆಮ್ಮದಿಯಿಂದ ಇರಬೇಕು ಎನ್ನುವ ಪ್ರಧಾನಿ ಮೋದಿ ಅವರ ಸಂದೇಶದೊಂದಿಗೆ ತೆರಳುತ್ತಿದ್ದೇನೆ ಎಂದಷ್ಟೇ ಸಚಿವ ರಿಜಿಜು ಉತ್ತರಿಸಿದರು.

ಪಾನೀಪುರಿ ವ್ಯಾಪಾರಿಗೆ ಐಟಿ ನೋಟಿಸ್ ಜಾರಿ!

ಚೆನ್ನೈ: ತಮಿಳುನಾಡಿನ ಒಬ್ಬ ಪಾನೀಪುರಿ ಮಾರಾಟಗಾರನ ವಾರ್ಷಿಕ ವಹಿವಾಟು 40 ಲಕ್ಷ ರು. ದಾಟಿದ ಹಿನ್ನೆಲೆ ಕೇಂದ್ರ ಆದಾಯ ತೆರಿಗೆ ಇಲಾಖೆ ತೆರಿಗೆ ನೋಟಿಸ್ ಜಾರಿ ಮಾಡಿದೆ. ಅಚ್ಚರಿಯಾದರೂ ಇದು ಸತ್ಯ...! ಪಾನಿಪುರಿ ಮಾರಾಟಗಾರನ ವಾರ್ಷಿಕ ಆದಾಯ 40 ಲಕ್ಷ ರು.ಗೂ ಮೀರಿದೆ ಎಂದು ಕೇಂದ್ರ ಆದಾಯ ತೆರಿಗೆ ಇಲಾಖೆಗೆ ನಿಖರವಾಗಿ ತಿಳಿಯಲು ಕಾರಣವಾಗಿದ್ದು ಡಿಜಿಟಲ್ ಪಾವತಿ ವ್ಯವಸ್ಥೆ. ಪಾನೀಪುರಿ ತಿಂದ ಗ್ರಾಹಕರು ಆನ್‌ಲೈನ್ ಮೂಲಕ ಹಣ ಪಾವತಿ ಮಾಡುತ್ತಿದ್ದು, ಪಾನೀಪುರಿ ಮಾರಾಟಗಾರನ ವಾರ್ಷಿಕ ಆದಾಯ ಎಷ್ಟು ಎಂಬುದು ತಿಳಿದು ಬಂದಿದೆ. ನೋಟಿಸ್‌ನಲ್ಲಿ ಪಾನೀಪುರಿ ಮಾರಾಟಗಾರನ ವಾರ್ಷಿಕ ಆದಾಯ ಜಿಎಸ್‌ಟಿ ಕಾಯ್ದೆಯಲ್ಲಿ ನಮೂದಿಸಿದ ಮಿತಿಯನ್ನು ಮೀರಿದೆ. ಸರಕು ಮತ್ತು ಸೇವೆಗಳ ಹೊರಗಿನ ಪೂರೈಕೆಗಾಗಿ ಹಣ ಸ್ವೀಕರಿಸಿದ್ದಾನೆ ಎನ್ನುವ ಕಾರಣಕ್ಕೆ ಆತನ ಆದಾಯದ ಮೇಲೆ ಜಿಎಸ್‌ಟಿ ಹಾಕಲಾಗಿದೆ ಎಂದು ಇಲಾಖೆ ತಿಳಿಸಿದೆ. ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 22(1)ರಡಿ ಸರಕು ಅಥವಾ ಸೇವೆಗಳ ಪೂರೈಕೆಯಲ್ಲಿರುವ ಯಾವುದೇ ವ್ಯಾಪಾರಿ, ತಮ್ಮ ಒಟ್ಟು ವಹಿವಾಟು ನಿಗದಿತ ಮೊತ್ತಕ್ಕಿಂತ ಹೆಚ್ಚಿದ್ದರೆ ಜಿಎಸ್‌ಟಿ ನೋಂದಣಿ ಮಾಡಿಸಬೇಕಾಗುತ್ತದೆ. ಹಣಕಾಸು ವರ್ಷದಲ್ಲಿ 20 ಲಕ್ಷ ರು. ತೆರಿಗೆ ಮೂಲ ವಿಸ್ತರಿಸಲು ಮತ್ತು ಆದಾಯ ಸೋರಿಕೆ ನಿಯಂತ್ರಿಸಲು ಕೇಂದ್ರ ಸರಕಾರ ಕೆಲಸ ಮಾಡುತ್ತಿದೆ. ಡಿಜಿಟಲ್ ಪಾವತಿ ಡೇಟಾವನ್ನು ನಿಯಂತ್ರಿಸುವುದು ಹೆಚ್ಚಿನ ವ್ಯವಹಾರಗಳನ್ನು ತೆರಿಗೆ ವ್ಯಾಪ್ತಿಗೆ ತರುವ ಕ್ರಮವಾಗಿದೆ. ಜಿಎಸ್ಟಿ ನೋಟಿಸ್ ಕೇವಲ ಸಮನ್ಸ್ ಆಗಿದೆಯೇ ಹೊರತು ಬೇಡಿಕೆಯ ಆದೇಶವಲ್ಲ. ಈ ಬಗ್ಗೆ ಮಾರಾಟಗಾರನ ಅಹವಾಲು ಆಲಿಸಲಾಗುವುದು ಎಂದು ಇಲಾಖೆಯ ಮೂಲಗಳು ಹೇಳಿವೆ.

ನೋಟಿಸ್ ವೈರಲ್

ಪಾನಿಪುರಿ ಮಾರಾಟಗಾರನಿಗೆ ನೋಟಿಸ್ ನೀಡಿರುವುದು ಜಾಲತಾಣದಲ್ಲಿ ವೈರಲ್ ಆಗಿದೆ. ನೋಟಿಸ್‌ನಲ್ಲಿ ಪಾನಿಪುರಿ ಅಂಗಡಿ ಯವನ 2023-2024ನೇ ಸಾಲಿನ ವಹಿವಾಟು ಬರೋಬ್ಬರಿ 40,11,019 ರು. ಎಂದು ಉಲ್ಲೇಖಿಸಲಾಗಿದೆ.

ದೆಹಲಿ: ಬಿಜೆಪಿ ಅಭ್ಯರ್ಥಿ ಮೊದಲ ಪಟ್ಟಿ ಪ್ರಕಟ

ದೆಹಲಿ: 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಮುಂದಿನ ತಿಂಗಳು ಚುನಾವಣೆ ನಡೆಯಲಿದೆ. ಅದಾಗಲೇ ಎಎಪಿ ಮತ್ತು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿವೆ. ಬಿಜೆಪಿ ತುಸು ತಡವಾಗಿ ಮೊದಲ ಪಟ್ಟಿ ಬಿಡುಗಡೆ ಮಾಡಿದೆ. ಮೊದಲ ಪಟ್ಟಿಯಲ್ಲಿ ಬಿಜೆಪಿ ಇಬ್ಬರು ಮಹಿಳೆಯರಿಗಷ್ಟೇ ಅವಕಾಶ ಮಾಡಿ ಕೊಟ್ಟಿದೆ ಎಂಬುದು ಚರ್ಚೆಗೆ ಕಾರಣವಾಗಿದೆ.

ಪರ್ವೇಶ್ ವರ್ಮಾ, ರಮೇಶ್ ಬಿಧುರಿ, ಮತ್ತು ಮಂಜಿಂದರ್ ಸಿಂಗ್ ಸಿರ್ಸಾ ಸೇರಿದಂತೆ 29 ಅಭ್ಯರ್ಥಿಗಳ ಬಿಜೆಪಿ ಪ್ರಥಮ ಪಟ್ಟಿ ಶನಿವಾರ ಬಿಡುಗಡೆಯಾಗಿದೆ. ಮಾಜಿ ಸಂಸದ ಪರ್ವೇಶ್ ಅವರನ್ನು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ವಿರುದ್ಧ ನವದೆಹಲಿ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಎದುರಿಸಲಿರುವ ಬಿಜೆಪಿ ಅಭ್ಯರ್ಥಿ ಯಾರೆಂಬ ಕುತೂಹಲಕ್ಕೆ ತೆರೆ ಬಿದ್ದಿದೆ. ದೆಹಲಿಯ ಹಾಲಿ ಮುಖ್ಯಮಂತ್ರಿ ಮತ್ತು ಎಎಪಿ ಅಭ್ಯರ್ಥಿ ಅತಿಶಿ ಸ್ಪರ್ಧಿಸಲಿರುವ ಕಲ್ಕಾಜಿ ಕ್ಷೇತ್ರದಿಂದ ಬಿಜೆಪಿ ಮಾಜಿ ಸಂಸದ ರಮೇಶ್ ಬಿಧುರಿ ಅವರನ್ನು ಕಣಕ್ಕಿಳಿಸಿದೆ. ಇದೇ ಕ್ಷೇತ್ರದಿಂದ ಕಾಂಗ್ರೆಸ್ ಅಲ್ಕಾ ಲಂಬಾ ಅಭ್ಯರ್ಥಿಯಾರಗಿದ್ದಾರೆ. ಈ ಕ್ಷೇತ್ರದಲ್ಲಿ ತ್ರಿಕೋನ ಹೋರಾಟ ನಿರೀಕ್ಷೆ ಮಾಡಬಹುದಾಗಿದೆ.

ಇತ್ತೀಚೆಗೆ ಎಎಪಿ ತೊರೆದು ಬಿಜೆಪಿ ಸೇರಿದ ಕೈಲಾಶ್ ಗೆಹ್ಲೋಟ್ ಅವರಿಗೆ ಬ್ರಿಜ್ವಾಸನ್ ಕ್ಷೇತ್ರದ ಟಿಕೆಟ್ ನೀಡಲಾಗಿದೆ.

2024ರ ಲೋಕಸಭೆ ಚುನಾವಣೆಗೂ ಮುನ್ನ ಕಾಂಗ್ರೆಸ್ನಿಂದ ವಾಪಸಾದ ಅರವಿಂದರ್ ಸಿಂಗ್, ಲವ್ಲಿ ಗಾಂಧಿ ನಗರದಿಂದ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ದುಶ್ಯಂತ್ ಕುಮಾರ್ ಗೌತಮ್ ಮತ್ತು ಆಶಿಶ್ ಸೂದ್ ಅವರನ್ನು ಕ್ರಮವಾಗಿ ಕರೋಲ್ ಬಾಗ್ ಮತ್ತು ಜನಕಪುರಿಯಿಂದ ಬಿಜೆಪಿ ಕಣಕ್ಕಿಳಿಸಿದೆ. ದೆಹಲಿ ಬಿಜೆಪಿಯ ಮಾಜಿ ಅಧ್ಯಕ್ಷ ಸತೀಶ್ ಉಪಾಧ್ಯಾಯ ಮಾಳವೀಯ ನಗರದಿಂದ ಸ್ಪರ್ಧಿಸಲಿದ್ದಾರೆ.

ಎಎಪಿ ಪೂರ್ಣ ಸಜ್ಜು

ಎಎಪಿ ಎಲ್ಲಾ 70 ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಕಾಂಗ್ರೆಸ್ ಸಹ ಅನೇಕ ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರು ಪ್ರಕಟಿಸಿದೆ. ರಾಷ್ಟ್ರ ರಾಜಧಾನಿಯಲ್ಲಿ ಫೆಬ್ರವರಿಯಲ್ಲಿ ಚುನಾವಣೆ ನಡೆಯಲಿದೆ. ರಾಜಕೀಯ ತಜ್ಞರು ಶೀಘ್ರದಲ್ಲೇ ಚುನಾವಣಾ ದಿನಾಂಕ ಘೋಷಣೆಯ ನಿರೀಕ್ಷೆಯಲ್ಲಿದ್ದಾರೆ.

ರಹಸ್ಯ ಹಣ ಪ್ರಕರಣದಲ್ಲಿ ಟ್ರಂಪ್‌ಗೆ ಶಿಕ್ಷೆ 10ಕ್ಕೆ ಪ್ರಕಟ

ನ್ಯೂಯಾರ್ಕ್: ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜನವರಿ 20 ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಆದರೆ ಅದಕ್ಕೂ ಮುನ್ನವೇ ಸಂಕಷ್ಟ ಎದುರಾಗಿದೆ.

ಮೇ ತಿಂಗಳಲ್ಲಿ ನೀಲಿ ಚಿತ್ರತಾರೆ ಸ್ಟಾರ್ಮಿ ಡೇನಿಯಲ್ಸ್‌ಗೆ 1.30 ಲಕ್ಷ ಡಾಲರ್ ಹಣ ಪಾವತಿಸಿದ ದಾಖಲೆಗಳಲ್ಲಿ ಫೌಲ್ ಪ್ಲೇ 34 ಗಂಭೀರ ಅಪರಾಧಗಳಲ್ಲಿ ಟ್ರಂಪ್ ಅವರನ್ನು ದೋಷಿ ಎಂದು ಘೋಷಿಸಲಾಗಿದೆ. ನ್ಯಾಯಾಧೀಶರು ಜ.10 ರಂದು ಶಿಕ್ಷೆ ಪ್ರಮಾಣ ಪ್ರಕಟಿಸಲಿದ್ದಾರೆ. ಟ್ರಂಪ್ ಅವರಿಗೆ ದೊಡ್ಡ ಬಿಕ್ಕಟ್ಟು ಎದುರಾಗಿದ್ದು ರಿಪಬ್ಲಿಕನ್ ಪಕ್ಷ ಆಘಾತಕ್ಕೊಳಗಾಗಿದೆ.

ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸುವ ಎರಡು ವಾರಕ್ಕೂ ಮುನ್ನ ಈ ಆದೇಶ ಹೊರಬಿದ್ದಿದೆ. ಮ್ಯಾನ್ಹಟನ್ ನ್ಯಾಯಾಧೀಶ ಜುವಾನ್ ಎಂ. ಮರ್ಚನ್ ಅವರು ತೀರ್ಪು ಪ್ರಕಟಿಸಲಿದ್ದಾರೆ. ಟ್ರಂಪ್ ಜ.10ರಂದು ವರ್ಚುವಲ್ ಮಾರ್ಗದಲ್ಲಿ ಕೋರ್ಟ್ ವಿಚಾರಣೆಗೆ ಹಾಜರಾಗಲಿದ್ದಾರೆ. ಟ್ರಂಪ್ ಕಮ್ಯುನಿಕೇಷನ್ಸ್ ಡೈರೆಕ್ಟರ್ ಸ್ಟೀವನ್ ಚೆಯುಂಗ್ ಅವರು ದೀರ್ಘಕಾಲದಿಂದ ಕಾನೂನು ಬಾಹಿರ ಎಂದು ವಿವರಿಸಿರುವ ಪ್ರಕರಣವನ್ನು ಸಂಪೂರ್ಣವಾಗಿ ವಜಾಗೊಳಿಸಬೇಕು ಎಂದು ಪುನರುಚ್ಚರಿಸಿದರು. ಯಾವುದೇ ಶಿಕ್ಷೆ ವಿಧಿಸಬಾರದು, ನಿಯೋಜಿತ ಅಧ್ಯಕ್ಷ ಟ್ರಂಪ್ ಅವರು ಈ ವಂಚನೆಗಳ ವಿರುದ್ಧ ಹೋರಾಟ ಮುಂದುವರಿಸುತ್ತಾರೆ ಎಂದು ಚೆಯುಂಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಟ್ರಂಪ್ ಅವರ ಮುಂದಿನ ಕಾನೂನು ಕ್ರಮಗಳ ಬಗ್ಗೆ ವಿವರಿಸಲಿಲ್ಲ. ಆದರೆ ಟ್ರಂಪ್ ಮೇಲ್ಮನವಿ ಸಲ್ಲಿಸಲು ಪ್ರಯತ್ನಿಸಬಹುದು ಎನ್ನಲಾಗಿದೆ. 78 ವರ್ಷದ ಟ್ರಂಪ್‌ಗೆ ದಂಡ ಅಥವಾ 4 ವರ್ಷಗಳವರೆಗೆ ಜೈಲು ಶಿಕ್ಷೆಯ ಸಾಧ್ಯತೆ ಇದೆ.

ಪ್ರಕರಣದ ವಿವರ

ಮೇ ತಿಂಗಳಲ್ಲಿ ನೀಲಿ ಚಿತ್ರತಾರೆ ಸ್ಟಾರ್ಮಿ ಡೇನಿಯಲ್ಸ್‌ಗೆ 1.30 ಲಕ್ಷ ಡಾಲರ್ ಪಾವತಿಸಿದ ವ್ಯವಹಾರಿಕ ದಾಖಲೆಗಳಲ್ಲಿ ಫೌಲ್ ಪ್ಲೇ 34 ಗಂಭೀರ ಅಪರಾಧಗಳಲ್ಲಿ ಟ್ರಂಪ್ ಅವರನ್ನು ದೋಷಿ ಎಂದು ಘೋಷಿಸಲಾಗಿತ್ತು. ಈ ಆರೋಪವನ್ನು ಅವರ ಮಾಜಿ ವಕೀಲ ಮೈಕೆಲ್ ಕೋಹೆನ್‌ಗೆ ಮರುಪಾವತಿಯನ್ನು ಮರೆಮಾಡುವ ಪ್ರಯತ್ನಗಳಿಗೆ ಸಂಬಂಧಿಸಿದ್ದಾಗಿತ್ತು. 2016 ರ ಚುನಾವಣಾ ಪ್ರಚಾರದ ಅಂತಿಮ ದಿನಗಳಲ್ಲಿ ಟ್ರಂಪ್ ಸಂಬಂಧ ಬಗ್ಗೆ ಮೌನವಾಗಿರಲು ನೀಲಿ ಚಿತ್ರ ತಾರೆಗೆ ಹಣ ನೀಡಲಾಗಿತ್ತು.

ನೀರಿನ ಬಿಲ್ ಮನ್ನಾ ಎಎಪಿ ಮತ ಭರವಸೆ

ದೆಹಲಿ: ದೆಹಲಿ ವಿಧಾನಸಭೆಯಲ್ಲಿ ಮರಳಿ ಅಧಿಕಾರಕ್ಕೆ ಬಂದರೆ ಜನರ ಮನೆಗಳ ನೀರಿನ ಬಿಲ್ ಮನ್ನಾ ಮಾಡುವುದಾಗಿ ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಹೇಳಿದ್ದಾರೆ.



ದೆಹಲಿ ಜಲ ಮಂಡಳಿ ನೀಡಿರುವ ನೀರಿನ ಬಿಲ್ ಕನಿಷ್ಠ ಸಾವಿರ ರು. ಗಳಿಂದ ಗರಿಷ್ಠ ಲಕ್ಷ ರು.ವರೆಗೂ ಇದ್ದು, ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ಕೇಜ್ರಿವಾಲ್ ಹೇಳಿದರು. ನಾನು ಜೈಲಿಗೆ ಹೋದ ನಂತರ ಹೆಚ್ಚಿನ ಮೊತ್ತದ ನೀರಿನ ಬಿಲ್ಲಗಳು ಜನರ ಮನೆಗಳಿಗೆ ಬರಲು ಆರಂಭಿಸಿದವು ಎಂದ ಕೇಜ್ರಿವಾಲ್, ಆ ಬಿಲ್‌ಗಳನ್ನು ಪಾವತಿಸದಂತೆ ದೆಹಲಿ ಜನರನ್ನು ಒತ್ತಾಯಿಸಿದ್ದಾರೆ.

ನಾನು ಇಂದು ಔಪಚಾರಿಕ ಘೋಷಣೆ ಮಾಡುತ್ತಿದ್ದೇನೆ. ವಿಧಾನಸಭೆ ಚುನಾವಣೆ ನಂತರ ಎಎಪಿ ಮತ್ತೆ ಅಧಿಕಾರಕ್ಕೆ ಬಂದ ಬಳಿಕ ಈ ಬಾಕಿ ಬಿಲ್ಲಗಳನ್ನು ಮನ್ನಾ ಮಾಡಲಾಗುತ್ತದೆ. ತಮ್ಮ ಮನೆಯ ನೀರಿನ ಬಿಲ್ ತಪ್ಪಾಗಿದೆ ಎಂದು ಭಾವಿಸುವವರು ಅದನ್ನು ಪಾವತಿಸಬೇಕಾಗಿಲ್ಲ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಎಎಪಿ ಸರಕಾರ ತಿಂಗಳಿಗೆ 20 ಸಾವಿರ ಲೀಟರ್ ನೀರನ್ನು ಉಚಿತವಾಗಿ ನೀಡುತ್ತದೆ ಮತ್ತು ನಗರದ 12 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಈ ಯೋಜನೆಯ ಲಾಭ ಪಡೆದಿವೆ ಎಂದರು. 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಫೆಬ್ರವರಿಗೆ ಚುನಾವಣೆ ನಡೆಯಲಿದ್ದು, ಎಎಪಿ ಸತತ ನಾಲ್ಕನೇ ಅವಧಿಗೆ ಅಧಿಕಾರಕ್ಕೆ ಮರಳಲು ಪ್ರಯತ್ನಿಸುತ್ತಿದೆ.

ಕೇಂದ್ರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ಸಿಬಿಐಗೆ ರಾಜ್ಯಗಳ ಅನುಮತಿ ಬೇಕಿಲ್ಲ: ಸುಪ್ರೀಂ

ದೆಹಲಿ: ವಿವಿಧ ರಾಜ್ಯಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಸರಕಾರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಸಿಬಿಐಗೆ ರಾಜ್ಯ ಸರಕಾರಗಳ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಭ್ರಷ್ಟಾಚಾರದ ಆರೋಪ ಸಂಬಂಧ ಆಂಧ್ರಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಕೇಂದ್ರ ಸರಕಾರದ ಅಧಿಕಾರಿಗಳ ವಿರುದ್ಧ ಸಿಬಿಐ ತನಿಖೆಯನ್ನು ಆಂಧ್ರಪ್ರದೇಶ ಹೈಕೋರ್ಟ್ ರದ್ದುಗೊಳಿಸಿತ್ತು. ಆದರೆ ಹೈಕೋರ್ಟ್ ಆದೇಶವನ್ನೇ ಈಗ ಸುಪ್ರೀಂಕೋರ್ಟ್ ರದ್ದುಪಡಿಸಿದೆ. ಕೇಂದ್ರ ಸರಕಾರಿ ನೌಕರರು ಮತ್ತು ಅಧಿಕಾರಿಗಳು ಗಂಭೀರ ಆರೋಪವನ್ನು ಎದುರಿಸುತ್ತಿರುವಾಗ ಅವರು ಯಾವ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಮುಖ್ಯವಾಗುವುದಿಲ್ಲ ಎಂದು ನ್ಯಾಯಮೂರ್ತಿ ಸಿಟಿ ರವಿಕುಮಾರ್ ಮತ್ತು ರಾಜೇಶ್ ಬಿಂದಲ್ ಅವರಿದ್ದ ನ್ಯಾಯಪೀಠ ಹೇಳಿದೆ.

ಏನಿದು ಪ್ರಕರಣ: ಆಂಧ್ರಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೇಂದ್ರ ಸರಕಾರಿ ನೌಕರರ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿದ್ದರಿಂದ ಚರ್ಚೆ ಮುನ್ನೆಲೆಗೆ ಬಂದಿತ್ತು. ಆಂಧ್ರಪ್ರದೇಶ ವ್ಯಾಪ್ತಿಯಲ್ಲಿ ರಾಜ್ಯ ಸರಕಾರದ ಅನುಮತಿ ಪಡೆಯದೆ ಸಿಬಿಐ ಎಫ್‌ಐಆರ್ ದಾಖಲಿಸುವ ಅಧಿಕಾರ ಪ್ರಶ್ನಿಸಿ ನೌಕರರು ಆಂಧ್ರಪ್ರದೇಶ ಹೈಕೋರ್ಟ್ ಮೆಟ್ಟಿಲೇರಿದ್ದರು. 1946ರ ಡೆಲ್ಲಿ ಸ್ಪೆಷಲ್ ಪೊಲೀಸ್ ಎಸ್ಟಾಬ್ಲಿಷ್ಮೆಂಟ್ ಆಕ್ಟ್ ಪ್ರಕಾರ, ಅವಿಭಜಿತ ಆಂಧ್ರಪ್ರದೇಶ ವ್ಯಾಪ್ತಿಯಲ್ಲಿದ್ದ ನೌಕರರ ಮೇಲೆ ಸಿಬಿಐ ರಾಜ್ಯದ ಅನುಮತಿ ಪಡೆಯದೇ ಪ್ರಕರಣ ದಾಖಲಿಸಿದ್ದು ಸರಿಯಲ್ಲ ಎಂದು ಹೈಕೋರ್ಟ್‌ನಲ್ಲಿ ಆರೋಪಿಗಳು ವಾದ ಮಂಡಿಸಿದ್ದರು.

ಆಂಧ್ರ ಪ್ರದೇಶ ಹೈಕೋರ್ಟ್ ನೀಡಿದ್ದ ತೀರ್ಪು ಏನು?

ಆಂಧ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೇಂದ್ರದ ನೌಕರರ ವಾದ ಪುರಸ್ಕರಿಸಿದ್ದ ಹೈಕೋರ್ಟ್ ಭ್ರಷ್ಟಾಚಾರ ತಡೆ ಕಾಯಿದೆಯಡಿ ದಾಖಲಿಸಿದ ಎಫ್‌ಐಆರ್ ಅನ್ನು ವಜಾಗೊಳಿಸಿತ್ತು. 32 ಪುಟಗಳ ತೀರ್ಪಿನಲ್ಲಿ, ಸಿಬಿಐ ಪ್ರಕರಣದ ಕಲಿಸುವುದಕ್ಕೆ ಮುನ್ನ ರಾಜ್ಯ ಸರಕಾರದ ಅನುಮತಿ ಪಡೆಯಬೇಕು ಎಂದು ಉಲ್ಲೇಖಿಸಲಾಗಿತ್ತು. ಆಂಧ್ರ ಪ್ರದೇಶ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಿಬಿಐ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು, ಇದೀಗ ಸುಪ್ರೀಂ ಕೋರ್ಟ್‌ನಲ್ಲಿ ಐತಿಹಾಸಿಕ ತೀರ್ಪು ಪ್ರಕಟವಾಗಿದೆ.

ಪಟಾಕಿ ತಯಾರಿಕಾ ಘಟಕದಲ್ಲಿ ಸ್ಫೋಟ; 6 ಸಾವು

ವಿರುದುನಗರ: ತಮಿಳುನಾಡಿನ ವಿರುದುನಗರ ಬಳಿಯ ಪಟಾಕಿ ತಯಾರಿಕಾ ಘಟಕದಲ್ಲಿ ಶನಿವಾರ ಸ್ಫೋಟ ಸಂಭವಿಸಿ 6 ಕಾರ್ಮಿಕರು ಸಾವನ್ನಪ್ಪಿದ್ದಾರೆ. ಪಟಾಕಿ ತಯಾರಿಕೆ ಪ್ರಕ್ರಿಯೆಯ ಭಾಗವಾಗಿ



ಕಾರ್ಮಿಕರು ಶನಿವಾರ ಬೆಳಗ್ಗೆ ರಾಸಾಯನಿಕ, ಕಚ್ಚಾ ಸಾಮಗ್ರಿಗಳನ್ನು ಮಿಶ್ರಣ ಮಾಡುತ್ತಿದ್ದಾಗ ಸ್ಫೋಟ ಸಂಭವಿಸಿದೆ. ಇದರಿಂದ 6 ಜನರು ಸಾವನ್ನಪ್ಪಿದ್ದು, ಮೊಹಮ್ಮದ್ ಸುದೀನ್ ಎಂಬ ಕಾರ್ಮಿಕ ಗಾಯಗೊಂಡಿದ್ದು, ಅವರನ್ನು ಸಮೀಪದ ಮಧುರೈನಲ್ಲಿರುವ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಫೋಟದ ರಭಸಕ್ಕೆ ಕಾರ್ಖಾನೆ ಆವರಣದ 4 ಕೊಠಡಿಗಳು ನೆಲಸಮವಾಗಿವೆ. ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ.

ಸಿಎಂ ಆಘಾತ: ದುರಂತದ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಗಾಯಾಳುಗಳಿಗೆ ಮಧುರೈ ಸರಕಾರಿ ಆಸ್ಪತ್ರೆಯಲ್ಲಿ ವಿಶೇಷ ಚಿಕಿತ್ಸೆ ಒದಗಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ. ಮೃತರ ಕುಟುಂಬಗಳಿಗೆ ತಲಾ 4 ಲಕ್ಷ ರು. ಹಾಗೂ ಗಾಯಾಳುಗಳಿಗೆ 1 ಲಕ್ಷ ರು. ಪರಿಹಾರ ಬಿಡುಗಡೆಗೆ ಆದೇಶಿಸಿದ್ದಾರೆ.

ಸೆ.17ರ ಸ್ಫೋಟದಲ್ಲಿ 9 ಸಾವು : ವಿರುದುನಗರ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಸೆಪ್ಟೆಂಬರ್ 17 ರಂದು ಕೂಡ ಸ್ಫೋಟವಾಗಿ 9 ಜನರು ಸಾವನ್ನಪ್ಪಿದ್ದರು. ಹಲವರು ಗಾಯಗೊಂಡಿದ್ದರು. ಸ್ಫೋಟದ ತೀವ್ರತೆಗೆ ಕಾರ್ಖಾನೆ ಬಳಿಯ 4 ಕಟ್ಟಡಗಳು ಹಾನಿಗೊಳಗಾಗಿದ್ದವು.

ಸಮಾಚಾರ ಸಣ್ಣದಲ್ಲ

ನಾಮನಿರ್ದೇಶಿತ ಸದಸ್ಯತ್ವಕ್ಕೆ ಅರ್ಜಿ

ಹೊಸಪೇಟೆ: ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಸೌಲಭ್ಯ ಹಾಗೂ ಮೀಸಲಾತಿ ಕಲ್ಪಿಸುವಲ್ಲಿ ಜಿಲ್ಲಾ ಮಟ್ಟದ ಸಲಹಾ ಸಮಿತಿ ನಾಮನಿರ್ದೇಶಿತ ಸದಸ್ಯತ್ವಕ್ಕೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಕೆ.ಬಿ.ರಾಮಚಂದ್ರಪ್ಪ ತಿಳಿಸಿದ್ದಾರೆ. ಕೇಂದ್ರ ಸರಕಾರದ ಆರ್ಥಿಕ ನೆರವಿನೊಂದಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅಲೆಮಾರಿ ಜನಾಂಗದ ರಾಜ್ಯ ಹಾಗೂ ತಾಲೂಕು ಮಟ್ಟದ ಸಲಹಾ ಸಮಿತಿ, ಪ್ರಗತಿ ಪರಿಶೀಲನಾ ಸಮಿತಿ ರಚಿಸಲಾಗಿರುತ್ತದೆ. ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ನಿಗದಿತ ಸಮುದಾಯದ ವಿಜಯನಗರ ಜಿಲ್ಲೆಯ ನಿವಾಸಿಯಾಗಿರಬೇಕು. ಎಸ್ಸೆಸ್ಸೆಲ್ಸಿ ವಿದ್ಯಾಭ್ಯಾಸ ಹೊಂದಿರಬೇಕು. ಕನಿಷ್ಠ 35 ವರ್ಷದಿಂದ ಗರಿಷ್ಠ 65 ವರ್ಷ ವಯೋಮಿತಿಯೊಳಗಿರಬೇಕು. ಲಿಖಿತ ಅರ್ಜಿ ಹಾಗೂ ಅಗತ್ಯ ಪೂರಕ ದಾಖಲೆ ಲಗತ್ತಿಸಿ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹೊಸಪೇಟೆ ಇವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 9141827465 ಸಂಖ್ಯೆಗೆ ಸಂಪರ್ಕಿಸಬೇಕೆಂದು ತಿಳಿಸಿದ್ದಾರೆ.

ಶಾಲಾ ಮಕ್ಕಳಿಗೆ ಉಪಹಾರ ವಿತರಣೆ

ಮುದಗಲ್: ಪಟ್ಟಣ ಸಮೀಪದ ಜನತಾಪೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಪಿ.ಎಂ.ಪೋಷಣ್ ಕಾರ್ಯಕ್ರಮದ ಜತೆಗೆ ಒಂದರಿಂದ ಏಳನೇಯ ತರಗತಿಯವರೆಗೆ ಅಭ್ಯಾಸ ಮಾಡುತ್ತಿರುವ 150 ಮಕ್ಕಳಿಗೆ ಸಮಯದಲ್ಲಿ ಬೆಳಗಿನ ಉಪಹಾರಕ್ಕೆ ಇಡ್ಲಿ ಚಟ್ನಿ ಸಾಂಬಾರ ವಿತರಿಸಲಾಯಿತು. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿರುವ ಸರಕಾರಿ ಶಾಲೆಯ ಲ್ಲಿಯೂ, ಉಪಹಾರಕ್ಕೆ ಇಡ್ಲಿ ಚಟ್ನಿ ಸಾಂಬಾರ್ ನೀಡಿದಕ್ಕೆ ವಿದ್ಯಾರ್ಥಿಗಳು ಸಂತಸಗೊಂಡಿದ್ದು, ಮಕ್ಕಳ ಹಾಜರಾತಿಯೂ ಹೆಚ್ಚಾಗಿದೆ ಎಂದು ಮುಖ್ಯ ಶಿಕ್ಷಕ ಗುರುಬಸಪ್ಪ ತಿಳಿಸಿದರು. ಈ ಸಂದ ರ್ಭದಲ್ಲಿ ಶಾಲಾ ಶಿಕ್ಷಕ ರವಿಕುಮಾರ್, ಅತಿಥಿ ಶಿಕ್ಷಕಿ ಯರಾದ ಜ್ಯೋತಿ ಹುಡೇದ್, ಜ್ಯೋತಿ ಯರದಿ ಹಾಳ, ಗೀತಾ ಸೇರಿದಂತೆ ಅಡುಗೆ ಸಿಬ್ಬಂದಿ ಲಕ್ಷ್ಮಮ್ಮ ಇದ್ದರು.

ದೌರ್ಜನ್ಯ ತಡೆ ಕಾಯಿದೆ ಕಿರುನಾಟಕಕ್ಕೆ ಚಾಲನೆ

ಹೊಸಪೇಟೆ: 2024-25ನೇ ಸಾಲಿನಲ್ಲಿ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮದ ನಿಮಿತ್ತ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಜನಜಾಗೃತಿ ಬೀದಿ ನಾಟಕಗಳನ್ನು ಪೊಲೀಸ್ ಇಲಾಖೆಯ ಯು. ದೇವೆಂದ್ರಪ್ಪ ಚಾಲನೆ ನೀಡಿದರು. ಹೊಸಪೇಟೆ ತಾಲೂಕಿನ ಚಿಲಕನಹಟ್ಟಿ ಗ್ರಾಪಂ ವ್ಯಾಪ್ತಿಯ ತಿಮ್ಮಲಾಪುರ ಗ್ರಾಮದ ಶ್ರೀ ಆಂಜನೇಯ ದೇಗುಲದ ಬಳಿ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಲಾತಂಡದ ಕಲಾವಿದರು ಕಿರುನಾಟಕ ಮತ್ತು ಜಾಗೃತಿಗೀತೆಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು. ಈ ವೇಳೆ ಕಲಾವಿದರಾದ ಮಹಾಂತೇಶ್, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ಎಂ.ಮಲ್ಲಿಕಾರ್ಜುನ, ಸಂಗಮೇಶ್, ಸಿ.ಮಲ್ಲಿಕಾರ್ಜುನ, ಕೊಟ್ರೇಶ್ ಹಕ್ಕಂಡಿ, ಹನುಮಂತಪ್ಪ ಸಂಕನೂರು ಇತರರಿದ್ದರು.

ಸಂತ್ರಸ್ತರಿಗೆ ನಿವೇಶನ ನೀಡಲು ಆಗ್ರಹ

ರಾಯಚೂರು: ನಗರದ ಗದ್ವಾಲ್ ಸರ್ತಿಗೇರಿ, ಮಡ್ಡಿಪೇಟೆಯಲ್ಲಿನ ರಸ್ತೆ ಅಗಲೀಕರಣದಲ್ಲಿ ಮನೆಗಳು ಕಳೆದುಕೊಂಡ ಸಂತ್ರಸ್ತರಿಗೆ ಸರಕಾರಿ ಜಾಗದಲ್ಲಿ ನಿವೇಶನ ಹಂಚಿಕೆ ಮಾಡಲು ಒತ್ತಾಯಿಸಿ ನಮ್ಮ ಕರ್ನಾಟಕ ಸೇನೆ ನೇತೃತ್ವದಲ್ಲಿ ಸಂತ್ರಸ್ತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದರು. 2011 ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಅನುಬ್ ಕುಮಾರ್ ಅವರ ಅವಧಿಯಲ್ಲಿ ನಗರದ ಗದ್ವಾಲ್ ರಸ್ತೆಯ ಸರ್ತಿಗೇರಿ, ಮಡ್ಡಿಪೇಟೆ ಬಡಾವಣೆ ರಸ್ತೆ ಅಗಲೀಕರಣ ಮಾಡಲಾಯಿತು. ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿಯ 36 ಕುಟುಂಬಸ್ಥರು ಮನೆಗಳನ್ನ ಕಳೆದುಕೊಂಡಿದ್ದರು. ಅಂದಿನ ಜಿಲ್ಲಾಧಿಕಾರಿ ಸರಕಾರಿ ಜಮೀನಿನಲ್ಲಿ ಸಂತ್ರಸ್ತರಿಗೆ ಉಚಿತ ನಿವೇಶನ ಕಲ್ಪಿಸಿಕೊಡಲಾಗುತ್ತದೆ ಎಂದು ಆಶ್ವಾಸನೆ ನೀಡಿ ಮನೆಗಳನ್ನು ಖಾಲಿ ಮಾಡಿಸಿ ರಸ್ತೆ ಅಗಲೀಕರಣ ಮಾಡಿದ್ದರು. ನಗರದ 2 ಎಕರೆಯಷ್ಟು ಸರಕಾರಿ ಜಮೀನಿದ್ದು, ಈ ಜಮೀನಿನಲ್ಲಿ 36 ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಿಕೊಡ ಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಂತ್ರಸ್ಥ ಕುಟುಂಬದವರಿಂದ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಅಧ್ಯಕ್ಷ ಕೊಂಡಪ್ಪ, ನಾಗರಾಜ (ತಿಕ್ಕಣ್ಣ), ವೀರೇಶ ಜಲಗಾರ, ಮಹೇಶ, ರಘು ನಾಥ, ತಾಯರೆಡ್ಡಿ ಇದ್ದರು.

ಆನಂದದ ಆಲ್ಬಂ
ವಿವಾಹ್
ಪ್ರತಿ ಬುಧವಾರ

{ಬಿ.ವೈ ವಿಜಯೇಂದ್ರ} ಬಿಜೆಪಿ ರಾಜ್ಯಾಧ್ಯಕ್ಷ

ಕಾಂಗ್ರೆಸ್ ಸರಕಾರ ಎರಡು ವರ್ಷದಲ್ಲಿ ಏನು ಸಾಧನೆ ಆಗಿದೆ ಎಂದು ಸಿದ್ದರಾಮಯ್ಯ ಅವರ ಮಂತ್ರಿಗಳು ಹೇಳಬೇಕು. ಎರಡು ವರ್ಷದಲ್ಲಿ ಅವರ ಸಾಧನೆ ಶೂನ್ಯ. ಈ ಅವಧಿಯಲ್ಲಿ ಯಾವೊಬ್ಬ ಶಾಸಕ ಶಂಕುಸ್ಥಾಪನೆ ಗುದ್ದಲಿ ಪೂಜೆ ಮಾಡಿಲ್ಲ. ಕಾಂಗ್ರೆಸ್ ಶಾಸಕರು ಆಡಳಿತ ಪಕ್ಷದ ಶಾಸಕರು ಆರೋಪ ಮಾಡ್ತಿದ್ದಾರೆ.

ಫೆ. 28, ಮಾ.1,2 ರಂದು ಹಂಪಿಯಲ್ಲಿ ಅನಾವರಣಗೊಳ್ಳಲಿರುವ ಸಾಂಸ್ಕೃತಿಕ ಲೋಕ

ಹಂಪಿ ಉತ್ಸವ ಅದ್ದೂರಿ ಆಚರಣೆಗೆ ನಿರ್ಧಾರ

ಅನಂತ ಪದ್ಮನಾಭ ರಾವ್ ಹೊಸಪೇಟೆ

ವಿಶ್ವವಿಖ್ಯಾತ ಹಂಪಿ ಉತ್ಸವ ಆಚರಣೆಗೆ ದಿನಾಂಕ ನಿಗದಿಯಾಗಿದ್ದು, ಫೆ.28 ರಿಂದ ಮೂರು ದಿನಗಳ ಅದ್ದೂರಿಯಾಗಿ ಆಚರಿಸಲು ಸರಕಾರ ನಿರ್ಧರಿಸಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ.

ಹಂಪಿಯಲ್ಲಿ ಕಳೆದ ವರ್ಷ ಫೆ.2ರಿಂದ ಮೂರು ದಿನಗಳ ಕಾಲ ಉತ್ಸವ ಅದ್ದೂರಿಯಾಗಿ ಆಚರಿಸಲಾಗಿತ್ತು. ಈ ವರ್ಷ ಫೆ.28 ರಿಂದ ಮೂರು ದಿನಗಳ ಕಾಲ ಉತ್ಸವ ನಡೆಯಲಿದೆ. ಉತ್ಸವ ಆಚರಣೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸಮ್ಮತಿ ನೀಡಿದ್ದು, ಅದ್ದೂರಿ ಆಚರಣೆಗೆ ಸೂಚನೆ ನೀಡಿದ್ದಾರೆ. ಉತ್ಸವಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲು ಸಚಿವ ಜಮೀರ್ ಅಹಮ್ಮದ್ ಖಾನ್ ವಿಜಯನಗರ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದಾರೆ.

ಸಮಿತಿಗಳ ರಚನೆ: ಉತ್ಸವಕ್ಕೆ ದಿನಾಂಕ ನಿಗದಿಯಾಗುತ್ತಿದ್ದಂತೆ ವಿಜಯನಗರ ಜಿಲ್ಲಾಡಳಿತ ಕಾರ್ಯಪ್ರವೃತ್ತವಾಗಿದ್ದು, ಕಳೆದ ವರ್ಷದಂತೆ ಈ ವರ್ಷವೂ ಹಂಪಿ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದ್ದು ವಿವಿಧ ಇಲಾಖೆ ಅಧಿಕಾರಿಗಳ ಸಹಯೋಗದಲ್ಲಿ ಆಚರಣೆ ಸಮಿತಿ ರಚನೆ ಮಾಡಲು ಮುಂದಾಗಿದೆ. ಇದಕ್ಕಾಗಿ ಇನ್ನೆರಡು ದಿನಗಳಲ್ಲಿ ಅಧಿಕಾರಿಗಳ ಸಭೆ ನಡೆಸಲಿದೆ.

ಸ್ಥಳೀಯರಿಗೆ ಆದ್ಯತೆ: ಕಳೆದ ವರ್ಷದಂತೆ ಈ ಬಾರಿ ಉತ್ಸವದಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ದೊರೆಯಲಿದೆ. ಆದರೆ, ಕಳೆದ ಮೂರು ವರ್ಷ ಉತ್ಸವದಲ್ಲಿ ಪ್ರದರ್ಶನ ನೀಡಿದ ಕಲಾವಿದರು ಹೊರತುಪಡಿಸಿ, ಹೊಸಬರಿಗೆ ಆದ್ಯತೆ ನೀಡಲು ಜಿಲ್ಲಾಡಳಿತ ತೀರ್ಮಾನಿಸಿದೆ.

ಉತ್ಸವಕ್ಕೆ ನಾಲ್ಕು ವೇದಿಕೆ: ಹಂಪಿ ನೆಲದಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಗಾಯತ್ರಿ ಪೀಠ, ಎದುರು ಬಸವಣ್ಣ ಮಂಟಪ, ವಿರೂಪಾಕ್ಷೇಶ್ವರ ದೇವಾಲಯ, ಕಡಲೆಕಾಳು ಗಣಪತಿ ದೇವಾಲಯ ಬಳಿ ಸೇರಿದಂತೆ ನಾಲ್ಕು ವೇದಿಕೆ ನಿರ್ಮಿಸಲಾಗುವುದು.

ಈ ಎಲ್ಲಾ ವೇದಿಕೆಗಳಲ್ಲಿ ಸ್ಥಳೀಯ ಕಲಾವಿದರಿಗೆ ಅವಕಾಶ ಸಿಗಲಿದೆ. ಪ್ರತಿ ವರ್ಷದ ಉತ್ಸವದಲ್ಲಿ ಇರುವಂತೆ ಸಾಹಸ ಕ್ರೀಡೆ ಹಾಗೂ ಗ್ರಾಮೀಣ ಕ್ರೀಡೆಗಳು ನಡೆಯಲಿವೆ. ಕುಸ್ತಿ ಪಂದ್ಯಾವಳಿ, ಗುಂಡು ಎತ್ತುವುದು, ಬಂಡಿ ಗಾಲಿ ತೋಡಿಸುವುದು. ಕಮಲಾಪುರ ಕೆರೆಯಲ್ಲಿ ಬೋಟಿಂಗ್ ಸೇರಿದಂತೆ ಇತರೆ ಕ್ರೀಡೆಗಳು ನಡೆಯಲಿವೆ.

ಹಂಪಿ ಬೈಸ್ಕೈ: ಪ್ರವಾಸಿಗರು ಹಂಪಿಯನ್ನು ಅಗಾಸದಿಂದ ಕಣ್ತುಂಬಿಕೊಳ್ಳಲು ಈ ಬಾರಿಯೂ ಹಂಪಿ ಉತ್ಸವದಲ್ಲಿ ಹೆಲಿಕ್ಯಾಪ್ಟರ್ ಹಾರಾಟ ನಡೆಯಲಿದೆ. ಕಮಲಾಪುರ ಮಯೂರ ಭುವನೇಶ್ವರಿ ಹೋಟೆಲ್ ಆವರಣದಲ್ಲಿ ಹೆಲಿಪ್ಯಾಡ್ ನಿರ್ಮಾಣವಾಗಲಿದೆ.

ಧ್ವನಿ ಮತ್ತು ಬೆಳಕು: ಹಂಪಿ ಉತ್ಸವದ ಮುಖ್ಯ ಆಕರ್ಷಣೆ ಎಂದು ಕರೆಯಲಾಗುವ ಧ್ವನಿ ಮತ್ತು ಬೆಳಕು ವಿಜಯನಗರ ವೈಭವ ಕಾರ್ಯಕ್ರಮವೂ ಈ ಬಾರಿಯೂ ಗಜಶಾಲೆಯ ಆವರಣದಲ್ಲಿ ನಡೆಯಲಿದೆ. ಇದರಲ್ಲಿಯೂ ಸ್ಥಳೀಯ ಕಲಾವಿದರಿಗೆ ಅವಕಾಶ ಸಿಗಲಿದೆ. ಮುಖ್ಯವೇದಿಕೆಗಳಲ್ಲಿ ಹೆಸರಾಂತ ಕಲಾವಿದರು, ಚಿತ್ರನಟರು ಭಾಗವಹಿಸುವುದರಿಂದ ಉಳಿದ ವೇದಿಕೆಗಳ ಬಳಿ ಜನರೇ ಇರುವುದಿಲ್ಲ. ಹೀಗಾಗಿ ನಾಲ್ಕು ವೇದಿಕೆಗಳಲ್ಲಿ ಖ್ಯಾತ ಕಲಾವಿದರಿಂದ ಪ್ರದರ್ಶನ ಏರ್ಪಡಿಸಿದರೆ, ಆಯಾ ವೇದಿಕೆಗಳಲ್ಲಿಯೂ ಸಹ ಜನಸ್ತೋಮ ಸೇರಲಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಚಿಂತನೆ ನಡೆಸಬೇಕಿದೆ.

ಸಮಾನ ಅವಕಾಶ ದೊರೆಯಲಿ: ಉತ್ಸವದಲ್ಲಿ ಭಾಗಿಯಾಗುವ ಪ್ರತಿಯೊಬ್ಬ ಕಲಾವಿದರನ್ನು ಸಮನಾಗಿ ಕಾಣಬೇಕಿದೆ. ಹೆಸರಾಂತ ಕಲಾವಿದರಿಗೆ ಸಿಗುವಂತ ವಸತಿ ಸೌಲಭ್ಯ ಹಾಗೂ ಊಟದ ವ್ಯವಸ್ಥೆಯನ್ನು ಸಣ್ಣ-ದೊಡ್ಡ ಎಂದು ತಾರತ್ಯಮ ಮಾಡದೇ ಎಲ್ಲರಿಗೂ ಸಮಾನ ಸೌಲಭ್ಯಗಳನ್ನು ಈ ಬಾರಿ ಜಿಲ್ಲಾಡಳಿತ ಕಲ್ಪಿಸಬೇಕೆಂಬ ಮಾತುಗಳು ಕೇಳಿಬಂದಿವೆ.

ಕಳೆದ ಉತ್ಸವದಲ್ಲಿ ಜನಪದ ಅಕಾಡೆಮಿ ಮಾಜಿ ಅಧ್ಯಕ್ಷೆ ಮಂಜಮ್ಮ ಜೋಗತಿಯವರನ್ನು ಎದುರು ಬಸವಣ್ಣ ವೇದಿಕೆ ರಾಯಬಾರಿಯನ್ನಾಗಿ ಮಾಡಿ ಗೌರವಿಸಲಾಗಿತ್ತು. ಮೂರು ದಿನಗಳ ಕಾಲ ಸ್ಥಳದಲ್ಲಿದ್ದು, ಕಲಾವಿದರಿಗೆ ಮಂಜಮ್ಮ ಜೋಗತಿ ಹುರಿದುಂಬಿಸಿದ್ದರು. ಈ ಬಾರಿ ಜಿಲ್ಲೆಯ ಮತ್ತೊಬ್ಬ ಕಲಾವಿದರನ್ನು ಗುರುತಿಸಿ, ರಾಯಬಾರಿ ಮಾಡಲಿ ಎಂಬ ಒತ್ತಾಯ ಕೇಳಿ ಬಂದಿದೆ.

ನ. 3,4,5 ಉತ್ಸವ ಆಚರಿಸಿ!

ಮೈಸೂರು ದಸರಾ ಉತ್ಸವಕ್ಕೆ ನೀಡುವ ಮನ್ನಣೆಯನ್ನು ಹಂಪಿ ಉತ್ಸವಕ್ಕೂ ಸರ್ಕಾರ ನೀಡಬೇಕು. ಪ್ರತಿವರ್ಷ ನ. 3,4,5 ರಂದು ಹಂಪಿ ಉತ್ಸವ ಆಚರಣೆ ಮಾಡಬೇಕು. ಮಾಜಿ ಉಪಮುಖ್ಯಮಂತ್ರಿ ಎಂ.ಪಿ.ಪ್ರಕಾಶ ಅವರನ್ನು ನೆನೆಯಬೇಕು ಎಂಬದು ಜಿಲ್ಲೆಯ ಜನರ ಒತ್ತಾಸೆಯಾಗಿದೆ.

> ಫೆ.28ರಿಂದ ಮೂರು ದಿನಗಳ ಕಾಲ ಹಂಪಿ ಉತ್ಸವ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಮ್ಮತಿ ನೀಡಿದ್ದಾರೆ. ಈ ಬಾರಿಯೂ ಅದ್ದೂರಿಯಾಗಿ ಆಚರಿಸಲಾಗುವುದು ಇದಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಲು ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಲಾಗಿದೆ.
> -ಜಮೀರ್ ಅಹಮ್ಮದ್ ಖಾನ್, ಸಚಿವರು

> ಹಂಪಿ ಉತ್ಸವ ಕಳೆದ ಬಾರಿಯಂತೆ ಈ ವರ್ಷವೂ ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಿದೆ. ಉತ್ಸವ ಆಚರಣೆಗೆ ಮತ್ತಷ್ಟೋ ಮೆರಗು ನೀಡಲು ನಾಲ್ಕೈದು ದಿನದಲ್ಲಿ ಜನಾಭಿಪ್ರಾಯ ಸಂಗ್ರಹಿಸಲು ಸಭೆ ನಡೆಸಲಾಗುವುದು. ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಇದಕ್ಕಾಗಿ ವಿವಿಧ ಇಲಾಖೆ ಅಧಿಕಾರಿಗಳ ಸಹಯೋಗದಲ್ಲಿ ಆಚರಣೆ ಸಮಿತಿ ರಚಿಸಲಾಗುವುದು.
> -ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ

> ಹಂಪಿ ಉತ್ಸವ ಈ ಭಾಗದ ಜನರ ಹೆಮ್ಮೆ. ಅದ್ದೂರಿ ಉತ್ಸವ ಆಚರಣೆ ಜಿಲ್ಲಾಡಳಿತ ಅಗತ್ಯ ಸಿದ್ಧತೆ ಕೈಗೊಳ್ಳಲಿದೆ. ಸ್ಥಳೀಯ ಕಲಾವಿದರಿಗೆ ಉತ್ಸವದಲ್ಲಿ ಅವಕಾಶ ಸಿಗಲಿದೆ. ಈ ಉತ್ಸವದ ಯಶ್ವಸಿಗೆ ಎಲ್ಲರೂ ಕೈಜೋಡಿಸಲಿ.
> -ಎಚ್.ಗವಿಯಪ್ಪ, ಶಾಸಕರು

ಜಿಲ್ಲಾ ಕಲಾ ವೈಭವಕ್ಕೆ ಸಂಸದರಿಂದ ಚಾಲನೆ

ಬಳ್ಳಾರಿ: ನಗರದಲ್ಲಿ ರಾಘವ ಕಲಾಮಂದಿರ ಮುಂಭಾಗದಲ್ಲಿ ಬಳ್ಳಾರಿ ರಾಘವ ಅವರಿಗೆ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಬಳ್ಳಾರಿ ಜಿಲ್ಲಾ ಕಲಾ ವೈಭವ -2025 ಕಾರ್ಯಕ್ರಮ ಅಂಗವಾಗಿ ವಸಂತ ವೈಭವ (ಕಲಾ ತಂಡಗಳ) ಮೆರವಣಿಗೆಗೆ ಮೇಯರ್ ಮುಲ್ಲಂಗಿ ನಂದೀಶ್ ಮತ್ತು ಗುತ್ತಿಗೆದಾರ ಮಸೀದಿ ಪುರ ಸಿದ್ಧರಾಮನ ಗೌಡ ಅವರು ಜಂಟಿಯಾಗಿ ಚಾಲನೆ ನೀಡಿದರು.

ವಸಂತ ವೈಭವ (ಕಲಾ ತಂಡಗಳ) ಮೆರವಣಿಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯಿಂದ, ಗಡಗಿ ಚನ್ನಪ್ಪ ವೃತ್ತ (ರಾಯಲ್ ಸರ್ಕಲ್) ಸೇರಿದಂತೆ ಕೋಲಾಚಲಂ ವೆಂಕಟ್ ರಾವ್ ರಸ್ತೆ, ತೇರು ಬೀದಿ, ಎಚ್.ಆರ್.ಗವಿಯಪ್ಪ ರಸ್ತೆ ಮಾರ್ಗವಾಗಿ ಜೋಳದರಾಶಿ ದೊಡ್ಡನ ಗೌಡ ರಂಗ ಮಂದಿರದವರೆಗೆ ಮೆರವಣಿಗೆ ನಡೆಯಿತು.

ನಗರದ ಜೋಳದ ರಾಶಿ ದೊಡ್ಡನ ಗೌಡ ರಂಗ ಮಂದಿರದಲ್ಲಿ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ವೇದಿಕೆಯಲ್ಲಿ ಎರಡು ದಿನಗಳ ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ವತಿಯಿಂದ ಮೊದಲ ಬಾರಿಗೆ ಬಳ್ಳಾರಿ ಜಿಲ್ಲಾ ಕಲಾ ವೈಭವ -2028 ಕಾರ್ಯಕ್ರಮಕ್ಕೆ ಸಂಸದ ತುಕಾರಾಂ ಅವರು ಚಾಲನೆ ನೀಡಿ ಮಾತನಾಡಿದರು. ಜಿಲ್ಲೆಯಲ್ಲಿ ಮೊದಲ ಬಾರಿಗೆ ಜಿಲ್ಲಾ ಕಲಾವಿದರ ಸಂಘದ ವತಿಯಿಂದ ಜಿಲ್ಲಾ ಕಲಾ ವೈಭವ 2025 ಕಾರ್ಯಕ್ರಮ ಹಮ್ಮಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ ಕಲಾವಿದರು ಎಲ್ಲಾರು ಒಗ್ಗೂಡಿಸುವಲ್ಲಿ ಬಳ್ಳಾರಿ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರ ಬಂಡೆ ಮತ್ತು ಅವರ ತಂಡ ಯಶಸ್ವಿಯಾಗಿದೆ ಎಂದರು.



ಬಳ್ಳಾರಿ ಜಿಲ್ಲಾ ಕಲಾ ವೈಭವ -2025 ಕಾರ್ಯಕ್ರಮ ಅಂಗವಾಗಿ ವಸಂತ ವೈಭವ ಮೆರವಣಿಗೆಯಲ್ಲಿ ಮೇಯರ್ ಮುಲ್ಲಂಗಿ ನಂದೀಶ್, ಸಿದ್ಧರಾಮನ ಗೌಡ, ಸಂಸದ ತುಕಾರಾಂ ಅವರು ಚಾಲನೆ ನೀಡಿದರು

ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಹೆಸರಿನಲ್ಲಿ 5 ಲಕ್ಷ ರು. ಡೆಪಾಸಿಟ್ ಮಾಡುವೆ ಅದರಿಂದ ಬರುವ ಬಡ್ಡಿಯಲ್ಲಿ ಅಗತ್ಯ ನೆರವು ಬೇಕಾದ ಬಡ ಕಲಾವಿದರಿಗೆ ಸಹಾಯ ಮಾಡಿ ಎಂದರು.

ವೇದಿಕೆಯಲ್ಲಿ ಮೇಯರ್ ಮುಲ್ಲಂಗಿ ನಂದೀಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ್, ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮೊಹಮ್ಮದ್ ರಫೀಕ್, ಮುಖಂಡರಾದ ಕೆ. ಚೆನ್ನಪ್ಪ, ತಿಮ್ಮನಗೌಡ, ಮಸೀದಿ ಪುರ ಸಿದ್ಧರಾಮನ ಗೌಡ, ಪನ್ನರಾಜ್, ಚಾನಳ್ ಶೇಖರ್, ವೀಣಾ ಕುಮಾರಿ, ಕಾರ್ಯಕ್ರಮ ಆಯೋಜಕ ಹಾಗೂ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರ ಬಂಡೆ ಉಪಸ್ಥಿತರಿದ್ದರು.

> ಜಿಲ್ಲೆಯಲ್ಲಿನ ಕಲಾವಿದರು ಸಮಸ್ಯೆಗಳನ್ನು ಅರಿಯಲು ಪರಿಹರಿಸಲು ಈ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಶ್ರಮಿಸಬೇಕು ಅವರಿಗೆ ಬೇಕಾಗುವ ಸಹಾಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ನಶಿಸುತ್ತಿರುವ ಇತಿಹಾಸ, ಪರಂಪರೆ, ಕಲೆಯನ್ನು ಜೀವಂತವಾಗಿ ಇಡುವಲ್ಲಿ ಕಲಾವಿದರ ಪಾತ್ರ ಅಪಾರವಾಗಿದೆ.
> -ತುಕಾರಾಂ, ಸಂಸದ

ಜಾತ್ರೆಗೆ ಅಚ್ಚುಕಟ್ಟು ವ್ಯವಸ್ಥೆ ಮಾಡಿ

ಕೊಪ್ಪಳ: ದಕ್ಷಿಣ ಭಾರತದ ಕುಂಭ ಮೇಳ ಎಂದು ಕರೆಸಿಕೊಂಡಿರುವ ಶ್ರೀಗವಿಸಿದ್ದೇಶ್ವರ ಜಾತ್ರೆ ನಮ್ಮ ಜಿಲ್ಲೆಯ ಹೆಮ್ಮೆ. ಜಾತ್ರೋತ್ಸವಕ್ಕೆ ಕುಡಿವ ನೀರು, ವಾಹನ ಪಾರ್ಕಿಂಗ್ ಸೇರಿ ಅಗತ್ಯ ಮೂಲ ಸೌಲಭ್ಯ ಒದಗಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶ್ರೀಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆ ನಡೆದ ಪೂರ್ವಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಶನಿವಾರ ಮಾತನಾಡಿದರು.

ಜಾತ್ರೋತ್ಸವದ ಹಿನ್ನೆಲೆ ಬರೋಬ್ಬರಿ 15 ದಿನ ನಿರಂತರವಾಗಿ ದಾಸೋಹ ನಡೆಯಲಿದ್ದು, ಕುಡಿವ ನೀರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ಕ್ರಮ ವಹಿಸಬೇಕು. ಸಂಸದ ಕೆ.ರಾಜಶೇಖರ ಹಿಟ್ನಾಳ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್.ಎಲ್ ಅರಸಿದ್ದಿ, ಜಿಲ್ಲಾ ಗ್ಯಾರೆಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಎಡಿಸಿ ಸಿದ್ರಾಮೇಶ್ವರ, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಡಿವೈಎಸ್ಪಿ ಮುತ್ತಣ್ಣ ಸವರಗೋಳ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್ ಇದ್ದರು. ಸಂಸದ ಕೆ.ರಾಜಶೇಖರ ಹಿಟ್ನಾಳ, ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ಡಿಸಿ ನಲಿನ್ ಅತುಲ್, ಸಿಇಒ ರಾಹುಲ್ ರತ್ನಂ ಪಾಂಡೇ ಇದ್ದರು.

> ಅಧಿಕಾರಿಗಳು ಇದು ನಮ್ಮೆಲ್ಲರ ಜಾತ್ರೆ ಎಂಬ ಸೇವಾ ಮನೋಭಾವದಿಂದ ಕೆಲಸ ಮಾಡಬೇಕು. ವಿಶೇಷವಾಗಿ ಜ. 14, 15 ಮತ್ತು 16 ರಂದು ಹೆಚ್ಚು ಜನ ಸೇರುವುದರಿಂದ ಈ ಮೂರು ದಿನ ಅಧಿಕಾರಿಗಳು ಜಾಗ್ರತರಾಗಿ ಕಾರ್ಯ ನಿರ್ವಹಿಸಬೇಕು.
> - ಶಿವರಾಜ ತಂಗಡಗಿ, ಸಚಿವ

ಗವಿಮಠಕ್ಕೆ ತಂಗಡಗಿ ಭೇಟಿ

ಗವಿಮಠ ಜಾತ್ರೋತ್ಸವದ ಪೂರ್ವಭಾವಿ ಸಭೆ ನಂತರ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಗವಿಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿ ಗವಿಶ್ರೀಗಳೊಂದಿಗೆ ಜಾತ್ರಾ ವಿಷಯದ ಕುರಿತು ಚರ್ಚಿಸಿದರು. ಜಿಲ್ಲಾಡಳಿತ ಮತ್ತು ಸರಕಾರದಿಂದ ಶ್ರೀಮಠ ದೊಂದಿಗೆ ಇದ್ದು ಕೆಲಸ ಮಾಡಲಿದೆ ಎಂದು ತಿಳಿಸಿದರು.

ಶಾ ಹೇಳಿಕೆ ಖಂಡಿಸಿ ನಾಳೆ ಬಂದ್‌ಗೆ ಕರೆ

ಕೊಪ್ಪಳ ಮೀಡಿಯಾ ಕ್ಲಬ್‌ನಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ಸಂಚಾಲಕರು ಸುದ್ದಿಗೋಷ್ಠಿ ನಡೆಸಿದರು.

ಕೊಪ್ಪಳ: ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಆಕ್ಷೇಪಾರ್ಹ ಹೇಳಿಕೆ ಖಂಡಿಸಿ ಜ.6 ರಂದು ಕೊಪ್ಪಳ ಬಂದ್‌ಗೆ ಕರೆ ನೀಡಲಾಗಿದ್ದು, ಸಾರ್ವಜನಿಕರು ಮತ್ತು ವ್ಯಾಪಾರಿಗಳು ಬಂದ್‌ಗೆ ಬೆಂಬಲ ನೀಡಬೇಕು ಎಂದು ಸಂವಿಧಾನ ಸಂರಕ್ಷಣಾ ಸಮಿತಿ ಸಂಚಾಲಕ ಹನುಮೇಶ ಕಡೆಮನಿ ತಿಳಿಸಿದರು.

ನಗರದ ಕೊಪ್ಪಳ ಮೀಡಿಯಾ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂಬೇಡ್ಕರ್ ಹೆಸರು ಹೇಳುವುದು ಫ್ಯಾಷನ್ ಆಗಿದೆ ಎಂದು ಗೃಹ ಸಚಿವ ಅಮಿತ್ ಶಾ ನೀಡಿದ ಹೇಳಿಕೆ ಅಂಬೇಡ್ಕರ್ ಅಭಿಮಾನಿಗಳಿಗೆ ತೀವ್ರ ನೋವುಂಟಾಗಿದೆ. ಇದರಿಂದ ಅಂಬೇಡ್ಕರ್ ಅಭಿಮಾನಿಗಳೆಲ್ಲ ಸೇರಿ ಈ ಹೋರಾಟ ನಡೆಸುತ್ತಿದ್ದೇವೆ. ಬಂದ್‌ಗೆ 30ಕ್ಕೂ ಅಧಿಕ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ ಎಂದು ಮಾಹಿತಿ ನೀಡಿದರು. ಜ.6ರಂದು ಬೆಳಗ್ಗೆ 7 ಗಂಟೆಯಿಂದ ಬಂದ್ ಕರೆ ನೀಡಲಾಗಿದೆ. ಬೆಳಗ್ಗೆ 7 ಗಂಟೆಗೆ ತಾಲೂಕು ಕ್ರೀಡಾಂಗಣದಲ್ಲಿ ಅಂಬೇಡ್ಕರ್ ಅಭಿಮಾನಿಗಳು ಸೇರಿ, ನಗರದಲ್ಲಿ ಬೈಕ್ ರ‍್ಯಾಲಿ, ಆಟೋ ರ‍್ಯಾಲಿ ನಡೆಸುತ್ತೇವೆ. ಸುಮಾರು 10 ಸಾವಿರಕ್ಕೂ ಹೆಚ್ಚು ಅಂಬೇಡ್ಕರ್ ಅಭಿಮಾನಿಗಳು ಪಾಲ್ಗೊಳ್ಳುವರು. ವ್ಯಾಪಾರ ವಹಿವಾಟು, ಸಾರಿಗೆ ಸಂಪೂರ್ಣ ಬಂದ್ ಆಗಲಿದೆ. ಶಾಲಾ, ಕಾಲೇಜು ಬಂದ್ ಮಾಡಲು ಶಿಕ್ಷಣ ಇಲಾಖೆಗೆ ಪತ್ರ ನೀಡಲಾಗಿದೆ. ಹಾಲು, ಔಷಧಿ ಅಂಗಡಿ ಹಾಗೂ ಪರೀಕ್ಷಾ ಕೇಂದ್ರ ಹೊರತುಪಡಿಸಿ ಬಹುತೇಕ ಬಂದ್ ಮಾಡಲಾಗುವುದು ಎಂದು ಹೇಳಿದರು.

ಬಂಜಾರ ಸಮುದಾಯ ಯುವ ಘಟಕದ ಜಿಲ್ಲಾಧ್ಯಕ್ಷ ಪಂಪಣ್ಣ ಪೂಜಾರ, ಮುಖಂಡರಾದ ರಾಮಣ್ಣ ಚೌಡ್ಕಿ, ಕೆ.ಬಿ.ಗೋನಾಳ, ನಾಗರಾಜ ಭಜಂತ್ರಿ, ಶೇಷಣ್ಣ ಶಹಪುರ, ಸಂಜಯದಾಸ ಕೌಜಗೇರಿ ಇದ್ದರು.

> ಅಮಿತ್ ಶಾ ಗಡಿಪಾರು ಆಗಿದ್ದವರು. ನಕಲಿ ಎನ್ ಕೌಂಟರ್ ಕೇಸ್‌ನಲ್ಲಿ ಬಂಧಿತರಾಗಿದ್ದ ವ್ಯಕ್ತಿ. ಅಂಬೇಡ್ಕರ್ ಬರೆದ ಸಂವಿಧಾನದಲ್ಲಿ ನೀಡಿರುವ ಅವಕಾಶ ಬಳಸಿಕೊಂಡು ಇಂದು ಕೇಂದ್ರದ ಗೃಹ ಸಚಿವರಾಗಿದ್ದಾರೆ. ಅಂಬೇಡ್ಕರ್ ಇಲ್ಲದೇ ಹೋಗಿದ್ದರೆ ಅಮಿತ್ ಶಾ ಗುಜರಾತ್‌ನಲ್ಲಿ ಗುಜರಿ ವ್ಯಾಪಾರಿಯಾಗಿ ಜೀವನ ಮಾಡಬೇಕಾಗಿತ್ತು.
> - ಹನುಮೇಶ ಕಡೆಮನಿ, ಸಂಚಾಲಕ, ಸಂವಿಧಾನ ಸಂರಕ್ಷಣಾ ಸಮಿತಿ

ವಿದ್ಯುತ್ ಸ್ಥಾವರ ವಿರೋಧಿಸಿ ಪ್ರತಿಭಟನೆ

ಗಂಗಾವತಿ: ತಾಲೂಕಿನ ಚಿಕ್ಕ ಬೆಣಕಲ್ ಸಮೀಪದಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಭೂಮಿ ಗುರುತು ಮಾಡಿರುವ ಜಿಲ್ಲಾಡಳಿತದ ನಡೆ ಖಂಡಿಸಿ, ಸಾವಿರಾರು ಜನರು ಹೇಮಗುಡ್ಡ ಟೋಲ್ ಗೇಟ್ ಮುಂದೆ ಹೆದ್ದಾರಿ ತಡೆದು ಶನಿವಾರ ಪ್ರತಿಭಟಿಸಿದರು.

ಅಣು ಸ್ಥಾವರ ವಿರೋಧಿ ಸಮಿತಿ ಕರೆ ಹಿನ್ನೆಲೆಯಲ್ಲಿ ಹಿರೇಬೆಣಕಲ್, ಚಿಕ್ಕ ಬೆಣಕಲ್ ಸೇರಿ ಸುತ್ತಿಲಿನ ವಿವಿಧ ಗ್ರಾಮದ ರೈತರು ಬೆಳಗ್ಗೆಯಿಂದಲೇ ಟೋಲ್ ಗೇಟ್ ಬಳಿ ಬಂದು ಜಮಾಯಿಸಿದರು. ಬೆಳಗ್ಗೆ 11 ಗಂಟೆಯಿಂದ ಹೆದ್ದಾರಿ ತಡೆದ ಪ್ರತಿಭಟನಾಕಾರರು ಜಿಲ್ಲಾಡಳಿತ ಮತ್ತು ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು. ಸುಮಾರು ಅರ್ಧ ಗಂಟೆ ರಸ್ತೆ ಬಂದ್ ಮಾಡಿದ್ದರಿಂದ ನೂರಾರು ವಾಹನ ರಸ್ತೆಯುದ್ದಕ್ಕೂ ನಿಂತಿದ್ದು ಕಂಡು ಬಂತು. ಸಾರಿಗೆ ಬಸ್ ಗಳಿಗೆ ಪರ್ಯಾಯ ಮಾರ್ಗ ಕಲ್ಪಿಸದ ಹಿನ್ನೆಲೆಯಲ್ಲಿ ಪ್ರಯಾಣಿಕರು ಪರದಾಡಿದರು.

ಸುಮಾರು 3 ಗಂಟೆ ನಂತರ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟು, ಇದು ಸಾಂಕೇತಿಕ ಹೋರಾಟವಾಗಿದೆ. ಜಿಲ್ಲಾಡಳಿತ ಕೂಡಲೇ ಕೊಪ್ಪಳ ಜಿಲ್ಲೆಯಲ್ಲಿ ಅಣು ವಿದ್ಯುತ್ ಸ್ಥಾವರಕ್ಕೆ ಸ್ಥಳ ಸರ್ವೇ ಆಡುವ ಕೆಲಸ ಕೈ ಬಿಡಬೇಕು ಎಂದು ಒತ್ತಾಯಿಸಿದರು. ವಿಶ್ವ ಪಾರಂಪರಿಕ ಸ್ಥಳಗಳಿರುವ ಗಂಗಾವತಿ ಸುತ್ತಲಿನ ಪ್ರದೇಶದಲ್ಲಿ ಅಣು ವಿದ್ಯುತ್ ಸ್ಥಾವರ ಯಾವುದೇ ಕಾರಣಕ್ಕೆ ಸ್ಥಾಪಿಸಬಾರದು ಎಂದು ಆಗ್ರಹಿಸಿದರು. ತಹಸೀಲ್ದಾರ್ ನಾಗರಾಜ್ ಮೂಲಕ ಕೇಂದ್ರ ಸರಕಾರಕ್ಕೆ ಸಾರ್ವಜನಿಕರು ಮನವಿ ಸಲ್ಲಿಸಿದರು.

ಅಣು ಸ್ಥಾವರ ವಿರೋಧಿ ಸಮಿತಿ ಸಂಚಾಲಕ ಎಚ್.ಆರ್. ಶ್ರೀನಾಥ ಮಾತನಾಡಿ, ದೇಶದ ಬೇರೆ ಬೇರೆ ರಾಜ್ಯದಲ್ಲಿ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಭೂಮಿ ಲಭ್ಯತೆ ಬಗ್ಗೆ ಕೇಂದ್ರ ಸರಕಾರ ಎಲ್ಲ ರಾಜ್ಯ ಮತ್ತು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ. ಈ ಕಾರಣಕ್ಕೆ ಗಂಗಾವತಿ ತಾಲೂಕಿನ ಹಿರೇಬೆಣಕಲ್, ಚಿಕ್ಕ ಬೆಣಕಲ್ ಬಳಿ ಭೂಮಿ ಸರ್ವೇ ಮಾಡಿರುವ ಅಧಿಕಾರಿಗಳು ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿದ್ದಾರೆ.

ಮುಖಂಡರಾದ ಕರಿಯಣ್ಣ ಸಂಗಟಿ, ಕಲ್ಮಠದ ಕೊಟ್ಟೂರು ಸ್ವಾಮೀಜಿ, ದೇವಿಕಾನಂದ ಸ್ವಾಮೀಜಿ, ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ, ಪ್ರಮುಖರಾದ ಜೋಗದ ನಾರಾಯಣಪ್ಪ ನಾಯಕ, ಜೋಗದ ಹನುಮಂತಪ್ಪ ನಾಯಕ, ರಾಜಶೇಖರಪ್ಪ ಮುಸ್ಟೂರು, ಪಂಪಣ್ಣ ನಾಯಕ, ಚಂದ್ರೇಗೌಡ, ಅರ್ಜುನ ನಾಯಕ, ಸರ್ವೇಶ ಮಾಂತಗೊಂಡ ಇದ್ದರು.



ಗಂಗಾವತಿ ತಾಲೂಕು ಚಿಕ್ಕ ಬೆಣಕಲ್ ಸಮೀಪದಲ್ಲಿ ಅಣು ವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಜಿಲ್ಲಾಡಳಿತದ ಮುಂದೆ ಪ್ರತಿಭಟಿಸಿ, ತಹಸೀಲ್ದಾರಗೆ ಮನವಿ ಸಲ್ಲಿಸಿದರು.

> ಸದ್ಯ ಅಧಿಕಾರಿಗಳು ಗುರುತು ಮಾಡಿರುವ ಜಾಗ ಹತ್ತಾರು ವನ್ಯ ಜೀವಿಗಳು ಇರುವ ಜಾಗ. ಈ ಪ್ರದೇಶದಲ್ಲಿ ಅಣು ವಿದ್ಯುತ್ ಸ್ಥಾವರ ಬೇಡ ಎಂಬುದು ಸ್ಥಳೀಯರ ಬೇಡಿಕೆ. ಅಣು ವಿದ್ಯುತ್ ಸ್ಥಾವರ ಆರಂಭಕ್ಕೆ ಮುಂದಾದರೆ ಉಗ್ರ ಹೋರಾಟ ಮಾಡುತ್ತೇವೆ.
> - ಡಾ.ಕೊಟ್ಟೂರೇಶ್ವರ ಸ್ವಾಮೀಜಿ, ಕಲ್ಮಠ

ಲೋಗೋ ರಚಿಸಿ, ಬಹುಮಾನ ಗೆಲ್ಲಿ

ಹೊಸಪೇಟೆ: ಫೆ.28 ರಂದು ಜರುಗಲಿರುವ ವಿಶ್ವವಿಖ್ಯಾತ 2025ರ ಹಂಪಿ ಉತ್ಸವದ ನೂತನ ಲೋಗೋ ರಚಿಸುವ ಕಲಾವಿದರಿಗೆ ಜಿಲ್ಲಾಡಳಿತದಿಂದ ಸೂಕ್ತ ಬಹುಮಾನ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿ ದ್ದಾರೆ. ಸಚಿವರು ಹಾಗೂ ಮುಖ್ಯ ಮಂತ್ರಿಗಳಿಂದ ಸಮ್ಮತಿ ಪಡೆದು 2025 ರ ಸಂಜೆ ಫೆ.28 ಮತ್ತು ಮಾರ್ಚ್ 1, 2 ರಂದು ಅದ್ದೂರಿಯಾಗಿ ಜರು ಗಲಿರುವ ಹಂಪಿ ಉತ್ಸವ ಕಾರ್ಯಕ್ರಮವನ್ನು ಆಚ ರಣೆ ಮಾಡಲು ಪೂರ್ವಸಿದ್ಧತೆಗಳನ್ನು ಕೈ ಗೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಈ ಬಾರಿ ಉತ್ಸವದ ನೂತನ ಲೋಗೋ ರಚಿಸಬೇಕಿದೆ. ಆಸಕ್ತ ಕಲಾವಿದರು ಸಹಾಯಕ ನಿರ್ದೇ ಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಜಯನಗರ ಜಿಲ್ಲಾ ಕಚೇರಿಗೆ ಜ.15 ರೊಳಗೆ ಪ್ರಸ್ತಾವನೆಗಳನ್ನು ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

ಕಲಾವಿದರಿಂದ ಅರ್ಜಿ ಆಹ್ವಾನ: ವಿಶ್ವವಿಖ್ಯಾತ ಹಂಪಿ ಉತ್ಸವದಲ್ಲಿ ಸಾಂಸ್ಕೃತಿಕ ಮತ್ತು ಮೆರವಣಿಗೆ ಕಾರ್ಯ ಕ್ರಮ ಗಳನ್ನು ನೀಡಲು ಆಸಕ್ತ ಕಲಾವಿದರಿಂದ ಅರ್ಜಿ ಆಹ್ವಾನಿ ಸಲಾ ಗಿದೆ. ಜ.30ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಸರಕಾರಿ, ಅರೆ ಸರಕಾರಿ, ಅನುದಾನಿತ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವ ಹಿಸುತ್ತಿರುವ ಕಲಾವಿದರು ಅನುಮತಿ ಪತ್ರದೊಂದಿಗೆ ಅರ್ಜಿ ಸಲ್ಲಿಸಿ ದಲ್ಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

ರೈತರಿಗೆ ನೀರು ಸಿಗುವಂತೆ ಕಾಲುವೆ ಹರಿಸಿ: ಸಚಿವ

ರಾಯಚೂರು: ನೀರಾವರಿ ಸಲಹಾ ಸಮಿತಿಯ ನಿರ್ಧಾರದಂತೆ ತುಂಗಭದ್ರಾ ಎಡದಂಡೆಯ ಕಾಲುವೆಯಲ್ಲಿ ಹರಿಸಲಾಗುತ್ತಿರುವ 3800 ಕ್ಯೂಸೆಕ್ ನೀರು ಕೊನೆಯ ಭಾಗದ ಕಾಲುವೆಯ ರೈತರಿಗೂ ಸಮರ್ಪಕವಾಗಿ ಸರಬರಾಜುವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಅವರು ಸೂಚನೆ ನೀಡಿದರು.

ಹೊಸಪೇಟೆಯಲ್ಲಿ ತುಂಗಭದ್ರಾ ಆಣೆಕಟ್ಟಿನ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ಜ.1ರಿಂದ ಎಡದಂಡೆ ಕಾಲುವೆಯಲ್ಲಿ 3800 ಕ್ಯೂಸೆಕ್ ನೀರು ಹರಿಸುವಂತೆ ನೀರಾವರಿ ಸಲಹಾ ಸಮಿತಿಯಲ್ಲಿ ನಿರ್ಧರಿಸಲಾಗಿತ್ತು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸಚಿವರು ಸೂಚನೆ ನೀಡಿದರು.

ದೂರವಾಣಿ ಮೂಲಕ ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಅವರೊಂದಿಗೆ ಮಾತನಾಡಿದ ಸಚಿವರು, ಸಮರ್ಪಕ ನೀರು ನಿರ್ವಹಣೆಯ ನಿಟ್ಟಿನಲ್ಲಿ ಗುಲ್ಬರ್ಗಾ ಪ್ರಾದೇಶಿಕ ಆಯುಕ್ತರಿಗೆ ಸೂಚನೆ ನೀಡುವಂತೆ ಸೂಚಿಸಿದರು. ಪ್ರಾದೇಶಿಕ ಆಯುಕ್ತರು ಹಾಗೂ ಕೊಪ್ಪಳ ಮತ್ತು ರಾಯಚೂರು ಜಿಲ್ಲಾಧಿಕಾರಿಗಳು ಜಿಲ್ಲೆಗಳ ಮಧ್ಯೆ ಸಮನ್ವಯತೆ ಸಾಧಿಸಬೇಕು. ನೀರು ಎಲ್ಲಾ ಭಾಗದ ರೈತರಿಗೂ ಸಮರ್ಪಕವಾಗಿ ಲಭ್ಯವಾಗುವಂತೆ ಕ್ರಮವಹಿಸಬೇಕು ಎಂದು ದೂರವಾಣಿ ಮೂಲಕ ಸೂಚನೆ ನೀಡಿದರು. ಮುಂದಿನ 10 ದಿನಗಳು ಬಹಳ ಪ್ರಮುಖವಾಗಿದ್ದು, 69 ಮೈಲು ಕಾಲುವೆಯ ಕೊನೆಯ ಭಾಗದ (ಟೈಲ್ ಎಂಡ್) ರೈತರಿಗೂ ಸಮರ್ಪಕ ನೀರು ದೊರೆಯುವುದನ್ನ ಖಾತ್ರಿ ಪಡಿಸಿಕೊಳ್ಳುವಂತೆ ಸಚಿವರು ಸೂಚನೆ ನೀಡಿದರು.

ಸಭೆಯಲ್ಲಿ ಕೊಪ್ಪಳ ಸಂಸದ ರಾಜಶೇಖರ್ ಬಸವರಾಜ ಹಿಟ್ನಾಳ್, ತುಂಗಭದ್ರಾ ಅಣೆಕಟ್ಟಿನ ಮುಖ್ಯ ಅಭಿಯಂತರರು ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.



ಹೊಸಪೇಟೆಯಲ್ಲಿ ತುಂಗಭದ್ರಾ ಆಣೆಕಟ್ಟಿನ ಹಿರಿಯ ಅಧಿಕಾರಿಗಳೊಂದಿಗೆ ಸಚಿವ ಎನ್.ಎಸ್.ಭೋಸರಾಜು ಅವರು ಸಭೆಯಲ್ಲಿ ಮಾತನಾಡಿದರು.

> ಎಲ್ಲಾ ಭಾಗದ ರೈತರಿಗೆ ಈ ನೀರು ಸಮರ್ಪಕವಾಗಿ ಲಭ್ಯವಾಗುತ್ತಿಲ್ಲ. ಇದರಿಂದ ಬೆಳೆ ಹಾನಿಯಾಗುವ ಆತಂಕದಿಂದ ರೈತರು ಪ್ರತಿಭಟನೆಗೆ ಮುಂದಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ಭಾಗಕ್ಕೂ ಸಮರ್ಪಕವಾಗಿ ನೀರು ದೊರೆಯಲು ಗೇಜ್‌ಮೆಂಟೇನ್ ಮಾಡುವುದು ಬಹಳ ಅವಶ್ಯಕವಾಗಿದೆ.
> -ಎನ್.ಎಸ್.ಭೋಸರಾಜು, ಸಚಿವ

ಅವ್ಯವಹಾರ ತನಿಖೆಗೆ ಕರವೇ ಒತ್ತಾಯ

ಲಿಂಗಸೂಗೂರು: ತಾಲೂಕಿನಲ್ಲಿರುವ ಅಮರೇಶ್ವರ ದೇವಸ್ಥಾನಕ್ಕೆ ಬರುವ ಭಕ್ತರು ನೀಡಿದ ಹಣವನ್ನು ವೈಯಕ್ತಿಕ ಖಾತೆಗೆ ಜಮಾ ಮಾಡಿಕೊಂಡು ಅವ್ಯವಹಾರದಲ್ಲಿ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ, ನಮ್ಮ ಕರ್ನಾಟಕ ಸೇನೆ ಕಾರ್ಯಕರ್ತರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು. ತಾಲೂಕಿನ ಪುರಾಣ ಪ್ರಸಿದ್ಧ ಪುಣ್ಯಕ್ಷೇತ್ರವಾದ ಅಮರೇಶ್ವರ ದೇವಸ್ಥಾನದಲ್ಲಿ 1997ರ ಕಾಯಿದೆ ಮತ್ತು ಅಧಿನಿಯಮ 2002 ಕಲಂ 69 ಬಿ ಪ್ರಕಾರ ಈ ದೇವಸ್ಥಾನದ ವ್ಯಾಪ್ತಿಯಲ್ಲಿ ಬರದ ಹಾಗೂ ತಾಲೂಕಿನವರಲ್ಲ ದವರು ಅನಧಿಕೃತವಾಗಿ ದಾಸೋಹ ನಡೆಸುತ್ತಿದ್ದಾರೆ. ಭಕ್ತರು ದಾಸೋಹಕ್ಕೆಂದು ಕಾಣಿಕೆ ರೂಪದಲ್ಲಿ ನೀಡಿದ ಹಣವನ್ನು ತಮ್ಮ ವೈಯಕ್ತಿಕ ಖಾತೆಗಳಿಗೆ ಜಮಾ ಮಾಡಿಕೊಳ್ಳುತ್ತಿದ್ದಾರೆ. ಭಕ್ತರು ನೀಡಿದ ಕೋಟ್ಯಾಂತರ ರು.ಗಳ ಹಣದ ಅವ್ಯವಹಾರವಾಗಿದ್ದು ಈ ಅವ್ಯವಹಾರದಲ್ಲಿ ಭಾಗಿಯಾದವರ ಮೇಲೆ ಧಾರ್ಮಿಕ ಧತ್ತಿ ಕಾಯ್ದೆಯಡಿಯಲ್ಲಿ ಕಾನೂನು ಕ್ರಮಕ್ಕೆ ಮುಂದಾಗಬೇಕು. ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆ ತಾಲೂಕಾಧ್ಯಕ್ಷ ಶಿವರಾಜ ನಾಯ್ಕ್, ನಿರುಪಾದಿ ಹಿರೇಮಠ, ಚಂದ್ರು ಹಿರೇಮಠ, ವೆಂಕಟೇಶ ಗುಡದನಾಳ, ಚಂದ್ರಕಾಂತ ಭೋವಿ, ದೇವೆಂದ್ರ ನಾಯಕ, ಶಿವರಾಜ ಅಲಬನೂರು, ಶಂಕರ ಚೌಹಾಣ್, ರುದ್ರಯ್ಯ ಸ್ವಾಮಿ, ರಮೇಶ ಭೋವಿ, ಶಿವಲಿಂಗ ಪುರಿ, ಬಸವಲಿಂಗ ಯಲಗಲದಿನ್ನಿ, ರಾಘವೇಂದ್ರ ಖೈರವಾಡಗಿ, ವೆಂಕಟೇಶ ಗುತ್ತೇ ದಾರ, ಕೃಷ್ಣಾ ಭೋವಿ, ಲಕ್ಷ್ಮಣ ಭೋವಿ, ರಾಜು, ವಿವೇಕಾನಂದ ಇದ್ದರು.

ಸಮಾಚಾರ ಸಣ್ಣದಲ್ಲ

ಬಿಸಿಸಿಐ ಚುನಾವಣೆ: ದೇವಜಿತ್ ನಾಮಪತ್ರ



ಮುಂಬೈ: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕಾರ್ಯದರ್ಶಿ ಸ್ಥಾನಕ್ಕೆ ದೇವಜಿತ್ ಸೈಕಿಯಾ ಶನಿವಾರ ನಾಮಪತ್ರಿಕೆ ಸಲ್ಲಿಸಿದ್ದಾರೆ. ಇದೇ ವೇಳೆ ಪ್ರಭಜಿತ್ ಭಾಟಿಯಾ ಖಜಾಂಚಿ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಈ ಎರಡೂ ಸ್ಥಾನಕ್ಕೆ ಅವರಿಬ್ಬರಬ್ಬರನ್ನು ಬಿಟ್ಟರೆ ಬೇರೆ ಯಾರೂ ನಾಮಪತ್ರಿಕೆ ಸಲ್ಲಿಸಿಲ್ಲ. ಮಹಾರಾಷ್ಟ್ರ ನೂತನ ಸಂಪುಟದಲ್ಲಿ ಕ್ಯಾಬಿನೆಟ್ ಸಚಿವರಾಗಿರುವ ಕಾರಣ ಆಶಿಷ್ ಶೆಲ್ಲಾರ್ ಬಿಸಿಸಿಐ ಖಜಾಂಚಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ರೋಹಿತ್‌ಗೆ ಏಕದಿನ ತಂಡದಿಂದಲೂ ಕೊಕ್?

ಸಿಡ್ನಿ: ಬಾರ್ಡರ್ ಗವಾಸ್ಕರ್ ಟ್ರೋಫಿಯ 5ನೇ ಪಂದ್ಯದಲ್ಲಿ ರೋಹಿತ್ ಶರ್ಮಾ ತಂಡದಿಂದ ಹೊರಗುಳಿದಿದ್ದಾರೆ. ಕಳಪೆ ಫಾರ್ಮ್‌ನಲ್ಲಿರುವುದರಿಂದ ಅವರಿಗೆ ವಿಶ್ರಾಂತಿ ಹೆಸರಿನಲ್ಲಿ ತಂಡದಿಂದ ಹೊರಗಿಡಲಾಗಿದೆ ಎಂಬ ಮಾತು ಕೇಳಿಬರುತ್ತಿದೆ. ಇದೀಗ ಮತ್ತೊಂದು ಶಾಕ್ ಎದುರಾಗುವ ಸಾಧ್ಯತೆ ಇದೆ.



ಫೆಬ್ರವರಿಯಲ್ಲಿ ನಡೆಯುವ ಚಾಂಪಿಯನ್ಸ್ ಟ್ರೋಫಿಯಿಂದಲೂ ಹೊರಬೀಳುವ ಸಾಧ್ಯತೆ ಇದೆ. ಬಾರ್ಡರ್-ಗವಾಸ್ಕರ್ ಟ್ರೋಫಿ ಮತ್ತು ಅದಕ್ಕೂ ಮೊದಲು ನ್ಯೂಜಿಲೆಂಡ್ ವಿರುದ್ಧದ ತವರಿನಲ್ಲಿ ನಡೆದ ಸರಣಿಯಲ್ಲಿ ಬ್ಯಾಟ್ ಮತ್ತು ನಾಯಕತ್ವದಲ್ಲೂ ವೈಫಲ್ಯ ಅನುಭವಿಸಿರುವುದರಿಂದ ರೋಹಿತ್ ಏಕದಿನ ವೃತ್ತಿಜೀವನವೂ ತೊಂದರೆಯಲ್ಲಿದೆ. ಪಾಂಡ್ಯಗೆ ನಾಯಕತ್ವ ಸಾಧ್ಯತೆ: ಚಾಂಪಿಯನ್ಸ್ ಟ್ರೋಫಿಯಲ್ಲಿ ರೋಹಿತ್ ಶರ್ಮಾ ಅವರ ಸ್ಥಾನಕ್ಕೆ ಹಾರ್ದಿಕ್ ಪಾಂಡ್ಯ ಏಕದಿನ ನಾಯಕತ್ವ ವಹಿಸಿಕೊಳ್ಳಬಹುದು ಎಂದು ಇತ್ತೀಚಿನ ವರದಿ ಹೇಳುತ್ತಿದೆ. ಪ್ರಸ್ತುತ, ರೋಹಿತ್ ಏಕದಿನ ಮತ್ತು ಟೆಸ್ಟ್ ಎರಡರಲ್ಲೂ ಭಾರತ ತಂಡದ ನಾಯಕರಾಗಿದ್ದಾರೆ. ಆದರೆ ಈಗ ಎರಡೂ ಮಾದರಿಯಲ್ಲೂ ನಾಯಕತ್ವ ಕಳೆದುಕೊಳ್ಳುವ ಭೀತಿ ಇದೆ. ಈಗಾಗಲೇ ಇಂಗ್ಲೆಂಡ್ ವಿರುದ್ಧ ನಡೆಯಲಿರುವ ದೇಶೀಯ ಸೀಮಿತ ಓವರ್‌ಗಳ ಸರಣಿಯ ಏಕದಿನ ಪಂದ್ಯಗಳಲ್ಲಿ ರೋಹಿತ್‌ಗೆ ವಿಶ್ರಾಂತಿ ನೀಡಲಾಗುವುದು ಎಂದು ಕೆಲವು ವರದಿಗಳಲ್ಲಿ ಹೇಳಲಾಗಿದೆ. ಒಂದು ವೇಳೆ ರೋಹಿತ್ ಈ ಸರಣಿಯನ್ನು ಆಡದೇ ಇದ್ದರೆ ಆ ಸರಣಿಯಲ್ಲೂ ಭಾರತ ತಂಡಕ್ಕೆ ನಾಯಕನ ಅಗತ್ಯವಿದ್ದು, ಸದ್ಯ ಇದಕ್ಕೆ ಹಾರ್ದಿಕ್ ಹೆಸರು ಮುಂಚೂಣಿಯಲ್ಲಿದೆ.

ವಿರಾಮ
ಪ್ರತಿ ಭಾನುವಾರ

ಕುಸಿದ ಭಾರತ ತಂಡಕ್ಕೆ ಪಂತ್ ಅರ್ಧಶತಕದ ಆಸರೆ | ಇಂದು ನಿರ್ಣಾಯಕ ದಿನ

ಅಲ್ಪ ಮುನ್ನಡೆ ಸಾಧಿಸಿದ ಭಾರತ

ಸಿಡ್ನಿ: ದ್ವಿತೀಯ ಇನ್ನಿಂಗ್ಸ್‌ನಲ್ಲಿ ಅಗ್ರ ಕ್ರಮಾಂಕದ ಬ್ಯಾಟಿಂಗ್ ಕುಸಿತಕ್ಕೆ ಸಿಲುಕಿದ ಹೊರತಾಗಿಯೂ ಸಿಡ್ನಿ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ತನ್ನ ಹೋರಾಟವನ್ನು ಮುಂದುವರಿಸಿದೆ. ಶನಿವಾರದ ದಿನದಾಟದ ಅಂತ್ಯಕ್ಕೆ 6 ವಿಕೆಟ್ ನಷ್ಟಕ್ಕೆ 141 ರನ್ ಬಾರಿಸಿ, ಒಟ್ಟಾರೆ 145 ರನ್‌ಗಳ ಮುನ್ನಡೆಯಲ್ಲಿದೆ. ರವೀಂದ್ರ ಜಡೇಜಾ(8) ಮತ್ತು ವಾಷಿಂಗ್ಟನ್ ಸುಂದರ್(6) ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ. ಭಾರತ ಈ ಪಂದ್ಯವನ್ನು ಉಳಿಸಿಕೊಳ್ಳಬೇಕಾದರೆ ಮೂರನೇ ದಿನದಾಟದಲ್ಲಿ ಸಂಪೂರ್ಣವಾಗಿ ಬ್ಯಾಟಿಂಗ್ ನಡೆಸಿ ಕನಿಷ್ಠ 300 ರನ್‌ಗಳ ಲೀಡ್ ಪಡೆಯಬೇಕು.

ಒಂದು ವಿಕೆಟ್ ನಷ್ಟಕ್ಕೆ 9 ರನ್ ಗಳಿಸಿದ್ದಲ್ಲಿಂದ ಎರಡನೇ ದಿನದಾಟ ಆರಂಭಿಸಿದ ಆಸ್ಟ್ರೇಲಿಯಾಕ್ಕೆ ಆರಂಭದಲ್ಲಿ ಜಸ್‌ಪ್ರೀತ್ ಬುಮ್ರಾ ಅವರು ಮಾರ್ನಸ್ ಲಬುಶೇನ್(2) ವಿಕೆಟ್ ಕಿತ್ತು ಆಘಾತವಿಕ್ಕಿದರು. ಆ ಬಳಿಕ ಕನ್ನಡಿಗ ಪ್ರಸಿದ್ಧ್ ಕೃಷ್ಣ, ಮೊಹಮ್ಮದ್ ಸಿರಾಜ್ ಮತ್ತು ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಜಿದ್ದಿಗೆ ಬಿದ್ದವರಂತೆ ಬೌಲಿಂಗ್ ದಾಳಿ ನಡೆಸಿ ಆಸೀಸ್ ಬ್ಯಾಟರ್‌ಗಳನ್ನು ಪೆವಿಲಿಯನ್‌ಗಟ್ಟುವಲ್ಲಿ ಯಶಸ್ವಿಯಾದರು. ಆಸೀಸ್ 181 ರನ್‌ಗೆ ಆಲೌಟ್ ಆಯಿತು. ಅಪಾಯಕಾರಿ ಸ್ಮಿತ್(33) ವಿಕೆಟ್ ಪ್ರಸಿದ್ಧ್ ಪಾಲಾದರೆ, ಟ್ರಾವಿಸ್ ಹೆಡ್(4) ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು.

96 ರನ್‌ಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಆಸೀಸ್‌ಗೆ ನೆರವಾದದ್ದು ಚೊಚ್ಚಲ ಪಂದ್ಯವನ್ನಾಡಿದ ವೆಬ್‌ಸ್ಟರ್. ಭಾರತೀಯ ಬೌಲರ್‌ಗಳ ದಾಳಿಗೆ ಕೆಲಕಾಲ ತಡೆಯೊಡ್ಡಿ ನಿಂತ ಅವರು, 57 ರನ್ ಗಳಿಸಿ ಚೊಚ್ಚಲ ಪಂದ್ಯದಲ್ಲೇ ಅರ್ಧಶತಕ ಬಾರಿಸಿದ ಸಾಧನೆ ಮಾಡಿದರು. ಟ್ರಾವಿಸ್ ಹೆಡ್ 21 ರನ್ ಬಾರಿಸಿದರು. ಭಾರತ ಪರ ಸಿರಾಜ್(51 ಕ್ಕೆ 3), ಪ್ರಸಿದ್ಧ್ ಕೃಷ್ಣ(42 ಕ್ಕೆ 3), ನಿತೀಶ್ ರೆಡ್ಡಿ(33ಕ್ಕೆ 2), ಬುಮ್ರಾ (33 ಕ್ಕೆ 2) ವಿಕೆಟ್ ಕಿತ್ತರು.

ಪಂತ್ ದಾಖಲೆ

ಬಿರುಸಿನ ಅರ್ಧಶತಕ ಬಾರಿಸಿದ ಪಂತ್ 50 ವರ್ಷದ ಬಳಿಕ ಆಸ್ಟ್ರೇಲಿಯಾದಲ್ಲಿ ಅತಿ ವೇಗದ ಅರ್ಧಶತಕ ಸಿಡಿಸಿದ ವಿಶ್ವದ ಮೊದಲ ಬ್ಯಾಟರ್ ಎನಿಸಿಕೊಂಡರು. ಇದಕ್ಕೂ ಮುನ್ನ ಈ ದಾಖಲೆ ಇಂಡೀಸ್‌ನ ಮಾಜಿ ಆಟಗಾರ ರಾಯ್ ಫ್ರೆಡೆರಿಕ್ಸ್ ಹೆಸರಿನಲ್ಲಿತ್ತು. ಅವರು 1975ರಲ್ಲಿ ಪರ್ತ್‌ನಲ್ಲಿ 33 ಎಸೆತಗಳಿಂದ ಅರ್ಧಶತಕ ಬಾರಿಸಿದ್ದರು.

ಪಂತ್ ಬಿರುಸಿನ ಬ್ಯಾಟಿಂಗ್: 4 ರನ್ ಮುನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್ ಆರಂಭಿಸಿದ ಭಾರತ ಆರಂಭಿಕ ಹಂತದಲ್ಲಿ ಉತ್ತಮವಾಗಿಯೇ ಬ್ಯಾಟಿಂಗ್ ನಡೆಸಿತು. ಸ್ಟಾರ್ಕ್ ಎಸೆದ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಆಕ್ರಮಣಕಾರಿ ಬ್ಯಾಟಿಂಗ್ ನಡೆಸಿದ ಯಶಸ್ವಿ ಜೈಸ್ವಾಲ್ ಹ್ಯಾಟ್ರಿಕ್ ಸಹಿತ 4 ಬೌಂಡರಿ ಬಾರಿಸಿ ಒಂದೇ ಓವರ್‌ನಲ್ಲಿ 16 ರನ್ ಕಸಿದರು. ರಾಹುಲ್ ಕೂಡ ಮತ್ತೊಂದು ತುದಿಯಲ್ಲಿ ಉತ್ತಮ ಸಾಥ್ ನೀಡಿದರು. ಉತ್ತಮವಾಗಿ ಆಡುತ್ತಿದ್ದ ಈ ಜೋಡಿಯನ್ನು ಬೋಲ್ಯಾಂಡ್ ಬೇರ್ಪಡಿಸಿದರು. 13 ರನ್ ಗಳಿಸಿದ್ದ ರಾಹುಲ್‌ರನ್ನು ಕ್ಲೀನ್ ಬೌಲ್ಡ್ ಮಾಡಿದ ಬೆನಲ್ಲೇ ಮುಂದಿನ ಓವರ್‌ನಲ್ಲಿ ಯಶಸ್ವಿ ಜೈಸ್ವಾಲ್ ಅವರನ್ನೂ ಬೌಲ್ಡ್ ಮಾಡಿದರು. ಈ ಮೂಲಕ ಭಾರತಕ್ಕೆ ಅವಳಿ ಆಘಾತ ಕೊಟ್ಟರು, ಜೈಸ್ವಾಲ್ ಇನ್ನಿಂಗ್ಸ್ 22 ರನ್‌ಗೆ ಕೊನೆಗೊಂಡಿತು.

ಆರಂಭಿಕರಿಬ್ಬರ ವಿಕೆಟ್ ಪತನಗೊಂಡ ಬಳಿಕ ಭಾರತದ ಬ್ಯಾಟಿಂಗ್ ನಾಟಕೀಯ ಕುಸಿಯ ಕಂಡಿತು. ಶುಭಮನ್ ಗಿಲ್(13) ವಿರಾಟ್ ಕೊಹ್ಲಿ(6), ನಿತೀಶ್ ರೆಡ್ಡಿ(4) ಮತ್ತೊಮ್ಮೆ ನಿರಾಸೆ ಮೂಡಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದು ತುದಿಯಲ್ಲಿ ಆಸೀಸ್ ಬೌಲರ್‌ಗಳನ್ನು ದಂಡಿಸಿದ ರಿಷಭ್ ಪಂತ್ ಕೇವಲ 29 ಎಸೆತಗಳಿಂದ ಅರ್ಧಶತಕ ಬಾರಿಸಿದರು. 33 ಎಸೆತ ಎದುರಿಸಿದ ಅವರು ಅಂತಿಮವಾಗಿ ಸೊಗಸಾದ 4 ಸಿಕ್ಸರ್ ಮತ್ತು 6 ಬೌಂಡರಿ ನೆರವಿನಿಂದ 61 ರನ್ ಗಳಿಸಿದರು. ಆಸ್ಟ್ರೇಲಿಯಾ ಪರ ಸ್ಕಾಟ್ ಬೋಲ್ಯಾಂಡ್ 42 ರನ್‌ಗೆ 4 ವಿಕೆಟ್ ಕಿತ್ತಿದ್ದಾರೆ.

ಆಸ್ಪತ್ರೆ ಸೇರಿದ ಬುಮ್ರಾ

ಹಂಗಾಮಿ ನಾಯಕ ಜಸ್‌ಪ್ರೀತ್ ಬುಮ್ರಾ ಶನಿವಾರದ ದಿನದಾಟದ ವೇಳೆ ಬೆನ್ನುನೋವಿನ ಸೆಳೆತಕ್ಕೆ ತುತ್ತಾಗಿ ಅರ್ಧದಲ್ಲೇ ಮೈದಾನ ತೊರೆದರು. 8 ಓವರ್ ಬೌಲಿಂಗ್ ದಾಳಿ ನಡೆಸಿದ ಬಳಿಕ ಬುಮ್ರಾ ಗಾಯಕ್ಕೆ ತುತ್ತಾದರು. ಬುಮ್ರಾ ಅನುಪಸ್ಥಿತಿಯಲ್ಲಿ ವಿರಾಟ್ ಕೊಹ್ಲಿ ತಂಡವನ್ನು ಮುನ್ನಡೆಸಿದರು. ಬುಮ್ರಾ ಗಾಯ ಟೀಮ್ ಇಂಡಿಯಾಗೆ ಆತಂಕ ತಂದಿದ್ದು ಭಾನುವಾರದ ದಿನದಾಟದಲ್ಲಿ ಅವರು ಆಡುವ ಕುರಿತು ಯಾವುದೇ ನಿಶ್ಚಿತತೆ ಇಲ್ಲ.

ದಕ್ಷಿಣ ಆಫ್ರಿಕಾ ಪರ ಅತ್ಯಂತ ವೇಗದ ದ್ವಿಶತಕ
ದೇಶದ ಪರ ಗರಿಷ್ಠ ವೈಯಕ್ತಿಕ ಮೊತ್ತ

ದ. ಆಫ್ರಿಕಾದ ರಯಾನ್ ರಿಕೆಲ್ಟನ್ ದ್ವಿಶತಕ

ಕೇಪ್‌ಟೌನ್: ಪಾಕಿಸ್ತಾನ ವಿರುದ್ಧ ಎರಡನೇ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡದ ಓಪನಿಂಗ್ ಬ್ಯಾಟ್ಸ್‌ಮನ್ ರಯಾನ್ ರಿಕೆಲ್ಟನ್ ದ್ವಿಶತಕ ಬಾರಿಸಿದ್ದಾರೆ. ತಮ್ಮ ಚೊಚ್ಚಲ ದ್ವಿಶತಕವನ್ನು ಪೂರ್ಣಗೊಳಿಸಲು ಅವರು 266 ಎಸೆತಗಳನ್ನು ತೆಗೆದುಕೊಂಡಿದ್ದಾರೆ, ಆ ಮೂಲಕ ಟೆಸ್ಟ್ ಕ್ರಿಕೆಟ್‌ನಲ್ಲಿ ವೇಗದ ದ್ವಿಶತಕ ಸಿಡಿಸಿದ ದಕ್ಷಿಣ ಆಫ್ರಿಕಾದ ಎರಡನೇ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ.

ಹರಿಣ ಪಡೆಯ ಪರ ವೇಗದ ದ್ವಿಶತಕ ಸಿಡಿಸಿದ ಬ್ಯಾಟ್ಸ್‌ಮನ್ ಎಂಬ ದಾಖಲೆ ಮಾಜಿ ನಾಯಕ ಗ್ರೇಮ್ ಸ್ಮಿತ್ ಹೆಸರಿನಲ್ಲಿದೆ. ಅವರು 2008ರಲ್ಲಿ ಬಾಂಗ್ಲಾದೇಶ ವಿರುದ್ಧ 238 ಎಸೆತಗಳಲ್ಲಿ ದ್ವಿಶತಕವನ್ನು ಸಿಡಿಸಿದ್ದರು. ಬೆನ್ ಸ್ಟೋಕ್ಸ್ (258 ರನ್) ಹಾಗೂ ಹಾಶಿಮ್ ಆಮ್ಲಾ (2021) ಬಳಿಕ ದಕ್ಷಿಣ ಆಫ್ರಿಕಾ ಟೆಸ್ಟ್‌ನಲ್ಲಿ ಶತಕ ಸಿಡಿಸಿದ ಮೊದಲ ಬ್ಯಾಟ್ಸ್‌ಮನ್ ಎಂಬ ಕೀರ್ತಿಗೂ ರಿಕೆಲ್ಟನ್ ಭಾಜನರಾಗಿದ್ದಾರೆ.

ದ.ಆಫ್ರಿಕಾ ನೆಲದಲ್ಲಿ 19ನೇ ದ್ವಿಶತಕ: ದಕ್ಷಿಣ ಆಫ್ರಿಕಾ ನೆಲದಲ್ಲಿ ಇದು 19ನೇ ದ್ವಿಶತಕವಾ ಗಿದೆ. ಕೇಪ್ ಟೌನ್‌ನ ನ್ಯೂಲೆಂಡ್ಸ್‌ನಲ್ಲಿ ಏಳು ದ್ವಿಶತಕಗಳು ಮೂಡಿ ಬಂದಿವೆ. ಆ ಮೂಲಕ ಅತಿ ಹೆಚ್ಚು ದ್ವಿಶತಕಗಳು ಮೂಡಿ ಬಂದಿರುವ

ದಕ್ಷಿಣ ಆಫ್ರಿಕಾದ ಕ್ರೀಡಾಂಗಣ ಎಂಬ ಖ್ಯಾತಿಗೆ ನ್ಯೂಲೆಂಡ್ಸ್ ಭಾಜನವಾಗಿದೆ. ಪಾಕಿಸ್ತಾನದ ಎದುರು ದಕ್ಷಿಣ ಆಫ್ರಿಕಾ ಬ್ಯಾಟ್ಸ್ ಮನ್ ಗಳಿಸಿದ ನಾಲ್ಕನೇ ದ್ವಿಶತಕ ಇದಾಗಿದೆ. ಮಾಜಿ ನಾಯಕ ಎಬಿ ಡಿ ವಿಲಿಯರ್ಸ್ ಹಾಗೂ ಹರ್ಷಲ್ ಗಿಬ್ಸ್ ಕೂಡ ದ್ವಿಶತಕವನ್ನು ಬಾರಿಸಿದ್ದಾರೆ.

ಪಾಕಿಸ್ತಾನ ಎದುರು ಎರಡನೇ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಒಟ್ಟು 343 ಎಸೆತಗಳನ್ನು ಎದುರಿಸಿದ ರಯಾನ್ ರಿಕೆಲ್ಟನ್ ಅವರು ಮೂರು ಸಿಕ್ಸರ್ ಹಾಗೂ 29 ಬೌಂಡರಿಗಳನ್ನು ಬಾರಿಸಿದರು. ಆ ಮೂಲಕ 259 ರನ್‌ಗಳನ್ನು ಕಲೆ ಹಾಕಿ ತಮ್ಮ ಇನಿಂಗ್ಸ್ ಅನ್ನು ಮುಗಿಸಿದರು. ಇದು ದಕ್ಷಿಣ ಆಫ್ರಿಕಾ ಪರ ಟೆಸ್ಟ್ ಕ್ರಿಕೆಟ್‌ನಲ್ಲಿ ದಾಖಲಾದ ಅತ್ಯಂತ ಗರಿಷ್ಠ ವೈಯಕ್ತಿಕ ಮೊತ್ತವಾಗಿದೆ. ಇದಕ್ಕೂ ಮುನ್ನ ಗ್ರೇಮ್ ಸ್ಮಿತ್ 2013ರಲ್ಲಿ 234 ರನ್‌ಗಳನ್ನು ಸಿಡಿಸಿದ್ದರು.

ಹೊಸ ವರ್ಷದ ದ್ವಿಶತಕದ ವಿಶೇಷತೆ

ರಯಾನ್ ರಿಕೆಲ್ಟನ್ ಪಾಲಿಗೆ ಇದು ಅತ್ಯಂತ ಮಹತ್ವದ ದ್ವಿಶತಕವಾಗಿದೆ. ಏಕೆಂದರೆ, ಚೊಚ್ಚಲ ದ್ವಿಶತಕಕ್ಕೆ ಅವರ ಕುಟುಂಬ ಸದಸ್ಯರು ಕೂಡ ಸಾಕ್ಷಿಯಾಗಿದ್ದರು ಎಂಬುದು ಇಲ್ಲಿನ ವಿಶೇಷ. ದ್ವಿಶತಕ ಸಿಡಿಸಿದ ಬಳಿಕ ರಯಾನ್ ರಿಕೆಲ್ಟನ್ ಅವರು ತಮ್ಮ ಹೆಲ್ಮೆಟ್ ತೆಗೆದು ಬ್ಯಾಟ್ ಮೇಲೆತ್ತಿ ಸಂಭ್ರಮಿಸಿದರು. ಈ ವೇಳೆ ಗ್ಯಾಲರಿಯಲ್ಲಿ ಕುಳಿತಿದ್ದ ಅವರ ತಾಯಿ ಸೇರಿದಂತೆ ಕುಟುಂಬದ ಸದಸ್ಯರು ಎದ್ದು ನಿಂತು ಸಂಭ್ರಮಿಸಿದರು. 2025ರಲ್ಲಿ ಟೆಸ್ಟ್ ಕ್ರಿಕೆಟ್‌ನ ಮೊದಲ ದ್ವಿಶತಕ ಶತಕ ಇದಾಗಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ದ್ವಿಶತಕ ಸಿಡಿಸಿದ ದಕ್ಷಿಣ ಆಫ್ರಿಕಾದ ಓಪನಿಂಗ್ ಬ್ಯಾಟ್ಸ್‌ಮನ್‌ಗಳಾದ ಬೆಂಡನ್ ಕುರುಪ್ಪು, ಗ್ರೇಮ್ ಸ್ಮಿತ್ ಹಾಗೂ ಡೆವೋನ್ ಕಾನ್ವೇ ಅವರ ಜೊತೆಗೆ ಇದೀಗ ರಯಾನ್ ರಿಕೆಲ್ಟನ್ ಸೇರ್ಪಡೆಯಾಗಿದ್ದಾರೆ.

ಪರಸ್ಪರ ಅನ್‌ಫಾಲೋ ಮಾಡಿದ ದಂಪತಿ | ಬಿಡುಗಡೆಯಾಗದ ಅಧಿಕೃತ ಹೇಳಿಕೆ

ಚಹಾಲ್-ಧನಶ್ರೀ ದಾಂಪತ್ಯದಲ್ಲಿ ಬಿರುಕು?

ದೆಹಲಿ: ಟೀಂ ಇಂಡಿಯಾದ ಸ್ಟಾರ್ ಸ್ಪಿನ್ ಬೌಲರ್ ಯುಜುವೇಂದ್ರ ಚಹಾಲ್ ಮತ್ತು ಅವರ ಪತ್ನಿ ಧನಶ್ರೀ ವರ್ಮಾ ಅವರ ದಾಂಪತ್ಯ ಜೀವನದಲ್ಲಿ ಬಿರುಕು ಮೂಡಿದೆ ಎಂಬ ಸುದ್ದಿ ಕಳೆದ ಕೆಲವು ದಿನಗಳಿಂದ ಕೇಳಿಬರುತ್ತಿದೆ. ಅಲ್ಲದೆ ಈ ಇಬ್ಬರೂ ಇಷ್ಟರಲ್ಲೇ ವಿಚ್ಛೇದನವನ್ನು ಪಡೆಯಲಿದ್ದಾರೆ ಎಂಬ ಊಹಾಪೋಹಗಳು ಕೂಡ ಎಲ್ಲೆಡೆ ಹಬ್ಬಿದೆ. ಇದೀಗ ಈ ಊಹಾಪೋಹಗಳಿಗೆ ಪುಷ್ಠಿ ನೀಡುವ ಘಟನೆ ನಡೆದಿದ್ದು, ಚಹಾಲ್ ಮತ್ತು ಧನಶ್ರೀ ತಮ್ಮ ಅಧಿಕೃತ ಸೋಶಿಯಲ್ ಮೀಡಿಯಾ ಖಾತೆ ಇನ್ಸ್‌ಟಾಗ್ರಾಮ್‌ನಲ್ಲಿ ಪರಸ್ಪರ ಅನ್‌ಫಾಲೋ ಮಾಡಿದ್ದಾರೆ.

ಧನಶ್ರೀ ಅವರೊಂದಿಗಿನ ಎಲ್ಲಾ ಫೋಟೋ ಹಾಗೂ ವಿಡಿಯೋಗಳನ್ನು ಚಹಾಲ್ ಡಿಲೀಟ್ ಮಾಡಿದ್ದಾರೆ. ಇದನ್ನು ನೋಡಿದ ಅಭಿಮಾನಿಗಳಿಗೆ ಈ ಇಬ್ಬರೂ ಇಷ್ಟರಲ್ಲೇ ಬೇರಾಗಲಿದ್ದಾರೆ ಎಂಬುದು ಖಾತ್ರಿಯಾದ್ದಂತಾಗಿದೆ. ಆದರೆ ವಿಚ್ಛೇದನಕ್ಕೆ ಸಂಬಂಧಿಸಿದಂತೆ ಚಹಾಲ್ ಆಗಲಿ ಅಥವಾ ಧನಶ್ರೀ ಆಗಲಿ ಇದುವರೆಗೆ ಯಾವುದೇ ಹೇಳಿಕೆ ನೀಡಿಲ್ಲ.

ಈ ಮೊದಲು ಕೂಡ ಚಹಾಲ್ ಮತ್ತು ಧನಶ್ರೀ ವರ್ಮಾ

ವಿಚ್ಛೇದನದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿದ್ದವು. ಸಾಮಾಜಿಕ ಜಾಲತಾಣಗಳಲ್ಲಿ ಇವರಿಬ್ಬರ ಬಗ್ಗೆ ಸಾಕಷ್ಟು ವದಂತಿಗಳು ಹಬ್ಬಿದ್ದವು. ಆ ಸಮಯದಲ್ಲಿ, ಯುಜುವೇಂದ್ರ ಅವರು ವಿಚ್ಛೇದನದ ವದಂತಿಗಳನ್ನು ತಳ್ಳಿಹಾಕುವ ಟಿಪ್ಪಣಿಯನ್ನು ಪೋಸ್ಟ್ ಮಾಡಿದ್ದರು. ವದಂತಿಗಳನ್ನು ನಂಬಬೇಡಿ ಅಥವಾ ಹರಡಬೇಡಿ ಎಂದು ಅಭಿಮಾನಿಗಳ ಬಳಿ ಮನವಿ ಮಾಡಿದ್ದರು.

ಈ ವರ್ಷದ ಮೊದಲ ವಿಚ್ಛೇದನ

ಈಗ ಹರಿದಾಡುತ್ತಿರುವ ಸುದ್ದಿ ನಿಜವಾದರೆ, ಈ ವರ್ಷ ವಿಚ್ಛೇದನ ಪಡೆದ ಮೊದಲ ಸ್ಟಾರ್ ಜೋಡಿ ಇದಾಗಲಿದೆ. ಕಳೆದ ವರ್ಷ ಟೀಂ ಇಂಡಿಯಾದ ಸ್ಟಾರ್ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಹಾಗೂ ನತಾಶಾ ದಂಪತಿಗಳು ವಿಚ್ಛೇದನ ಪಡೆದಿದ್ದರು. ಮಾಜಿ ಕ್ರಿಕೆಟಿಗ ಶಿಖರ್ ಧವನ್ ಕೂಡ ತಮ್ಮ ಮಡದಿಯಿಂದ ಬೇರೆಯಾಗಿದ್ದರು. ಇವರಲ್ಲದೆ ಸಾನಿಯಾ ಮಿರ್ಜಾ ಹಾಗೂ ಶೋಯೆಬ್ ಮಲ್ಲಿಕ್ ಕೂಡ ವಿಚ್ಛೇದನ ಪಡೆದಿದ್ದರು.

ಆಸ್ಟ್ರೇಲಿಯನ್ ಓಪನ್: ನೊವಾಕ್ ಸಿದ್ಧತೆ ಹಿನ್ನಡೆ

ಬ್ರಿಸ್ಬೇನ್: ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯನ್ ಓಪನ್ ಸಿದ್ಧತೆಯ ಹಾದಿಯಲ್ಲಿ ಹಿನ್ನಡೆ ಕಂಡರು. ವರ್ಷದ ಮೊದಲ ಗ್ರ್ಯಾನ್ ಸ್ಲಾಮ್ ಟೂರ್ನಿಗೆ ಪೂರ್ವಭಾವಿಯಾಗಿ ನಡೆಯುತ್ತಿರುವ ಬ್ರಿಸ್ಬೇನ್ ಇಂಟರ್ ನ್ಯಾಷನಲ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಅವರು ಅಮೆರಿಕದ ಲಂಬೂಜಿ ರೀಲಿ ಒಪೆಲ್ಕಾ ಎದುರು ನೇರ ಸೆಟ್‌ಗಳ ಸೋಲು ಕಂಡರು. 27 ವರ್ಷದ ಒಪೆಲ್ಕಾ ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ 17ನೇ ಸ್ಥಾನದಲ್ಲಿದ್ದರು. ಅವರು ಸೆಮಿಫೈನಲ್‌ನಲ್ಲಿ ಮತ್ತೊಬ್ಬ ಪ್ರಬಲ ಸರ್ವ್ ಆಟಗಾರ ಫ್ರಾನ್ಸ್‌ನ ಗಿಯೊವನ್ನಿ ಅವರನ್ನು ಎದುರಿಸಲಿದ್ದಾರೆ.

ವಾಸುದೇವ.ಆರ್.ದೊಡ್ಡಹೆಜ್ಜಾಜಿ ನಿರ್ಮಿಸಿರುವ, ಅಥಣಿ ಚಿತ್ರದ ಬಾರೆ ಬಾರೆ... ಹಾಡು ಬಿಡುಗಡೆಯಾಗಿದೆ. ರಾಜು ಚಿತ್ರಪುರ ಬರೆದಿರುವ ಈ ಹಾಡಿಗೆ ಸ್ವಾತಿ ಶಂಕರ್ ಹಾಗೂ ಹರ್ಸಿವ್ ಬಘೀರ ದನಿಯಾಗಿದ್ದು, ಹರ್ಷ ಕುಗೋಡು ಸಂಗೀತ ಸಂಯೋಜಿಸಿದ್ದಾರೆ. ಎಂ.ಸಮರ್ಥ್ ನಿರ್ದೇಶನ ಮಾಡಿದ್ದು, ನಾಯಕನಾಗಿಯೂ ನಟಿಸಿದ್ದಾರೆ. ಮಧು ಈ ಚಿತ್ರದ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ನಾಗೇಂದ್ರ ಅರಸ್, ಶೋಭರಾಜ್, ಭವ್ಯಾ ಯತಿರಾಜ್, ಬಲರಾಜವಾಡಿ, ರಾಕೇಶ್ ಪೂಜಾರಿ, ಮೂರ್ತಿ, ವಿಷ್ಣುಪ್ರಿಯ, ಶ್ರೀನಿಧಿ, ಇಂದ್ರ ಕುಮಾರ್, ಸಿ.ಜಿ.ದಿಬ್ಬೂರು ಮುಂತಾದವರು ತಾರಾಗಣದಲ್ಲಿದ್ದಾರೆ. ರೈತಪರ ಕಾಳಜಿಯನ್ನು ಹೊಂದಿರುವ ಈ ಚಿತ್ರದಲ್ಲಿ ಲವ್, ಸಸ್ಪೆನ್ಸ್, ಕಾಮಿಡಿಯೂ ಬೆರೆತಿದೆ. ಅಭಯ್ ಖುಷಿ ಮೂವೀಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ. ಸಂದೀಪ್ ಹೊನ್ನಾಳಿ ಛಾಯಾಗ್ರಹಣ ಹಾಗೂ ಸುನಯ್ ಜೈನ್ ಸಂಕಲನ ಈ ಚಿತ್ರಕ್ಕಿದೆ. ತುಮಕೂರು, ಬೆಂಗಳೂರು, ರಾಮನಗರ ಹೊನ್ನಾವರ, ಸಕಲೇಶಪುರ ಮುಂತಾದ ಕಡೆ ಚಿತ್ರೀಕರಣ ನಡೆಸಲಾಗಿದೆ. ಊರಿನ ಹೆಸರೆ ಚಿತ್ರದ ಶೀರ್ಷಿಕೆಯಾಗಿರುವ ಅಥಣಿ ಚಿತ್ರಕ್ಕೆ ಧರಣಿ ಮಂಡಲ ಮಧ್ಯದೊಳಗೆ ಎಂಬ ಅಡಿಬರಹವಿದೆ. ಸದ್ಯ ಚಿತ್ರೀಕರಣ ಮುಕ್ತಾಯವಾಗಿದ್ದು ಶೀಘ್ರದಲ್ಲಿಯೇ ಸಿನಿಮಾವನ್ನು ತೆರೆಗೆ ತರಲು ಚಿತ್ರತಂಡ ಸಿದ್ಧತೆ ನಡೆಸಿದೆ.

ರಾಕ್ಷಸನಾದ ಪ್ರಜ್ವಲ್

ನಟ ಪ್ರಜ್ವಲ್ ದೇವರಾಜ್ ವಿಭಿನ್ನ ಅವತಾರದಲ್ಲಿ ನಟಿಸಿರುವ ರಾಕ್ಷಸ ಚಿತ್ರ ಶೀರ್ಷಿಕೆಯಲ್ಲಿ ಗಮನಸೆಳೆದಿದೆ. ಈ ಹಿಂದೆ ಎಂದು ಕಂಡಿರದ ಲುಕ್‌ನಲ್ಲಿ ಪ್ರಜ್ವಲ್ ಮಿಂಚಿದ್ದಾರೆ. ಟೈಟಲ್ ಕೇಳಿದಾಕ್ಷಣ ಇದು ಹಾರರ್ ಸಿನಿಮಾ ಎಂದು ಅನ್ನಿಸುತ್ತದೆ. ಆದರೆ ರಾಕ್ಷಸನಿಗೆ ಭಾವನಾತ್ಮಕ ಕಥೆಯ ಜತೆಗೆ ಟೈಮ್ ಲೂಪ್ ಕಾನ್ಸೆಪ್ಟ್ ಟಚ್ ನೀಡಲಾಗಿದೆ. ಮಮ್ಮಿ, ದೇವಕಿ ಚಿತ್ರಗಳನ್ನು ನಿರ್ದೇಶಿಸಿ ಪ್ರಸಿದ್ಧ ಪಡೆದಿರುವ ನಿರ್ದೇಶಕ ಲೋಹಿತ್ ಸಾರಥ್ಯದಲ್ಲಿ ರಾಕ್ಷಸ ಸಿದ್ಧವಾಗಿದ್ದು, ಕುತೂಹಲ ಹೆಚ್ಚಿಸಿದೆ.

ಚಿತ್ರೀಕರಣ ಮುಗಿಸಿರುವ ರಾಕ್ಷಸ, ಶಿವರಾತ್ರಿ ಹಬ್ಬದಂದು ಚಿತ್ರಮಂದಿರಗಳಲ್ಲಿ ದರ್ಶನ ಕೊಡಲಿದ್ದಾನೆ. ಪ್ರಜ್ವಲ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಶೋಭಾರಾಜ್, ವತ್ಸಲಾ ಮೋಹನ್, ಸಿದ್ಲಿಂಗು ಶ್ರೀಧರ್, ಆರ್ನಾ ರಾಥೋಡ್ ಸೇರಿದಂತೆ ಹಲವು ಕಲಾವಿದರು ಅಭಿನಯಿಸಿದ್ದಾರೆ. ರಾಮೋಜಿ ಫಿಲ್ಮಂ ಸಿಟಿಯಲ್ಲಿ ಚಿತ್ರದ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ರಾಮೇಶ್ವರಂ, ಗೋವಾ, ಬೆಂಗಳೂರಿನಲ್ಲಿ ಉಳಿದ ಭಾಗದ ಶೂಟಿಂಗ್ ನಡೆದಿದೆ. ಶಾನ್ವಿ ಎಂಟರ್‌ಟೇನ್‌ಮೆಂಟ್‌ನಲ್ಲಿ ಬಿ.ಎಸ್.ದೀಪು ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜೇಬಿನ್.ಪಿ.ಜೋಕಬ್ ಛಾಯಾಗ್ರಹಣ, ವಿನೋದ್ ಸಾಹಸ ನಿರ್ದೇಶನ, ವರುಣ್ ಉನ್ನಿ ಸಂಗೀತ ನಿರ್ದೇಶನ, ಅವಿನಾಶ್ ಬಸುತ್ಕರ್ ಹಿನ್ನಲೆ ಸಂಗೀತ, ರವಿಚಂದ್ರನ್ ಸಂಕಲನ ರಾಕ್ಷಸ ಸಿನಿಮಾಕ್ಕಿದೆ.

ಗೋರ್ ಗಡ್ ಟೀಸರ್ ರಿಲೀಸ್

ವಿಭಿನ್ನ ಶೀರ್ಷಿಕೆಯ ಗೋರ್ ಗಡ್ ಚಿತ್ರದ ಚಿತ್ರೀಕರಣ ಭರದಿಂದ ಸಾಗಿದೆ. ಮೊದಲ ಹಂತದ ಶೂಟಿಂಗ್ ಮುಗಿಸಿರುವ ಚಿತ್ರತಂಡ, ಈಗ ಟೀಸರ್ ರಿಲೀಸ್ ಮಾಡಿದೆ. ಜೆ.ಕೆ.ಶಶಿಕುಮಾರ್ ಸಿನಿಮಾಕ್ಕೆ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದು, ಡಿಎಸ್‌ಕೆ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಡಿಎಸ್‌ಕೆ.ಧನುಷ್ ನಾಯ್ಡು ನಿರ್ಮಾಣ ಮಾಡಿದ್ದಾರೆ. ತನು ನಾಯಕಿ ನಟಿಸಿದ್ದು, ಉಳಿದಂತೆ ಗೀತಾ ಮಿಲನ್, ಭವ್ಯಾ ಪ್ರವೀಣ್, ವಿಜಯ್ ಕುಮಾರ್, ಸೂಪರ್ ಕಮಲ್, ನಾರಾಯಣ್ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳಿದ್ದು ಎಲ್. ಕುಬೇರ್ ನಾಯಕ್ ಸಾಹಿತ್ಯ ರಚಿಸಿ, ಸಂಗೀತ ಸಂಯೋಜಿಸಿದ್ದಾರೆ. ಧನ್‌ಪಾಲ್ ಛಾಯಾಗ್ರಹಣ, ರವಿ ರಾಥೋಡ್ ಸಂಕಲನ ನಿರ್ವಹಿಸುತ್ತಿದ್ದಾರೆ. ಗೋರ್ ಅಂದರೆ ಸಮುದಾಯ. ಅವರು ಸತ್ಯ, ನ್ಯಾಯ, ನೀತಿಗೆ ತಲೆ ಬಾಗುತ್ತಾರೆ. ಗಡ್ ಎನ್ನುವುದು ಸಾಮ್ರಾಜ್ಯ. ಬಂಜಾರ ಜನಾಂಗದ ಆಚರಣೆ, ಆಚಾರ ವಿಚಾರ, ಲಂಬಾಣಿಗಳ ಉಡುಗೆ ತೊಡುಗೆ, ಪೂಜಿಸುವ ವಿಧಾನ, ಎಲ್ಲೂ ಸಿಗದಂತ ಆಭರಣವನ್ನು ತೊಡುತ್ತಾರೆ. ಆದರೆ ಆಧುನಿಕತೆಯ ಭರಾಟೆಯಲ್ಲಿ ಇವೆಲ್ಲವೂ ನಶಿಸಿ ಹೋಗುತ್ತಿದೆ. ವಿದ್ಯಾವಂತರು ಸಿಟಿಗೆ ಬರುತ್ತಿದ್ದಾರೆ. ಬಂಜಾರ ಜನಾಂಗದ ಆಚಾರ, ವಿಚಾರವನ್ನು ಉಳಿಸಿಬೆಳೆಸಬೇಕು ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ ಎಂದು ನಿರ್ದೇಶಕ ಶಶಿಕುಮಾರ್ ಹೇಳಿದರು. ಹೂವಿನ ಹಡಗಲಿ, ದಾವಣಗೆರೆ, ಚಿತ್ರದುರ್ಗ, ಹೊಸದುರ್ಗ, ಹೊಸೂರು ಕಡೆಗಳಲ್ಲಿ ಜನವರಿ ಎರಡನೇ ವಾರದಿಂದ ಚಿತ್ರೀಕರಣ ಶುರು ಮಾಡಲು ಚಿತ್ರತಂಡ ಯೋಜನೆ ರೂಪಿಸಿದೆ. ಕನ್ನಡ ಸೇರಿದಂತೆ ತೆಲುಗು, ತಮಿಳು, ಲಂಬಾಣಿ, ಮರಾಠಿ ಭಾಷೆಗಳಲ್ಲಿ ಸಿನಿಮಾ ನಿರ್ಮಾಣವಾಗಲಿದೆ.

ಯುಗಾದಿಗೆ ಗ್ಯಾಂಗ್ಸ್ ಆಫ್ ಯುಕೆ



ಡೆಡ್ಲಿ ಸೋಮ, ಮಾದೇಶ ಖ್ಯಾತಿಯ ನಿರ್ದೇಶಕ ರವಿ ಶ್ರೀವತ್ಸ ನಿರ್ಮಿಸಿ, ನಿರ್ದೇಶಿಸಿರುವ ಗ್ಯಾಂಗ್ಸ್ ಆಫ್ ಯುಕೆ ರಿಲೀಸ್‌ಗೆ ರೆಡಿಯಾಗಿದ್ದು, ಯುಗಾದಿ ಸಂದರ್ಭದಲ್ಲಿ ತೆರೆಗೆ ಬರಲಿದೆ. ರವಿ ಶ್ರೀವತ್ಸ ಡೆಡ್ಲಿ ಆರ್ಟ್ಸ್ ಎಂಬ ಹೊಸ ನಿರ್ಮಾಣ ಸಂಸ್ಥೆಯನ್ನು ಸ್ಥಾಪಿಸಿ, ಆ ಮೂಲಕ ಗ್ಯಾಂಗ್ಸ್ ಆಫ್ ಯುಕೆ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಜತೆಗೆ ಈ ಚಿತ್ರದಲ್ಲಿ ಸಾಕಷ್ಟು ಹೊಸ ಪ್ರತಿಭೆಗಳಿಗೂ ಅವಕಾಶ ನೀಡಿದ್ದಾರೆ. ರಕ್ತ ತನ್ನ ಕುರುಹನ್ನು ಬಿಟ್ಟು ಹೋಗುತ್ತದೆ. ಜಿದ್ದು ಒಬ್ಬರಿಂದ ಒಬ್ಬರಿಗೆ ಟ್ರಾವೆಲ್ ಆಗುತ್ತದೆ ಅನ್ನುವ ಕಾನ್ಸೆಪ್ಟ್ ಮೇಲೆ ಈ ಚಿತ್ರದ ಕಥೆ ಸಾಗುತ್ತದೆ. ಬಾಗಲ ಕೋಟೆಯ ಪಿಲ್ಲಾರಿ ಫಾಲ್ಸ್‌ನಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಕಥೆ ಹೆಣೆದು ತೆರೆಯಲ್ಲಿ ಕಟ್ಟಿಕೊಡಲಾಗಿದೆ. ಉತ್ತರ ಕರ್ನಾಟಕದ ಹತ್ಯಾಕಾಂಡ ಎಂಬ ಟ್ಯಾಗ್ ಲೈನ್ ಈ ಚಿತ್ರಕ್ಕಿದೆ. ಒರಟ ಪ್ರಶಾಂತ್, ಜ್ಯೋತಿ ಶೆಟ್ಟಿ, ಕೋಟೆ ಪ್ರಭಾಕರ್, ಪದ್ಮಾ ವಾಸಂತಿ, ಮುನಿ ಹೀಗೆ ದಿಗ್ಗಜ ಕಲಾವಿದರ ದಂಡೇ ಚಿತ್ರದಲ್ಲಿದೆ. ಕೆವಿ. ರಾಜು ಅವರ ಪುತ್ರ ಅಮೋಘ್ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸೋನು ಉಪಾಧ್ಯ, ಪ್ರವೀಣ್, ಉಗ್ರಂ ರೆಡ್ಡಿ, ಸತ್ಯ, ಧಿಲ್ಲಾನ್, ನವೀನ್, ಪ್ರಜ್ವಲ್ ಮಸ್ಕಿ, ಉಮೇಶ್, ವಿಕಾಸ್, ಮತ್ತಿತರರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ಒಟ್ಟು ಒಂಬತ್ತು ಹಾಡುಗಳಿದ್ದು, ವಿಶೇಷವಾಗಿ ಶಿಶುನಾಳ ಷರೀಫರ ಕೆಲ ಗೀತೆಗಳನ್ನು ಬಳಸಿಕೊಳ್ಳಲಾಗಿದೆ.

ಆ್ಯಕ್ಷನ್‌ನಲ್ಲಿ ಗೇಮ್ ಚೇಂಜರ್ ಅಬ್ಬರ

ರಾಮ್ ಚರಣ್ ಹಾಗೂ ಆರ್. ಶಂಕರ್ ಕಾಂಬಿನೇಷನ್‌ನಲ್ಲಿ ಸಿದ್ಧವಾಗಿರುವ ಗೇಮ್ ಚೇಂಜರ್ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ಖ್ಯಾತ ನಿರ್ದೇಶಕ ರಾಜಮೌಳಿ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಗೇಮ್ ಚೇಂಜರ್ ಆಗಿರುವ ರಾಮ್ ಚರಣ್ ಡಬಲ್ ಶೇಡ್‌ನಲ್ಲಿ ಮಿಂಚಿದ್ದಾರೆ. ರಾಜಕಾರಣಿಯಾಗಿ, ಐಎಎಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಐಎಎಸ್ ಅಧಿಕಾರಿಯಾಗಿ ರಾಜಕೀಯದಲ್ಲಿ ನಡೆಯುವ ಭ್ರಷ್ಟಾಚಾರದ ವಿರುದ್ಧ ರಾಮ್ ಹೇಗೆ ಹೋರಾಟ ಮಾಡುತ್ತಾರೆ ಅನ್ನೋದನ್ನು ಟ್ರೇಲರ್‌ನಲ್ಲಿ ರೋಚಕವಾಗಿ ಕಟ್ಟಿಕೊಡಲಾಗಿದೆ. ಕಿಯಾರಾ ಅಡ್ವಾಣಿ ನಾಯಕಿಯಾಗಿ ನಟಿಸಿದ್ದು, ಉಳಿದಂತೆ ಅಂಜಲಿ, ಎಸ್. ಜೆ.ಸೂರ್ಯ, ಶ್ರೀಕಾಂತ್, ಸುನೀಲ್, ಸಮುದ್ರಕನಿ ಮತ್ತು ಜಯರಾಮ್ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಗೇಮ್ ಚೆಂಜರ್, ಆರ್‌ಆರ್‌ಆರ್ ಸಿನಿಮಾ ಬಳಿಕ ತೆರೆಗೆ ಬರುತ್ತಿರುವ ಸಿನಿಮಾವಾಗಿದೆ. ಹಾಗಾಗಿ ಚಿತ್ರದ ಬಗ್ಗೆ ಅಪಾರ ನಿರೀಕ್ಷೆಯೂ ಇದೆ. ತಮಿಳಿನ ಖ್ಯಾತ ನಿರ್ದೇಶಕ ಶಂಕರ್, ಗೇಮ್ ಚೇಂಜರ್‌ಗೆ ಆಕ್ಷನ್ ಕಟ್ ಹೇಳಿದ್ದು, ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಲು ಪ್ರಮುಖ ಕಾರಣವಾಗಿದೆ. ಹೈಬಜೆಟ್‌ನ ಈ ಸಿನಿಮಾ ಅದ್ದೂರಿಯಾಗಿ ಮೂಡಿಬಂದಿದ್ದು, ಶ್ರೀವೆಂಕಟೇಶ್ವರ ಕ್ರಿಯೇಷನ್ಸ್ ಮತ್ತು ಜೀ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ದಿಲ್ ರಾಜು ಮತ್ತು ಸಿರಿಶ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಾಯಿ ಮಾಧವ್ ಬುರ್ರಾ ಸಂಭಾಷಣೆ, ಎಸ್ ಥಮನ್ ಸಂಗೀತ ನಿರ್ದೇಶನ, ಎಸ್. ತಿರುನಾವುಕ್ಕರಸು ಛಾಯಾಗ್ರಹಣ ಈ ಚಿತ್ರಕ್ಕಿದೆ. ಅನ್ಬರಿವ್ ಸಾಹಸ ನಿರ್ದೇಶನ ಮಾಡಿದ್ದು, ಪ್ರಭುದೇವ, ಗಣೇಶ್ ಆಚಾರ್ಯ, ಪ್ರೇಮ್ ರಕ್ಷಿತ್, ಬಾಸ್ಕೊ ಮಾರ್ಟಿನ್, ಜಾನಿ ಮತ್ತು ಸ್ಯಾಂಡಿ ನೃತ್ಯ ನಿರ್ದೇಶನ ಮಾಡಿದ್ದಾರೆ. ಗೇಮ್‌ಚೆಂಜರ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ತೆಲುಗು ಕನ್ನಡ ಸೇರಿದಂತೆ ಪಂಚ ಭಾಷೆಗಳಲ್ಲಿ ನಿರ್ಮಾಣವಾಗಿದೆ. ಜನವರಿ 10 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ.

ವಿರಾಮ

ವಿಶ್ವವಾಣಿ
05.01.2025
ಭಾನುವಾರ

ಮೈಕೊರೆಯುವ ನೀರಿನಲ್ಲಿ ಈಜು ಸಾಹಸ!



» ಪ್ರಕಾಶ ಹೆಗಡೆ

ಹಿಮ ಶೀತಲ ನೀರಿನಲ್ಲಿ, ಪ್ರವಾಹಕ್ಕೆ ಎದುರಾಗಿ ಈಜುವ ಪ್ರೇರಣೆ ಮನುಷ್ಯನಲ್ಲಿ ಏಕೆ ಮೂಡುತ್ತದೆ? ಸಾವಿರಾರು ಅಡಿ ಎತ್ತರದ ಹಿಮಶಿಖರಗಳನ್ನು ಏರಲು ಉತ್ಸಾಹ ಮೂಡುವುದು ಹೇಗೆ? ಮರುಭೂಮಿಯಲ್ಲಿ ನೂರಾರು ಮೈಲು ಪಯಣಿಸುವ ಸಂಕಷ್ಟವನ್ನು ಎದುರಿಸಲು ಮನುಷ್ಯ ಏಕೆ ಕಾತುರನಾಗುತ್ತಾನೆ? ಸಾಹಸವೆಂದರೇ ಹಾಗೆ! ಇಂತಹ ಹಲವಾರು ಸಾಹಸಗಳನ್ನು ಬೆನ್ನು ಹತ್ತಿದ ಮಾನವನು, ನಾಗರಿಕತೆಯನ್ನು ಕಟ್ಟಿದ, ಹೊಸ ಖಂಡಗಳನ್ನು ಸಂಶೋಧಿಸಿದ. ಅಪಾಯದ ಸಂಭಾವ್ಯತೆ ಇದ್ದರೂ ಪದೇ ಪದೇ ಸಾಹಸ ಯಾತ್ರೆ ಕೈಗೊಳ್ಳಲು ಮನುಷ್ಯನನ್ನು ಉದ್ದೀಪನಗೊಳಿಸುವಂತಹ ಶಕ್ತಿ ಅದಾವುದು! ಇಂಗ್ಲಿಷ್ ಕಡಲ್ಗಾಲುವೆಯೂ ಸೇರಿದಂತೆ ಜಗತ್ತಿನ ಹಲವು ಪ್ರದೇಶಗಳಲ್ಲಿ ಈಜು ಸಾಹಸ ನಡೆಸಿರುವ ಕನ್ನಡಿಗರೊಬ್ಬರು, ಅಮೆರಿಕದ ಗೋಲ್ಡನ್ ಗೇಟ್ ಬಳಿ ತಾವು ನಡೆಸಿದ ಈಜು ಸಾಹಸದ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಆ ಮೂಲಕ, ಇಂತಹದೊಂದು ಸಾಹಸದ ಪರಿಕಲ್ಪನೆಯನ್ನು, ಪರಿಚಯವನ್ನು 'ವಿಶ್ವವಾಣಿ'ಯ ಓದುಗರಿಗೆ ಮಾಡಿಸಿದ್ದಾರೆ.

ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊ ಕೊಲ್ಲಿಯ ಎರಡು ವಿಶಿಷ್ಟ ಸ್ಥಳಗಳೆಂದರೆ 1907ರಲ್ಲಿ ನಿರ್ಮಾಣಗೊಂಡ, ಕೈದಿಗಳ ಬಂಧೀಖಾನೆಯಾದ ಅಲ್ಕಾಟ್ರಾಜ್ ಸಂಕೀರ್ಣ ಮತ್ತು 1937ರಲ್ಲಿ ಸಾರ್ವಜನಿಕರಿಗೆ ತೆರೆಯಲ್ಪಟ್ಟ ಗೋಲ್ಡನ್ ಗೇಟ್ ಸೇತುವೆ. ಮೊದಲನೆಯದು ಬಂಧನದ ಸಂಕೇತ; ಎರಡನೆಯದು ಸ್ವಾತಂತ್ರ್ಯದ ಸಂಕೇತ – ಇವೆರಡೂ ಎಲ್ಲರ ಅಚ್ಚುಮೆಚ್ಚಿನ ಪ್ರವಾಸೀ ತಾಣಗಳು. ಪ್ರತಿದಿನ ಸಾವಿರಾರು ಪ್ರವಾಸಿಗರು ಇವೆರಡರನ್ನು ವೀಕ್ಷಿಸುವುದು ಸಾಮಾನ್ಯ ದೃಶ್ಯ.

ಈ ಎರಡು ಪ್ರವಾಸಿ ತಾಣಗಳ ನಡುವಿನ ಅಂತರ ಮೂರು ಮೈಲು. ಆದರೆ, ಅವುಗಳ ನಡುವೆ ಜಲರಾಶಿಯಿದೆ! ಅದೇ ಪೆಸಿಫಿಕ್ ಸಾಗರ. ಅದರ ನೀರು ಸದಾ ಥಂಡಿ, ಶೀತ ಮತ್ತು ಅಲೆಗಳ ಹೊಡೆತದಿಂದ ಕೂಡಿರುತ್ತದೆ. ನನಗೋ ಅಲ್ಲಿ ಈಜುವ ತುಡಿತ; ಜಗತ್ತಿನ ವಿವಿಧ ತಾಣಗಳಲ್ಲಿ ಈಜಿದ ಅನುಭವ ಮತ್ತು ಇಂಗ್ಲಿಷ್ ಚಾನೆಲ್ ಈಜಿದ ಅನುಭವವೂ ಇದೆ. ಆದ್ದರಿಂದ, ಈ ಮೂರು ಮೈಲು ದೂರವನ್ನು ಈಜುತ್ತಲೇ ಕ್ರಮಿಸುವ ಹೆಚ್ಚಾಯಿತು. ಇಲ್ಲಿ ಈಜುವುದು ಸವಾಲಿನ ಸಾಹಸ. ಸಾಹಸ-ಪ್ರವಾಸ ಮೇಳೈಸಿದ ಅನನ್ಯ ಸ್ವಾನುಭವದ ರಸಾಯನವಿದು.

ಹಾರ್ಸ್ ಶೂ ಕೊಲ್ಲಿಯಿಂದ ಗೋಲ್ಡನ್ ಗೇಟ್ ಸೇತುವೆಯನ್ನು ವೀಕ್ಷಿಸುತ್ತಿದ್ದೆ. ಮಂಜಿನ ಮುಸುಕನ್ನು ಹೊದೆದ ಸೇತುವೆಯು ಕಣ್ಣಾ ಮುಚ್ಚಾಲೆ ಆಡುತ್ತಿತ್ತು. ಸಮಯ ಬೆಳಗಿನ ಆರು; ಕತ್ತಲು ಇನ್ನೂ ಕರಗಿರಲಿಲ್ಲ. ನಾನು ಮತ್ತು ಸ್ಥಳೀಯ ಮೂವರು ಈಜುಗಾರರು ಪೆಸಿಫಿಕ್ ಮಹಾಸಾಗರದ ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿಯಲ್ಲಿ ಅಲ್ಕಾಟ್ರಾಜ್ ದ್ವೀಪದಿಂದ ಗೋಲ್ಡನ್ ಗೇಟ್ ಸೇತುವೆಯವರೆಗೆ ಈಜುವ ಸಾಹಸದ ಸಿದ್ಧತೆ ನಡೆಸಿದ್ದೆವು!

ಇಲ್ಲಿ ಈಜುವಿಕೆಯನ್ನು ಆಯೋಜಿಸುವ ಪೆಸಿಫಿಕ್ ಓಪನ್ ವಾಟರ್ ಈಜು ಕಂಪನಿಯ ಅಧಿಕಾರಿ, ಕ್ಯಾಪ್ಟನ್ ಸಿಲ್ವಿಯಾರವರು ನಮ್ಮ ಈಜಿನ ಉಸ್ತುವಾರಿ ನೋಡುಕೊಂಡಿದ್ದರು. ನನ್ನ ಹಿಂದಿನ ಈಜಿನ ಪ್ರಮಾಣಪತ್ರಗಳು ಈ ಸಾಹಸಕ್ಕೆ ನೋಂದಾಯಿಸಿಕೊಳ್ಳಲು ಅವಶ್ಯಕವಾಗಿತ್ತು. ನನ್ನ ಬಳಿ 2018 ಮತ್ತು 2023ರಲ್ಲಿ ಎರಡು ಬಾರಿ ಇಂಗ್ಲಿಷ್ ಚಾನೆಲ್ ಮತ್ತು 2019ರಲ್ಲಿ ಕ್ಯಾಟಲಿನಾ ಚಾನೆಲ್ ಈಜಿನ ಯಶಸ್ವಿನ ಪ್ರಮಾಣಪತ್ರಗಳಿವು. ಇಂಗ್ಲಿಷ್ ಚಾನೆಲ್ ಅಟ್ಲಾಂಟಿಕ್ ಮಹಾಸಾಗರದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನ ಮಧ್ಯವಿರುವ 34 ಕಿ.ಮೀ. ಅಗಲವಿರುವ ಕೊಲ್ಲಿ. ಅಮೇರಿಕಾದ ಕ್ಯಾಟಲಿನಾ ಚಾನೆಲ್, ಪೆಸಿಫಿಕ್ ಮಹಾಸಾಗರದ ಕ್ಯಾಟಲಿನಾ ದ್ವೀಪದಿಂದ ಲಾಸ್ ಏಂಜಲೀಸ್ ಕರಾವಳಿಯವರೆಗಿನ 32 ಕಿ.ಮೀ. ಕೊಲ್ಲಿ. ಈ ಮ್ಯಾರಥಾನ್ ಈಜುಗಳು ವಿಶ್ವದ ಮಹಾಸಾಗರದ ಈಜಿನ ಸವಾಲುಗಳಲ್ಲೇ ಕಠಿಣವೆಂದು ಪ್ರಖ್ಯಾತವಾಗಿರುವ ಸಾಹಸಗಳು. ಇವೆರಡನ್ನೂ ನಾನು ಈಜಿದ್ದು ನನ್ನ ಅಪರೂಪದ ನೆನಪುಗಳಲ್ಲಿ ಸೇರಿಕೊಂಡಿದೆ.

ಸ್ಯಾನ್ ಫ್ರಾನ್ಸಿಸ್ಕೋದ ಈ ಹೊಸ ಈಜು ಸಾಹಸದ ನಿಬಂಧನೆಗಳನ್ನು ಸಿಲ್ವಿಯಾ ಅವರು ವಿವರಿಸಿದರು. ಅವರ ಸ್ಪೀಡ್ ಬೋಟಿನಲ್ಲಿ ನಮ್ಮ ಈಜಿನ ಆರಂಭದ ಪಾಯಿಂಟ್–ಅಲ್ಕಾಟ್ರಾಜ್ ದ್ವೀಪದ ಕಡೆಗೆ ಸಾಗಿದೆವು. ಸ್ಯಾನ್‌ಫ್ರಾನ್ಸಿಸ್ಕೊ ಕೊಲ್ಲಿಯು ಹಡಗುಗಳು ಸಾಗುವ ಬಿಡುವಿಲ್ಲದ ಕಡಲ ಮಾರ್ಗ; ಬೆಳಿಗ್ಗೆ 6.45ಕ್ಕೆ ನಮ್ಮ ಈಜಿಗೆ ಪರವಾನಗಿ ದೊರಕಿತು. ಬೆಳಗಿನ ಮಂಜಿನ ಮುಸುಕಿನಲ್ಲಿ ಅಲ್ಕಾಟ್ರಾಜ್ ಸೆರೆಮನೆ ದ್ವೀಪದ ಸಮೀಪದಿಂದ ನಮ್ಮ ಮ್ಯಾರಥಾನ್ ಈಜನ್ನು ಆರಂಭಿಸಿದೆವು. ಕೊರೆಯುವ ನೀರು ಮೈಯನ್ನು ಸಾವಿರ ಸೂಜಿ ಗಳಿಂದ ಚುಚ್ಚಿದಂತೆಣಿಸಿತ್ತು. ಭಯಂಕರವಾಗಿ ಏರಿಳಿ ಯುತ್ತಿದ್ದ ಅಲೆಗಳ ವಿರುದ್ಧವಾಗಿ ಈಜಬೇಕಾದ್ದರಿಂದ ಹೆಚ್ಚಿನ ಸವಾಲಿನದ್ದಷ್ಟೇ ಅಲ್ಲದೇ ದುಸ್ತರವೂ ಆಗಿತ್ತು.

ಈಜು ಯಾಂತ್ರಿಕವಾಗಿ ಸಾಗಿತ್ತು. ದೇಹದ ಅಂಗಾಂಗ ಚಲನೆಯೊಂದಿಗೆ ಮನಸ್ಸು ಸಹ ಚುರುಕಾಗಿರಲು ಪ್ರಯತ್ನ ನಡೆಸಿತ್ತು. ಇಂತಹ ಈಜುಗಾರನ ಏಕಾಂಗಿತನವೇ ಅವನ ವೈರಿ. ಮನೋಸ್ಥೈರ್ಯ ಮತ್ತು ಏಕಾಗ್ರತೆಯೇ ಗೆಳೆಯ. ಸಾಗರದ ಈಜು ನಿಗೂಢ, ಸುಂದರ ಮತ್ತು ಭಯಾನಕ. ಎಷ್ಟೇ ಕಠಿಣವಾದರೂ, ಅಪಾಯಕಾರಿಯಾಗಿದ್ದರೂ ಈಜುಗಾರನನ್ನು ಪುನಃ ಇದೇ ಅನುಭವವನ್ನು ಅನುಭವಿಸಲು ಪ್ರೇರೇಪಿಸುತ್ತದೆ.

ಮಗಳು ಮಡದಿಯ ಪ್ರೋತ್ಸಾಹ

ಸಿಲ್ವಿಯಾ ಸೂಚನೆಗಳನ್ನು ನೀಡುತ್ತಿದ್ದರು. ಸನಿಹದ ದೋಣಿಯಲ್ಲಿದ್ದ ನನ್ನ ಮಗಳು ಮತ್ತು ಪತ್ನಿ ಈ ಹೊಸ ಸಾಹಸವನ್ನು ವೀಕ್ಷಿಸುತ್ತಿದ್ದರು. ಮಗಳು ಫೋನ್ ಮೂಲಕ ನನ್ನ ಚಿತ್ರಗಳನ್ನು ಕ್ಲಿಕ್ ಮಾಡುತ್ತಿದ್ದಳು. ಜತೆಯಲ್ಲಿದ್ದ ಈಜುಗಾರರು ನನಗಿಂತ ವೇಗವಾಗಿ ಈಜುತ್ತಿದ್ದರು.

ನಾನು ಎಂದಿಗಿಂತ ಹೆಚ್ಚಿನ ಶ್ರಮಪಡುತ್ತಿದೆ. 112 ನಿಮಿಷಗಳ ಈಜಿನ ಸಾಹಸದ ಬಳಿಕ, ಗೋಲ್ಡನ್ ಗೇಟಿನ ನಿಯೋಜಿತ ತಾಣದಲ್ಲಿ, ಗುರಿಯನ್ನು ತಲುಪಿದ್ದೆ. ಈ ಸಾಹಸ ಈಜನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕಾಗಿ ಸಿಲ್ವಿಯಾ ನಮ್ಮನ್ನು ಅಭಿನಂಧಿಸಿದರು. ಈ ಸಾಹಸ ಕ್ರೀಡೆಯ ಇನ್ನೊಂದು ಸಾಧನೆಗೆ ನನ್ನ ಆತ್ಮಸಾಕ್ಷಿ ಸಂತಸದ ಅಭಿನಂದನೆ ನೀಡಿದಂತೆನಿಸಿತು. ಈಗಾಗಲೇ ಹಲವು ಸಾಹಸ ಈಜನ್ನು ನಡೆಸಿರುವ ನನಗೆ, ಮುಂದೆ ಇನ್ನೊಂದು ಸಾಹಸ ಈಜನ್ನು ಕೈಗೊಳ್ಳಲು ಈ ಈಜು ಸಾಹಸವು ಹೊಸ ಪ್ರೇರಣೆಯನ್ನು ನೀಡಿದೆ. ಇನ್ನೊಮ್ಮೆ ಎಂದು ಕಡಲಿಗೆ ಇಳಿಯುವುದು ಎಂದು ಕಾತರಿಸುವಂತೆ ಮಾಡಿದೆ!

ಹಕ್ಕಿಗಳ ದ್ವೀಪ

22 ಎಕರೆ ವಿಸ್ತೀರ್ಣದ ಅಲ್ಕಾಟ್ರಾಜ್ ದ್ವೀಪವು ಸ್ಯಾನ್ ಫ್ರಾನ್ಸಿಸ್ಕೋ ಕರಾವಳಿಯ ಪಿಯರ್ 39 ಬಂದರಿನಿಂದ ಒಂದು ಮೈಲಿ ದೂರದಲ್ಲಿದೆ. ಇದು ಕ್ಯಾಲಿಫೋರ್ನಿಯಾದ ಕರಾವಳಿಯ ಮೊಟ್ಟ ಮೊದಲ ದೀಪಸ್ತಂಭವಾಗಿತ್ತು. ಹತ್ತೊಂಬತ್ತನೇ ಶತಮಾನದ ಮಧ್ಯಭಾಗದಲ್ಲಿ ಶಾಶ್ವತ ಸೇನಾ ತುಕಡಿಯ ಕಾವಲು ನೆಲೆಯನ್ನಾಗಿಸಲಾಯಿತು. 1907ರಲ್ಲಿ ಇದನ್ನು ಮಿಲಿಟರಿ ಸೆರೆಮನೆಯಾಗಿ ಪರಿವರ್ತಿಸಲಾಯಿತು. 1963ರವರೆಗೆ ವಿಶ್ವದ ಅತ್ಯಂತ ಸುರಕ್ಷಿತ ಸೆರೆಮನೆಯೆಂದೇ ಇದು ಹೆಸರುವಾಸಿಯಾಗಿತ್ತು. ಶಾನ್ ಕಾನರಿಯವರ 'ದಿ ರಾಕ್', ಕ್ಲಿಂಟ್ ಈಸ್ಟ್ ಉಡ್ ಅವರ 'ಎಸ್ಕೇಪ್ ಫ್ರಮ್ ಅಲ್ಕಾಟ್ರಾಜ್' ನಂತಹ ಚಲನಚಿತ್ರಗಳಿಂದ ಇದು ಖ್ಯಾತಿಯನ್ನು ಪಡೆದಿದೆ. ಅಭೇದ್ಯ ಕಾವಲು, ಅತೀವ ಶೀತ ಹಾಗೂ ಪ್ರಕ್ಷುಬ್ಧ ಪ್ರವಾಹಗಳು, ಅಪರಾಧಿಗಳನ್ನು ತಪ್ಪಿಸಿಕೊಳ್ಳುವ ಯೋಚನೆಯೂ ಬರದಂತೆ ಮಾಡಿದ್ದವು. ತಪ್ಪಿಸಿಕೊಳ್ಳಲೆತ್ನಿಸಿದ ಅಪರಾಧಿಗಳು ಪುನಃ ಬಂಧನಕ್ಕೊಳಗಾಗುತ್ತಿದ್ದರು, ಇಲ್ಲಾ ಕೊಲ್ಲಲ್ಪಡುತ್ತಿದ್ದರು, ಅಥವಾ ಕೊರೆಯುವ ನೀರಲ್ಲಿ ಅಸುನೀಗುತ್ತಿದ್ದರು. ಅಲ್ಕಾಟ್ರಾಜ್ ಎಂದರೆ 'ವಿಚಿತ್ರ ಪಕ್ಷಿಗಳು' ಅಥವಾ 'ಪೆಲಿಕನ್ಸ್' ಎಂದರ್ಥ. ನೂರಾರು ಪಕ್ಷಿಗಳು ಈ ದ್ವೀಪವನ್ನು ತವರುಮನೆ ಮಾಡಿಕೊಂಡಿವೆ. ಈ ದ್ವೀಪವಿಂದು ಐತಿಹಾಸಿಕ ಜೈಲು ಮತ್ತು ಪ್ರಸಿದ್ಧ ಪಕ್ಷಿಧಾಮಕ್ಕಾಗಿ ಹೆಸರುವಾಸಿಯಾಗಿದೆ.

ಎಂಜಿನಿಯರಿಂಗ್ ಅದ್ಭುತ!

ಗೋಲ್ಡನ್ ಗೇಟ್ ಸೇತುವೆ ಎಂಜಿನಿಯರಿಂಗ್ ಕ್ಷೇತ್ರದ ಅದ್ಭುತವೆಂದೇ ಪ್ರಖ್ಯಾತ. 1930ರ ದಶಕದಲ್ಲಿ ಅಮೆರಿಕದಲ್ಲಿ ಕಂಡುಬಂದ ಆರ್ಥಿಕ ಕುಸಿತದ ಸಮಯದಲ್ಲಿ ಈ ಸೇತುವೆಯ ನಿರ್ಮಾಣ ಆರಂಭಗೊಂಡಿತು. ಕೇವಲ ನಾಲ್ಕು ವರ್ಷಗಳಲ್ಲಿ ಸೇತುವೆಯು ವಾಹನ ಸಂಚಾರಕ್ಕೆ ತೆರವುಗೊಂಡಿದ್ದರಿಂದ ಈ ಸೇತುವೆಯು ಭರವಸೆಯ ಮತ್ತು ಸ್ವಾತಂತ್ರ್ಯದ ಸಂಕೇತವಾಗಿ ನಿಂತಿದೆ. ಬಿರುಸಾದ ಗಾಳಿ, ಪ್ರವಾಹಗಳು, ಜಲಸಂಧಿಯ ನೀರಿನ ಆಳ ಮತ್ತು ಆಗಾಗ್ಗೆ ಪಸರಿಸುವ ಮಂಜಿನಿಂದಾಗಿ ಸೇತುವೆಯ ನಿರ್ಮಾಣವನ್ನು ಬಹಳ ವರ್ಷಗಳ ವರೆಗೆ ತಡೆಹಿಡಿಯಲಾಗಿತ್ತು. ಸೇತುವೆಯು ನೀರಮಟ್ಟದಿಂದ 220 ಅಡಿ ಎತ್ತರದಲ್ಲಿದ್ದು, 2.7 ಕಿ.ಮೀ. ಉದ್ದವಿದ್ದು, ವಾಹನ ಸಂಚಾರಕ್ಕೆ ಆರು ಪಥದ ರಸ್ತೆ, ಒಂದು ಬದಿಯಲ್ಲಿ ಸೈಕಲ್ ಪಥ, ಮತ್ತೊಂದೆಡೆ ಚಾರಣಿಗರ ಮಾರ್ಗವನ್ನು ಹೊಂದಿದೆ. 2.3 ಕಿ.ಮೀ. ಉದ್ದದ ಜೋಡಿ ಕೇಬಲ್ ಹಿಡಿದಿರುವ 750 ಅಡಿ ಎತ್ತರದ ಎರಡು ಗೋಪುರಗಳನ್ನು ಹೊಂದಿದೆ. ಇದರ ಮೇಲೆ ಪ್ರತಿದಿನ ಸುಮಾರು 1,10,000 ವಾಹನಗಳು ಹಾದುಹೋಗುತ್ತವೆ. ಹಲವಾರು ಚಲನಚಿತ್ರಗಳಲ್ಲೂ ಕಾಣಿಸಿಕೊಂಡಿರುವ ಈ ಸೇತುವೆಯು ಅಮೆರಿಕದ ಒಂದು ಪ್ರಖ್ಯಾತ ಲ್ಯಾಂಡ್‌ಮಾರ್ಕ್.

ಒಂದು ಸಂಸ್ಥೆಯನ್ನು ಆರಂಭಿಸುವುದೆಂದರೆ ಒಂದು ಸಂಸ್ಕೃತಿಯನ್ನು ವಿಸ್ತರಿಸುವುದೆಂದೇ ಅರ್ಥ. ಮುಂಬಯಿ ಒಂದು ವಾಣಿಜ್ಯ ಮಹಾನಗರ. ಮುಂಬೈ ನಮ್ಮ ರಾಷ್ಟ್ರದ ಆರ್ಥಿಕ ಆಗುಹೋಗುಗಳ ಕೇಂದ್ರ ಬಿಂದು. ಇಲ್ಲಿನ ಮೈಸೂರು ಅ ಸೋಸಿಯೇಷನ್‌ಗೆ ಈಗ ಶತಮಾನದ ಸಂಭ್ರಮ!

ಶತಮಾನದ ಸಂಭ್ರಮದಲ್ಲಿ ಮೈಸೂರು ಅಸೋಸಿಯೇಷನ್

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಮುಂಬಯಿಯಲ್ಲಿ ಕನ್ನಡವನ್ನು, ಕನ್ನಡ ಸಂಸ್ಕೃತಿಯನ್ನು ಪ್ರಾಮಾಣಿಕವಾಗಿ ಮುನ್ನಡೆಸುತ್ತಿರುವ ಪ್ರಮುಖ ಸಂಸ್ಥೆಗಳಲ್ಲಿ ಮೈಸೂರು ಅಸೋಸಿಯೇಶನ್ ದು ದೊಡ್ಡ ಹೆಸರು. ಕಳೆದ 99ವರ್ಷಗಳಲ್ಲಿ ಹಂತ ಹಂತವಾಗಿ ಅದು ಏರಿದ ಎತ್ತರ, ಗೈದ ಸಾಧನೆ ಇತರ ಸಂಸ್ಥೆಗಳಿಗೆ ಅನುಕರಣೀಯ. ಕರ್ನಾಟಕ ಸರಕಾರ ಕೊಡಮಾಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಸಹ ಮೈಸೂರು ಅಸೋಸಿಯೇಶನ್‌ಗೆ ಸಂದಿದೆ. ಶ್ರೇಷ್ಠ, ಸಕ್ರಿಯ ಹೊರನಾಡ ಕನ್ನಡ ಸಂಸ್ಥೆ ಎಂಬ ಕೀರ್ತಿಗೆ ಈ ಮೂಲಕ ಅದು ಬಹಳ ಹಿಂದೆಯೇ ಭಾಜನವಾಗಿತ್ತು.

ಕೈಲಾಸಂ ಕೈಚಳಕ

ಪ್ರಸಿದ್ಧ ನಾಟಕಕಾರ ಟಿ.ಪಿ.ಕೈಲಾಸಂ ಅವರು 1943 ರಿಂದ1946 ರವರೆಗೆ ಮೈಸೂರು ಅಸೋಸಿಯೇಷನ್ ನಲ್ಲಿದ್ದು ನಾಟಕಗಳನ್ನು ಆಡಿಸಿದ್ದು ವಿಶೇಷ. 1937 ಮುಂಬೈಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆಯೋಜನೆಯಲ್ಲಿಯೂ ಅಸೋಸಿಯೇಷನ್ ಮುಖ್ಯವಾದ ಪಾತ್ರವನ್ನು ವಹಿಸಿತ್ತು. ಮೈಸೂರು ಅಸೋಸಿಯೇಷನ್ ಕ್ರೀಡೆಯಲ್ಲಿಯೂ ಮುಂಚೂಣಿಯಲ್ಲಿತ್ತು. ಬಾಸ್ಕೆಟ್ ಬಾಲ್, ಕೇರಂ, ಚೆಸ್, ಟೆನಿಸ್ ಕ್ರೀಡೆಗಳಲ್ಲಿಯು ಅಸೋಸಿಯೇಷನ್ ತಂಡ ಬಲಶಾಲಿಯಾಗಿತ್ತು.

ಮುಂಬೈ ಮೈಸೂರ್ ಅಸೋಸಿಯೇಷನ್ ಸಾಗಿ ಬಂದ ಹಾದಿ ಬಲು ರೋಚಕವಾಗಿದೆ. ಸರ್.ಎಂ. ವಿಶ್ವೇಶ್ವರಯ್ಯನವರು ಬಾಂಬೆ ಪ್ರೆಸಿಡೆನ್ಸಿಯಲ್ಲಿ ಕಾರ್ಯನಿರತರಾಗಿದ್ದಾಗ, ಅವರ ಕೆಳಗೆ ಮೈಸೂರಿನ ಯುಜನತೆ ಈ ಭಾಗದಲ್ಲಿ ಕೆಲಸ ಮಾಡಲು ಮುಂದೆ ಬಂದರು. ಮುಂಬಯಿಗೆ ಬಂದ ಇಂಜಿನಿಯರ್‌ಗಳಿಗೆ ಇನ್ನಿತರ ತಂತ್ರಜ್ಞರಿಗೆ ಕನ್ನಡ ಸಂಸ್ಕೃತಿಯ ಒಲವು ಹೆಚ್ಚಾಗಿತ್ತು. ಅಂತೆಯೇ ಮನೆ ಅಡುಗೆಗೆ ಮಾರುಹೋಗಿದ್ದ ಈ ಯುವಕರಿಗೆ, ಮುಂಬೈಯಲ್ಲಿ ಒಂದು ತಮ್ಮದೇ ಆದ ನೆಲೆ ಬೇಕಾಗಿತ್ತು. ಹೆಚ್ಚಾಗಿ ಈ ಯುವಕರೆಲ್ಲ, ಇಂದಿನ ಕೋಟೆ ಪ್ರದೇಶಕ್ಕೆ ಹತ್ತಿರವಿದ್ದ ಗಿರ್‌ಗಾಂವ್‌ನಲ್ಲಿ ಇರುತ್ತಿದ್ದರು.

ಅಲ್ಲೇ ಒಂದು ಸಣ್ಣ ಕೋಣೆಯಲ್ಲಿ ಮಿತ್ರರೆಲ್ಲ ಪ್ರತಿ ಭಾನುವಾರ ಒಂದೆಡೆ ಸೇರಿ ಮಾತುಕತೆ ನಡೆಸುವ ನಿರ್ಧಾರಕ್ಕೆ 1925 ಆಗಸ್ಟ್ ತಿಂಗಳಲ್ಲಿ ಬರಲಾಯಿತು. ಹೀಗೆ ಮೊದಲಾದ ಕೂಟ 8 ಜನರ ತಂಡ ಬೇಗ 40 ಆಯಿತು. ಸೇರುತ್ತಿದ್ದ ಕೋಣೆ ಸಣ್ಣದಾಯಿತು. ಆಡುತ್ತಿದ್ದ ಕೇರಂ,ಚೆಸ್‌ಗಳಿಗೆ ಜಾಗವಿಲ್ಲದಂತಾಯ್ತು; ಆಗ ಹೊಸದಾಗಿ ನಿರ್ಮಾಣವಾಗುತ್ತಿದ್ದ ಮಾಟುಂಗಾದ ನಪ್ಪು ಉದ್ಯಾನದ ಬಳಿ ಇದ್ದ ವೇಲ್‌ಜಿ ಬಾಯ್ ಹಾಲ್‌ನಲ್ಲಿ ಒಂದು ದೊಡ್ಡ ಕೋಣೆಯನ್ನು ಬಾಡಿಗೆಗೆ ಪಡೆದುಕೊಂಡರು.

ಬಾಂಬೆ ರಾಮಸ್ವಾಮಿ ಸಾರಥ್ಯ

ಹೀಗೆ ಮೈಸೂರು ಅಸೋಸಿಯೇಷನ್, ಮುಂಬಯಿ 1926 ರ ಫೆಬ್ರುವರಿ 26 ರಂದು ಅಧಿಕೃತವಾಗಿ ಆರಂಭಗೊಂಡಿತು. ಆದರೆ ಈ ತಂಡಕ್ಕೆ ತಕ್ಕ ನಾಯಕರು ಬೇಕಿತ್ತು. ಬಾಂಬೆ ಪ್ರೆಸಿಡೆನ್ಸಿಯಲ್ಲಿ ಚೀಫ್ ಇಂಜಿನಿಯರ್ ಆಗಿದ್ದ, ದಿವಾನ್ ಬಹಾದ್ದೂರ್ ರಾಮಸ್ವಾಮಿಯವರನ್ನು ಕೇಳಿಕೊಂಡರು. ಬಾಂಬೆ ರಾಮಸ್ವಾಮಿ ಎಂದೇ ಹೆಸರಾದ ಇವರು, ವಿಶ್ವೇಶ್ವರಯ್ಯನವರ ಕೆಳಗೆ ತರಬೇತಿ ಹೊಂದಿದವರಲ್ಲದೇ, ಗೇಟ್ ವೇ ಆಫ್ ಇಂಡಿಯಾವನ್ನು ಕಟ್ಟುವಾಗ ಅದರ ಮೇಲ್ವಿಚಾರಣೆಯಲ್ಲಿದ್ದರು. ಈವತ್ತೂ ಕೂಡ, ಅವರ ಹೆಸರು 'ಗೇಟ್ ವೇ ಆಫ್ ಇಂಡಿಯಾ'ದಲ್ಲಿ ಕೆತ್ತಿರುವುದು ವಿಶೇಷ.

ಇದೇ ಹೊತ್ತಿನಲ್ಲಿ ಬಾಂಬೆ ಮುನ್ಸಿಪಲ್ ಕಾರ್ಪೊರೇಷನ್ ದಾದರ್ ಮಾತಂಗ ಎಸ್ಟೇಟ್ ಅನ್ನು ಕಟ್ಟುತ್ತಿತ್ತು. ಅದರಲ್ಲಿ ಗುತ್ತಿಗೆಯ ಮೇಲೆ ಸಾಂಸ್ಕೃತಿಕ ಮತ್ತು ಆಟದ ಸಂಸ್ಥೆಗಳಿಗೆ ಜಾಗವನ್ನು ನೀಡಲಾಗುತ್ತಿತ್ತು. ಬಾವುದಾಜಿ ರಸ್ತೆಯಲ್ಲಿ 1000 ರೂಪಾಯಿಗೆ ಜಾಗವನ್ನು ಗುತ್ತಿಗೆಗೆ ಪಡೆದುಕೊಂಡರು. ಮುಂದೆ ಉದ್ಯಮಿ ಆರ್. ಡಿ.ಚಾರ್ ಅವರ ನೇತೃತ್ವದಲ್ಲಿ 1934 ರಲ್ಲಿ ವಾಣಿ ವಿಲಾಸ ಮೆಮೋರಿಯಲ್ ಹಾಲ್ ಕಟ್ಟಡ ನಿರ್ಮಾಣವಾಯಿತು. ಅಂದಿನ ಮುಂಬೈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕನ್ನಡಿಗ ಬಿ.ಜಿ.ಖೇರ್ ಅವರು ಮೈಸೂರ್ ಅಸೋಸಿಯೇಷನ್ ಗ್ರಂಥಾಲಯವನ್ನು ಉದ್ಘಾಟಿಸಿದರು. ಅಸೋಸಿಯೇಷನ್ ಬೆಳ್ಳಿ ಹಬ್ಬಕ್ಕೆ ಮೈಸೂರಿನ ಮಹಾರಾಜರಾಗಿದ್ದ ಜಯ ಚಾಮರಾಜೇಂದ್ರ ಒಡೆಯರ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೈಸೂರು ಅಸೋಸಿಯೇಷನ್ ತಂಡ ಕಳೆದ ಒಂದು ಶತಮಾನದಲ್ಲಿ ಸುಮಾರು 150ರಷ್ಟು ಕನ್ನಡ ನಾಟಕಗಳನ್ನು ಆಡಿದೆ. ತೀನಂಶ್ರೀ, ಮಾಸ್ತಿ, ಶಿವರಾಮ ಕಾರಂತ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ ಹೀಗೆ ನೂರಾರು ಮಂದಿ ಸಾಹಿತಿಗಳು ಸಾಧಕರು ಕಲಾವಿದರು ಭೇಟಿ ನೀಡಿ ಸಂಸ್ಥೆಯ ಸಾಧನೆಯನ್ನು ಗುಣಗಾನ ಮಾಡಿದ್ದಾರೆ.

ಸ್ವಂತ ಕಟ್ಟಡ



ಇವತ್ತು ಮುಂಬಯಿ ಮಹಾನಗರದ ಹೃದಯ ಭಾಗದಲ್ಲಿ, ಕಿಂಗ್ ಸರ್ಕಲ್ ಸಮೀಪದ ಭಾವುದಾಜಿ ರಸ್ತೆಯಲ್ಲಿ ತನ್ನದೇ ಆದ ಸ್ವಂತ ನಿವೇಶನ, ಭವ್ಯವಾದ ಕಟ್ಟಡ, ವ್ಯವಸ್ಥಿತ ರಂಗಮಂದಿರ, ಸಭಾ ಗೃಹ, ಗ್ರಂಥಾಲಯ, ಒಳಾಂಗಣ ಕ್ರೀಡಾ ಸೌಲಭ್ಯ ಮೊದಲಾದ ಆಧುನಿಕ ಪರಿಕರಗಳೊಂದಿಗೆ ಈ ಸಂಸ್ಥೆ ಕನ್ನಡಿಗರನ್ನು ತನ್ನೆಡೆಗೆ ಆಕರ್ಷಿಸುತ್ತಿದೆ. ಸಾಂಘಿಕ ಮನೋಭಾವದಿಂದ ದುಡಿದರೆ ಏನನ್ನೂ ಮಾಡಬಹುದು ಎಂಬುದಕ್ಕೆ ಮೈಸೂರು ಅಸೋಸಿಯೇಶನ್ ಒಂದು ಉತ್ತಮ ನಿದರ್ಶನ.

ನೇಸರ ಪತ್ರಿಕೆ

ತನ್ನ ಚಟುವಟಿಕೆಯನ್ನು ತಿಳಿಸಲು, ಸದಸ್ಯರ ವಾಚನಾಭಿರುಚಿಯನ್ನು ಹೆಚ್ಚಿಸಲು ಮೈಸೂರು ಅಸೋಸಿಯೇಷನ್ ಕಳೆದ ನಾಲ್ಕು ದಶಕಗಳಿಂದ 'ನೇಸರು' ಎಂಬ ತಿಂಗಳೋಲೆಯನ್ನು ಪ್ರಕಟಿಸುತ್ತಿದೆ. ಸಾಹಿತ್ಯಕವಾಗಿ ಮೌಲಿಕವಾದ ಬರಹಗಳು ಇಲ್ಲಿ ಬೆಳಕು ಕಂಡಿವೆ; ಅನೇಕ ಯುವ ಲೇಖಕರನ್ನು ಲೋಕ ಮುಖಕ್ಕೆ ಪರಿಚಯಿಸಿದ್ದು ಈ ಪತ್ರಿಕೆಯ ಇನ್ನೊಂದು ಸಾಧನೆ.

1934ರಲ್ಲಿ ಮುಂಬಯಿ ಮಹಾನಗರ ಪಾಲಿಕೆಯಿಂದ ಒಂದು ನಿವೇಶನವನ್ನು ಪಡೆದುಕೊಳ್ಳುವಲ್ಲಿ ಈ ಸಂಸ್ಥೆ ಯಶಸ್ಸು ಕಂಡಿತು. ಸ್ವಂತ ಜಾಗವನ್ನೋ ಸಿಕ್ಕಿತು. ಆದರೆ ಕಟ್ಟಡ ಕಟ್ಟಲು ಹಣವೆಲ್ಲಿಂದ ತರುವುದು? ದಾನಿಗಳ ಮನ ಕರಗಿತು. 1935ರಲ್ಲಿ ಇಂದಿನ ಮೈಸೂರು ಅಸೋಸಿಯೇಶನ್ ಕಟ್ಟಡಕ್ಕೆ ಕೆಸಗರುಗಲ್ಲು ಹಾಕಲಾಯಿತು. ವಾಣಿ ವಿಲಾಸ ಮೆಮೋರಿಯಲ್ ಹಾಲ್ ನಿರ್ಮಾಣವಾಯಿತು. 1940–41ರಲ್ಲಿ ಈ ಕಟ್ಟಡದ ಮೊದಲ ಮಹಡಿ ಸಿದ್ಧವಾಯಿತು. 90ರ ದಶಕ ಮೈಸೂರು ಅಸೋಸಿಯೇಷನ್‌ನ ಇತಿಹಾಸದಲ್ಲಿ ಒಂದು ಪರ್ವಕಾಲ. ಇಂದಿನ ಬಹುಮಹಡಿಯ ಭವ್ಯ ಕಟ್ಟಡ ತಲೆಯೆತ್ತಿ ನಿಂತದ್ದು ಈ ಹಂತದಲ್ಲೇ. ಸಂಪೂರ್ಣ ವಾತಾನುಕೂಲಿತ 300 ಆಸನಗಳುಳ್ಳ ಅಚ್ಚುಕಟ್ಟಾದ ಸಭಾಗೃಹ ಮುಂಬಯಿ ಕನ್ನಡಿಗರ ಹೆಮ್ಮೆಯ ಪ್ರತೀಕ. ಮೈಸೂರು ಅಸೋಸಿಯೇಷನ್ ಸಂಗೀತ, ನಾಟಕ, ಕ್ರೀಡೆ, ಸಾಹಿತ್ಯ, ಧಾರ್ಮಿಕ, ಲಲಿತ ಕಲೆ, ಶಿಕ್ಷಣ ಹೀಗೆ ಹತ್ತಾರು ಕ್ಷೇತ್ರಗಳಿಗೆ ಗಣನೀಯವಾದ ಕೊಡುಗೆಯನ್ನು ನೀಡಿದೆ. ಕನ್ನಡ ಶಿಕ್ಷಣಕ್ಕೆ ಬೇಕಾದಷ್ಟು ಸವಲತ್ತನ್ನು ನೀಡಿದೆ; ನೀಡುತ್ತಿದೆ. ಎನ್.ಕೆ.ಇ.ಎಸ್. ಶಾಲೆ, ಮಹಾವಿದ್ಯಾಲಯ, ವೃತ್ತಿಪರ ಕಾಲೇಜುಗಳ ಅಭಿವೃದ್ಧಿಯಲ್ಲಿ ಈ ಸಂಘದ್ದು ಸಿಂಹಪಾಲಿದೆ. ▸▸ ಮೂರನೇ ಪುಟಕ್ಕೆ

ಪುಸ್ತಕ ವಿಮಾನ

ತಾಜಾ ಅನುಭವ ನೀಡುವ ಬರಹಗಳು



ಇದೇ ಅಂತರಂಗದ ಸುದ್ದಿ 2
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ ಬೆಂಗಳೂರು
8431007267
ಬೆಲೆ ರು.250/-

» ಎಂ.ಎಸ್.ಹೆಬ್ಬಾರ್

ತಾಜಾ ಓದಿನ ಅನುಭವ ನೀಡುವ ಈ ಅಂಕಣ ಬರಹಗಳ ಸಂಗ್ರಹವು ವಿಶಿಷ್ಟ ಮಾಹಿತಿಗಳನ್ನು ನೀಡುವುದರ ಜತೆಯಲ್ಲೇ, ನಸು ಹಾಸ್ಯ ಭರಿತ ವಿಶ್ಲೇಷಣೆಯನ್ನೂ ನೀಡುವುದರಿಂದ, ಓದುಗರಿಗೆ ಆಪ್ತ ಎನಿಸುತ್ತದೆ.

ಕೆಲವು ಬಾರಿ, ಅಂಕಣಗಳ ಕುರಿತು ಒಂದು ಅಭಿಪ್ರಾಯ ನೀಡುವುದುಂಟು : ಅದೇನೆಂದರೆ, 'ಸಾಂದರ್ಭಿಕವಾಗಿ ಬರೆದ ಅಂಕಣಗಳು, ಕೆಲವು ಸಮಯ ಕಳೆದಂತೆ ಪೇಲವವಾಗಬಹುದು' ಎಂದು. ಆದರೆ, ಪತ್ರಕರ್ತ ವಿಶ್ವೇಶ್ವರ ಭಟ್ ಅವರ ಬರಹಗಳನ್ನು ಆ ರೀತಿಯ ಹೇಳುವಂತಿಲ್ಲ ಎಂಬುದಕ್ಕೆ, 'ಇದೇ ಅಂತರಂಗದ ಸುದ್ದಿ ಭಾಗ 2' ಒಂದು ಉದಾಹರಣೆ. ಈ ಹೊಸ ಪುಸ್ತಕದಲ್ಲಿ, ಅವರು ಈ ಹಿಂದೆ ಪ್ರತಿವಾರ ಬರೆದ ಲೇಖನಗಳಿವೆ; ಅವುಗಳನ್ನು ಓದಿದರೆ ಇಂದಿಗೂ ತಾಜಾ ಎನಿಸುತ್ತವೆ, ಹೊಸತನದಿಂದ ಕೂಡಿವೆ. ಈ ಸಂಕಲನದ ಬರಹಗಳನ್ನು ಓದಿದಾಗ ಒಮ್ಮೆಗೇ ಹಲವು ಅನುಭವಗಳನ್ನು ಪಡೆಯ ಬಹುದು : ಇಲ್ಲಿ ಮಾಹಿತಿ ಇದೆ, ಅಪರೂಪದ ಸ್ವಾರಸ್ಯಕರ ಸಂಗತಿಗಳಿವೆ, ವಿಶಿಷ್ಟ ವಿದ್ಯಮಾನಗಳ ವಿಶ್ಲೇಷಣೆ ಇದೆ, ಎಲ್ಲವನ್ನೂ ಹೊಸ ದೃಷ್ಟಿಕೋನದಿಂದ ನೋಡುವ ಖದರು ಇದೆ.

ಆದರೆ, ಇವೆಲ್ಲವುಗಳಿಗಿಂತಲೂ ಮಿಗಲಾದುದೆಂದರೆ, 'ಇದೇ ಅಂತರಂಗದ ಸುದ್ದಿ ಭಾಗ 2' ಪುಸ್ತಕದಲ್ಲಿನ ಬರಹಗಳಿವೆ ಸುಲಲಿತವಾಗಿ ಓದಿಸಿಕೊಂಡು ಹೋಗುವ ಗುಣವಿದೆ; ಅಲ್ಲಲ್ಲಿ ಹಾಸ್ಯ ಬೆರೆತಿದ್ದರೂ, ಗಂಭೀರ ಓದಿನ ಅನುಭವ ನೀಡುವ ಗುಣವಿದೆ. ಉದಾಹರಣೆಗೆ, ಮೊದಲ ಲೇಖನದ ಹೂರಣವನ್ನೇ ನೋಡಬಹುದು : ಭರತ್ ಮತ್ತು ವಿಭಾ ಎಂಬುವವರಿಗೆ ಮಗು ಹುಟ್ಟಿದಾಗ, ಹೆಸರು ಇಡುವ ಕುರಿತು ಚರ್ಚೆ ನಡೆದು, ಅವರಿಬ್ಬರೂ ದೇಶದ ಪ್ರಧಾನಿ ಮೋದಿಯವರಿಗೇ ಸಲಹೆ ಕೇಳುತ್ತಾರೆ! ಆಶ್ಚರ್ಯ ಎಂದರೆ, ಮೋದಿಯವರಿಂದ ಫೋನ್ ಬರುತ್ತದೆ! 'ನಿಮ್ಮಿಬ್ಬರಿಗೆ (ಭರತ್ ಹಾಗೂ ವಿಭಾ) ಹುಟ್ಟಿದ ಮುಗಿವೆ ವೈಭವಿ ಎಂದು ಹೆಸರಿಡಬಯಸುತ್ತೇನೆ' ಎಂದು. ಆದರೆ, ಆ ದಂಪತಿಗೆ ಆಶ್ಚರ್ಯ ಮತ್ತು ಅನುಮಾನ : ಇದು ನಿಜವಾಗಿಯೂ ಮೋದಿಯವರೇ ಮಾಡಿದ ಫೋನಾ ಅಥವಾ ಬೇರಾದರೂ ಅವರ ಹೆಸರಿನಿಂದ ಫೋನ್ ಮಾಡಿ ಇವರಿಬ್ಬರನ್ನು ಬೇಸ್ತು ಬೀಳಿಸಿದ್ದಾ ಎಂದು. ಅದಕ್ಕೆಂದೇ ಅವರು ಲಿಖಿತ ರೂಪದಲ್ಲಿ, ಅಂದರೆ ಪತ್ರ ಮುಖೇನ, ಮೋದಿಯವರು ಸಹಿ ಮಾಡಿದ ಪತ್ರವನ್ನು ತರಿಸಿಕೊಂಡು, ತಮ್ಮ ಮಗಳ ಹೆಸರನ್ನು ಸ್ವತಃ ಪ್ರಧಾನಿಯವರೇ ಸೂಚಿಸಿದರು ಎಂಬುದನ್ನು ಖಚಿತಪಡಿಸಿ ಕೊಂಡರಂತೆ!

ಒಂದು ಪುಟ್ಟ, ಆದರೆ ಕುತೂಹಲಕಾರಿ ವಿದ್ಯಮಾನವನ್ನು, ಚುರುಕಾಗಿ, ಆಸಕ್ತಿ ಹುಟ್ಟಿಸುವಂತೆ ಹೇಳುವ ಕಲೆಯನ್ನು ಇಲ್ಲಿ ನೋಡಬಹುದು; ಆದ್ದರಿಂದಲೇ, ಈ ಬರಹವು ಪ್ರಕಟ ಗೊಂಡು ಸಾಕಷ್ಟು ಸಮಯವಾಗಿದ್ದರೂ, ಅದನ್ನು ಈಗ ಹೊಸತಾಗಿ ಹೊಸ ಪುಸ್ತಕದಲ್ಲಿ ಓದುವಾಗ, ಹೊಸತನದ ಅನುಭವವಾಗುತ್ತದೆ. ಈ ಪುಟ್ಟ ವಿದ್ಯಮಾನವನ್ನು ತಮ್ಮದೇ ಶೈಲಿಯಲ್ಲಿ, ಚುರುಕಾಗಿ ಬರೆದಿರುವ ವಿಶ್ವೇಶ್ವರ ಭಟ್ ಅವರ ಲೇಖನಿಯ ಜಾಣ್ಮೆಯನ್ನು ಆ ಬರಹ ಓದಿಯೇ ಅನುಭವಿಸಬೇಕು! ಇದೊಂದು ಮಾತ್ರವಲ್ಲ, ಇಂತಹದೇ ಹತ್ತಾರು ಬರಹಗಳು ಈ ಸಂಕಲದಲ್ಲಿವೆ.

ಆಕರ್ಷಕ ಹೆಡಿಂಗ್‌ಗಳು

ವಿಶ್ವೇಶ್ವರ ಭಟ್ ಅವರ ಬರಹದ ಇನ್ನೊಂದು ವಿಶೇಷ ಗುಣವೆಂದರೆ, ಆಕರ್ಷಕ ಹೆಡಿಂಗ್ ಮತ್ತು ಸಬ್ ಹೆಡಿಂಗ್‌ಗಳು! ಒಂದು ಸಬ್ ಹೆಡಿಂಗ್ ಹೀಗಿದೆ : 'ಬೇಳೆ ಬೇಯಿಸಿಕೊಳ್ಳುವವರು'. ಈ ತಲೆಬರಹವನ್ನು ಓದದಾಕ್ಷಣ, ಏನಪ್ಪಾ ಬೇಳೆ ಬೇಯಿಸುವವರ ಕಿತಾಪತಿ ಎಂದು ಕುತೂಹಲ ಮೂಡದೇ ಇರದು, ಆ ಬರಹವನ್ನು ಓದಿದೇ ಇರುವಂತೆಯೂ ಇಲ್ಲ. ಅದಕ್ಕೆ ಸರಿಯಾಗಿ, ಆ ಬರಹವು, ಮಾತಿನಲ್ಲೇ ಜನರನ್ನೂ ಬುಟ್ಟಿಗೆ ಹಾಕಿಕೊಳ್ಳುವವರ ಶಾಣ್ಯಾತನದ ವಿವರಗಳಿವೆ ಮತ್ತು ಅವು ತಿಳಿ ಹಾಸ್ಯದಲ್ಲಿ ಪ್ರಸ್ತುತಗೊಂಡಿವೆ. ಈ ಬರಹಕ್ಕೆ ಲೇಖಕರು ತಮ್ಮ ಅನುಭವವನ್ನೇ ಹೂರಣವನ್ನಾಗಿಸಿಕೊಂಡಿರುವುದರಿಂದಾಗಿ, ಅದಕ್ಕೆ ಅಥೆಂಟಿಸಿಟಿಯೂ ಒದಗಿಬರುತ್ತದೆ.

'ಇದೇ ಅಂತರಂಗದ ಸುದ್ದಿ ಭಾಗ 2'ನ್ನು ತಿರುವಿ ಹಾಕಿದಾಗ ಗಮನ ಸೆಳೆಯುವ ಹಲವು ವಿಷಯಗಳಲ್ಲಿ ಒಂದು ಎಂದರೆ, ವಿಷಯದ ಆಯ್ಕೆ ಮತ್ತು ಅದನ್ನು ಓದುಗರಿಗೆ ಉಣಬಡಿಸಿರುವ ರೀತಿ. ಹಲವು ಬರಹಗಳ ಶೀರ್ಷಿಕೆಯನ್ನು ನೋಡಿದ ತಕ್ಷಣ ಓದಲೇ ಬೇಕು ಎನಿಸುವಷ್ಟು ಕುತೂಹಲ ಮೂಡುತ್ತದೆ! 'ನನ್ನ ಮನೆ ಮೇಲೆ ಐಟಿ ರೇಡ್ ಆಯ್ತಂತೆ!', 'ಅವರೇನು ಹೇಳಿದರೆಂದು ಚಪ್ಪಲಿ ತೋರಿದರು?', 'ಈ ಪ್ರಶಸ್ತಿ ಆಸೆ ಎಂಥವರನ್ನೂ ಬಿಟ್ಟಿಲ್ಲ', 'ಎಷ್ಟು ಬರೆದರೂ ತೀರದ ಇಸ್ರೇಲಿ ಪ್ರವಾಸ ಕತೆಗಳು!'.. ಈ ಶೀರ್ಷಿಕೆಯನ್ನು ಓದಿದ ಯಾವುದೇ ಸದಭಿರುಚಿಯ ಓದುಗನು, ಆ ಬರಹವನ್ನು ಪೂರ್ತಿ ಓದದೇ ಇರಲಾರ. ಜತೆಗೆ, ಶೀರ್ಷಿಕೆಯನ್ನು ಸಮರ್ಥವಾಗಿ ಬಿಂಬಿಸುವಂತೆ ಲೇಖನಗಳಿವೆ ಅಥವಾ ಲೇಖನವನ್ನು ಸಮರ್ಥವಾಗಿ ಬಿಂಬಿಸುವಂತೆ ಈ ಶೀರ್ಷಿಕೆಗಳೂ ಇವೆ ಎನ್ನಬಹುದು. ತಮ್ಮ ಲೇಖನಿಯಿಂದ ಇದಾಗಲೇ ಇಂತಹ ನೂರಾರು ಶೀರ್ಷಿಕೆಗಳನ್ನು ನೀಡಿರುವ ವಿಶ್ವೇಶ್ವರ ಭಟ್ ಅವರನ್ನು 'ಶೀರ್ಷಿಕೆಗಳ ಸರದಾರ' ಎಂದೂ ಕರೆಯಬಹುದು!

ಈ ಪುಸ್ತಕ ಹೊರಬಂದ ಹಿನ್ನೆಲೆಯ ಕುರಿತು ಆರಂಭದಲ್ಲಿ ವಿಶ್ವೇಶ್ವರ ಭಟ್ ಅವರು 'ನನ್ನುಡಿ'ಯಲ್ಲಿ ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಅಲ್ಲಿನ ಕೆಲವು ಸಾಲುಗಳನ್ನು ನೋಡಿ ''ನಾನು ಓದಿದ ಪುಸ್ತಕ, ಭೇಟಿ ಮಾಡಿದ ವ್ಯಕ್ತಿ, ನೋಡಿದ ಸಿನಿಮಾ, ಕೇಳಿದ ಹಾಸ್ಯ ಪ್ರಸಂಗ, ಯಾರದೋ ಜೀವನದಲ್ಲಿ ಆದ ಸ್ವಾರಸ್ಯಕರ ಘಟನೆ, ಪ್ರಚಲಿತ ವಿಷಯ-ವಿವಾದ, ದಾರಿಯಲ್ಲಿ ಹೋಗುವಾಗ ಕಂಡ ಒಂದು ಜಾಹೀರಾತು ಫಲಕ, ಸಮಾಧಿಯ ಮೇಲೆ ಬರೆದ ಭಾವಪೂರ್ಣ ಸಾಲುಗಳು, ಪತ್ರಿಕೆಗಳಲ್ಲಿ ಕಂಡ ಆಸಕ್ತಿದಾಯಕ ಹೆಡ್ ಲೈನ್... ಹೀಗೆ ಯಾವ ವಿಷಯವಾದರೂ ಈ ಅಂಕಣಕ್ಕೆ ಸೈ. ಪ್ರತಿ ವಾರ ಇವೇ ವಿಷಯಗಳನ್ನು ಈ ಅಂಕಣ ಒಳಗೊಂಡಿರುತ್ತದೆ ಎಂದು ಹೇಳಲು ನನಗೂ ಸಾಧ್ಯವಿಲ್ಲ. ವಾರ ವಾರ ಈ ಅಂಕಣದ ಫಾರ್ಮೆಟ್ ಬದಲಾಗಬಹುದು. ಒಮ್ಮೊಮ್ಮೆ ಒಂದೇ ವಿಷಯ ಇಡೀ ಅಂಕಣವನ್ನು ಆವರಿಸಿಕೊಳ್ಳಬಹುದು. ಇಲ್ಲವೇ ಹತ್ತಾರು ವಿಷಯಗಳು ಬಿಡಿಬಿಡಿಯಾಗಿ ಕಾಣಿಸಿಕೊಳ್ಳಲೂಬಹುದು. ಅದು ಆ ವಾರದ ಘಟನೆ ಮತ್ತು ನನ್ನ ಮನಸ್ಥಿತಿಯನ್ನು ಅವಲಂಬಿಸಿರುತ್ತದೆ. ಈ ಸಂಗತಿಗಳೇ ಈ ಅಂಕಣದ ವೈಶಿಷ್ಟ್ಯ. ಓದುಗನಿಗೆ ಈ ಅಂಕಣ ಹೀಗೆ ಎಂದು ಹೇಳಲು ಸಾಧ್ಯವಿಲ್ಲ. ನನಗೆ ಯಾರೋ ಬರೆದ ವಿಶಿಷ್ಟ ಪತ್ರ ಕೂಡ ಈ ಅಂಕಣಕ್ಕೆ ಆಹಾರವಾಗಬಹುದು. ಪತ್ರಿಕೆಯಲ್ಲಾದ ಸಣ್ಣ ತಪ್ಪೂ ಸಹ ಇಲ್ಲಿ ಪೂರಕ ಮಾಹಿತಿಯೊಂದಿಗೆ ಪ್ರಸ್ತಾಪವಾಗಬಹುದು. ಒಂದೇ ವಿಷಯವನ್ನು ಜಗ್ಗಿಸಿ, ಹಿಗ್ಗಿಸಿ, ಬಗ್ಗಿಸಿ, ನುಗ್ಗಿಸಿ ವಾದ ಮಾಡಿ ಬೋರು ಹೊಡೆಸುವುದು ಈ ಬರಹಗಳ ಆಶಯವಲ್ಲ.... ಈ ಬರಹಗಳು ನನ್ನನ್ನು ಹತ್ತಾರು ಊರುಗಳಿಗೆ ಕರೆದುಕೊಂಡು ಹೋಗಿವೆ. ನೂರಾರು ಪುಸ್ತಕಗಳನ್ನು ಕೈ ಹಿಡಿದು ಓದಿಸಿವೆ. ಈ ಬರಹಗಳಿಗಾಗಿ ನಾನು ಹಲವರನ್ನು ಮಾತಾಡಿಸಿದ್ದೇನೆ. ಎಂದೋ ಕೇಳಿದ ಹಾಸ್ಯ ಪ್ರಸಂಗ, ವಿಡಂಬನೆ, ದೃಷ್ಟಾಂತ, ಆಸಕ್ತಿದಾಯಕವಾದ ವಿಷಯ, ಚರ್ಚೆ- ಸಂವಾದಗಳನ್ನು ಈ ಇದಕ್ಕಾಗಿ ಹೆಕ್ಕಿ ತಂದಿದ್ದೇನೆ. ಇನ್ನು ಕೆಲವು ಸಂದರ್ಭಗಳಲ್ಲಿ ಬೇರೆಯವರ ಸ್ವಾರಸ್ಯಕರ ಸಂಗತಿ, ಅನುಭವಗಳನ್ನು ಕೂಡ ಇದಕ್ಕಾಗಿ ಹಿಡಿದು ತಂದಿದ್ದಿದೆ. ಎಲ್ಲಿಂದಲೋ ಹರಿದು ಬಂದ ತೊರೆಯನ್ನೂ ತನ್ನೊಳಗೆ ಸೇರಿಸಿಕೊಳ್ಳುವ ನದಿಯ ಉದಾತ್ತತೆಯಂತೆ, ಈ ಅಂಕಣವೂ!...''

ಈ ಪುಸ್ತಕದ 'ನನ್ನುಡಿ'ಯೇ ಬಲು ಆಪ್ತ ಎನಿಸುತ್ತದೆ. ಇತರ ಬರಹಗಳು ಇನ್ನಷ್ಟು ಆಪ್ತ ಎನಿಸಬಲ್ಲವು; ಒಂದಂತೂ ಸ್ಪಷ್ಟ: ಈ ಪುಸ್ತಕದ ಎಲ್ಲಾ ಬರಹಗಳು ತಾಜಾ ಓದಿನ ಅನುಭವವನ್ನು ನೀಡುತ್ತವೆ.

ಹಾಸ್ಯ ಮಿಶ್ರಿತ ಹರಟೆ ಕಷಾಯ

» ಕಿಲಾರಾ ವಿಕ್ರಂ ಹೆಗಡೆ



ಹರಟೆ ಕಷಾಯ
ಲೇ: ರಾಜು ಅಡಕಳ್ಳಿ
ಪ್ರ: ಸಪ್ನ ಬುಕ್ ಹೌಸ್
ಬೆಲೆ ರು.225/-

ಉತ್ತರ ಕನ್ನಡದ ಯಾವುದೇ ಮನೆಗೆ ಹೋದರೂ ಒಂದು ಕಪ್ ಚಹಾ ಅಥವಾ ಕಷಾಯ, ನಂತರ ಎಲೆ ಅಡಿಕೆ ಬಟ್ಟಲನ್ನು ಹಿಡಿದು ಕುಳಿತರೆಂದರೆ ಒಂದು ಒಪ್ಪತ್ತು ಸರಾಗವಾಗಿ ಕಳೆದುಹೋಗುತ್ತದೆ. ವಿಶೇಷ ಊಟ ಇರುವ ಮನೆಗಳಲ್ಲಂತೂ ಕಷಾಯ ಮತ್ತು ಹರಟೆಗೆ ಯಾವುದೇ ಕೊರತೆಯಿಲ್ಲ. ಹರಟೆಯೆಂದರೆ ಅಲ್ಲಿ ಕೇವಲ ಅಕ್ಕ ಪಕ್ಕದ ಮನೆಯವರ ಕುರಿತು ಮಾತನಾಡುತ್ತಲೇ ಕುಳಿತಿರುವುದಿಲ್ಲ. ಅಲ್ಲಿ ಅವರವರ ಕಾಲನ್ನೇ ಎಳೆದುಕೊಳ್ಳುವ ಪ್ರಸಂಗಗಳೇ ಹೆಚ್ಚಿನವು.

ಇತ್ತೀಚೆಗೆ ರಾಜು ಅಡಕಳ್ಳಿಯವರ ಹಾಸ್ಯ ಭರಿತ ಪುಸ್ತಕವೊಂದು ಮನಸ್ಸನ್ನು ಅರಳಿಸುವಂತೆ ಮಾಡಿದೆ. ಆ ಪುಸ್ತಕದ ಹೆಸರು 'ಹರಟೆ ಕಷಾಯ'. 214 ಪುಟಗಳನ್ನು ಹೊಂದಿರುವ ಈ ಕೃತಿಯು ತನ್ನ ಪ್ರತಿ ಪುಟದಲ್ಲಿಯೂ ಪಂಚಿಂಗ್ ಡೈಲಾಗ್‌ಗಳನ್ನು ಹೊಂದಿದೆ. ರಾಜಕೀಯ- ಪತ್ರಿಕೋದ್ಯಮ- ಸಾಹಿತ್ಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಅನುಭಾವಿಯಾದ ರಾಜು ಅಡಕಳ್ಳಿಯವರಿಂದ ಮಾತ್ರವೇ ಇಂತಹ ವಾಕ್ಯಗಳು ಹೊರ ಹೊಮ್ಮುವುದಕ್ಕೆ ಸಾಧ್ಯ. ಇದರಲ್ಲಿ ಅಡಕವಾಗಿರುವ ವಾಕ್ಯಗಳು ಕೇವಲ ಹಾಸ್ಯವನ್ನು ಮಾತ್ರವೇ ಹೊಂದಿಲ್ಲ. ಜೀವನದ ಹಲವಾರು ಘಟನೆಗಳನ್ನು ಹತ್ತಾರು ಪುಟಗಳಲ್ಲಿ ವರ್ಣಿಸುವ ಬದಲು ಅದನ್ನೇ ತಿಳಿಹಾಸ್ಯದ ಮೂಲಕ ನಾಲ್ಕಾರು ವಾಕ್ಯಗಳಲ್ಲಿ ಹೇಳಲಾಗಿದೆ.

ಇದೇನು ಕವಿತೆಯೋ? ಖಂಡಿತ ಅಲ್ಲ, ಕತೆಯೋ ಅಲ್ಲವೇ ಅಲ್ಲ. ಮತ್ತೆ! ಯಾರೂ ಹೇಳಲಾರದ್ದು, ಹೇಳಬೇಕೆಂದುಕೊಂಡರೂ ಹೇಳಲಾರದೆಯೆ ಸುಮ್ಮನೆ ಇರುವಂತದ್ದು. ಪ್ರತಿನಿತ್ಯ ಕಾಣುವ- ಕೇಳುವ ವಿಷಯಗಳನ್ನೇ ಸೂಕ್ಷ್ಮವಾಗಿ, ವ್ಯಂಗ್ಯ ರೂಪದಲ್ಲಿ ಕೆಲವೊಮ್ಮೆ ಹಾಸ್ಯದ ಲೇಪನದೊಂದಿಗೆ ಹೇಳುವುದೂ ಸುಲಭದ ಮಾತಲ್ಲ. ಹಾಗೆ ನೋಡಿದರೆ ಇಲ್ಲಿ ಎಲ್ಲವೂ ಖುಲ್ಲಂ- ಖುಲ್ಲಾ!

ಯಾವುದೋ ಕಂಪನಿಯಲ್ಲಿ ಕುಳಿತು ಮ್ಯಾನೇಜರ್ ಬಳಿ ಬೈಸಿಕೊಂಡರೆ ನಿರಾಶರಾಗಿ ತಲೆಕೆಡಿಸಿಕೊಳ್ಳಬೇಡಿ. ಇತ್ತ ಬಂದು ಒಮ್ಮೆ 'ಹರಟೆ ಕಷಾಯ' ಪುಸ್ತಕವನ್ನು ತೆರೆದು ರುಚಿ ರುಚಿಯಾದ ಕಷಾಯದ ಗುಟುಕಿನಂತಿರುವ ರಾಜು ಅಡಕಳ್ಳಿಯವರ ಪಂಚಿಂಗ್ ಡೈಲಾಗ್‌ಗಳನ್ನು ಓದಿದರೆ ಎಂತಹ ಚಿಂತೆಯಿದ್ದರೂ ಅದು, ಮೀಸೆಯ ತುದಿಯಲ್ಲಿ ಮಂದಸ್ಮಿತ ನಗುವಿನ ಮೂಲಕ ಮಾಯವಾಗಿಬಿಡುತ್ತದೆ. ನಂತರ? ತಲೆಕೆಡಿಸಿಕೊಳ್ಳುವುದು ಇದ್ದದ್ದೇ.

ಸದಾ ಯಾವುದಾದರೂ ತಲೆಬಿಸಿಯಲ್ಲಿದ್ದರೆ ನಿಮ್ಮ ಜೊತೆ ಈ ಪುಸ್ತಕವನ್ನು ಇಟ್ಟುಕೊಳ್ಳುವುದು ಈಸ್ ಮಸ್ಟ್, ಇದು ತಲೆಬಿಸಿಗೊಂದು ಉತ್ತಮ ರೆಮಿಡಿಯಾಗಬಹುದು; ಟ್ರೈ ಮಾಡಿ. ನೂರಾರು ಗುಟುಕು ಕಷಾಯವನ್ನು ಹೊಂದಿರುವ ಪುಸ್ತಕದಿಂದ ಎರಡೇ ಎರಡು ಗುಟುಕು ನಿಮಗಾಗಿ,

- **ಕಷಾಯದ ಗುಟುಕು ಒಂದು:** ನೀವು ಯಾವುದೇ ಕೆಲಸಕ್ಕೆ ಮುಂದಾಗುವಾಗಲೂ ರಾಹುಕಾಲ, ಗುಳಿಕಳಿಕಾಲ ನೋಡುವುದಕ್ಕಿಂತಲೂ ನಿಮ್ಮ ಹೆಂಡತಿಯ ಮೂಡ್ ನೋಡಿ ನಿರ್ಧರಿಸಿದರೆ, ಪಾಸಿಟಿವ್ ರಿಸಲ್ಟ್ ಜಾಸ್ತಿ
- **ಕಷಾಯದ ಗುಟುಕು ಎರಡು:** ಬೀದಿ ಹೊಡೆದಾಟದಲ್ಲಿ ಆಕಸ್ಮಾತ್ ನೀವು ಸಿಲುಕುವಂಥ ಪ್ರಸಂಗ ಬಂದಲ್ಲಿ, ನೀವು ಸೋತರೆ ಮನೆಯಲ್ಲಿರುತ್ತೀರಿ. ಗೆದ್ದರೆ ಜೈಲಿನಲ್ಲಿರುತ್ತೀರಿ
- **ಕಷಾಯಕ್ಕೊಂಚೂರು ಬೋಳುಕಾಳು: (ಮಜಕ್ಕೆ)** ಉತ್ತರ ಕನ್ನಡಿಗರ ಭಾಷಾ ಚಾತುರ್ಯತೆಯನ್ನು ನೋಡ ಬೇಕೆಂದರೆ, ನ್ಯೂಟನ್‌ನ ನಿಯಮಗಳ ಬಗ್ಗೆಯಾದರೂ ಕೇಳಿ, ಹೊಸದೊಂದು ನಿಯಮವನ್ನೇ ಸೃಷ್ಟಿಸಿ ಇದು ನ್ಯೂಟನ್ನನದ್ದೇ ಎಂದು ನಂಬಿಸಿಬಿಡುತ್ತಾರೆ!

ದಾಸಸಾಹಿತ್ಯದ ಒಳನೋಟ

ಮಾತಿನೊಳಗಣ ಧಾತು
ಲೇ: ಡಾ. ವಿದುಷಿ ಶ್ಯಾಮಲಾ ಪ್ರಕಾಶ್
ಪ್ರ: ವಿದ್ಯಾದರ ಕನ್ನಡ ಪ್ರತಿಷ್ಠಾನ

» ವಿಕ್ರಮ ಜೋಶಿ

ಮನುಷ್ಯ ವಿಶೇಷವಾದುದು ಸಾಹಿತ್ಯ ಮತ್ತು ಸಂಗೀತ. ಈ ಎರಡರಲ್ಲೂ ಸಾಧನೆ ಮಾಡಿದವರು ಡಾ. ವಿದುಷಿ ಶ್ಯಾಮಲಾ ಪ್ರಕಾಶ್ ಅವರು. ಪ್ರಾಚೀನ ಕನ್ನಡ ಸಾಹಿತ್ಯದ ಸಮಗ್ರ ಅಧ್ಯಯನ ಹಾಗೂ ಸಂಗೀತ ದಲ್ಲಿ ರಾಷ್ಟ್ರಮಟ್ಟದ ಸಾಧನೆಯನ್ನು ಮಾಡಿರುವ ಇವರದ್ದು ವಿಶಿಷ್ಟವಾದ ವ್ಯಕ್ತಿತ್ವ. ದಾಸ ಸಾಹಿತ್ಯದ ಕುರಿತಾಗಿರುವ ಈ ಪುಸ್ತಕದಲ್ಲಿ ಸಾಹಿತ್ಯ ಹಾಗೂ ಸಂಗೀತ ಎರಡನ್ನೂ ವಿಶೇಷವಾಗಿ ಚರ್ಚಿಸಲಾಗಿದೆ. ದಾಸ ಸಾಹಿತ್ಯದ ಉದಯಕ್ಕೆ ಪ್ರೇರಣೆ, ದಾಸ ಸಾಹಿತ್ಯದ ಪರಂಪರೆ, ಮಹಿಳಾ ದಾಸ ಸಾಹಿತಿಗಳು, ದಾಸ ಸಾಹಿತ್ಯದಲ್ಲಿ ಸಂಗೀತ ಹಾಗೂ ಸಂಗೀತದ ಉಪಕರಣಗಳ ಚಿತ್ರಣ ಹೀಗೆ ಐದು ಭಾಗಗಳು ಇಲ್ಲಿವೆ. ಮೊದಲ ಭಾಗವು ದಾಸ ಸಾಹಿತ್ಯದ ಹಿನ್ನೋಟ ಹಾಗೂ ರಚನೆಗೆ ಪ್ರೇರಕ ಘಟನೆಗಳ ಚರ್ಚೆಯಾಗಿದೆ. ದಾಸ ಪರಂಪರೆಯ ಪಕ್ಷಿನೋಟ ಹಾಗೂ ಅವರು ವಿರಚಿಸಿದ ಸಾಹಿತ್ಯದ ವಿಮರ್ಶೆಯು ಎರಡನೆಯ ಭಾಗ. ಮೂರನೆಯ ಭಾಗವು ಮಹಿಳಾ ದಾಸಸಾಹಿತ್ಯಕ್ಕೆ ಮೀಸಲಾಗಿದ್ದು ಅದು ಈ ಪುಸ್ತಕದ ಪ್ರಮುಖ ವಿಭಾಗ. ದಾಸ ಸಾಹಿತ್ಯದಲ್ಲಿ ಸಂಗೀತದ ಪಾತ್ರ ಬಹಳ ಮಹತ್ವವಾದುದ್ದು. ದಾಸ ಸಾಹಿತ್ಯದ ಸಂಗೀತದ ಚಿತ್ರಣವನ್ನು ನಾಲ್ಕನೇ ಭಾಗವಾಗಿ ಓದಬಹುದು. ದಾಸರು ಒಂದೇ ಬಗೆಯ ಸಾಹಿತ್ಯವನ್ನು ರಚಿಸಿರಲಿಲ್ಲ. ಕೀರ್ತನೆ, ಸುಳಾದಿ, ಉಗಾಭೋಗ, ವೃತ್ತನಾಮ ಮೊದಲಾದ ಪ್ರಕಾರಗಳಲ್ಲಿ ಸಾಮಾಜಿಕ ಪ್ರಯೋಗಗಳನ್ನು ನಡೆಸಿದರು. ಕೊನೆಯದಾಗಿ ದಾಸರು ಬಳಸುತ್ತಿದ್ದ ವಾದ್ಯಗಳ ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ರಾವಣ ಹಸ್ರ, ಸುಷಿರ ವಾದ್ಯ, ತತ್ ವಾದ್ಯ, ಶೃಂಗ ವಾದ್ಯ, ಪುರಾತನ ಸಾರಂಗಿ, ನಾಗಫಣಿ ವಾದ್ಯ ಇವೆಲ್ಲ ಅಪರೂಪದ ಮಾಹಿತಿಗಳು.

ಇಮ್ಮಡಿ ಪುಲಿಕೇಶಿಯ ಯುದ್ಧ ಸಾಹಸಗಳನ್ನು ವಿವರಿಸುವ ಕಾದಂಬರಿ ವಾತಾಪಿ, ಐತಿಹಾಸಿಕ ವಿವರಗಳಿಂದ ಗಮನ ಸೆಳೆಯುತ್ತದೆ.

ಐತಿಹಾಸಿಕ ವಾತಾಪಿಯ ಕಥನ

» ವಿದ್ಯಾ ಭಟ್



ವಾತಾಪಿ
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್
ಬೆಲೆ ರು. 449/-

ಸದಾ ಅನ್ಯರು ಹೆಚ್ಚಾಗಿ ಬರೆದ ಸೋಲಿನ ಕಥೆಯನ್ನೇ ಕೇಳಿ ಕೇಳಿ ಭಿನ್ನಗಾಯದ ಮನಕ್ಕೆ, ಸಂತೋಷ ಕುಮಾರ ಮೆಹೆಂದಳೆಯವರ 'ವೈಜಯಂತೀಪುರ'ದಂತೆ ಗೆಲುವಿನ ದಂಡಯಾತ್ರೆಯಂತೆ 'ವಾತಾಪಿ' ಕೂಡ ನಮ್ಮನ್ನು ಆ ಕಾಲಕ್ಕೆ ಸೆಳೆದೊಯ್ದು ಕೂರಿಸಿಬಿಡುತ್ತದೆ. ಸುಮಾರು 400 ಪುಟಗಳ ಕಾದಂಬರಿ 'ವಾತಾಪಿ'. ಅಜೇಯ ಕರ್ಣಾಟ ಬಲಂ ಸೈನ್ಯ ಮತ್ತು ನೌಕಾಪಡೆ ಕಟ್ಟಿ, ಕತ್ತಿಯ ಮೊನೆಯಲ್ಲಿ ಹರಿದು ಹಂಚಿ ಹೋಗಿದ್ದ ಸಾಮಂತಿಕೆಗೆ ತೃಪ್ತಿಪಟ್ಟಿದ್ದ ರಾಜವಂಶಗಳನ್ನು ಏಕಚಕ್ರಾಧಿಪತ್ಯದಡಿಯಲ್ಲಿ ತಂದು, ಸವಾಲೆಸೆದ ಉತ್ತರಾಪಥೇಶ್ವರ ಹರ್ಷವರ್ಧನನಿಗೆ ಜಗತ್ತೇ ಬೆರಗಾಗುವಂತೆ ಉತ್ತರ ನೀಡಿ, ದಕ್ಷಿಣಾಪಥೇಶ್ವರ ಬಿರುದಾಂಕಿತನಾಗಿ ಸತ್ಯ, ಧರ್ಮ, ಕಲೆ, ಸಾಹಿತ್ಯ, ವ್ಯಾಪಾರ, ವಹಿವಾಟಿನ ಮೂಲಕ ನಾಡನ್ನು ಸಮೃದ್ಧವಾಗಿಸಿ ಅಖಂಡ ಸಾಮ್ರಾಜ್ಯಲಕ್ಷ್ಮಿಯನ್ನು ಆಳಿದ ಪ್ರಚಂಡ ಪರಾಕ್ರಮಿಯ ಜೈತ್ರಯಾತ್ರೆ ವಾತಾಪಿ!

ಕನ್ನಡದ ಅಸ್ಮಿತೆಯ ಸಾರಭೂತವೂ ವೀರರಸ ಪ್ರಧಾನವೂ ಆದ ಐತಿಹಾಸಿಕ ಶೌರ್ಯಗಾಥೆಯನ್ನು, ಲೇಖಕ ಮೆಹೆಂದಳೆಯವರು ಅಂಗೈ ಮೇಲಿನ ರಂಗಸ್ಥಳದಲ್ಲಿ ರಣರಂಗವನ್ನೇ ಕಾಣಿಸಿ ಕದನ ಕುತೂಹಲ ಸೃಷ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೇವಲ ನೌಕಾಪಡೆ ಯುದ್ಧ ಎಂದು ಕೇಳಿದ್ದವರಿಗೆ, ನಿಜಕ್ಕೆ ತಾಂತ್ರಿಕವಾಗಿ ಆಗಿನ ಕಾಲಾವಧಿಯಲ್ಲಿ ಹೇಗೆಲ್ಲ ಇದ್ದಿತ್ತು ಎಂದು ಓದುಗನನ್ನು, ನೌಕೆಯ ಮೇಲೆ ನಿಲ್ಲಿಸಿ ಯುದ್ಧ ವೀಕ್ಷಣೆಗೆ ಅನುವು ಮಾಡಿಕೊಡುತ್ತಾರೆ. ಐತಿಹಾಸಿಕ ದಾಖಲೆಗಳ ಪೂರಕ ಅಡಿ ಟಿಪ್ಪಣಿಗಳನ್ನು ನೀಡಿ ಸಮರ್ಥನೆ ನೀಡಿದ್ದಾರೆ.

ಸತತ ನೂರಕ್ಕೂ ಹೆಚ್ಚು ಅಡಿ ಟಿಪ್ಪಣಿಗಳ ಮೂಲಕ ಪ್ರತಿ ಘಟನೆ ಮತ್ತು ಇತಿಹಾಸದ ಕಥಾನಕ್ಕೆ ಪೂರಕ ಸಾಕ್ಷಿ ಒದಗಿಸುತ್ತಾ, ಪ್ರಸ್ತುತ ತಮ್ಮದೇ ಶೈಲಿಯಲ್ಲಿ ಕಾದಂಬರಿ ರಚನೆ ಮಾಡುತ್ತಾ, ಹದಿನೆಂಟು ಶತಮಾನಗಳ ಹಿಂದಿನ ಕಾಲಕ್ಕೆ ನಮ್ಮ ಚಿತ್ತ ಒಯ್ದು ನಿಲ್ಲಿಸುವ ಮೂಲಕ ಲೇಖಕ ಓದುಗರ ಚಿತ್ತಕ್ಕೆ ಲಗ್ಗೆ ಹಾಕುವ ಪರಿ ಅನನ್ಯ.

ಆಗಿನ ಕಾಲದ ಯುದ್ಧ ಚಿತ್ರಣಗಳು, ವ್ಯೂಹಗಳ ಚಿತ್ರಣ ನಮ್ಮನ್ನು ಅಕ್ಷರಶ: ಯುದ್ಧರಂಗದ ತುದಿಯೆತ್ತರದಲ್ಲಿ ನಿಂತು ನೋಡುತ್ತಿರುವ ಅನುಭವಕ್ಕೆ ಈಡು ಮಾಡುತ್ತವೆ. ಕಾದಂಬರಿಯ ವಸ್ತು 'ವಾತಾಪಿ'. ಅಂದರೆ ಈಗಿನ ಬಾದಾಮಿ. ಶ್ರೀವಲ್ಲಭ ಜಯಸಿಂಹನಿಂದ ಇಮ್ಮಡಿ ಪುಲಕೇಶಿಯವರೆಗೆ ಎಲ್ಲರೂ ಹೋರಾಡಿದ್ದು ಚಾಲುಕ್ಯರ ರಾಜಧಾನಿ ವಾತಾಪಿಯ ವಿಸ್ತರಣೆಗಾಗಿ. ಹಿರಿಯ ರಾಜಮಾತೆಯಿಂದ ಹಿಡಿದು ಅಮಾತ್ಯ, ದಂಡನಾಯಕರಾದಿಯಾಗಿ ಸಾಮಾನ್ಯ ಪ್ರಜೆಯವರೆಗೆ ಎಲ್ಲರದ್ದೂ ವಾತಾಪಿಗೆ ಅಖಂಡ ನಿಷ್ಠೆ.. ಅದೇ ಹೆಸರನ್ನೇ ಕಾದಂಬರಿಗೆ ಇರಿಸಿರುವುದು ಸೂಕ್ತವೇ ಆಗಿದೆ.

17 ಅಧ್ಯಾಯಗಳಲ್ಲಿ 6 ಯಶಸ್ವೀ ದಂಡಯಾತ್ರೆಗಳು, ಜಯಸಿಂಹ, ರಣರಾಗ, ಪುಲಕೇಶಿ-1, ಕೀರ್ತಿವರ್ಮ, ಮಂಗಳೇಶ, ದಾಶಭಟ, ಬಕ್ಕಣ, ರವಿಕೀರ್ತಿ, ಇಮ್ಮಡಿ, ಕುಬ್ಜ ವಿಷ್ಣುವರ್ಧನ, ಹರ್ಷವರ್ಧನ, ಧಾರಾಶ್ರಯ, ದುರ್ಲಭಾದೇವಿ, ರಂಗವಲ್ಲಿ, ವಿಕ್ರಮಾದಿತ್ಯ. ಕದಂಬಾ ದೇವಿ, ಪಲ್ಲವ ನರಸಂಹ ವರ್ಮನ್, ಮಹೇಂದ್ರ ವರ್ಮನ್, ಹ್ಯೂಎನ್ ತ್ಸಾಂಗ್.. ಇತ್ಯಾದಿ ನೆನಪಿನಂಗಳದಲ್ಲಿ ಅಚ್ಚಳಿಯದೇ ಉಳಿವ ಮಹಾ ಪಾತ್ರಗಳು. ಕೇವಲ ನಾಯಕ ಮಾತ್ರವಲ್ಲ ಪ್ರತಿ ಪಾತ್ರಗಳು ಅಲ್ಲಲ್ಲಿ ಬಂದು ಹೋದರೂ, ತಮ್ಮ ನೆನಪಿನ ಛಾಯೆ ಬಿಟ್ಟು ಹೋಗುವಂತೆ ಆಗಿನ ಕಾಲಘಟ್ಟಕ್ಕೆ ಸೇರಿಸಿ ಮಾಡಿರುವ ಪಾತ್ರ ಪೋಷಣೆ ಪರಿಣಾಮಕಾರಿಯಾಗಿದೆ. ನೂರರ ಹತ್ತಿರ ಪಾತ್ರಗಳಿದ್ದರೂ ಎಲ್ಲಿಯೂ ಕಲಸುಮೇಲೋಗರವಾಗದ ಹಿಡಿತ ಮತ್ತು ಆಯಾ ಕಾಲಘಟ್ಟಕ್ಕೆ ತಕ್ಕ ಪಾತ್ರದ ಪೋಷಣೆಯೂ ವಿಶೇಷ.

ಸಿಂಹಾಸನದ ಮೇಲಾಟದ ನಿರ್ಣಾಯಕ ಘಳಿಗೆಯಲ್ಲಿ 'ಯುವರಾಜಕುಮಾರ ಎರೆಯ ಕಾಣಿಸುತ್ತಿಲ್ಲ' ಎಂಬ ಬ್ರೇಕಿಂಗ್ ನ್ಯೂಸ್ ದಾವಾನಲದಂತೆ ಹಬ್ಬುವುದರೊಂದಿಗೆ ಪ್ರಾರಂಭವಾಗುವ ಕಾದಂಬರಿ ಕೊನೆಯವರೆಗೂ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ರಾಜವಾಡೆಯ ಆಪ್ತನೂ, ಸಾಮ್ರಾಜ್ಯದ ದಂಡನಾಯಕನೂ ಆದ ಬಕ್ಕಣ ಮತ್ತವನ ಕೆಲ ಸಿಪಾಯಿಗಳ ಪತ್ತೆಯಾದ ಮೃತ ದೇಹ, ಸುಳಿವಿಲ್ಲದ ಅಮಾತ್ಯ ದಾಶಭಟ, ಅವರದ್ದೊ ಇವರದ್ದೊ ಅಂತೂ ಫಲಿಸಿಸಿದ ತಂತ್ರಗಾರಿಕೆ, ಅನಿವಾರ್ಯ ಘಟ್ಟದಲ್ಲಿ ಎಂಬಂತೆ ಪಟ್ಟಕ್ಕೇರಿದ ಮಂಗಳೇಶ.. ಅವನ ಆಳ್ವಿಕೆ.. ಆಗಾಗ ನಾಪತ್ತೆಯಾಗುವ ಗೂಡಚಾರರು, ಮಂಗಳೇಶನ ಪಾಲಿಗೆ ಯಮಸ್ವರೂಪಿಯಾಗಿ ಎರಗಿದ ಎರೆಯ.

ಈ ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳ ಸಂಖ್ಯೆ ಕಡಿಮೆಯಾದರೂ ಅತ್ಯಂತ ಕ್ರಿಯಾಶೀಲ ಮತ್ತು ಗಟ್ಟಿಯಾದ ಪಾತ್ರಗಳು. ಹೆಚ್ಚು ಮಾತಿಲ್ಲ. ಆದರೆ ಆಡಿದ ಮಾತುಗಳೆಲ್ಲವೂ ಸದಾ ಕಿವಿಯಲ್ಲಿ ರಿಂಗಣಿಸುವಂತಹವುಗಳು, ನಡೆ ನುಡಿ ಎಲ್ಲವೂ ಅತ್ಯಂತ ಪ್ರಭಾವಶಾಲಿ. ಒಟ್ಟೂ ಕಥನವು ಓದುಗರ ಮನ ಸೆಳೆಯುತ್ತದೆ. ಇದಕ್ಕೆ ಪ್ರಮಾಣವೋ ಎಂಬಂತೆ ಇಪ್ಪತ್ತೊಂದು ದಿನಗಳಲ್ಲಿ ನಾಲ್ಕನೇ ಮುದ್ರಣವನ್ನು ಕಂಡಿದ್ದು 'ವಾತಾಪಿ'ಯ ಜನಪ್ರಿಯತೆಯನ್ನು ತೋರುತ್ತದೆ.

ಕಾದಂಬರಿಯ ಒಟ್ಟಂದವನ್ನು ನೋಡುವಾಗ ಕೆಲವು ಪದಗಳ ಪುನರುಕ್ತಿ ಹಾಗೂ ಕಣ್ತಪ್ಪಿನಿಂದಾದ ಮುದ್ರಣ ದೋಷ ಮಾನ್ಯವಾಗಿಬಿಡುತ್ತದೆ. ಅಲ್ಲಲ್ಲಿ ಒದಗಿಸಲಾದ ನಕಾಶೆಗಳು, ಶಾಸನಗಳ ಚಿತ್ರಗಳು, ಪುರಾತನ ಮಾಹಿತಿಗಳ ಕಡತ ವಿವರಣೆ, ಒಬ್ಬ ಐತಿಹಾಸಿಕ ಕಾದಂಬರಿಕಾರನಿಗೆ ಇರಬೇಕಾದ ಒಲವನ್ನು ಅತ್ಯಂತ ಸ್ಪಷ್ಟವಾಗಿ ತೋರಿಸುತ್ತದೆ. ಕಾದಂಬರಿಯ ಕೊನೆಯಲ್ಲಿ 'ಸಶೇಷ' ಎಂದಿರುವ ಲೇಖಕರು, ವಾತಾಪಿ-ಭಾಗ 2ರಲ್ಲಿ ವಿಕ್ರಮಾದಿತ್ಯ ವಿನಯಾದಿತ್ಯರು ಪಲ್ಲವನ ಕಂಚಿಯನ್ನು ಮರುಗೆದ್ದು ಚಾಲುಕ್ಯ ಸಾಮ್ರಾಜ್ಯ ಪುನಃಪ್ರತಿಷ್ಠಾಪನೆ ಮಾಡಿದ ಕಥನವನ್ನು ಬರೆಯುವೆ ಎಂದು ಹೇಳಿದ್ದು ಗಮನ ಸೆಳೆಯುತ್ತದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1

ಪೂರ್ಣಚಂದ್ರ ತೇಜಸ್ವಿ
(ಸಂವಾದ- ಸಂದರ್ಶನ - ಪರಿಸರ ಸಂಕಥನ)
ಲೇ: ನರೇಂದ್ರ ರೈ ದೇರ್ಲ
ಪ್ರ: ಕನಸು ಪ್ರಕಾಶನ, ಪುತ್ತೂರು
ಬೆಲೆ : ರೂ 180/-

2

ನನ್ನಕ್ಕ ನಿಲೂಫರ್
(ಕಥೆಗಳು)
ಲೇ: ಮಿತ್ರಾ ವೆಂಕಟ್ರಾಜ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 195/-

3

ಮಾರ ಮಿಂದನು
(ಬಳಗಾರರ ಹೊಸ ಕತೆಗಳು)
ಲೇ:ಶ್ರೀಧರ ಬಳಗಾರ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 200/-

4

ಇದೇ ಅಂತರಂಗ ಸುದ್ದಿ 2
(ಅಂಕಣ ಬರಹಗಳು)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 250/-

5

ಪುಟ್ಟಿಗೊಂದು ಪುಟ್ಟಿ
(ನನ್ನ ಕಂದಮ್ಮಗಳ ಕಥನ)
ಲೇ: ನಾಗತಿಹಳ್ಳಿ ಚಂದ್ರಶೇಖರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು
ಬೆಲೆ : ರೂ 180/-

6

ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿ
(ಐತಿಹಾಸಿಕ ಕಾದಂಬರಿ)
ಲೇ: ಡಾ। ಲಕ್ಷ್ಮಣ ಕೌಂಟೆ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 450/-

7

ಪ್ಯಾಲೆಸ್ಟೀನ್‌ನ ಮಕ್ಕಳು
(ಯುದ್ಧದ ಅನುಭವ ನೀಡುವ ಪ್ಯಾಲೆಸ್ಟೀನ್ ಕತೆಗಳು)
ಲೇ: ಘಸನ್ ಕನಫನಿ
ಅನು : ರವಿ ಹಂಪಿ
ಪ್ರ: ಸಂಕಥನ, ಮಂಡ್ಯ
ಬೆಲೆ : ರೂ 250/-

8

ಪಿ.ಎಚ್.ಸಿ. ಕವಲುಗುಡ್ಡ 24/7
(ಕಾದಂಬರಿ)
ಲೇ: ಡಾ.ಲಕ್ಷ್ಮಣ ವಿ.ಎ
ಪ್ರ: ಕ್ರಿಯೇಟಿವ್ ಪುಸ್ತಕ ಮನೆ, ಕಾರ್ಕಳ
ಬೆಲೆ: ರೂ 250/-

9

ಈ ವರೆಗಿನ ಕಥೆಗಳು
ಲೇ:ಶ್ರೀಧರ ಬನವಾಸಿ
ಪ್ರ: ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 600/-

10

ಕರ್ನಾಟಕ ಜನಪದ ಕಲೆಗಳು
(ಜನಪದ ಕಲೆಗಳ ವಿಸ್ತೃತ ಪರಿಚಯ)
ಲೇ: ಗೊ.ರು.ಚನ್ನಬಸಪ್ಪ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 450/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಉತ್ತರಾಯಣದಲ್ಲಿ ಸಿಕ್ಕ ವಾತ್ಸಲ್ಯ ಪಥ

ಒಡನಾಟ
» ಶ್ರೀಧರಮೂರ್ತಿ ಎನ್.ಎಸ್.

ಬಾಲ್ಯದಿಂದಲೂ ನಾನು ಇಷ್ಟಪಟ್ಟು ಓದುತ್ತಿದ್ದ ಬಲ್ಲಾಳರ ಜೊತೆಗಿನ ನನ್ನ ಸಂಬಂಧ ಶುರುವಾಗಿದ್ದು ಕಹಿಯಿಂದ. ನಾನು ಮಲ್ಲಿಗೆ ಮಾಸಪತ್ರಿಕೆಯ ಜವಾಬ್ದಾರಿ ತೆಗೆದುಕೊಳ್ಳುವ ಮೊದಲು ಅವರದೊಂದು ಕಿರುಕಾದಂಬರಿ ಆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದಕ್ಕೆ ಅವರಿಗೆ ಸಂಭಾವನೆ ಹೋಗಿರಲಿಲ್ಲ. ಈ ಹಿಂದೆ ಕೂಡ ಅದಕ್ಕಾಗಿ ಪತ್ರಗಳನ್ನು ಬರೆದಿದ್ದರೂ ಸಂಬಂಧಪಟ್ಟವರು ಗಮನಿಸರಲಿಲ್ಲ. ನನ್ನ ಟೇಬಲ್ ಮೇಲೆ ಅವರ ಅತ್ಯಂತ ಕಟುವಾದ ಪತ್ರ ಬಂದು ಕುಳಿತಿತು. ನಾನು ಆತಂಕದಿಂದ ತನಿಖೆ ಮಾಡಿದಾಗ ಅದಕ್ಕೆ ಸಂಬಂಧಪಟ್ಟ ಪತ್ರ ಸಂಪಾದಕೀಯ ವಿಭಾಗದಿಂದ ಲೆಕ್ಕ ಪತ್ರ ವಿಭಾಗಕ್ಕೆ ಹೋಗಿರಲಿಲ್ಲ. ಇದು ಗುಮಾಸ್ತರ ಮಟ್ಟದಲ್ಲಿ ಆಗಿದ್ದ ತಪ್ಪು. ಅದನ್ನು ಸರಿಪಡಿಸಿ ಅವರಿಗೆ ಗೌರವ ಧನ ಕಳುಹಿಸಿದೆ.

ಆದರೂ ಅವರ ಕೋಪ ಸುಲಭಕ್ಕೆ ಕರಗಲಿಲ್ಲ. 'ಬರೆಸಿಕೊಂಡು ಹೀಗೆ ಸತಾಯಿಸುವುದಾ?' ಎಂದು ನನ್ನನ್ನು ತರಾಟೆಗೆ ತೆಗೆದುಕೊಂಡರು. ಪತ್ರಿಕೆಯ ಒಳಗಿನ ಸಂಗತಿಗಳನ್ನು ಲೇಖಕರ ಬಳಿ ಹೇಳಲಾಗುವುದಿಲ್ಲ, ಹೇಳಲೂಬಾರದು. ಆದರೆ ಇಲ್ಲಿಂದ ಮುಂದೆ ಅವರ ಅಂತರಂಗಕ್ಕೆ ಪ್ರವೇಶ ದೊರಕಿತು. ಚಂದದ ಕಥೆಗಳನ್ನು ಬರೆದುಕೊಟ್ಟರು. ಅವರ ಮನೆಗೆ ಹೋದರೆ ಪ್ರೀತಿಯಿಂದ ಕಾಣುತ್ತಿದ್ದರು. ಬರುತ್ತೇನೆ ಎಂದರೆ ಸಾಕು ಉತ್ಸಾಹದಿಂದಕಾಯುತ್ತಿದ್ದರು. ಕದಿರೇನ ಹಳ್ಳಿಯ ಅವರ ಮನೆ 'ಉತ್ತರಾಯಣ' ನನಗೆ ಸದಾ ತೆರೆದ ಬಾಗಿಲಾಗಿತ್ತು. ಅವರ ಜೊತೆಗಿನ ಒಡನಾಟ ಕೊಟ್ಟ ಅನುಭವ ಅಪಾರ. ಅವರ 75ನೆಯ ವರ್ಷದ ಕಾರ್ಯಕ್ರಮವನ್ನು ಚಿತ್ರಕಲಾ ಪರಿಷತ್ತಿನಲ್ಲಿ ಮಾಡಿದೆವು. ಅದು ಅವರಿಗೆ ಬಹಳ ಸಂತೋಷವನ್ನು ಕೊಟ್ಟಿತ್ತು.

ನಾನು ಮೊದಲು ಓದಿದ್ದ ಬಲ್ಲಾಳರ ಕೃತಿ 'ಹೇಮಂತ ಗಾನ'. ನಾನು ಆಗ ಹತ್ತನೇ ತರಗತಿಯಲ್ಲಿದ್ದೆ; ಒಂದೇ ದಿನ ಮಧ್ಯಾಹ್ನದ ಊಟವನ್ನೂ ಬಿಟ್ಟು ಆ ಕಾದಂಬರಿಯನ್ನು ಓದಿದ್ದೆ. ಉಡುಪಿ, ಅಲ್ಲಿಂದ ಮುಂಬಯಿ, ಸ್ವಾತಂತ್ರ್ಯ ಹೋರಾಟದ ವಾಸ್ತವಗಳು ಹೀಗೆ ಎಷ್ಟೋ ದಿನ ಕಾಡಿದ ಕಾದಂಬರಿಯದು. ಮುಂದೆ ಹುಡುಕಿ ಅವರ ಕೃತಿಗಳನ್ನು ಓದಲು ಆರಂಭಿಸಿದೆ. 'ಅನುರಕ್ತೆ' ಭಾವನಾತ್ಮಕ ನೆಲೆಯಲ್ಲಿ ರೂಪುಗೊಂಡ ಕಾದಂಬರಿ. ಇಲ್ಲಿನ ರುಕ್ಮಿಣಿ ಮತ್ತು ಹೇಮಾ ಪಾತ್ರಗಳು ಕಾಡುತ್ತವೆ. ಅದು ಚಲನಚಿತ್ರವೂ ಆಯಿತು. ವಿಚಿತ್ರ ಎಂದರೆ ಸೆನ್ಸಾರ್ ಸಮಸ್ಯೆಗಳನ್ನೂ ಎದುರಿಸಿತು. ಕೌಟಂಬಿಕ ನೆಲೆಯಲ್ಲಿಯೇ ಬೆಳೆಯುವ ಇನ್ನೊಂದು ಮುಖ್ಯ ಕಾದಂಬರಿ 'ವಾತ್ಸಲ್ಯ ಪಥ'. 'ಉತ್ತರಾಯಣ' ಭಾವುಕತೆಯಂತೆಯೇ ವೈಚಾರಿಕತೆಯ ನೆಲೆಯನ್ನೂ ಗಾಢವಾಗಿ ಹೊಂದಿದ ಕಾದಂಬರಿ.

ಸರಿಯಾದ ಅವಕಾಶಗಳು ಸಿಕ್ಕದೆ ಗ್ರಾಮಗಳಲ್ಲಿ ಸಿಕ್ಕಿ ಬಿದ್ದವರು ನಗರದ ಕಡೆ ಚಲಿಸುತ್ತಾ ತಮ್ಮ ಜೀವನವನ್ನು ರೂಪಿಸಿಕೊಳ್ಳುವುದು ಬಲ್ಲಾಳರ ಕೃತಿಗಳ ಸ್ಥಾಯಿ ಭಾವ. ಈ ಚಲನೆ ಕೂಡ ಆದರ್ಶದ ಕಡೆಗಿನದು ಎನ್ನುವುದು ಮುಖ್ಯವಾದ ಸಂಗತಿ. ಅವರ ಕಾದಂಬರಿಗಳಲ್ಲಿ ಹೆಣ್ಣು ಗಂಡಿಗೆ ಸಮನಾಗಿ ಬದುಕನ್ನು ರೂಪಿಸಿಕೊಳ್ಳುತ್ತಾಳೆ. 'ಬಂಡಾಯ'ದಲ್ಲಿ ರಾಜೀವನ ನಿರ್ಗಮನದ ನಂತರ ಕೂಡ ಯಾಮಿನಿಯ ಹೋರಾಟದ ಹಾದಿ ಬದಲಾಗುವುದಿಲ್ಲ. ಹೆಜ್ಜೆಯಲ್ಲಿ ವಿದ್ಯಾಧರನ ಅಂತ್ಯದ ನಂತರ ಕೂಡ ಸಾವಿತ್ರಿಯ ಹೋರಾಟ ಮುಂದುವರೆಯುತ್ತದೆ. ಇದು ಅವರ ಭಾರತಿ, ಮಾಲತಿ, ಇಂದಿರೆ ಮೊದಲಾದ ಪಾತ್ರಗಳಿಗೂ ಅನ್ವಯಿಸುತ್ತದೆ.

ಅವರ ಕಾದಂಬರಿಗಳನ್ನು ಕುಟುಂಬ ಕೇಂದ್ರೀಕೃತವೆಂದೇ ಕರೆಯಬಹುದು, ವೈಚಾರಿಕ ಚಿಂತನೆಗಳು ಈ ಕೇಂದ್ರದ ಉಸಿರಾಗಿಯೇ ಬೆಳೆಯುವುದು ಒಂದು ವಿಶಿಷ್ಟ ತಂತ್ರಗಾರಿಕೆ. 'ಹೇಮಂತ ಗಾನ'ದ ಸ್ವಾತಂತ್ರ್ಯ ಹೋರಾಟದ ವಿವರಗಳು, ಪತ್ರಿಕೋದ್ಯಮದ ಸಮಸ್ಯೆಗಳು ಒಂದು ಕುಟುಂಬದ ಪ್ರಶ್ನೆಯನ್ನು ಅನುಸರಿಸಿಯೇ ಬಂದಿವೆ. 'ಬಂಡಾಯ'ದ್ದು ಒಳಗಿನ ಮತ್ತು ಹೊರಗಿನ ಹೋರಾಟ ಒಟ್ಟಿಗೇ ಸಾಗುವ ತಂತ್ರಗಾರಿಕೆ. ಹೆಜ್ಜೆಯಲ್ಲಿನ ಗಾಂಧಿವಾದದ ಪ್ರಶ್ನೆ, ಆಕಾಶಕ್ಕೆ ಕಂದೀಲು ಕೃತಿಯ ನಿರೋದ್ಯೋಗದ ಪ್ರಶ್ನೆ ಕುಟುಂಬದ ಹಿನ್ನೆಲೆಯಲ್ಲಿಯೇ ರೂಪುಗೊಂಡಿವೆ. ಇನ್ನು ಅನುರಕ್ತ, ಉತ್ತರಾಯಣ, ಹೇಮಂತ ಗಾನ ಎಲ್ಲವೂ ಕುಟಂಬದ ಕುರಿತ ವಸ್ತುವನ್ನು ನೇರವಾಗಿ ಹೊಂದಿದೆ. ಬಲ್ಲಾಳರು ಆಧುನಿಕತೆಯ ಒತ್ತಡ ಮತ್ತು ಪರಂಪರೆಯ ಹಾದಿ ಎರಡರ ನಡುವಿನ ಸಂಘರ್ಷವನ್ನು ಹಿಡಿಯಲು ಪ್ರಯತ್ನಿಸುತ್ತಾರೆ.

ಬಲ್ಲಾಳರು ಮಾನವತಾವಾದದ ನೆಲೆಗಳನ್ನು ಹಿಡಿದು ಸರಿ ಸುಮಾರು 50 ವರ್ಷಗಳಷ್ಟು ಬರೆದರು. ಇವರ ಕಾದಂಬರಿಗಳು, ಸಣ್ಣ ಕಥೆಗಳು ಪ್ರಮುಖ ಎನಿಸಿವೆ.

ಶೀಲ ಮತ್ತು ಮದುವೆ ಬಲ್ಲಾಳರ ಕಾದಂಬರಿಗಳ ಪ್ರಧಾನ ಮೌಲ್ಯಗಳು ವಾತ್ಯಲ್ಸ ಪಥದ ನಾಯಕಿ ಯಶೋದ ಮದುವೆಗೆ ಮೊದಲೇ ಗರ್ಭಿಣಿಯಾದರೂ ಶೀಲ ಕೆಡೆಸಿದವನನ್ನೇ ಮದುವೆಯಾಗುತ್ತಾಳೆ. ಹೇಮಂತ ಗಾನದ ಅನಂತ ವಿಧವಾ ವಿವಾಹವಾಗುವುದು ಅಪಘಾತದಲ್ಲಿ ಸಾಯವುದರಿಂದ ತಪ್ಪಿ ಹೋಗುತ್ತದೆ. ಉತ್ತರಾಯಣದಲ್ಲಿ ಕಂಡ ಕಂಡ ಹೆಣ್ಣುಗಳನ್ನು ಬಯಸುವ ಮೋಹನ, ವಿಧವೆ ರುಕ್ಮಿಣಿಯನ್ನು ಮದುವೆಯಾಗುವುದು ಅವಳು ಸಾಯವುದರಿಂದ ತಪ್ಪಿ ಹೋಗುತ್ತದೆ. ಬಂಡಾಯದ ಯಾಮಿನಿ ಮತ್ತು ರಾಜೀವರ ಸಂಬಂಧ ವೈಚಾರಿಕವಾಗಿಯೇ ಬೆಳೆಯುತ್ತದೆ. ಶೀಲದ ಗೆರೆ ದಾಟಲು ಈ ಸ್ತ್ರೀ ಪಾತ್ರಗಳಿಗೆ ಬಲ್ಲಾಳರು ವೈಚಾರಿಕ ತರ್ಕವನ್ನು ನೀಡಿದ್ದಾರೆ. ವಾತ್ಸಲ್ಯ ಪಥದ ಶ್ರೀಧರ ಹೃದ್ರೋಗಿ, ಹೇಮಂತ ಗಾನದ ಪದ್ಮನಾಥ ಕ್ಷಯರೋಗಿ, ಉತ್ತರಾಯಣದ ಗೋವಿಂದ ಮನೋರೋಗಿ. ಬಂಡಾಯದ ಯಾಮಿನಿಯ ಪತಿ ಪೋಲಿಯೋ ರೋಗಿ. ಆದರೆ ಅವರ ಸ್ತ್ರೀಪಾತ್ರಗಳೆಲ್ಲವೂ ರೋಗ ಮುಕ್ತರು! ಇದನ್ನು ತಾತ್ವಿಕವಾಗಿ ಚರ್ಚಿಸಲು ವಿಪುಲ ಅವಕಾಶವಿದೆ.

ಓದಿದ್ದು ಮೆಟ್ರಿಕ್ ತನಕ

ಬಲ್ಲಾಳರು ಕಲಿತದ್ದು ಹಳೇ ಮೆಟ್ರಿಕ್ ವರೆಗೆ ಮಾತ್ರ. ಬದುಕಿನ ಅನಿವಾರ್ಯತೆ ಅವರನ್ನು ಮುಂಬಯಿಗೆ ಎಳೆಯಿತು. ಕಾಲ್ಟೆಕ್ಸ್ ಎಂಬ ವಿದೇಶಿ ಕಂಪನಿಯಲ್ಲಿ ಸ್ಟೆನೋ ಆಗಿ, ಮುಂದೆ ಹಿರಿಯ ಅಧಿಕಾರಿಯಾಗಿ ನಿವೃತ್ತಿಯವರೆಗೆ ಅಲ್ಲೇ ಕಾರ್ಯನಿರ್ವಹಿಸಿದರು. ನಿವೃತ್ತರಾದ ಮೇಲೂ ಬಹಳಷ್ಟು ವರ್ಷಗಳು ಅವರು ಮುಂಬಯಿಯಲ್ಲೇ ಇದ್ದರು. ತಮ್ಮ ಕೊನೆಯ ಕೆಲವು ವರ್ಷಗಳನ್ನು ಅವರು ಬೆಂಗಳೂರಿನಲ್ಲಿ ಕಳೆದರು. ಮುಂಚಿನಿಂದಲೂ ಬಿಡುವಿನ ವೇಳೆಯಲ್ಲಿ ಬಲ್ಲಾಳರದ್ದು ಅವ್ಯಾಹತ ವಾಚನ ಮತ್ತು ಅಧ್ಯಯನ. ಅವರು ಮುಂಬಯಿಯ ಹಲವು ಸಂಸ್ಥೆಗಳಲ್ಲಿ ಆಗಾಗ ಸೇವೆ ಸಲ್ಲಿಸುತ್ತಿದ್ದುದೂ ಉಂಟು. ಅವರ ಈ ಅನುಭವಗಳನ್ನು ಕೇಳುವುದೇ ಒಂದು ವಿಶಿಷ್ಟ ಅನುಭವವಾಗಿತ್ತು. ಇದನ್ನು ಹೇಳಲೇ ಎಷ್ಟೋ ಸಲ ಅವರು ನನ್ನನ್ನು ತಮ್ಮ ಮನಗೆ ಕರೆಸಿ ಕೊಂಡಿದ್ದೂ ಉಂಟು.

ಬಲ್ಲಾಳರ ಐದಾರು ದಶಕಗಳ ಸುದೀರ್ಘ ಅವಧಿಯಲ್ಲಿ ಬರೆದ ನೂರಾರು ಕಥೆಗಳಲ್ಲಿ ಮುಂಬಯಿ ನಗರದ ಮಧ್ಯಮ ವರ್ಗೀಯರ ನೋವು ಮತ್ತು ನಲಿವು ಇವೆರಡನ್ನೂ ಸಮಾನವಾಗಿ ಬಿಂಬಿಸಿದ್ದಾರೆ. ಮತ್ತೊಂದು ವಿಚಾರವೆಂದರೆ ಮುಂಬಯಿ ನಗರದ ಪ್ರಮುಖ ಭಾಷಿಗರಾದ ಮರಾಠಿಗರ ಜೀವನವನ್ನು, ಮರಾಠಿ ಕಾದಂಬರಿಗಳಿಗಿಂತ ಬಲ್ಲಾಳರ ಕಥೆಗಳಲ್ಲೇ ಹೆಚ್ಚಾಗಿ ಕಾಣುತ್ತೇವೆ ಎಂದು ಶ್ರೀನಿವಾಸ ಹಾವನೂರು ಅವರು ಅಭಿಪ್ರಾಯ ಪಡುತ್ತಾರೆ. 'ಸಂಪಿಗೆ', 'ಮಂಜರಿ', 'ಕಾಡು ಮಲ್ಲಿಗೆ', 'ತ್ರಿಕಾಲ' ಇವು ಬಲ್ಲಾಳರ ಪ್ರಮುಖ ಕಥಾ ಸಂಕಲನಗಳು. ನುಡಿ ಪತ್ರಿಕೆಯಲ್ಲಿ ಸ್ವಾತಂತ್ರ್ಯದ ಸಮಯದ ರಾಜಕೀಯ ಅಭಿಪ್ರಾಯಗಳು ಮತ್ತು ಕಾರ್ಮಿಕ-ಶ್ರಮಿಕ ವರ್ಗದವರ ದ್ವನಿಯಾಗಿ ಬಲ್ಲಾಳರು ಮಾಡಿದ ಕೆಲಸ ಅಪಾರವಾದದ್ದು. ಆ ಪತ್ರಿಕೆ ನಡೆದದ್ದು ನಾಲ್ಕು ವರ್ಷಗಳು ಮಾತ್ರವೇ ಆದರೂ ಬಲ್ಲಾಳರಲ್ಲಿ ಅದು ಮೂಡಿಸಿದ ಚಿಂತನೆಗಳು ಬಲ್ಲಾಳರ ಕಾದಂಬರಿಗಳಲ್ಲಿ ಗಣನೀಯವಾಗಿ ಮುಂದುವರೆದಿದೆ. ಬಲ್ಲಾಳರು ಮಾನವತಾವಾದದ ನೆಲೆಗಳನ್ನು ಹಿಡಿದು ಸರಿ ಸುಮಾರು ಐವತ್ತು ವರ್ಷಗಳಷ್ಟು ಬರೆದರು. ಗಾಂಧಿವಾದದ ಮೇರನ್ನು ಕಂಡಂತೆ ಅದು ಕೊನೆಗೆ ಲೇವಡಿಗೆ ತಿರುಗಿದ ಕಾಲವನ್ನೂ ಕಂಡರು. ಆದರೆ ಅವರ ಬದ್ಧತೆ ಮತ್ತು ಸ್ಪಷ್ಟತೆ ನಿರಂತರವಾಗಿ ಉಳಿದು ಬಂದಿತ್ತು. ಅದು ಅವರ ವ್ಯಕ್ತಿತ್ವದಲ್ಲಿಯೇ ಇತ್ತು. ಈ ಕಾರಣಕ್ಕಾಗಿಯೇ ಅವರು ಸದಾ ಕಾಡುತ್ತಾರೆ.

ಶತಮಾನದ ಸಂಭ್ರಮದಲ್ಲಿ ಮೈಸೂರು ಅಸೋಸಿಯೇಷನ್

« ಮೊದಲ ಪುಟದಿಂದ

ದತ್ತಿ ನಿಧಿ ಸ್ಥಾಪನೆ

ಸಂಸ್ಥೆಯ ಚಿನ್ನದ ಹಬ್ಬದ ನೆನಪಿಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿ ದತ್ತಿ ನಿಧಿಯೊಂದನ್ನು ಸ್ಥಾಪಿಸಿ ಕನ್ನಡ ವಿಭಾಗದ ಮೂಲಕ ಅರ್ಥಪೂರ್ಣ ಕಾರ್ಯಕ್ರಮ ಗಳನ್ನು ಮುಂಬಯಿ ಕನ್ನಡಿಗರಿಗೆ ಅದು ಉಣಬಡಿಸಿದೆ. ಈ ಮಾಲಿಕೆಯಲ್ಲಿ ಈಗಾಗಲೇ ಶಿವರಾಮ ಕಾರಂತ, ಕೀರ್ತಿ ನಾಥ ಕುರ್ತಕೋಟಿ, ಚಂದ್ರಶೇಖರ ಕಂಬಾರ, ಯು. ಆರ್. ಅನಂತ ಮೂರ್ತಿ, ಡಾ. ಎಂ.ಎಂ.ಕಲಬುರ್ಗಿ, ಡಾ.ಸೂರ್ಯನಾಥ ಕಾಮತ್, ಡಾ. ಜಿ. ಎಸ್. ಶಿವರುದ್ರಪ್ಪ, ಡಾ. ಹಾ.ಮಾ.ನಾ. ಮೊದಲಾದವರು ಪ್ರಬಂಧ ಗಳನ್ನು, ಉಪನ್ಯಾಸಗಳನ್ನು ಮಂಡಿಸಿದ್ದಾರೆ. ಕನ್ನಡ ಮರಾಠಿ ಕಲಾತ್ಮಕ ಸಿನಿಮಾಗಳ ಪ್ರದರ್ಶನ, ಕನ್ನಡ ಮರಾಠಿ ಸಂತ ಸಾಹಿತ್ಯ,ಸಂಗೀತ ಕಾರ್ಯಕ್ರಮ ಗಳನ್ನು ನಡೆಸಿ ಈ ಎರಡು ಸಂಸ್ಕೃತಿಗಳನ್ನು ಮತ್ತಷ್ಟು ಹತ್ತಿರ ತಂದಿದೆ.

ಚಲನಚಿತ್ರ ಉತ್ಸವ

1960ರಿಂದ ಮುಂಬೈಯಲ್ಲಿ ಕನ್ನಡ ಚಲನಚಿತ್ರಗಳ ಉತ್ಸವವನ್ನು ಅಸೋಸಿಯೇಷನ್ ಮೂವತ್ತು ವರ್ಷಗಳ ಕಾಲ ನಡೆಸಿಕೊಂಡು ಬಂದದ್ದು ದೊಡ್ಡ ಸಾಧನೆ. ಕಲೆ,ನಾಟಕ, ಸಂಗೀತ, ರಂಗಭೂಮಿ ಮೊದಲಾದ ಚಟುವಟಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಕನ್ನಡವಲ್ಲದೇ, ಮರಾಠಿ, ಗುಜರಾತಿ, ಇಂಗ್ಲೀಷ್ ನಾಟಕಗಳಿಗೂ ಇಲ್ಲಿ ಅವಕಾಶ ಮಾಡಿಕೊಟ್ಟಿದೆ. ಬಹುಭಾಷಾ ನಾಟಕೋತ್ಸವೊಂದನ್ನು 1986 ರಲ್ಲಿ ಮೊದಲು ಮಾಡಿದ್ದು ಇಂದಿನವರೆಗೂ ಅದು, ಶ್ರೀರಂಗರ ನೆನಪಿನಲ್ಲಿ ನಡೆಯುತ್ತಿದೆ. ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಜಬ್ಬಾರ್ ಪಟೇಲ್, ಸತ್ಯದೇವ ದುಬೆ, ಎಂ. ಎಸ್. ಸತ್ಯು, ನಾದಿರಾ ಬಬ್ಬರ್, ರಮೇಶ್ ತಲ್ವಾರ್, ರಾಮಚಂದ್ರನ್ ಅವರು ನಾಟಕಗಳನ್ನು ಆಡಿದ್ದಲ್ಲದೆ, ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದಾರೆ ಕರ್ನಾಟಕೋತ್ಸವದ ಹೆಸರಿನಲ್ಲಿ ಅಸೋಸಿಯೇಷನ್ ವೈವಿಧ್ಯಮಯವಾಗಿ 5 ದಿನಗಳ ಕಾರ್ಯಕ್ರಮವನ್ನು ಮೂರು ಬಾರಿ ಹಮ್ಮಿಕೊಂಡಿದೆ. ಈ ಉತ್ಸವದಲ್ಲಿ ಕರ್ನಾಟಕದ ಅಡುಗೆಗಳು, ಪ್ರವಾಸಕ್ಷೇತ್ರಗಳು, ಸಾಹಿತ್ಯ-ಸಾಹಿತಿ. ಕವನ ಗಾಯನ, ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತ, ನಾಟಕಗಳ ಪ್ರದರ್ಶನ. ಹಾಗು ಕರ್ನಾಟಕದ ಕರ ಕುಶಲ ಕೈಗಾರಿಕೆಗಳು ಎಲ್ಲವನ್ನೂ ಒಂದು ಹಬ್ಬದ ಮಾದರಿಯಲ್ಲಿ ಆಚರಿಸಿದೆ. ಅನೇಕ ವಿದ್ವಾಂಸರು ಸಂಗೀತ ಕಲಾವಿದರು ತಮ್ಮ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಆರ್. ಕೆ. ಶ್ರೀಕಂಠನ್, ಆರ್.ಕೆ. ಪದ್ಮನಾಭ್, ಸುಕನ್ಯಾ ಪ್ರಭಾಕರ್, ಡಾ. ಟಿ.ಎಸ್.ಸತ್ಯವತಿ, ಎಂ. ಎಸ್. ಶೀಲಾ, ವಿದ್ವಾನ್ ವೀಣೆ ಶಂಕರನಾರಾಯಣ ರಾವ್ ಇವರಲ್ಲಿ ಮುಖ್ಯರಾದವರು.

ಶಾಕುಂತಲ ನಾಟಕ

ತಂತ್ರಜ್ಞರಾದ ಬಾಂಬೆ ರಾಮಸ್ವಾಮಿಯವರು ಮೈಸೂರು ಅಸೋಸಿಯೇಷನ್ ಬೆಳವಣಿಗೆಯಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿದರು. ಲೇಖಕರಾಗಿದ್ದ ಚಂದ್ರಶೇಖರ ಶರ್ಮ ಅವರ ಮುಂದಾಳತ್ವದಲ್ಲಿ ಅಸೋಸಿಯೇಷನ್‌ನಲ್ಲಿ ಒಂದು ಶಾಲೆಯು ಆರಂಭವಾಯಿತು. ಕಲಾವಿದ ಗಂಗಾಧರಯ್ಯನವರು ಒಂದು ನಾಟಕ ತಂಡವನ್ನು ಕಟ್ಟಿ ಬಸವಪ್ಪ ಶಾಸ್ತ್ರಿಗಳ 'ಶಾಕುಂತಲ' ನಾಟಕವನ್ನು 1929ರಲ್ಲಿ ಇಲ್ಲಿನ ನಪ್ಪು ಹಾಲ್‌ನಲ್ಲಿ ಪ್ರದರ್ಶನ ಮಾಡಿದರು.

ಜಾಗತಿಕ ಕಥಾ ಸ್ಪರ್ಧೆ

ಕಳೆದ ಅನೇಕ ವರ್ಷಗಳಿಂದ ಜಾಗತಿಕ ಕವನ ಸ್ಪರ್ಧೆ, ಜಾಗತಿಕ ಸಣ್ಣ ಕಥಾ ಸ್ಪರ್ಧೆ, ಕನ್ನಡ ಏಕಾಂಕ ನಾಟಕ ಸ್ಪರ್ಧೆಗಳನ್ನು ಮೊದಲು ಮಾಡಿ, ಹೊಸ ಹೊಸ ಬರಹಗಾರರಿಗೆ ಸ್ಫೂರ್ತಿಯನ್ನು ನೀಡಿದೆ. ಮುಂಬೈಯಲ್ಲಿ ಅಸೋಸಿಯೇಷನ್ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಗಳ ಉಳಿವಿಗಾಗಿ ಎಂದೂ ಟೊಂಕ ಕಟ್ಟಿ ನಿಂತಿದೆ. ಕಳೆದ 99 ವರ್ಷಗಳಿಂದ, ಮುಂಬೈಯಲ್ಲಿ ಸಾಂಸ್ಕೃತಿಕ ರಾಯಭಾರಿಯಾಗಿ ಕೆಲಸ ಮಾಡುತ್ತಾಬಂದಿದೆ. 2006 ರಲ್ಲಿ ಸುವರ್ಣ ಕರ್ನಾಟಕದ ಸಮಯದಲ್ಲಿ ಕರ್ನಾಟಕ ಸರಕಾರದ ಕನ್ನಡ -ಸಂಸ್ಕೃತಿ ಇಲಾಖೆಯೊಡನೆ ಸೇರಿಕೊಂಡು ದೊಡ್ಡ ಪ್ರಮಾಣದಲ್ಲಿ 3 ದಿನಗಳ ನಡೆದ ಸಾಂಸ್ಕೃತಿಕ ಸಮ್ಮೇಳನದ ಮುಂದಾಳತ್ವವನ್ನು ವಹಿಸಿತ್ತು. 1952, 1976, 1986, 2001 ರಲ್ಲಿ ಅಸೋಸಿಯೇಷನ್ ತನ್ನ ಬೆಳ್ಳಿ, ಬಂಗಾರ, ವಜ್ರ ಹಾಗೂ ಅಮೃತ ಹಬ್ಬಗಳನ್ನು ಅದ್ದೂರಿಯಿಂದ ಆಚರಿಸಿದೆ. ಒಂದು ಕಾಲದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ಆರಂಭಿಸಿದ ಈ ಸಂಸ್ಥೆ ಇಂದು ಇತಿಹಾಸ ನಿರ್ಮಾಣ ಮಾಡಿದೆ. ಒಂದು ಮನೆಯ ವಾತಾವರಣವನ್ನು ಈ ಸಂಸ್ಥೆ ಇಂದಿಗೂ ಉಳಿಸಿಕೊಂಡು ಬಂದಿದೆ. ಕೂಡಿ ದುಡಿದು ಹಂಚಿ ತಿನ್ನುವ, ಸಹಕಾರ ಪದ್ಧತಿಗೆ ಒಂದು ಮೇಲ್ಪಂಕ್ತಿಯನ್ನು ಇಲ್ಲಿನ ಸದಸ್ಯರು ಹಾಕಿಕೊಟ್ಟಿದ್ದಾರೆ. ಶಿಸ್ತು, ಅಚ್ಚುಕಟ್ಟುತನ, ಸಮಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಕಾರ್ಯನಿರತರಾಗಿ ರುವ, ಈಗ ಶತಮಾನದ ಸಂಭ್ರಮದಲ್ಲಿ ಇರುವ ಮೈಸೂರು ಅಸೋಸಿಯೇಷನ್‌ನ ಎಲ್ಲ ಸದಸ್ಯರನ್ನು ಅಭಿನಂದಿಸಲೇ ಬೇಕು.

ಮಡಕೆಗೆ ಬೀಸಿದ ಕಲ್ಲು ತಲೆಗೆ!

» ಅನುಪಮಾ ಮಂಗಳವೇಢೆ, ಶಿಕಾಗೊ



ಈಶ ಆಶ್ರಮಕ್ಕೆ ಹೋದ ಮೊದಲಲ್ಲಿ ಕಾಲಿಗೆ ಚಪ್ಪಲಿ ಹಾಕಿ ಓಡಾಡುತ್ತಿದ್ದೆ. ದಿನವೂ ಬಹಳ ದೂರ ನಡೆದು ಅಭ್ಯಾಸವಿಲ್ಲವಾದ್ದರಿಂದ, ಮುಂಚಿತವಾಗಿಯೇ ಇದ್ದ ಹೀಲ್‌ಸ್ಪರ್ (ಹಿಮ್ಮಡಿ ನೋವು) ಉಲ್ಬಣಗೊಂಡಿತ್ತು. ಚಪ್ಪಲಿ ಹಾಕುವುದನ್ನೇ ಬಿಟ್ಟೆ. ಹೇಗಿದ್ದರೂ ಬರಿಗಾಲಲ್ಲಿ ನಡೆಯುವುದು ದೇಹಕ್ಕೆ, ಆರೋಗ್ಯಕ್ಕೆ ಒಳ್ಳೆಯದೆಂದು ಸದ್ಗುರು ಹೇಳುವುದನ್ನು ಕೇಳಿದ್ದೆ. ಬರಿಗಾಲಲ್ಲಿ ನಡೆಯಲಾರಂಭಿಸಿದ ಮೇಲೆ ಹಿಮ್ಮಡಿ ನೋವೂ ಕಡಿಮೆಯಾಯಿತು. ಆದರೂ ಡಿಪಾರ್ಟ್ಮೆಂಟ್‌ನವರಲ್ಲಿ ವಿನಂತಿಸಿ, ಆಶ್ರಮದಿಂದ ಸೈಕಲ್ ಪಡೆದೆ. ಮುಂದಿನ ಎಂಟು ತಿಂಗಳೂ ಸೈಕಲ್ ನನ್ನ ವಾಹನವಾಯಿತು. ಸೈಕಲ್ ತುಳಿಯುವುದೂ ಬರಿಗಾಲಲ್ಲೇ. ಆಶ್ರಮದ ಹಲವೆಡೆ ಸೈಕಲ್ ಉಪಯೋಗಿಸುವಂತಿಲ್ಲ. ಅಲ್ಲೆಲ್ಲ ಕಾಲ್ನಡಿಗೆ. ಅಹಾ! ಬರಿಗಾಲಲ್ಲಿ ನಡೆಯುವ ಅನುಭವ ಅದೆಷ್ಟು ನಿರಾಳ! ಚಪ್ಪಲಿಯಿಲ್ಲದ ಕಾಲ್ನಡಿಗೆಯಿಂದಾಗಿ ಕಾಲಿಗೆ ಸಿಗುವ ಕಲ್ಲು, ಮರಳು, ಕೆಸರು, ಹುಲ್ಲು ಎಲ್ಲದರ ಅನುಭವ ಆಗುತ್ತಿತ್ತು. ಬೇಸಿಗೆಯ ಬಿಸಿಯಲ್ಲಿ ಕಾದ ಕಲ್ಲುಗಳಿಗೆ ಕಾಲುಗಳು ಒಗ್ಗಿಹೋಗಿದ್ದವು. ಭೂಮಿತಾಯಿಯೊಂದಿಗೆ ನಿರಂತರ ಸಂಪರ್ಕ ಏನು ಖುಷಿ!

ಯಾರಾದರೂ 'ನಿನ್ನ ತಲೆಗೆ ಏನಾಯಿತು?' ಎಂದು ಕೇಳಿದಾಗ 'ನನ್ನ ಬೋಳು ತಲೆಯನ್ನ ಮಡಕೆಯೆಂದು ಭಾವಿಸಿ, ಯಾರೋ ಕಲ್ಲಿನಿಂದ ಹೊಡೆದರು' ಎಂದು ನಗುತ್ತಾ ಹೇಳುತ್ತಿದ್ದೆ.

ಈ ಎಂಟು ತಿಂಗಳಲ್ಲಿ ನಾಲ್ಕೈದು ಬಾರಿ ಸೈಕಲಿಂದ ಬಿದ್ದು ಪೆಟ್ಟುಮಾಡಿಕೊಂಡೆ. ಸಲ್ವಾರಿನ ಅಂಚು ಸಿಕ್ಕಿಕೊಂಡೋ ದುಪ್ಪಟ ಹಿಂದಿನ ಚಕ್ರದ ಚೈನ್‌ಗೆ ಸಿಕ್ಕಿಕೊಂಡೋ ಬಿದ್ದಿದ್ದೆ. ಒಮ್ಮೆ ಮಂಡಿಗೆ ಪೆಟ್ಟಾಗಿದ್ದರೆ, ಇನ್ನೊಮ್ಮೆ ತಲೆಗೆ. ಮಗದೊಮ್ಮೆ ಮೊಳಕೈ. ಆಗೆಲ್ಲಾ ಈಶ ಕ್ಲಿನಿಕ್ಕಿಗೆ ಓಡು. ಸಾಧನಪಾದ ಕಾರ್ಯಕ್ರಮಕ್ಕೆ ಬಂದವರಲ್ಲಿ ಅನೇಕರು ವೈದ್ಯವೃತ್ತಿಯಲ್ಲಿ ಇದ್ದವರಿದ್ದರು. ಅವರ ಸೇವೆ ಈಶ ಕ್ಲಿನಿಕ್‌ನಲ್ಲಿ. ನನ್ನ ರೂಮ್ ಮೇಟ್ ಓರ್ವ ಫಿಸಿಕಲ್ ಥೆರಪಿಸ್ಟ್. ಆದರೆ ಅವಳ ಸಲಹೆ ಬೇಕೆಂದರೆ, ಕ್ಲಿನಿಕ್ಕಿನಲ್ಲೇ ಪಡೆಯಬೇಕು. ಅದು ಆಶ್ರಮದ ನಿಯಮ.

ತಲೆಯೊ ಮಡಕೆಯೊ?

ಗೋಕುಲಾಷ್ಟಮಿ ದಿನ ನಡೆದ ಒಂದು ಸಂಗತಿ. ಬಣ್ಣಬಣ್ಣದ ಚಿತ್ರಗಳಿಂದ ಅಲಂಕೃತವಾದ ಮಡಕೆಗಳು, ಹಸಿರು ತೋರಣಗಳು, ರಂಗವಲ್ಲಿಗಳು, ಪೂಜೆಗೊಂಡ ಹಸುಗಳು, ಶೃಂಗಾರಗೊಂಡ ಹೆಂಗಳೆಯರಿಂದ ಆಶ್ರಮ ನಂದಗೋಕುಲದಂತೆ ಕಾಣುತ್ತಿತ್ತು. ನಳಂದ ಮೈದಾನದಲ್ಲಿ ಆಟಗಳನ್ನು ಏರ್ಪಡಿಸಿದ್ದರು. ಅದರಲ್ಲೊಂದು ಆಟ ಹೀಗಿತ್ತು – ಜೋಡಿಸಿಟ್ಟ ಮಡಕೆಗಳಿಗೆ ಗುರಿಯಿಟ್ಟು, ದೂರದಿಂದ ಸ್ಲಿಂಗ್‌ಶಾಟ್‌ನೊಂದಿಗೆ ಕಲ್ಲಿನಿಂದ ಹೊಡೆಯಬೇಕು. ನೆಲದ ಮೇಲಿದ್ದ ಕಲ್ಲನ್ನು ತೆಗೆದುಕೊಳ್ಳಲು ಸ್ವಲ್ಪಕ್ಷಣ ಬಗ್ಗಿ, ನಂತರ ನಿಂತೆ. ಹಿಂದಿನಿಂದ ಯಾರೋ ಗುರಿಯಿಟ್ಟು ಹೊಡೆದ ಕಲ್ಲೊಂದು ನನ್ನ ತಲೆಗೆ ಬಂದು ಹೊಡೆಯಿತು. ಸ್ವಲ್ಪ ಹೊತ್ತು ಆ ಜಾಗಕ್ಕೆ ಕೈಒತ್ತಿ ಹಿಡಿದು ನಿಂತೆ. ನೋವಿಗೆ ಕಣ್ಣಲ್ಲಿ ನೀರು ತುಂಬಿತ್ತು. ಅಲ್ಲಿದ್ದವರು ನನ್ನ ಸುತ್ತ ನೆರೆದರು. ಏನಾಗಿಲ್ಲ ಆರಾಮವಾಗಿದ್ದೇನೆ ಎನ್ನುತ್ತ ತಲೆಯಿಂದ ಕೈತೆಗೆದರೆ, ಕೈಯೆಲ್ಲ ರಕ್ತ! ನನ್ನ ಜೊತೆಯಿದ್ದ ಸ್ನೇಹಿತೆಯೊಬ್ಬಳು ಕೂಡಲೇ ನನ್ನನ್ನು ಈಶ ಕ್ಲಿನಿಕ್ಕಿಗೆ ಕರೆದುಕೊಂಡು ಹೋದಳು. ಆಮೇಲೆ ಎಲ್ಲ ಸರಿಹೋಯಿತೆನ್ನಿ. ಆದರೆ, ಯಾರಾದರೂ 'ನಿನ್ನ ತಲೆಗೆ ಏನಾಯಿತು?' ಎಂದು ಕೇಳಿದಾಗ 'ನನ್ನ ಬೋಳು ತಲೆಯನ್ನ ಮಡಕೆಯೆಂದು ಭಾವಿಸಿ, ಯಾರೋ ಹಿಂದಿನಿಂದ ಕಲ್ಲಿನಿಂದ ಹೊಡೆದರು' ಎಂದು ನಗುತ್ತಾ ಹೇಳುತ್ತಿದ್ದೆ. ನಾನಲ್ಲಿದ್ದಾಗ 15ನೇ ವಾರ್ಷಿಕ ಗ್ರಾಮೋತ್ಸವ ನೋಡುವ ಸದವಕಾಶ ಸಿಕ್ಕಿತ್ತು. ವಾಲಿಬಾಲ್, ಥ್ರೋಬಾಲ್, ಮತ್ತು ಕಬಡಿ ಮೂಲಕ ಗ್ರಾಮೀಣ ಆಟಗಳ ಹುರುಪನ್ನು ಮರಳಿ ತರುವುದು ಮತ್ತು

ನಶಿಸಿಹೋಗುತ್ತಿರುವ ಸಾಂಪ್ರದಾಯಿಕ ಕಲಾಪ್ರಕಾರಗಳನ್ನು ಪುನರುಜ್ಜೀವನಗೊಳಿಸುವುದಕ್ಕಗಿ ಗ್ರಾಮೋತ್ಸವ ನಡೆಯುತ್ತದೆ. ಇದರ ವೈಶಿಷ್ಟ್ಯವೆಂದರೆ ತಂಡದ ಎಲ್ಲ ಆಟಗಾರರು ಒಂದೇ ಗ್ರಾಮದವರಾಗಿರುವುದು. ಇಡೀ ಗ್ರಾಮವು ಒಟ್ಟುಗೂಡಿ, ಗ್ರಾಮೀಣ ಜೀವನದ ಉತ್ಸಾಹವನ್ನು ಮರಳಿ ತರುತ್ತಾರೆ. ಇದು ವೃತ್ತಿಪರ ಆಟಗಾರರಿಗೆ ಪಂದ್ಯಾವಳಿಯಲ್ಲ. ಗ್ರಾಮದ ಪ್ರತಿ ಯೊಬ್ಬರೂ ಭಾಗವಹಿಸಲು ಪ್ರೋತ್ಸಾಹಿಸುವ ವೇದಿಕೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ವಿವಿಧ ಮಟ್ಟಗಳಲ್ಲಿ ಆಡಿ ಗೆದ್ದ ತಂಡಗಳು, ಅಂತಿಮ ಘಟ್ಟದಲ್ಲಿ ಆಡುವುದು ಆದಿಯೋಗಿಯ ಮುಂಭಾಗದಲ್ಲಿ. ನಮ್ಮ ದಿನಚರಿ ಮುಗಿದಾದ ಮೇಲೆ ಸ್ವಲ್ಪ ಹೊತ್ತು ಹೋಗಿ, ಆಟಗಳನ್ನು ನೋಡಿ ಬರುತ್ತಿದ್ದೆವು. ಈ ವರ್ಷದ ಗ್ರಾಮೋತ್ಸವದ ಅಂತಿಮ ಪಂದ್ಯಾವಳಿಯಲ್ಲಿ ಕರ್ನಾಟಕದ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಇದ್ದದ್ದು ಸಂತೋಷದ ವಿಷಯ.

ಡಮರು ಸೇವೆ

ಆಶ್ರಮದಲ್ಲಿ ನೂರಕ್ಕೂ ಹೆಚ್ಚು ವಿಭಾಗಗಳಿವೆ. ಕಾರ್ಯನಿರ್ವಹಣೆಗಾಗಿ, ಕಟ್ಟಡಗಳ ಒಳಗೆ, ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡಬೇಕಾದಂತಹ ಇಲಾಖೆಗಳೂ ಇವೆ. ಕಾರ್ಪೊರೇಟ್ ಕಂಪನಿಗಳ ರೀತಿಯ ಗಂಭೀರ ಪರಿಸರ ಇಲ್ಲೂ ಸೃಷ್ಟಿಯಾಗಬಾರದೆಂಬ ಉದ್ದೇಶದಿಂದ, ಡಮರು ಸೇವೆ ನಡೆಯುತ್ತದೆ. ಪ್ರತಿನಿತ್ಯ ಮಧ್ಯಾಹ್ನ 1:30ಕ್ಕೆ ಧ್ಯಾನಲಿಂಗದ ಮುಂದೆ ಡಮರು, ತಾಳ, ಕಂಜಿರ, ಡೋಲು ಮುಂತಾದ ವಾದ್ಯಗಳನ್ನು ಸ್ವಯಂಸೇವಕರು ಬಾರಿಸುತ್ತ ಸೇವೆ ಪ್ರಾರಂಭಿಸುತ್ತಾರೆ. ಕಂಪ್ಯೂಟರ್ ಮುಂದೆ ಕುಳಿತು ಕೆಲಸ ಮಾಡುವಂತಹ ಇಲಾಖೆಗಳ ಕಟ್ಟಡಗಳೊಳಗೆ ಪ್ರವೇಶಿಸಿ, ಆಫೀಸಿನೊಳಗಿನ ಕ್ಯೂಬಿಕಲ್ಸ್ ಸುತ್ತ ವಾದ್ಯಗಳನ್ನು ಬಾರಿಸುತ್ತ ಸುತ್ತು ಹಾಕುತ್ತಾರೆ. ಆ ಸಮಯದಲ್ಲಿ ಕೆಲಸ ಮಾಡುತ್ತಿರುವವರೂ ತಮ್ಮತಮ್ಮ ಕೆಲಸ ನಿಲ್ಲಿಸಿ, ಡಮರುವಿನ ಲಯಕ್ಕೆ ಚಪ್ಪಾಳೆ ಹಾಕುತ್ತಾರೆ. ಕೆಲವರು ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ತಾವೂ ಒಂದು ಸುತ್ತು ಬರುತ್ತಾರೆ. ನಿದ್ದೆ ಬರುತ್ತಿದ್ದರೆ, ಬೋರ್ ಆಗುತ್ತಿದ್ದರೆ, ವಾದ್ಯಗಳ ಶಬ್ದ ಮತ್ತು ಚಪ್ಪಾಳೆಯ ಪ್ರಕ್ರಿಯೆಯಿಂದಲೇ ಅವೆಲ್ಲ ದೂರವಾಗುತ್ತವೆ.

ಹಲವಾರು ಕಟ್ಟಡಗಳ ಭೇಟಿ ಮುಗಿಸಿ ಧ್ಯಾನಲಿಂಗದ ಮುಂದೆಯೇ ಸೇವೆ ಕೊನೆಗೊಳ್ಳುತ್ತದೆ. ಇದನ್ನು ಮಾಡಲಿಕ್ಕೆ, ತಿಂಗಳಲ್ಲೊಂದು ದಿನದ ಸರದಿ, ನಮ್ಮ ವಿಭಾಗದವರಿಗಿತ್ತು. ಆಶ್ರಮದ ಹಾದಿಯಲ್ಲಿ ವಾದ್ಯಗಳನ್ನು ಬಾರಿಸುತ್ತ ನಡೆಯುತ್ತಿದ್ದರೆ, ಯಾವುದೋ ಪ್ರಪಂಚದಲ್ಲಿ ಇದ್ದ ಅನುಭವ. ಅಮೆರಿಕ ಜೀವನದಲ್ಲಿ ಈ ರೀತಿಯಾಗಿ ಮಾಡಲು ನನಗೆಲ್ಲಿ ಸಿಗಬೇಕು ಇಂತಹ ಅವಕಾಶಗಳು?

anu2nitin@gmail.com (ಮುಂದುವರಿಯುವುದು)

ತಿಂಗಳ ತಿಂಡಿ ಕೂಟ!

ತಿಂಗಳಿಗೊಮ್ಮೆ ತಿಂಡಿ ತಿನ್ನಲು ಹೊಟೆಲ್‌ನಲ್ಲಿ ಸೇರುವವರ ಕೂಟಕ್ಕೆ, ಯಾವ ತಿಂಡಿ ಆಯ್ದುಕೊಳ್ಳ ಬೇಕು ಎಂದು ಗೊಂದಲವಾದಾಗ, ಸಹಾಯ ಮಾಡಿದವಳು ಚೂಟಿಯಾದ ಸ್ವಾಗತಕಾರಿಣಿ!

ಲಹರಿ
» ಜಿ. ವಿ. ಅರುಣ

ತಿರುಪತಿ ಪ್ರಸಾದ ಎಂದರೆ ಬಾಯಲ್ಲಿ ನೀರೂರುತ್ತದೆ. ದೇವರ ಮೇಲಿನ ಭಕ್ತಿ, ಪ್ರೀತಿ, ಹೆದರಿಕೆಗಳ ಪ್ರಭಾವದಿಂದ ಆ ಪ್ರಸಾದವನ್ನು ಸ್ವೀಕರಿಸು ವವರಷ್ಟೇ ಪ್ರಸಾದದ ರುಚಿಯ ಆಸೆಗೆ ಸ್ವೀಕರಿಸುವವರು ಇರುತ್ತಾರೆ – ಇದು ಈಗ ಕೆಲವು ತಿಂಗಳ ಹಿಂದೆ ಲೇಖನವನ್ನು ಪ್ರಾರಂಭಿಸಿದಾಗ ಬರೆದ ಸಾಲುಗಳು. ಅನಂತರ ತುಪ್ಪದ ದೆಸೆಯಿಂದ ಆ ವಾಕ್ಯಗಳನ್ನು ವರ್ತಮಾನದಿಂದ ಭೂತ ಮಾಡುವ ಪರಿಸ್ಥಿತಿ ಬಂದದ್ದು ಎಲ್ಲರಿಗೂ ತಿಳಿದ ವಿಚಾರ. ಹಾಗಿರುವುದರಿಂದ ಆ ವಾಕ್ಯಗಳನ್ನು ತಿದ್ದಲು ಹೋಗುವುದಿಲ್ಲ. ಏಕೆಂದರೆ ಈಗ ತಿರುಪತಿ ಪ್ರಸಾದವು ನಂದಿನಿಯಲ್ಲಿ ಮುಳುಗೆದ್ದು ಪಾವನವಾಗಿ ಹೋಗಿದೆ.

ಮೊನ್ನೆ ವಾಯುವಿಹಾರಿ ಸ್ನೇಹಿತರೆಲ್ಲ ತಿಂಗಳ ಮೊದಲವಾರ ಸೇರುವ ಬೆಳಗಿನ ಉಪಹಾರಕ್ಕೆ ಜಮಾಯಿಸಿದ್ದೆವು. ಎರಡು ದಿನಗಳು ವಾಯುವಿಹಾರಕ್ಕೆ ಬಂದಿರದಿದ್ದ ಸ್ನೇಹಿತರೊಬ್ಬರು ಓಡೋಡಿ ಹೋಟೆಲಿನೊಳಕ್ಕೆ ಬಂದು 'ಒಂದು ನಿಮಿಷ ತಾಳಿ! ಮೊದಲು ಇದನ್ನು ತೆಗೆದುಕೊಳ್ಳಿ' ಎಂದು ಬಿಳಿಯ ಪ್ಲಾಸ್ಟಿಕ್ ಚೀಲವನ್ನು ಮೇಲೆತ್ತಿ ಹಿಡಿದರು. ಅದರ ಚೆಂಡಿನ ಆಕಾರ ನೋಡಿದೊಡನೆ ನಾವು ಮೂರುನಾಲ್ಕು ಜನ 'ತಿರುಪತಿ ಪ್ರಸಾದ!' ಎಂದು ಕ್ವಿಜ್‌ನಲ್ಲಿ ಉತ್ತರ ಕಂಡುಹಿಡಿದವರಂತೆ ಜೋರಾಗಿ ಹೇಳಿದೆವು. ಅಲ್ಲಿ ಕುಳಿತಿದ್ದವರ ಮುಖಗಳೆಲ್ಲ ಅರಳಿದವು. ಎಲ್ಲರೂ ಬಲಗೈಯನ್ನು ಮುಂದೆ ಚಾಚಿ, ಆ ಅಂಗೈಯಲ್ಲಿ ಆದಷ್ಟೂ ದೊಡ್ಡ ಕುಳಿ ಬರುವಂತೆ ಕೆಳಕ್ಕೆ ಬಾಗಿಸಿ, ಅದರ ಕೆಳಗೆ ಎಡಗೈಯನ್ನು ಆಧಾರಕ್ಕೆ ಹಿಡಿದು, ಪ್ರಸಾದ ಪಡೆಯಲು ಸಿದ್ಧರಾದರು. ತಿರುಪತಿಯಿಂದ ಪ್ರಸಾದ ಸಮೇತ ಹಿಂದಿರುಗಿದ್ದವರು ಎಲ್ಲರ ಕೈಗೂ ಅಷ್ಟಷ್ಟು ಲಾಡುವನ್ನು ಹಾಕಿದರು. ಹೋಟೆಲಿನ ಸ್ವಾಗತಕಾರಿಣಿ ಯುವತಿಯು ಮುಂದೆ ಬಂದು, ತನ್ನ ಕೈಯನ್ನು ಚಾಚಿದಳು.

ಅನಂತರ ತಿಂಡಿ ತಿನ್ನಲು ಕುಳಿತಿದ್ದವರಲ್ಲೇ ತಿರುಪತಿ ಲಾಡುವಿನ ಬಗ್ಗೆ ಮಾತುಕತೆ ಪ್ರಾರಂಭವಾಯಿತು. 'ತಿರುಪತಿ ಪ್ರಸಾದದ ರುಚಿ ಯಾವ ಹೋಟೆಲ್ಲಿನ ಸಿಹಿತಿಂಡಿಗೂ ಬರುವುದಿಲ್ಲ' ಒಬ್ಬರು ಹೇಳಿದರು.

'ಹೌದು, ಅಪ್ಪಟ ತುಪ್ಪದಲ್ಲಿ ಕರೀತಾರಲ್ಲ ಅದಕ್ಕೆ ಇರಬೇಕು' ಒಬ್ಬರು ತಮ್ಮ ಅನಿಸಿಕೆಯನ್ನು ಹೇಳಿದರು.

'ಅದೆಲ್ಲಕ್ಕಿಂತ ಮುಖ್ಯವಾಗಿ ಅದಕ್ಕೆ ಸೇರಿಸುವ ಪದಾರ್ಥಗಳ ಅಳತೆಯ ಪ್ರಮಾಣವನ್ನು ನೂರಾರು ವರ್ಷಗಳಿಂದ ಮಾಡಿಮಾಡಿ ಕಂಡುಹಿಡಿದುಕೊಂಡಿದ್ದಾರೆ. ಅದಕ್ಕೆ ಅದು ಯಾವತ್ತೂ ಶ್ರೇಷ್ಠವಾಗೇ ಇರುವುದು' ಮಗದೊಬ್ಬರು ಸೇರಿಸಿದರು.

'ನನಗೆ ಅನ್ನಿಸುವುದು, ಅದಕ್ಕೆ ಹದವಾಗಿ ಸೇರಿಸಿರುವ ಶುದ್ಧ ಕೇಸರಿ ಮತ್ತು ಪಚ್ಚಕರ್ಪೂರ!' ಪ್ರಸಾದ ತಂದವರು ಹೇಳಿದಾಗ ಎಲ್ಲರೂ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಅಂದಿನ ಅತಿಥಿಸತ್ಕಾರದ ಹೊಣೆಹೊತ್ತವರು ಅತಿಥಿಗಳ ಲಕ್ಷ್ಯವನ್ನು ತಮ್ಮ ಕಡೆ ಸೆಳೆಯಲು 'ಈಗ ಇಲ್ಲಿ ಯಾವುದು ಶ್ರೇಷ್ಠ ಅದನ್ನು ಹೇಳಿ. ಉಪಹಾರಕ್ಕೆ ಅದನ್ನೇ ಹೇಳೋಣ' ಎಂದರು. ತಕ್ಷಣವೇ ತಿರುಪತಿ ಲಾಡುವಿನ ದೆಸೆಯಿಂದ ವೆಂಕಟರಮಣನನ್ನು ನೆನೆಯಬೇಕಾಗಿದ್ದ ಎಲ್ಲರ ಗಮನವೂ ತಾವು ತಿನ್ನಬೇಕಾಗಿರುವ ಉಪಹಾರದ ಕಡೆಗೆ ಹೊರಳಿತ್ತು. ಎಷ್ಟಾದರೂ ಪರದಿಂದ ಇಹದ ಕಡೆಗೆ ಹಾರುವುದೇ ಸಾಮಾನ್ಯ ಸಜ್ಜನರ ಮನದ ಲಕ್ಷಣವಲ್ಲವೇ! ಇರಲಿ.

'ಈ ಹೊಟೆಲಿನಲ್ಲಿ ಇಡ್ಲಿ ವಡೆ ಸಾಂಬಾರ್ ಬೆಸ್ಟ್' ಒಬ್ಬರು ತಮ್ಮ ತೀರ್ಪನ್ನು ಹೇಳಿದರು.

'ನನಗೇನೊ ಇಲ್ಲಿಯ ಮಸಾಲೆದೋಸೆನೇ ಬೆಸ್ಟ್. ನನಗೆ ಒಂದು ಸ್ಪೆಷಲ್ ಮಸಾಲೆ' ಮತ್ತೊಬ್ಬರು ತಮ್ಮ ಮತವನ್ನು ಚಲಾಯಿಸಿದರು.

ಅವರ ಪಕ್ಕದಲ್ಲಿ ಕುಳಿತಿದ್ದವರು ನಮ್ಮ ಇಷ್ಟದ ತಿಂಡಿಗಳ ಪಟ್ಟಿಯನ್ನು ಬರೆದುಕೊಳ್ಳುತ್ತಿದ್ದ ಯುವತಿಯ ಕಡೆ ತಿರುಗಿ, 'ನೀವು ಯಾವ ಬೆಣ್ಣೆ, ತುಪ್ಪ ಹಾಕ್ತೀರಮ್ಮ?' ಎಂದು ಕೇಳಿದರು.

ಅವಳು ಬಹಳ ಚೂಟಿ, 'ನಮಗೆ ನಂದಿನಿ ಬಿಟ್ಟು ಬೇರೆ ಯಾವುದೂ ಗೊತ್ತೇ ಇಲ್ಲ ಸರ್. ನೀವೇ ತಿಂದಾಗ ಗೊತ್ತಾಗುತ್ತೆ' ಎಂದಳು.

ಆ ಹೋಟೆಲಿನಲ್ಲಿ ಉಪಯೋಗಿಸುವ ಬೆಣ್ಣೆ ತುಪ್ಪಗಳ ಬಗ್ಗೆ ಒಮ್ಮತ ಮೂಡಿದರೂ, ನಾವು ತಿನ್ನಬೇಕಾಗಿದ್ದ ತಿಂಡಿಯ ಬಗ್ಗೆ ಒಮ್ಮತ ಮೂಡಲಿಲ್ಲ. ಹಾಗಾಗಿ ತಾನು ಹಿಡಿದಿದ್ದ ಕಾಗದ ಮತ್ತು ಪೆನ್ನಿಗೆ ಕೆಲಸ ಕೊಡಲು ಆ ಯುವತಿಗೆ ಸಾಧ್ಯವಾಗಲಿಲ್ಲ. ಅವಳು ಮಧ್ಯಪ್ರವೇಶಿಸಿ 'ಸರ್, ಬೆಳಗ್ಗೆ ನಮಗೆ ತಿರುಪತಿ ಪ್ರಸಾದ ಕೊಡಿಸಿದ್ದೀರಿ. ಆ ಸಂತೋಷಕ್ಕೆ ನನ್ನ ಅಭಿಪ್ರಾಯ ಹೇಳ್ಲಾ' ಎಂದಳು.

ಎಲ್ಲರೂ ಸಂತೋಷದಿಂದ, ಒಮ್ಮತದಿಂದ 'ಹೇಳಮ್ಮ' ಎಂದೆವು.

'ಸರ್ ನೀವೆಲ್ಲ ಮೂರು ಟೇಬಲ್ಗಳಲ್ಲಿ ಕುಳಿತಿದ್ದೀರಿ. ಪ್ರತಿ ಟೇಬಲ್‌ಗು ಒಂದಷ್ಟು ಇಡ್ಲಿ ವಡೆ ತಂದು ಇಡ್ತೀನಿ. ಎಲ್ಲರೂ ಬೈಟು ಇಡ್ಲಿ, ಬೈಟು ವಡೆ ತಿನ್ನಿ. ಅಷ್ಟು ಹೊತ್ತಿಗೆ ಎಲ್ಲರಿಗೂ ಉಪ್ಪಿಟ್ಟು ಬಂದಿರುತ್ತೆ. ಅದು ಬೈಟು ಮಾಡಿಕೊಂಡು ಮುಗಿಸುವ ಹೊತ್ತಿಗೆ ಎಲ್ಲರಿಗೂ ಬಿಸಿಬಿಸಿ ಬೈಟು ಮಸಾಲೆ ದೋಸೆ ತರಿಸ್ತೀನಿ. ಆಗಬಹುದಾ?' ಎಂದಳು.

ಸ್ಪೆಷಲ್ ಮಸಾಲೆ ಬೇಡವೆ?

ಎಲ್ಲರ ಮುಖಗಳು ಅರಳಿದವು. 'ಸ್ಪೆಷಲ್ ಮಸಾಲೆ ಮಾಡಿಸಮ್ಮ' ದೋಸೆಪ್ರಿಯರು ಹೇಳಿದರು.

'ಆಗಲಿ ಸರ್. ಯಾರಿಗಾದರೂ ಎಕ್ಸ್ಟ್ರಾ ಇಡ್ಲಿ, ವಡೆ, ಉಪ್ಪಿಟ್ಟು ಬೇಕು ಅಂದರೆ ಹೇಳಿ' ಎಂದಳು. ಎಲ್ಲರು ಮೋಡಿಗೆ ಒಳಗಾದವರ ಹಾಗೆ ತಲೆಯಾಡಿಸಿದರು.

ನಮ್ಮಲ್ಲಿ ಒಬ್ಬರು 'ಎಲ್ಲರಿಗೂ ಅವರವರ ಇಷ್ಟದ ತಿಂಡಿ ಕೊಡ್ತೀನಿ ಅಂತ ಹೇಳಿದೆ. ಹಾಗೆ ಎಲ್ಲರಿಗೂ ಒಂದೊಂದು ಪೂರಿನು ಹೇಳ್ಬಿಡಮ್ಮ. ನನಗೆ ಅದು ಇಷ್ಟಾ' ಎಂದರು. 'ಅಯ್ಯೋ, ಸಾರಿ ಸರ್. ಮರ್ತೇ ಹೋಗಿತ್ತು! ಅವರಿಗೆಲ್ಲ ಒಂದೊಂದು ಪೂರಿ ನಿಮಗೆ ಎರಡು' ಎಂದು ನಗುತ್ತಾ ಹೇಳಿದಳು.

ಎಲ್ಲರೂ ಸಂತೋಷದಿಂದ ಎಲ್ಲಾ ತಿಂಡಿಗಳನ್ನು ತಿಂದು, ಸ್ವಲ್ಪ ಜಾಸ್ತಿನೇ ಆಗಿಹೋಯಿತು ಎಂದು ಮಾತಾಡಿಕೊಂಡೆವು. ಅಷ್ಟರಲ್ಲಿ ಆ ಯುವತಿ ಪ್ರತ್ಯಕ್ಷವಾಗಿ 'ಸರ್ ತಿಂಡಿನ ಬೈಟು ಮಾತ್ರ ತಿಂದಿದ್ದೀರಿ. ಕಾಫಿ ಬೈಟು ಬೇಡ, ನಿಧಾನಕ್ಕೆ ಒಂದು ಕಪ್ಪು ಸ್ಪೆಷಲ್ ಬಿಸಿಬಿಸಿ ಕಾಫಿ ಕುಡಿದುಬಿಡಿ' ಎಂದಳು. ಎಲ್ಲರೂ ಮರುಮಾತಿಲ್ಲದೆ ತಲೆ ಆಡಿಸಿದವು. ಮನೆಗೇನಾದ್ರು ಪಾರ್ಸಲ್ ಕಟ್ಟಿಸ್ಲಾ ಸರ್ ಎಂದು ಕೇಳಿ ಎಲ್ಲರ ಮುಖ ನೋಡಿದಳು. ತಿರುಪತಿ ಹೋಗಿ ಪ್ರಸಾದ ತಂದಿದ್ದವರು 'ಬಹಳ ಬುದ್ಧಿವಂತೆ! ನಾನೇನಾದರೂ ಹೋಟೆಲ್ ಪ್ರಾರಂಭ ಮಾಡಿದ್ರೆ, ಇವಳನ್ನೇ ಮ್ಯಾನೇಜರ್ ಮಾಡ್ಕೋತೀನಿ' ಎಂದರು. ಎಲ್ಲರೂ ಬಿಸಿಬಿಸಿ ಕಾಫಿ ಕುಡಿದು, ಸಂತೃಪ್ತರಾಗಿ, ಆತಿಥೇಯರಿಗೆ ಧನ್ಯವಾದ ಹೇಳಿ, ಈ ಬಾರಿ ತಿರುಪತಿ ಪ್ರಸಾದಭಾಗ್ಯದಿಂದ ಬೆಳಗಿನ ತಿಂಡಿಕೂಟ ಚೆನ್ನಾಗಿತ್ತು. ಮುಂದಿನ ತಿಂಗಳು ಯಾರದಪ್ಪ ಉಪಹಾರದ ಹೊಣೆ ಎನ್ನುತ್ತಾ ಮೇಲೆದ್ದೆವು.



ಬೆಳೆದಿದೆ ನೋಡ ಬೆಂಗಳೂರು ನಗರ

» ಕೆ.ಶ್ರೀನಿವಾಸರಾವ್. ಹರಪನಹಳ್ಳಿ

ಹಳೆಯ ಸಿನಿಮಾ 'ಮನೆ ಕಟ್ಟಿ ನೋಡು' ಇದರ ಜನಪ್ರಿಯ 'ಬೆಳೆದಿದೆ ನೋಡಾ ಬೆಂಗಳೂರು' ನಗರ ಗೀತೆ ಕೇಳುತ್ತಾ ತಲೆಯಾಡಿಸುತ್ತಿದ್ದೆ. ಕ್ಷಣಕಾಲ ಬೆಂಗಳೂರಿನಲ್ಲಿ ಪಿಯುಸಿ ವ್ಯಾಸಂಗಕ್ಕಾಗಿ ಕಳೆದ ಒಂದು ವರ್ಷ ಕಣ್ಣಮುಂದೆ ನೆನಪುಗಳ ಅಲೆಗಳಾಗಿ ಬಾರಾತ್ ನಡೆಸಿದವು !

1970 ರ ಸಮಯ. ನನ್ನೂರಿನಲ್ಲಿ ಪಿಯುಸಿ ಆಗಿನ್ನೂ ಅಲಭ್ಯವಿದ್ದ ಕಾರಣ ಮನೆಯಲ್ಲಿ ಆಗ್ರಹ, ಸತ್ಯಾಗ್ರಹಗಳ ಮೂಲಕ ಒಪ್ಪಿಸಿ ಬೆಂಗಳೂರಿನಲ್ಲಿ ಎಂ ಇ ಎಸ್ ಕಾಲೇಜಿನಲ್ಲಿ ಸೀಟು ಗಿಟ್ಟಿಸಿದ್ದೆ.ಶೇಷಾದ್ರಿಪುರಂನ ಹಾಸ್ಟೆಲಲ್ಲಿ ಊಟ,ವಸತಿ. ವ್ಹಾವ್ ! ಅಂದಿನ ದಿನಗಳು ಅದೆಷ್ಟು ಮಧುರ ! ಹಾಸ್ಟೆಲಿನಲ್ಲಿ ಆರ್ಮುಗಂ ಮಾಡುತ್ತಿದ್ದ ಅಡುಗೆ ಅದರಲ್ಲೂ ಕಿಲೋಮೀಟರುಗಳ ಆಚೆಗೂ ತನ್ನ ಸೊಗಸಾದ ಘಮವನ್ನು ಸೂಸುತ್ತಿದ್ದ ಆ ಸಾಂಬಾರ್, ಪಕ್ಕದ

ಮಿತಿಮೀರಿ ಬೆಳೆಯುತ್ತಿರುವ ಬೆಂಗಳೂರು ನಗರವು ಹಿಂದೆ ಬಹು ಶಾಂತವಾಗಿತ್ತು, ಟ್ರಾಫಿಕ್ ಸಮಸ್ಯೆ ಇಲ್ಲದ ಪಟ್ಟಣ ಎನಿಸಿತ್ತು!

ರೂಮಿನ ಬೀಚಿಯವರ ಅಣ್ಣನ ಮಗನ ರಂಗಭೂಮಿಯ ಒಡನಾಟ, ಆಗಾಗ ನಾಲಿಗೆ ರುಚಿಗೆ ಓಗೊಟ್ಟು ಭೋಜನ ಸವಿಯಲು ಹೋಗುತ್ತಿದ್ದ ಸಮೀಪದ ರಘು ಹೋಟೆಲ್, ಕೂಗಳತೆಯಲ್ಲಿದ್ದ ಕಲ್ಯಾಣ್ ಕೆಫೆಯ ಪರೋಟಾ, ಜನತಾ ಹೋಟೆಲಿನ ಕಾಲಿದೋಸೆ, ಮಲ್ಲೇಶ್ವರಂನ ಮಿಲ್ ಕಾರ್ನರ್ ಎದುರಿನ ಪಾರ್ಕಲ್ಲಿ ಪ್ರತಿ ಶನಿವಾರ ಉಚಿತ ಮನರಂಜನೆ ಆರ್ಕೆಸ್ಟ್ರಾ, ಅದೆಂತು ಮರೆಯಲಿ?

ಆದರೆ ಕಾಲೇಜು ಎಂದಾಕ್ಷಣ ಭಯವಾಗುತ್ತಿತ್ತು. ಕಾರಣ, ಹಳ್ಳಿಯಿಂದ ಬಂದಿದ್ದ ನನ್ನಲ್ಲಿನ ಕೀಳರಿಮೆ. ಸಹಪಾಠಿಗಳು ಠಸ್ ಪುಸ್ ಎಂದು ಇಂಗ್ಲೀಷಲ್ಲಿ ಮಾತಾಡಿಸಿದಾಗ ಕನ್ನಡ ಮೀಡಿಯಂನಲ್ಲಿ ಓದಿ ಬಂದಿದ್ದ ನನಗೆ ಹಿಂಜರಿಕೆಯಾಗುತ್ತಿತ್ತು. ಅದರಲ್ಲೂ ಯಾವುದೇ ಹುಡುಗಿಯರು ಮಾತನಾಡಿಸಿದರೆ ನಖಶಿಖಾಂತ ಬೆವರುತ್ತಿದ್ದೆ.

ಸಿನೆಮಾ ಬಗ್ಗೆ ಆಸಕ್ತಿಯಿದ್ದವನು ಕೊಂಚ ಜಾಸ್ತಿಯೇ ಸಿನೆಮಾ ನೋಡುತ್ತಿದ್ದೆ. ಅರ್ಧ ಕಿ.ಮೀ. ಅಂತರದಲ್ಲಿಯೇ ಸಂಪಿಗೆ, ಸ್ವಸ್ತಿಕ್, ನಟರಾಜ, ಸೆಂಟ್ರಲ್, ಕಿನೋ, ಗೀತಾಂಜಲಿ ಚಿತ್ರಮಂದಿರಗಳಿದ್ದವು. ನೆನೆದವರ ಮನದಲ್ಲಿ ಎಂಬಂತೆ ಹೋಗಿಬಿಡುತ್ತಿದ್ದೆ. ಆಗೆಲ್ಲ ಬೆಂಗಳೂರು ಸುಂದರ. ಎಲ್ಲಿಯೂ ಜನರ ಸಂದಣಿಯಿಲ್ಲ.ರಸ್ತೆಗಳು ಖಾಲಿ ಖಾಲಿ. ನಿರಾಳ, ಬಿಡುಬೀಸು ನಡಿಗೆ. ವಾಹನಗಳ ಸಂಖ್ಯೆ ಕಡಿಮೆ. ಹಲವು ಬಾರಿ ನಾವು ಗೆಳೆಯರು ನಡೆದುಕೊಂಡೇ ಮೆಜೆಸ್ಟಿಕ್ ತಲುಪಿ ಸಿನೆಮಾ, ಕಪಾಲಿ ಎದುರಿನಲ್ಲಿ ಕಬ್ಬಿನ ಹಾಲು ಸೇವನೆ, ಕೆಂಪೇಗೌಡ ಥಿಯೇಟರ್ ಕೆಳಗಿದ್ದ ವಿಷ್ಣು ಭವನ್ ಹೋಟೆಲಲ್ಲಿ ತಿಂಡಿ ತಿಂದು ಅಲ್ಲಿನ ಮ್ಯೂಸಿಕ್ ಮಷಿನಲ್ಲಿ 50 ಪೈಸೆ ಹಾಕಿ ನಮಗಿಷ್ಟ ಬಂದ ಚಿತ್ರಗೀತೆ ಕೇಳಿ ಬರುತ್ತಿದ್ದೆವು.

ಕಾಲೇಜಿಗೆ ರಜೆಯಿದ್ದಾಗಲೆಲ್ಲ ಅವೆನ್ಯೂ ರಸ್ತೆಯ ಸಾಲುಸಾಲು ಹಳೆಪುಸ್ತಕದ ಅಂಗಡಿಗಳಿಗೆ ಭೇಟಿ ಖಾಯಂ. ಖ್ಯಾತ ಲೇಖಕರ ಸೆಕೆಂಡ್ ಹ್ಯಾಂಡ್ ಕಾದಂಬರಿಗಳನ್ನು ಖರೀದಿಸಿ ಚೀಲ ಭರ್ತಿ ಮಾಡಿಕೊಂಡು ಬರುತ್ತಿದ್ದೆ. ನನ್ನಲ್ಲಿರುವ ಪುಸ್ತಕ ಸಂಗ್ರಹದಲ್ಲಿ ಅವುಗಳದೇ ಸಿಂಹಪಾಲು.

ಸಿನೆಮಾ ಕಟೌಟುಗಳು

ನಂತರ ಗಾಂಧಿನಗರದ ಗಲ್ಲಿಗಳಲ್ಲಿ ಸಿನೆಮಾ ಕಟೌಟುಗಳಿಗೆ ನಟ ನಟಿಯರ ಚಿತ್ರ ಬರೆಯುತ್ತಿದ್ದ ಸ್ಥಳಗಳ ಭೇಟಿ. ಅವರು ಚಿತ್ರ ಬಿಡಿಸುವ ಬಗೆಯ ಬಗ್ಗೆ ಅಧ್ಯಯನ. ಆಗೆಲ್ಲ ರಾಜ್ ಕಮಲ್ ಆರ್ಟ್ಸ್, ಸಿಎಂ ರಾಮಾ ಆರ್ಟ್ಸ್ ಸೇರಿದಂತೆ ಕೆಲವೇ ಕಲಾವಿದರ ಗುಂಪುಗಳಿದ್ದವು. ಮೆಜೆಸ್ಟಿಕ್ ಪ್ರದೇಶದಲ್ಲಿ ಆಗ ಸುಮಾರು 16 ಚಿತ್ರಮಂದಿರಗಳಿದ್ದವು. ಬಹುತೇಕ ಕನ್ನಡಕ್ಕೆ ಮೀಸಲು. ಸಿನೆಮಾ ನೋಡಲು ಹೋಗುವುದೇ ಒಂದು ವೈಭೋಗದ ಸಂಗತಿಯಾಗಿತ್ತು . ಶ್ರೀ ಕೃಷ್ಣದೇವರಾಯ ಚಿತ್ರದ ಮೊದಲ ದಿನದ ಶೋಗೆ ಕ್ಯೂ ನಿಂತು ಚಪ್ಪಲಿ ಕಳೆದುಕೊಂಡಿದ್ದು, 'ಭಲೆ ಜೋಡಿ' ಚಿತ್ರದ ಪ್ರದರ್ಶನದ ಸಮಯದಲ್ಲಿ ಡಾ.ರಾಜ್‌ರ ಎರಡು 70 ಅಡಿ ಕಟೌಟು ನಿಲ್ಲಿಸಿದ್ದು, 'ಶರಪಂಜರ' ಚಿತ್ರ ನಡೆಯುತ್ತಿದ್ದ ಸ್ಟೇಟ್ಸ್ ಟಾಕೀಸಿನ ಹೊರಗೆ ಪಂಜರದಲ್ಲಿ ನಿಂತ ಕಲ್ಪನಾ ಪ್ರತಿಕೃತಿ, 'ನಾ ನಿನ್ನ ಬಿಡಲಾರೆ' ಚಿತ್ರಕ್ಕಾಗಿ ಪ್ರತಿಷ್ಠಾಪಿಸಿದ್ದ ಗುರುರಾಯರ ವಿಗ್ರಹ, ಕಪಾಲಿ ಟಾಕೀಸಿನ ಪಕ್ಕದ ಗಂಗಾರಾಮ್ ಕಟ್ಟಡ ನೆಲಕ್ಕುರುಳಿದ್ದು, ಅಣ್ಣಾವ್ರ ಹಾಲುಜೇನು ಚಿತ್ರಕ್ಕೆ ಚಿತ್ರಮಂದಿರ ಕೊಡದೇ ಅಮಿತಾಬ್ ಚಿತ್ರ ಹಾಕಿದ್ದಕ್ಕೆ ಅಭಿಮಾನಿಗಳು ನರ್ತಕಿಯನ್ನು ಪುಡಿಗುಟ್ಟಿಸಿದ್ದು, ಹಿರಣ್ಣಯ್ಯನವರ 'ಭ್ರಷ್ಟಾಚಾರ' ನಾಟಕಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ರಾಜ್ ಕುಮಾರರನ್ನು ನೋಡಲು ಹೋಗಿ ಗುಂಪಿನಲ್ಲಿ ಗೋವಿಂದ ಆಗಿ ಲಾಠಿ ಏಟು ತಿಂದಿದ್ದು , ಇಂತಹ ಅನೇಕ ನೆನಪುಗಳು ಲಂಗರು ಹಾಕಿವೆ.

ಇಂದು ಸಿನೆಮಾ ವೀಕ್ಷಣೆ ಯಾಂತ್ರಿಕ ಕ್ರಿಯೆಯಾಗಿಬಿಟ್ಟಿದೆ. ಥಿಯೇಟರ್‌ಗೆ ಬರುವವರ ಸಂಖ್ಯೆಯೂ ನಶಿಸುತ್ತಿದೆ. ಬೆಂಗಳೂರು ವಲಸಿಗರಿಂದ ತುಂಬಿ ಉದ್ಯಾನ ನಗರಿ ಅಧ್ವಾನ ನಗರಿಯಾಗಿದೆ. ಅಪಘಾತ, ಅಪರಾಧಗಳ ಸಂಖ್ಯೆ ಹೆಚ್ಚಿದೆ. ಪಾರ್ಕುಗಳು, ಕೆರೆಗಳನ್ನು ನುಂಗಿ ನೀರು ಕುಡಿಯಲಾಗಿದೆ ಮರಗಳು ಕಡಿಮೆಯಾಗಿ ಕಾಂಕ್ರೀಟ್ ಕಾಡಾಗಿದೆ. ಚಿತ್ರಮಂದಿರಗಳು ನೆಲಕ್ಕುರುಳಿ ಶಾಪಿಂಗ್ ಮಾಲುಗಳು ತಲೆಯೆತ್ತಿವೆ. ಎಲ್ಲೆಡೆ ಜನಜಂಗುಳಿ , ಟ್ರಾಫಿಕ್. ಬೆಂಗಳೂರಿಗರ ಅರ್ಧ ಆಯಸ್ಸು ಅಲ್ಲಿನ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಕಳೆದು ಹೋಗುತ್ತಿದೆ.ಈಗ ಯಾವುದೇ ರಸ್ತೆಯಲ್ಲಿ ನಾಲ್ಕೈದು ಜನ ಮನೆಯವರು ಕೈಕೈ ಹಿಡಿದು ನಿರಾಳವಾಗಿ ಸಾಗಲಸಾಧ್ಯವಾಗಿದೆ. ಅಂದು ಅಂದದೂರು ಬೆಂಗಳೂರು ಎಂದು ಹಾಡಿದ್ದ ನಾವು ಇಂದು ಪರಿತಪಿಸಬೇಕಾಗಿದೆ.

ಮತ್ತೆ ಬಂದಾವೇ ಆ ದಿನಗಳು ? ಹೇಗೆ ಬಂದೀತು ? ಇಂದಿಗೂ ತಿಂಗಳಿಗೊಮ್ಮೆಯಾದರೂ ಬೆಂಗಳೂರಿನಲ್ಲಿ ಕಳೆದ ವಿದ್ಯಾರ್ಥಿ ಜೀವನದ ಸುವರ್ಣಕಾಲವನ್ನು ನೆನಪಿಸಿಕೊಂಡು ಮುದಗೊಳ್ಳುತ್ತಿರುತ್ತೇನೆ.

ಸೌಟಿನ ಗರ್ವ ಬಾಂಡ್ಲಿಯ ಶಾಪ

ಸೌಟಿಗೆ ಸಿಕ್ಕಿದ ವಿಶೇಷ ಪ್ರಚಾರವು, ಉಪ್ಪಿಟ್ಟು ಮಾಡುವ ಬಾಂಡ್ಲಿಯ ಹೊಟ್ಟೆಯಲ್ಲಿ ಅಪಾರ ಅಸೂಯೆಯನ್ನು ಹುಟ್ಟುಹಾಕಿದ್ದಾದರೂ ಏಕೆ?

» ರೇಖಾ ಬಿ.ಎಸ್.

ಹಹ್ಹಾಸ್ಯ!

ಇವತ್ತು ಮನೆಯಲ್ಲಿ ಬಹಳ ಕೆಲಸ ಇದೆ, ಬೆಳಗಿನ ತಿಂಡಿಗೆ ಬೇಗ ಒಂದು ಉಪ್ಪಿಟ್ಟು ಕೆದಕಿ ಬಿಡೋಣ, ಅಂತ ಬಾಣಲೆ ಒಲೆಮೇಲೆ ಇಟ್ಟು ಉಪ್ಪಿಟ್ಟು ಮಾಡಿದೆ. ಯಾಕೋ ಅಡುಗೆ ಮನೆಯ ಒಟ್ಟಾರೆ ವಾತಾವರಣ ಸರಿಯಿಲ್ಲವಾ ಅನ್ನಿಸಿತು. ಸಾಮಾನ್ಯವಾಗಿ ಅಡುಗೆ ಮಾಡುವಾಗ ನಾನು ಪಾತ್ರೆಗಳನ್ನು, ಅಡುಗೆ ಸಾಮಾನುಗಳನ್ನೂ ಮಾತಾಡಿಸಿಯೇ ಅಡುಗೆ ಮಾಡುತ್ತೇನೆ. ಹೂತೋಟದಲ್ಲಿ ಕೆಲವರು ಹೂವುಗಳ ಜೊತೆ, ಹೂಗಿಡಗಳ ಜೊತೆ ಮಾತುಕತೆ ನಡೆಸ್ತಾರಲ್ಲ ಹಾಗೆ. ಇವತ್ತು ಸ್ವಲ್ಪ ಬ್ಯುಸಿ ಆಗಿದ್ದರಿಂದ, ಯಾವ ಮಾತುಕತೆಯನ್ನೂ ಆಡಲಿಲ್ಲ. ಅಡುಗೆ ಮನೆಯಿಂದ ಹೊರಬಂದು ಪತಿಮಹಾಶಯರಿಗೆ ಹೇಳಿದೆ 'ನೀವೇ ತಿಂಡಿ ತಟ್ಟೆಗೆ ಹಾಕಿಕೊಳ್ಳಿ, ನನಗೆ ಕೈ ಬಿಡುವಿಲ್ಲ' ಅಂತ.

ಸ್ವಲ್ಪ ಹೊತ್ತಿಗೆಲ್ಲಾ ಇವರು ಅಡುಗೆಮನೆಯಿಂದ, 'ಇಲ್ಲಿ ನೀನೇ ಬಾಮ್ಮ, ಉಪ್ಪಿಟ್ಟು ಮೇಲೆ ಬರ್ತಾ ಇಲ್ಲ...' ಅಂದರು. 'ಅಯ್ಯೋ ಏನಾಯ್ತು?' ಅಂತ ಹೋಗಿ ನೋಡಿದರೆ, ಎಲ್ಲವೂ ಬಾಣಲೆಗೆ ಅಂಟಿಕೊಂಡು ಸೀದು ಬಿಟ್ಟಿದೆ! ಯಾಕಪ್ಪಾ ಹೀಗಾಯ್ತು ಎಂದೂ ಇಲ್ಲದ್ದು, ಅಂದುಕೊಂಡೆ. 'ಯಾಕಮ್ಮ ಬಾಣಲೆ ಭಾಗೀರಥಿ ಹೀಗೆ ಮಾಡಿದ್ದಿಯಲ್ಲ? ಮಾಡಿದ ಉಪ್ಪಿಟ್ಟು ವೇಸ್ಟ್ ಆಯಿತು. ಏನಾಗಿದೆ ನಿನಗೆ?' ಹಾಗಂದದ್ದೇ ತಡ, ಬಾಣಲೆ ಭೋರೆಂದು ಅಳತೊಡಗಿ ಬಿಕ್ಕಳಿಸುತ್ತಾ... 'ಈಗ ಗೊತ್ತಾಯ್ತಾ ನಮ್ಮ ಸಂಕಟ? ದಿನಾ ನಿನಗೆ ಎಷ್ಟೊಂದು ಸಹಾಯ ಮಾಡಿ ಅಡುಗೆ ಚೆನ್ನಾಗಿ ಆಗಲು ಸಹಕರಿಸುತ್ತಿದ್ದೇವೆ, ನಮ್ಮ ಕಡೆಗೆ ನೀನು ನೋಡೇ ಇಲ್ಲ... ಉಪ್ಪಿಟ್ಟು ಸೀದುಹೋಯ್ತೆಂದು ನನ್ನ ಕಡೆ ನೋಡ್ತಿದ್ದೀಯ, ನನ್ನ ಮನಸ್ಸಿನ ಬೇಗುದಿ ನಿನಗೆ ತಿಳಿಯಲಿ ಅಂತಲೇ ಹೀಗೆ ಮಾಡಿದೆ ತಿಳ್ಕೋ!' ಅಂತ ಹೇಳಿ ಶುರು ಮಾಡಿತು.

'ಅದ್ಯಾರೋ ಅಮೆರಿಕಾದಲ್ಲಿರೋ ಕನ್ನಡಿಗ ಈ ಒಣಕಲು ಸೌಟಿನ ಮುಖವನ್ನು ಮೆಚ್ಚಿಬಿಟ್ಟಿದ್ದಾರಂತೆ. ನಿನ್ನೆ ರಾತ್ರಿಯಿಂದ ಆ ಮರದ ಸೌಟಿನ ಜಂಬ ಮೇರೆ ಮೀರಿದೆ, ನನ್ನ ಫೋಟೋ ವಿಶ್ವವಾಣಿ ಪೇಪರ್‌ನಲ್ಲಿ ಬಂದಿದೆ, ನಾನೇ ಬೇರೆ, ನನ್ನ ಲೆವೆಲ್ಲೇ ಬೇರೆ. ನೀವೆಲ್ಲಾ ಕ್ಷುದ್ರರು- ನನ್ನ ಫೋಟೋ ಯುಎಸ್‌ಎ ರಿಟರ್ನ್ಡ್ ಅನ್ನೋ ಹೆಮ್ಮೆಗೆ ಪಾತ್ರವಾಗಿದೆ ಎಂದು ಬೀಗುತ್ತಿದೆ. ಇನ್ನು ಮೇಲೆ ಅದು ಮೆಣಸಿನಕಾಯಿ ಹುರಿಯುವಂಥ ಕೆಲಸಕ್ಕೆ ಬರಲ್ಲವಂತೆ. ಅದಕ್ಕೆ ನವರಾತ್ರಿಯಲ್ಲಿ ಆಯುಧಪೂಜೆಯ ದಿನ ನೀನು ಪೂಜೆ ಮಾಡಬೇಕಂತೆ. ಅದು ಇನ್ನು ಮೇಲೆ ಅಡುಗೆಮನೆಯ ಉಗ್ರಾಣದಲ್ಲಿ ಇರದೇ ಟೀವಿ ಪಕ್ಕ ಇರೋ ಶೋಕೇಸ್‌ನಲ್ಲಿ ಆಸೀನವಾಗುತ್ತಂತೆ. ಅದೇ ಟಿವಿಯಲ್ಲಿ ಬರೋ ಒಬ್ಬರು ಮುಂಡಾ ಮೋಚ್ತು ಜ್ಯೋತಿಷಿ ಗುರುಗಳು ತಮ್ಮ ಕೈಯಲ್ಲಿ ಒಂದು ಪಾಶು ಹಿಡಿದುಕೊಂಡು ಕುಳಿತುಕೊಳ್ಳುವ ಹಾಗೆ, ರೇಖಾ ಕೂಡ ಇನ್ನು ಮೇಲೆ ಎಲ್ಲಿ ಹೋದರೂ ನನ್ನನ್ನು ಅವಳ ವ್ಯಾನಿಟಿ ಬ್ಯಾಗಿನಲ್ಲಿ ಇಟ್ಟುಕೊಂಡು ಹೋಗ್ತಾಳೆ, ಅವಳ ವಾಟ್ಸ್ಯಾಪ್ ಡಿಪಿನಲ್ಲಿ ನನ್ನ ಫೋಟೋ ಹಾಕ್ಕೊತ್ತಾಳೆ, ಇನ್ನು ಮುಂದೆ ಮಾಲತಿ- ಮಾಧವಿ ಥರ ಸುಮಲತಾ ಕೂಡ ನನಗೆ ಸಿಗಬಹುದು, ನೀನು ಬಾಲ್ಡಿ ಬಾಣಲೆ, ನಿನಗೆ ಮುಳ್ಳು ಜಾಲಿ ಕೂಡ ಸಿಗಲ್ಲ! ಅಂತಾ ಇದೆ!' (ಈ ಕೊನೆಯ ಮಾತು ಹೇಳುವಾಗ ಬಾಣಲೆಯ ದನಿ ಎಕ್ಸ್ಟ್ರಾ ಕರ್ಕಶವಾಗಿದೆ ಅನ್ನಿಸಿತು!)

ಆದದ್ದಿಷ್ಟೇ. ಕಳೆದ ಭಾನುವಾರ 'ವಿಶ್ವವಾಣಿ' ಪತ್ರಿಕೆಯ ತಿಳಿರುತೋರಣ ಅಂಕಣದಲ್ಲಿ ಬಳ್ಳಿಗಳು ಮರವನ್ನು ಸುತ್ತುವ ಜಾಣ್ಮೆಲೆಕ್ಕಕ್ಕೆ ನಾನು ಸರಿಯುತ್ತರ ಕಳಿಸುತ್ತ ಸೌಟಿಗೆ ಬಳ್ಳಿಗಳನ್ನು ಸುತ್ತಿ ತೋರಿಸಿದ ಚಿತ್ರವನ್ನೂ ಕಳಿಸಿದ್ದೆ. ಅದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದರಿಂದ ಈಗ ನನ್ನ ಅಡುಗೆಮನೆಯಲ್ಲಿ ಬೇರೆಲ್ಲ ಪಾತ್ರೆಗಳಿಗೆ ಮತ್ಸರ, ಮುನಿಸು.

ಅಷ್ಟರಲ್ಲಿ ಇನ್ನುಳಿದ ಪಾತ್ರೆಪಡಗಗಳು- ಮರದ ಮಗುಚುವ ಕೈ, ಮುದ್ದೆ ಕೋಲು, ಕಡೆಗೋಲು, ಲಟ್ಟಣಿಗೆ ಎಲ್ಲವೂ ಒಮ್ಮೆಲೇ ಶುರು ಮಾಡಿಬಿಟ್ಟವು... 'ನಿನಗಾದ್ರೂ ಸ್ವಲ್ಪ ಬುದ್ಧಿ ಬೇಡವಾ ರೇಖಾ? ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಸರಿಯಾ? ನಾವೇನು ಪಾಪ ಮಾಡಿದ್ದೆವು? ನಮ್ಮ ಫೋಟೊ ಯಾಕೆ ಪೇಪರಿನಲ್ಲಿ ಬರೋಕೆ ಆಗಲಿಲ್ಲ? ಅಂತ.

ಅದಕ್ಕೆ ನಾನಂದೆ: 'ಅಯ್ಯೋ ಹಾಗೆಲ್ಲಾ ಏನೂ ಪಕ್ಷಪಾತ ಮಾಡಿಲ್ಲ. ಏನೋ ಆವತ್ತು ಜಾಣ್ಮೆಲೆಕ್ಕ ಬಿಡಿಸ್ಬೇಕಾದ್ರೆ, ತತ್‌ಕ್ಷಣಕ್ಕೆ ಆ ಸೌಟು ನನ್ನ ಕೈಗೆ ಸಿಕ್ಕಿತ್ತು ಅಷ್ಟೇ, ನೀವೂ ನನಗೆ ಅಷ್ಟೇ ಮುಖ್ಯ' ಅಂದೆ. ಎಲ್ಲವೂ ಒಂದೇ ಬಾರಿಗೆ ನಕಾರಾತ್ಮಕವಾಗಿ ತಲೆ ಆಡಿಸಿದವು. ಬಾಣಲೆಯಂತೂ ಮತ್ತೊಮ್ಮೆ ನನ್ನನ್ನು ದುರುಗುಟ್ಟಿ ನೋಡಿ ಶಾಪವನ್ನೂ ಕೊಟ್ಟಿತು... 'ಇವತ್ತು ಗ್ಯಾಸ್ ಬೇಗ ಮುಗಿದುಹೋಗಲಿ! ಲೈಟರು ಹಾಳಾಗಿಹೋಗಲಿ! ಅರ್ಜೆಂಟಲ್ಲಿ ಇಕ್ಕಳ ಕೂಡ ನಿನ್ನ ಕೈಗೆ ಸಿಗದೇ ಇರಲಿ!' ಅಂತ.

ಈ ಶಾಪದಿಂದ ದೂರಾಗುವ ಪರಿಯನ್ನು ಹುಡುಕುತ್ತಾ ಇರುವೆ!

ಟೀಕಿಸುವವರ ಅಭಿಪ್ರಾಯಗಳಿಗೆ ಗೌರವ ಕೊಡಬೇಕು!

Ask the Editor



• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಸಿ.ವಿ.ಗೌತಮ, ಬೆಂಗಳೂರು

• **ಭಟ್ರೇ, ನೀವು ನಿಮ್ಮ ಟೀಕಾಕಾರರ ಜತೆಗೂ ಮುಖ ಕೆಡಿಸಿಕೊಳ್ಳದೇ, ಅವರ ಜತೆಗೂ ಚೆನ್ನಾಗಿಯೇ ಇರುತ್ತೀರಲ್ಲ. ಇದು ಹೇಗೆ ಸಾಧ್ಯ? ನನ್ನನ್ನು ಟೀಕಿಸುವವರ ಜತೆ ನನಗೆ ಮುಖ ಕೊಟ್ಟು ನೋಡಲೂ ಆಗುವುದಿಲ್ಲ. ಅಂಥವರಿಗೆ ಎರಡು ಬಾರಿಸಿಬಿಡೋಣ ಎನ್ನುವಷ್ಟು ಕೋಪ ಬರುತ್ತದೆ. ಆದರೆ ನಿಮ್ಮ ವರ್ತನೆ ನನ್ನಲ್ಲಿ ಸೋಜಿಗವನ್ನುಂಟು ಮಾಡಿದೆ. ನನಗೆ ನಿಮ್ಮ ಕಾಮೆಂಟ್ಸ್ ತಿಳಿಯುವ ಕುತೂಹಲ.**

- ಮೋಹನ ಅವರೇ, ಟೀಕಾಕಾರರಿಗೂ, ವೈರಿಗಳಿಗೂ ಬಹಳ ವ್ಯತ್ಯಾಸವಿದೆ. ನಿಮ್ಮ ಟೀಕಾಕಾರರೆಲ್ಲ ವೈರಿಗಳಲ್ಲ. ಅವರನ್ನು ಹಾಗೆ ನೋಡಲೂ ಬಾರದು. ನಿಮ್ಮನ್ನು ಟೀಕಿಸಿದ ಮಾತ್ರಕ್ಕೆ ಅವರ ಬಗ್ಗೆ ನಂಜು ಬೆಳೆಸಿಕೊಳ್ಳಬಾರದು. ಅವರ ಟೀಕೆಯಲ್ಲಿ ಅಡಕವಾದ ಉದ್ದೇಶವನ್ನು ಗ್ರಹಿಸಬೇಕು. ಸಾಧ್ಯವಾದರೆ ಆ ಟೀಕೆಯಿಂದ ಸ್ವೀಕರಿಸುವ, ಸುಧಾರಿಸಿಕೊಳ್ಳುವ ಅಂಶಗಳೇನಾದರೂ ಇವೆಯಾ ಎಂಬುದನ್ನು ನೋಡಬೇಕು. ಟೀಕಿಸಿದ ಮಾತ್ರಕ್ಕೆ ಅವರನ್ನು ಸಾರಾಸಗಟು ನಿರಾಕರಿಸಬಾರದು.

A rose does not answer its enemies with words, but with beauty ಎಂಬ ಮಾತಿದೆ. ಟೀಕೆ ನಮ್ಮಲ್ಲಿ ಒಳ್ಳೆಯ ಬದಲಾವಣೆಗೆ ಕಾರಣವಾಗಬೇಕೇ ಹೊರತು ನಮ್ಮಲ್ಲಿ ದ್ವೇಷ ಭಾವನೆಯನ್ನು ಮೂಡಿಸಬಾರದು. ಆಗ ದೋಷವಿರುವುದು ನಮ್ಮಲ್ಲಿಯೇ ಹೊರತು, ಟೀಕಾಕಾರರಲ್ಲಿ ಅಲ್ಲ. ಟೀಕೆಯನ್ನು ಸಹಿಸಿಕೊಳ್ಳುವುದು ಪ್ರಬುದ್ಧತೆ. ಟೀಕಾಕಾರನ್ನು ಸಹಿಸಿಕೊಳ್ಳುವುದು ಇನ್ನೂ ಹೆಚ್ಚಿನ ಪ್ರಬುದ್ಧತೆ. ಆದರೆ ಟೀಕಾಕಾರರ ಬಗ್ಗೆ ನಮ್ಮ ಮನಸ್ಸಿನಲ್ಲಿ ದ್ವೇಷಭಾವ ಬೆಳೆಸಿಕೊಳ್ಳುವುದು ನಮ್ಮ ದೌರ್ಬಲ್ಯದ ಸಂಕೇತ. ಆಗ ನಾವು ನಮ್ಮ ಅಸಹನೆಯನ್ನು ನಕಾರಾತ್ಮಕವಾಗಿ ಹೊರಹಾಕಿದಂತೆ.

Having the critics praise you is like having the hangman say you've got a pretty neck ಎಂಬ ಮಾತನ್ನು ಕೇಳಿರಬಹುದು. ಟೀಕಾಕಾರರು ತಮ್ಮ ಕೆಲಸವನ್ನು ಮಾಡುವುದೇ ವಾಸಿ. ಅವರು ನಮ್ಮನ್ನು ಹೊಗಲಾರಂಭಿಸಿದರೆ, ಗಲ್ಲುಶಿಕ್ಷೆಗೆ ಗುರಿಯಾದವನನ್ನು ಗಲ್ಲಿಗೇರಿಸುವವನು ಹೊಗಳಿದಂತೆ. ಉತ್ತಮ ಟೀಕಾಕಾರರಪ್ಪ ನಮ್ಮ ಆಸ್ತಿಯೇ. ಅವರನ್ನು ಸಂಪಾದಿಸುವುದಕ್ಕೂ ಯೋಗ್ಯತೆ ಬೇಕು. ಟೀಕೆಗಳನ್ನೇ ಕೇಳಬಾರದು ಅಂದರೆ ಏನನ್ನೂ ಮಾಡಬಾರದು, ಏನನ್ನೂ ಹೇಳಬಾರದು ಮತ್ತು ಏನೂ ಆಗಿರಬಾರದು (To avoid criticism, do nothing, say nothing and be nothing).

ನಾನು ಟೀಕೆಗಳನ್ನು ಮತ್ತು ಟೀಕಾಕಾರನ್ನು ನೋಡುವುದು ಈ ರೀತಿ. ನನ್ನ ಬದುಕಿನಲ್ಲಿ ನಾನು ಟೀಕಾಕಾರರಿಗೆ ಉತ್ತಮ ಸ್ಥಾನಮಾನ ನೀಡಿದ್ದೇನೆ ಮತ್ತು ಅವರನ್ನು ಚೆನ್ನಾಗಿ ನೋಡಿಕೊಂಡಿದ್ದೇನೆ. ನನಗೆ ಅವರಿಂದ ಯಾವತ್ತೂ ಒಳ್ಳೆಯದಾಗಿದೆ. ಯಾವ ಫೀಸನ್ನು ತೆಗೆದುಕೊಳ್ಳದೇ ಅವರು ನನ್ನಲ್ಲಿರುವ ಗುಣ-ದೋಷಗಳನ್ನು ನಿವಾರಿಸಿ ಉಪಕರಿಸಿದ್ದಾರೆ. ಹೀಗಾಗಿ ನಾನು ಅವರ ಜತೆ ಉತ್ತಮ ಸಂಬಂಧವನ್ನು ಹೊಂದಿದ್ದೇನೆ.

★★★

ಕಿರಣ್ ಎಸ್.ಪಿ., (ಇಮೇಲ್ ಮೂಲಕ)

• **ಭಟ್ರೇ, ನನ್ನ ಮನಸ್ಸಿಗೆ ಅನಿಸಿದ್ದು, ತೋಚಿದ್ದೆಲ್ಲವನ್ನೂ ಒಂದು ನೋಟ್ ಬುಕ್‌ನಲ್ಲಿ ಫಿಲ್ಟರ್ ಇಲ್ಲದೇ ಬರೆಯುವ ಆಸೆ. ಆದರೆ ಆ ನೋಟ್ ಬುಕ್‌ನ್ನು ಬೇರೆ ಯಾರಾದರೂ ನೋಡಿ ಬಿಟ್ಟರೆ ಎನ್ನುವ ಆತಂಕ. ಯಾರಿಗೂ ಸಿಗದ ಹಾಗೆ ನೋಟ್ ಬುಕ್‌ನ್ನು ಕಾಪಾಡಿಟ್ಟುಕೊಳ್ಳುವುದು ಹೇಗೆ?**

- ಕಿರಣ್ ಅವರೇ, ನಿಮಗೆ ಅನಿಸಿದ್ದು, ತೋಚಿದ್ದೆಲ್ಲವನ್ನೂ ನೋಟ್ ಬುಕ್‌ನಲ್ಲಿ ಫಿಲ್ಟರ್ ಇಲ್ಲದೇ ಬರೆದಿಡುವುದು ಅಪಾಯ. ಅದು ಬೇರೆ ಯಾರ ಕೈಗೂ ಸಿಗುವುದಿಲ್ಲ ಎನ್ನುವ ಗ್ಯಾರಂಟಿ ಇಲ್ಲ. ಅದು ಯಾರ ಕೈಗಾದರೂ ಸಿಗಬಹುದು. ಆಗ ನಿಮ್ಮ ಖಾಸಗಿ ಆಲೋಚನೆಗಳೆಲ್ಲ ಬಹಿರಂಗವಾಗಬಹುದು. ಅದು ನಿಮಗೆ ಸಮಸ್ಯೆಯನ್ನೂ ತರಬಹುದು. ಈ ದಿನಗಳಲ್ಲಿ ನೋಟ್ ಬುಕ್ ಬದಲು, ಕಂಪ್ಯೂಟರಿನಲ್ಲಿ ಅಥವಾ ಮೊಬೈಲಿನಲ್ಲಿ ಬರೆದು ಬೇರೆಯವರಿಗೆ ಸಿಗದ ಹಾಗೆ ಭದ್ರವಾಗಿಡಬಹುದು. ಇವೆರಡನ್ನೂ ಬೇರೆಯವರು ಓಪನ್ ಮಾಡದ ಹಾಗೆ ಮಾಡಬಹುದು.

ಆದರೆ ಇವೆರಡೂ ಕೆಟ್ಟು ಹೋಗಿ, ದುರಸ್ಥಿಗೆ ಬಂದರೆ ಅದನ್ನು ಬೇರೆಯವರು ನೋಡುವ ಸಾಧ್ಯತೆ ಇರುತ್ತದೆ. ಆಗಲೂ ನೀವು ಕಾಪಿಟ್ಟ ಮಾಹಿತಿಯ ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಯಾರಿಗೂ ಸಿಗದ ಹಾಗೆ ನೂರಕ್ಕೆ ನೂರರಷ್ಟು foolpoof ವಿಧಾನ ಇಲ್ಲ. ಈ ದಿನಗಳಲ್ಲಿ ಏನನ್ನು ಬೇಕಾದರೂ ಹ್ಯಾಕ್ ಮಾಡುವ ನಿಷ್ಣಾತರಿದ್ದಾರೆ. ನೀವು ಬರೆಯುವ ನೋಟ್ ಬುಕ್‌ನಲ್ಲಿ ಫಿಲ್ಟರ್ ಇಲ್ಲದ ಮಾಹಿತಿಯಿದೆ ಎಂಬುದು ಗೊತ್ತಾದರೆ, ಅದು ಅನ್ಯರಿಗೆ ಉಪಯುಕ್ತವಾಗುವಂತಿದ್ದರೆ, ಅದರ ಅಗತ್ಯವಿದ್ದವರು, ಅದನ್ನು ಪಡೆಯಲು ಇನ್ನಿಲ್ಲದ ಹರಸಾಹಸ ಮಾಡಬಲ್ಲರು.

ಅಷ್ಟಕ್ಕೂ ನೀವೇಕೆ ನಿಮ್ಮ ಖಾಸಗಿ ಆಲೋಚನೆಗಳನ್ನು ಫಿಲ್ಟರ್ ಇಲ್ಲದೇ ಅಥವಾ ಎಡಿಟ್ ಮಾಡದೇ ಬರೆದಿಡುತ್ತೀರಿ? ಆ ತಲುಬು ಏಕೆ? ಅದರಿಂದ ಏನು ಸಾಧಿಸುವುದು ನಿಮ್ಮ ಉದ್ದೇಶ? ದಿನಚರಿ ಬರೆಯುವುದು ನಿಮ್ಮ ಉದ್ದೇಶವಾಗಿದ್ದರೆ, ಯಾವ ಮಾಹಿತಿಯನ್ನು ಬರೆಯಬಾರದು ಅಥವಾ ಯಾವ ಮಾಹಿತಿಯನ್ನು ಎಷ್ಟು ಮತ್ತು ಹೇಗೆ ಬರೆಯಬೇಕು ಎಂಬುದು ನಿಮಗೆ ಗೊತ್ತಿರಬೇಕು. ಕೆಲವು ವಿಷಯಗಳು ನಿಮಗೆ ಮಾತ್ರ ಅರ್ಥವಾಗುವ ಹಾಗೆ ಬರೆದಿಡಬೇಕು. ಅದಕ್ಕೆ ಸಂಕೇತಗಳು ಮತ್ತು ಪ್ರತಿಮೆಗಳನ್ನು ಬಳಸಬೇಕು. ಫಿಲ್ಟರ್ ಬಳಸಬೇಕು. ಇಲ್ಲದಿದ್ದರೆ ಅನಗತ್ಯ ಗೊಂದಲ ಅಥವಾ ಸಮಸ್ಯೆಗಳು ಉದ್ಭವಿಸಬಹುದು. ಇದರಿಂದ ನಿಮಗೇ ತೊಂದರೆಯಾಗಬಹುದು. 'ಭೂಮಿ ಮೇಲೆ ಇದು ನಾವು ಭಾವಿಸುವ ಅತ್ಯಂತ ಸುರಕ್ಷಿತ ಸ್ಥಳ' ಎಂದು ಅಂದುಕೊಂಡಿದ್ದೂ ಅನ್ಯರಿಗೆ ಸುಲಭ ತುತ್ತಾಗಬಹುದು.

ನಯಾಗರ ಜಲಪಾತಕ್ಕೆ ಅಡ್ಡವಾಗಿ ಕಟ್ಟಿದ ತಂತಿಯ ಮೇಲೆ ನಡೆಯುವುದು ನಿಜಕ್ಕೂ ಸಾಹಸ. ಆದರೆ ಅದರ ಮೇಲೆ ನಡೆಯದಿರುವುದು ಬುದ್ಧಿವಂತಿಕೆ. ಈ ನಿಯಮವನ್ನು ನಿಮಗೂ ಅನ್ವಯಿಸಿಕೊಳ್ಳಿ.

★★★

ಪೂಜಾ ಕೆ., ಭೂಪಸಂದ್ರ

• **ಭಟ್ರೇ, ನಿಮ್ಮ ಜತೆ ಮಾತಾಡಬೇಕು, ಮನಸ್ಸಿನ ಭಾವನೆಗಳನ್ನೆಲ್ಲ ಹೇಳಿಕೊಳ್ಳಬೇಕು ಎಂಬ ಆಸೆ. ನಿಮ್ಮ ಭೇಟಿಯಾಗಲು ನೀವು ಎರಡು ಬಾರಿ ಅಪಾಯಿಂಟಮೆಂಟ್ ಕೊಟ್ಟರೂ ಬಂದು ಭೇಟಿ ಮಾಡಿಲ್ಲ. ಅದಕ್ಕೆ ಕಾರಣ ನಿಮ್ಮ ಬಗ್ಗೆ ನನಗಿರುವ ಅಳುಕು, ಆತಂಕ. ನಿಮ್ಮ ಜತೆ ಮಾತಾಡಲು ಏನೋ ಹೆದರಿಕೆ. ಇದನ್ನು ನಿವಾರಿಸಿಕೊಳ್ಳುವುದು ಹೇಗೆ? ಇದಕ್ಕೆ ನಾನೇನು ಮಾಡಬೇಕು? ನಿಮ್ಮನ್ನು ನಿಮ್ಮ ಆಫೀಸಿನಲ್ಲಿ ಹೇಗೆ ಭೇಟಿ ಮಾಡಲಿ?**

- ಪೂಜಾ ಅವರೇ, ಇದು ಒಳ್ಳೆಯ ಫಜೀತಿ ಆಯ್ತಲ್ಲ. ಇದು ನನ್ನ ಭೇಟಿಗೆ ಮಾತ್ರ ಹೀಗಾ ಅಥವಾ ಮೊದಲ ಭೇಟಿಯಲ್ಲಿ ನಿಮಗೆ ಈ ರೀತಿಯ ನರ್ವಸ್‌ನೆಸ್ ಸಹಜವಾ ಎಂಬುದನ್ನು ಹೇಳಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಇರಲಿ.

ನೇರವಾಗಿ ಕೇಳುತ್ತೇನೆ, ನಿಮಗೆ ನಾನೇನಾದರೂ ನಿಮಗೆ ಹುಲಿ, ಸಿಂಹ, ಕರಡಿ, ಚಿರತೆಯ ಹಾಗೆ ಕಾಣುತ್ತೇನಾ? ದಯವಿಟ್ಟು ಸ್ಪಷ್ಟಪಡಿಸಿ. ನನ್ನ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಯಾವ ಭಾವನೆಯನ್ನು ಇಟ್ಟುಕೊಂಡಿದ್ದೀರಿ? ಸಾಮಾನ್ಯವಾಗಿ ಹುಡುಗಿಯರಿಗೆ ಪ್ರೇಮ ನಿವೇದನೆ ಮಾಡಿಕೊಳ್ಳುವಾಗ ಅಳುಕು, ಅಂಜಿಕೆಯಾಗುವುದು ಸಾಮಾನ್ಯ. ಕೆಲವೊಮ್ಮೆ ಮಾತೇ ಹೊರಡುವುದಿಲ್ಲ. ಆದರೆ ನನ್ನ ಮುಂದೆ ನಿಮ್ಮ ಅಂಥ ಬೇಡಿಕೆ ಖಂಡಿತ ಇದ್ದಿರಲಾರದು. ಹೀಗಿರುವಾಗ ಭೇಟಿ ಮಾಡಲು ಹಿಂಜರಿಕೆ ಏಕೆ ಎಂಬುದು ನನಗೆ ಅರ್ಥವಾಗುವುದಿಲ್ಲ. ನನ್ನ ಬಗೆಗಿನ ಯಾವ ಸಂಗತಿ ನಿಮ್ಮ ಕೈ ಜಗ್ಗುತ್ತಿರಬಹುದು ಎಂಬುದು ಗೊತ್ತಾಗುತ್ತಿಲ್ಲ.

ಸಾಮಾನ್ಯವಾಗಿ ನಾನು ಎಲ್ಲರನ್ನೂ ಭೇಟಿ ಮಾಡುತ್ತೇನೆ. ಎಲ್ಲರೊಂದಿಗೂ ಮುಕ್ತವಾಗಿ ಬೆರೆಯುತ್ತೇನೆ. ನನ್ನ ಮುಂದಿದ್ದವರಿಗೆ ಸಾಧ್ಯವಾದಷ್ಟು comfort ಸೃಷ್ಟಿಸುತ್ತೇನೆ. ಆಗಲೇ ಮುಕ್ತ ವಾತಾವರಣದಲ್ಲಿ ಮಾತಾಡಲು ಸಾಧ್ಯ. ನನಗಿಂತ ಕಿರಿಯರು ಮತ್ತು ಹಿರಿಯರೆನ್ನದೇ ಎಲ್ಲರ ಜತೆಗೂ ಅತ್ಯಂತ ಮುಕ್ತವಾಗಿ ಒಡನಾಡುವುದನ್ನು ಇಷ್ಟಪಡುತ್ತೇನೆ. ಹೀಗಿರುವಾಗ ನೀವ್ಯಾಕೆ ನನ್ನ ಭೇಟಿಗೆ ಅಂಜುತ್ತಿದ್ದೀರಿ ಎಂಬುದು ನನಗೆ ಸೋಜಿಗವಾಗಿದೆ.

ನನ್ನ ಜತೆ ಚರ್ಚಿಸುವ ವಿಷಯವನ್ನು ಮೊದಲೇ ತಿಳಿದರೆ ನಿಮ್ಮ ಭೇಟಿಗೆ ನಾನು ಇನ್ನಷ್ಟು comfort ಸೃಷ್ಟಿಸಿಕೊಡಬಹುದು. ಅಷ್ಟಕ್ಕೂ ನಾನೇನು ನಿಮ್ಮ ಆಸ್ತಿಯಲ್ಲಿ ಪಾಲು ಕೇಳುವುದಿಲ್ಲ. ನಿಮಗೆ ಕೇಳಬೇಕೆಂದಿರುವ ವಿಷಯವನ್ನು ನೇರವಾಗಿ ಕೇಳಬಹುದಲ್ಲ? ಇಷ್ಟೊಂದು ಸಂಕೋಚ ಮಾಡಿಕೊಂಡರೆ ಹೇಗೆ? ಅಷ್ಟಕ್ಕೂ ನೀವು ಹೇಳಿದ್ದು ನನಗೆ ಸಮ್ಮತವಾಗದಿದ್ದರೆ, ನಾನಂತೂ ಬೈಯುವುದಿಲ್ಲವಲ್ಲ, ತಲೆ ಕಡಿಯುವುದಿಲ್ಲವಲ್ಲ. ಹೀಗಿರುವಾಗ ಹಿಂಜರಿಕೆ ಏಕೆ? ಸರಿ, ಪ್ರೇಮ ನಿವೇದನೆಯೇ ಉದ್ದೇಶವಾಗಿದೆಯೆನ್ನಿ, ಆಗಲೂ ನೀವು ಹಿಂಜರಿಯಬೇಕಿಲ್ಲ. ನಿಮ್ಮ ಮನಸ್ಸಿನಲ್ಲಿರುವ ಜಣಕುಗಳನ್ನು ಕಿತ್ತು ಬಿಸಾಕಿ. ನನ್ನನ್ನು ಭೇಟಿ ಮಾಡಿದವರು ಯಾರೂ ಒಂದೇ ಭೇಟಿಗೆ ತೃಪ್ತರಾಗಿಲ್ಲ ಎಂಬುದು ನಿಮಗೆ ಗೊತ್ತಿರಲಿ.

ಸುಧೀರ ಎಂ.ಜೋಶಿ, ಮೈಸೂರು

• **ಸಂಪಾದಕರೇ, ಆತ ನನ್ನ ಆತ್ಮೀಯ ಸ್ನೇಹಿತ. ಆದರೆ ಇತ್ತೀಚೆಗೆ ಆತ ನನ್ನ ಹಿಂದೆ ಲೂಸ್ ಟಾಕ್ ಮಾಡುತ್ತಿದ್ದಾನೆ ಎಂದು ಗೊತ್ತಾಗಿದೆ. ಹಾಗಂತ ನಾನು ಅವನ ಗಂಟು ಕದ್ದಿಲ್ಲ. ಹಾಗಂತ ಆತ ಕೆಟ್ಟವನಲ್ಲ. ಆತನಿಗೆ ಯಾವ ರೀತಿ ಬುದ್ಧಿ ಹೇಳುವುದು, ಗೊತ್ತಾಗುತ್ತಿಲ್ಲ.**

- ಸುಧೀರ ಅವರೇ, ಇದೊಂದು ದೊಡ್ಡ ರೋಗ. ಮೂವರು ಸ್ನೇಹಿತರೊಂದಿಗೆ ಮಾತಾಡುವಾಗ, ಒಬ್ಬರು ಎದ್ದು ಹೋಗುತ್ತಿದ್ದಂತೆ ಅವರ ಬಗ್ಗೆಯೇ ಮಾತಾಡುವುದು ಕೆಟ್ಟ ಚಾಳಿ. ಇದು ಸ್ನೇಹಿತರಿಗೆ ತಗುಲಲೇ ಬಾರದ ರೋಗ. ಇಂಥವರು ಸ್ನೇಹಿತರಾಗಲು ನಾಲಾಯಕ್ಕು. ನಾವು ಯಾರನ್ನು ಸ್ನೇಹಿತರು ಎಂದು ಭಾವಿಸಿರುತ್ತೇವೋ ಅವರು ನಮ್ಮ ವಿರುದ್ಧ ಲಘುವಾಗಿ ಮಾತಾಡುತ್ತಾರೆ ಎಂದಾದರೆ ಅವರು ಸ್ನೇಹಿತರಾಗಲು ಯೋಗ್ಯರಲ್ಲ ಎಂದರ್ಥ. ಅಂಥವರನ್ನು ನಿರ್ದಾಕ್ಷಿಣ್ಯವಾಗಿ ದೂರವಿಡಬೇಕು. ಕಾರಣ ಇವರು ತೀರಾ ಅಪಾಯಕಾರಿಗಳು.

'ನನ್ನ ಸ್ನೇಹಿತ ಲೂಸ್ ಟಾಕ್ ಮಾಡುತ್ತಿದ್ದಾನೆ ಎಂದು ಗೊತ್ತಾಗಿದೆ. ಹಾಗಂತ ಆತ ಕೆಟ್ಟವನಲ್ಲ' ಎಂದು ನೀವು ಹೇಳಿದ್ದೀರಿ. ಹಾಗಂದರೆ ಏನರ್ಥ? ಸ್ನೇಹಿತರಾಗಿದ್ದವರು ನಮ್ಮ ಬಗ್ಗೆಯೇ ಕೆಟ್ಟದಾಗಿ ಮಾತಾಡುತ್ತಾರೆ ಅಂದ್ರೆ, ಅಂಥವರು ಸ್ನೇಹಿತರಾಗಲು ಅನರ್ಹರು. ಅದಕ್ಕಾಗಿಯೇ ಹೇಳಿದ್ದು ಅಂಥವರನ್ನು ಯಾವ ಮುಲಾಜು ಇಲ್ಲದೇ ದೂರವಿಡಬೇಕು ಅಂತ ಹೇಳಿದ್ದು. ಇಂಥ ಮನೋಭಾವದ ಸ್ನೇಹಿತರನ್ನು ಕರೆದು ಬುದ್ಧಿ ಹೇಳದಿದ್ದರೆ, ನಿಮ್ಮ ಹತ್ತಿರವಿದ್ದು ನಿಮ್ಮ ಘನತೆಗೆ ಧಕ್ಕೆ ತರುವುದನ್ನು ಮುಂದುವರಿಸುತ್ತಾ ಹೋಗುತ್ತಾರೆ.

ಈ ಮನೋಭಾವದ ಸ್ನೇಹಿತರನ್ನು ತಕ್ಷಣ ಕರೆದು ಅವರು ಮಾಡುತ್ತಿರುವ ತಪ್ಪನ್ನು ಅವರ ಮುಖಕ್ಕೆ ಹೇಳಲೇಬೇಕು. ಇಲ್ಲದಿದ್ದರೆ ಅವರು ಸುಧಾರಿಸಿಕೊಳ್ಳುವುದಿಲ್ಲ. ಇಂಥವರ ಬಗ್ಗೆ ಯಾವ ದಾಕ್ಷಿಣ್ಯವನ್ನೂ ತೋರಬಾರದು ಮತ್ತು ಅವರ ತಪ್ಪನ್ನು ಅವರ ಮುಖಕ್ಕೆ ಹೇಳಲು ವಿಳಂಬ ಮಾಡಬಾರದು. ಮನೆಯೊಳಗೇ ಜಿರಳೆ ಸೇರಿಕೊಂಡಿದೆ ಅಂದ್ರೆ, ಅದನ್ನು ತಕ್ಷಣ ಕೊಲ್ಲದಿದ್ದರೆ ಅದು ಹತ್ತಾರು ಜಿರಲೆಗಳ ಹುಟ್ಟಿಗೆ ಕಾರಣವಾಗುತ್ತದೆ. ಇಂಥ ಮನೋಭಾವದವರು ನಿರಂತರವಾಗಿ ನಿಮ್ಮ ಘನತೆ, ಗೌರವಗಳಿಗೆ ಹಾನಿಯುಂಟು ಮಾಡುವುದನ್ನು ಮುಂದುವರಿಸುತ್ತಾ ಹೋಗುತ್ತಾರೆ.

ನಿಮ್ಮ ಸ್ನೇಹಿತರಲ್ಲಿ ಯಾರಿಗೆ ಈ ಕೆಟ್ಟ ಚಾಳಿ ಇರುವುದೋ, ಅವರನ್ನು ಸರಿ ದಾರಿಗೆ ತರುವ ಜವಾಬ್ದಾರಿ ನಿಮ್ಮದೇ. ನೀವು ಎಲ್ಲಿ ತನಕ ಅವರನ್ನು ಕರೆದು ಮಾತಾಡುವುದಿಲ್ಲವೋ, ಅಲ್ಲಿ ತನಕ ಅವರು ತಮ್ಮ ಕಾಯಕವನ್ನು ಮುಂದುವರಿಸುತ್ತಾ ಹೋಗುತ್ತಾರೆ. ಈ ವಿಷಯದಲ್ಲಿ ನೀವು ಎಷ್ಟು ಕಠಿಣ ನಿರ್ಧಾರ ತೆಗೆದುಕೊಳ್ಳುವಿರೋ, ಅಷ್ಟು ನಿಮಗೆ ಒಳ್ಳೆಯದು ಮತ್ತು ನೀವು ಸ್ನೇಹಿತನಿಗೆ ಒಳ್ಳೆಯದನ್ನು ಮಾಡಿದ ಹಾಗೆ. ಇಲ್ಲದಿದ್ದರೆ ಈ 'ಕಾಯಿಲೆ' ವ್ಯಾಪಿಸುತ್ತಾ ಹೋಗುತ್ತದೆ. ಆದಷ್ಟು ಬೇಗ ನಿಮ್ಮ ಸ್ನೇಹಿತನ ಕಿವಿ ಹಿಂಡುವ ಕೆಲಸ ಮಾಡಿ. ಇಂಥವರ ಬಗ್ಗೆ ಸ್ವಲ್ಪವೂ ಕನಿಕರ ತೋರಬಾರದು.

★★★

ಸೌಮ್ಯಾ , (ಇಮೇಲ್ ಮೂಲಕ)

• **ಭಟ್ರೇ, ನನಗೊಬ್ಬಳು ಸ್ನೇಹಿತೆಯಿದ್ದಾಳೆ, ನಾವಿಬ್ಬರೂ ನಾಲ್ಕು ವರ್ಷಗಳಿಂದ ಹಾಸ್ಟೆಲ್ ಮೇಟ್ಸ್. ಆಕೆ ಈಗಾಗಲೇ ಮೂವರು ಬಾಯ್ ಫ್ರೆಂಡ್ಸ್ ಬದಲಿಸಿದ್ದಾಳೆ. ಈ ಬಗ್ಗೆ ಅವಳಿಗೆ ಯಾವ ಬೇಸರವಾಗಲಿ, ಖೇದವಾಗಲಿ ಇಲ್ಲ. 'ಯಾವ ಹುಡುಗರನ್ನೂ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಬಾಯ್ ಫ್ರೆಂಡ್ ಆಗಿ ಇಟ್ಟುಕೊಳ್ಳಬಾರದು' ಅಂತ ನನಗೆ ಆಗಾಗ ಹೇಳುತ್ತಿರುತ್ತಾಳೆ. ನನಗೆ ಅವಳ ಈ ಮನೋಭಾವ ಇಷ್ಟವಿಲ್ಲ. ಈ ಕುರಿತು ನಮ್ಮಿಬ್ಬರ ಮಧ್ಯೆ ಸಾಕಷ್ಟು ಚರ್ಚೆಯಾಗಿವೆ. ಆದರೆ ಅವಳು ತನ್ನ ನಿಲುವನ್ನು ಬದಲಿಸುತ್ತಿಲ್ಲ. ಅವಳಿಗೆ ಯಾವ ರೀತಿ ಬುದ್ಧಿ ಹೇಳಬೇಕೋ ತಿಳಿಯುತ್ತಿಲ್ಲ.**

- ಸೌಮ್ಯಾ ಅವರೇ, ನೇರವಾಗಿ ಹೇಳಬೇಕು ಅಂದ್ರೆ, ನಿಮ್ಮ ಸ್ನೇಹಿತೆ ಹುಡುಗರ ಜೀವನದೊಂದಿಗೆ ಆಟವಾಡುತ್ತಿದ್ದಾಳೆ. ಇಂಥ ಸ್ನೇಹಿತೆಯರು ಅಪಾಯಕಾರಿಗಳು. ಅವರ ಕೆಟ್ಟ ಚಾಳಿ ನಿಮಗೂ ಅಂಟೀತು, ಎಚ್ಚರ! ಯಾರು ಬೇರೆಯವರ ಜೀವನದೊಂದಿಗೆ ಆಟವಾಡುವುದನ್ನು ರೂಢಿ, ಹವ್ಯಾಸ ಮಾಡಿಕೊಳ್ಳುತ್ತಾರೋ, ಅಂಥವರನ್ನು ದೂರವಿಡಬೇಕು ಅಥವಾ ಅಂಥವರಿಂದ ದೂರವಾಗಬೇಕು. ದಾರಿ ತಪ್ಪಿದವರು ಬಹಳ ಬೇಗ ಸರಿ ದಾರಿಗೆ ಬರುವುದಿಲ್ಲ. ಕಾರಣ ಅವರು ಸರಿದಾರಿಗೆ ಬಾರದಷ್ಟು ದೂರ ತಪ್ಪು ದಾರಿಯಲ್ಲಿ ಕ್ರಮಿಸುತ್ತಿರುತ್ತಾರೆ ಮತ್ತು ತಮ್ಮದೇ ಸರಿದಾರಿ ಎಂಬ ಭ್ರಮೆಯಲ್ಲಿರುತ್ತಾರೆ. ಕೆಲವೊಮ್ಮೆ ನಿಮ್ಮನ್ನೂ ಅವರ ದಾರಿಗೆ ಎಳೆದು ಬಿಡುವ ಅಪಾಯವಿರುತ್ತದೆ.

ಹೀಗಾಗಿ ಅಂಥವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ನಿಮಗೆ ಸಮಯ, ಸಂಯಮವಿದ್ದರೆ ತಲೆ ಕೆಡಿಸಿಕೊಳ್ಳಬಹುದು. ಇಷ್ಟಾಗಿಯೂ ನೀವು ಆಕೆಯ ಉತ್ತಮ ಸ್ನೇಹಿತೆಯಾಗಿದ್ದರೆ, ಆಕೆಯನ್ನು ಕುಳ್ಳಿರಿಸಿಕೊಂಡು ಬುದ್ಧಿ ಹೇಳಿ. ಅಷ್ಟಾಗಿಯೂ ಕೇಳದಿದ್ದರೆ, ಅವಳಿಂದ ಅಂತರವನ್ನು ಕಾಪಾಡಿಕೊಳ್ಳಿ. ಹುಡುಗರ ಜತೆ ಫ್ಲರ್ಟ್ ಮಾಡುವ ಅವಳ ಕಾಯಕಕ್ಕೆ ಯಾವ ರೀತಿಯಲ್ಲೂ ನೆರವಾಗಬೇಡಿ. ಆಕೆಯ ಈ ವರ್ತನೆಯ ಬಗ್ಗೆ ಆಕೆಯ ಬಾಯ್ ಫ್ರೆಂಡಿಗೆ ಆಗಾಗ ಸುಳಿವನ್ನು ನೀಡಿ. ಸಾಧ್ಯವಾದರೆ ಅವಳನ್ನು ಖೆಡ್ಡಾಕ್ಕೆ ಕೆಡವಲು ನೆರವಾಗಿ. ಬೇರೆಯವರ ಜೀವನದ ಜತೆಗೆ ಆಡುವವರು, ಏನನ್ನೂ ಮಾಡಲು ಹೇಸದವರು. ಇಂಥವರ ಜತೆಗೆ ರೂಮನ್ನು ಹಂಚಿಕೊಳ್ಳುವುದರಿಂದ ಅವರ ಗಾಳಿ ನಿಮಗೂ ಬೀಸೀತು. ಯಾವುದಕ್ಕೂ ಜಾಗರೂಕವಾಗಿರಿ.